ಕೆಲಸ ಮಾಡತಕ್ಕವರು ಕೆಲಸವಿಲ್ಲದೆ ಹೋಗಬೇಕಾಗುತ್ತದೆ, ಪ್ರಿನ್ಸಿಪಾಲರು ಸಹ ಮನೆಗೆ ಹೋಗಬೇಕಾದ ಪ್ರಶ್ನೆ ಬರುತ್ತದೆ ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಅತಿ ಶೀಘ್ರವಾಗಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಟಿ. ಚೌಡಯ್ಯ.—ಮಾನ್ಯ ಮಂತ್ರಿಗಳು ೪೫ ಪರ್ಸೆಂಟ್‌ಗಿಂತ ಕಡಿಮೆ ನಂಬರ್ ತೆಗೆದುಕೊಂಡು ಪಾಸ್ ಆಗಿರುವವರು ಎಲ್ಲಿಗೆ ಹೋಗಬೇಕು ಎನ್ನುವುದನ್ನು ಮೊದಲು ಯೋಚನೆ ಮಾಡಬೇಕು. ಈ ವಿದ್ಯಾರ್ಥಿಗಳಿಗೆ ಬೇರೆ ಕಡೆಯಲ್ಲಿ ಎಲ್ಲಿಯೂ ಸಹ ಇಂಟರ್‌ವ್ಯೂ ಸಹ ಕೊಡುವುದಿಲ್ಲ. ಮಿನಿಮಂ ಮಾರ್ಕ್ಸ್ ಇದರಲ್ಲಿ ತಾವು ಇಷ್ಟೇ ಎಂದು ಇಡುವುದು ಬೇಡ ಈ ರೀತಿಯಲ್ಲಿ ತಾವು ಪ್ರಿಸ್ಕ್ರೈಬ್ ಮಾಡಿದರೆ ಹಳ್ಳಿಯಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಯಾವ ಉದ್ಯೋಗವೂ ಸಿಕ್ಕುವುದಿಲ್ಲ. ಆದ್ದರಿಂದ ಹೋದ ವರ್ಷ ಇದರ ಬಗ್ಗೆ ಯಾವ ರೀತಿಯಲ್ಲಿತ್ತೋ ಅದೇ ರೀತಿಯಲ್ಲಿ ಮುಂದುವರಿಸಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನಾವು ೫೦ ಪರ್ಸೆಂಟ್ ಮಾರ್ಕ್ಸನ್ನು ನಿಗಧಿಮಾಡಬೇಕಾದರೆ ಸುತ್ತಮುತ್ತ ರಾಜ್ಯಗಳಲ್ಲಿ ಯಾವರೀತಿಯಲ್ಲಿದೆ ಎನ್ನುವುದನ್ನು ಪ್ರವೇಶಕ್ಕೆ ಪರಿಶೀಲನೆ ಮಾಡಿ ನಿಗಧಿ ಮಾಡಿದ್ದೇವೆ. ಟಿ.ಟಿ.ಐ.ಗೆ ಮದ್ರಾಸ್ ಮತ್ತು ಕೇರಳದಲ್ಲಿ ೫೦ ಪರ್ಸೆಂಟ್ ಮಿನಿಮಂ ಮಾರ್ಕ್ಸ್ ಎಂದು ಮಾಡಿದ್ದಾರೆ ನಮ್ಮಲ್ಲಿ ಇದು ಕಡಿಮೆ ಇತ್ತು ಆದ್ದರಿಂದ ಇದುವರೆಗೂ ಏನಾಗುತ್ತಿತ್ತು ಎಂದರೆ, ಹೊರ ರಾಜ್ಯದವರು ಕಡಿಮೆ ನಂಬರ್ ತೆಗೆದುಕೊಂಡಿದ್ದರೂ ಸಹ ಇಲ್ಲಿಗೆ ಬಂದು ಟ್ರೈನಿಂಗ್ ಕಲಿತು ಅವರ ರಾಜ್ಯಕ್ಕೆ ಹೋಗುತ್ತಿದ್ದು ಇದು ಒಂದು ರೀತಿಯಲ್ಲಿ ವ್ಯಾಪಾರದ ರೀತಿಯಲ್ಲಿ ನಡೆಯುತ್ತಿತ್ತು. ಇದನ್ನು ಮಾನ್ಯ ಸದಸ್ಯರು ಗಮನಿಸಿದ್ದಾರೆಂದು ನಾನು ತಿಳಿಯುತ್ತೇನೆ. ನಾವು ಇದನ್ನು ಯಾವರೀತಿಯಲ್ಲಿ ಕಂಟ್ರೋಲ್‌ಗೆ ತರಬೇಕು ಎಂದು ಯೋಚನೆ ಮಾಡಿ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ಟಿ.ಟಿ.ಐ. ಗೆ ಪ್ರವೇಶದ ಕನಿಷ್ಠ ಅಂಕ ೫೦ ಪರ್ಸೆಂಟ್ ಇದೆಯೋ ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಇರಬೇಕು ಎಂದು ಪರಿಶೀಲನೆ ಮಾಡಿಯೇ ಮಾಡಿದ್ದೇವೆ.

ಶ್ರೀ ಆನಂದ ಕುಂದ ಹೆಗ್ಗಡೆ.—ಬೇರೆ ರಾಜ್ಯದಲ್ಲಿ ಮಾಡಿದ್ದಾರೆಂದು ನಮ್ಮ ರಾಜ್ಯದಲ್ಲಿ ಮಾಡುವುದು ಬೇಡ.

ಶ್ರೀ ಟಿ. ಚೌಡಯ್ಯ.—೫೦ ಪರ್ಸೆಂಟ್ ಇದ್ದುದನ್ನು ಕಡಿಮೆ ಮಾಡಬಹುದಲ್ಲವೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಸದಸ್ಯರಾದ ಚೌಡಯ್ಯನವರು ಏನು ಹೇಳುತ್ತಾರೆಂದರೆ, ಬೇರೆ ಎಲ್ಲಿಯೂ ಕೆಲಸ ಸಿಕ್ಕದವರು ಇಲ್ಲಿ ಟೀಚರ್ ಕೆಲಸಕ್ಕಾದರೂ ಬರಲಿಕ್ಕೆ ಅವಕಾಶ ಮಾಡಿ ಎಂದು. ಯಾವುದಕ್ಕೂ ಬೇಡದವರು ಇಲ್ಲಿ ಟೀಚರ್ ಆಗಲಿ ಎಂದು ಅವರ ಅಭಿಪ್ರಾಯವೇ ಎಂದು ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. If this is the position, how can we expceet improvement of standards in education? I think our hon'ble Members must uuderstand that aspect also. ಈ ದೃಷ್ಟಿಯಿಂದ ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. ಇದಕ್ಕೆ ಉತ್ತರ ಅವರೇ ಹೇಳಬೇಕು. ನೋಡೋಣ, ಮಾನ್ಯ ಸದಸ್ಯರುಗಳು ಏನೆಲ್ಲಾ ಅಭಿಪ್ರಾಯಗಳನ್ನು ಸಭೆಯ ಗಮನಕ್ಕೆ ಹಾಗೂ ನಮ್ಮ ಗಮನಕ್ಕೆ ತಂದಿದ್ದಾರೆ ಅದನ್ನೆಲ್ಲಾ ವಿಚಾರಿಸಿ, ಆಲೋಚನೆ ಮಾಡಿ ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

FINANCIAL BUSINESS

Discussion and Voting of Demands–Demand Nos. 12, 24, 34, 37, 38, 39, 40, 33 and 47

MR. DEPUTY SPEAKER.—Now the Hon'ble Member Sri K.H. Srinivas will speak on the Demands. I request the hon'ble Members to please conclude within 30 minutes as there are 10 Members who would like to participate in the debate.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರತಕ್ಕಂಥ ಬೇಡಿಕೆಗಳನ್ನು ನಾನು ಬೆಂಬಲಿಸಿ ಈ ಬಗ್ಗೆ ನಾನು ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಸಂಸದೀಯ ವ್ಯವಸ್ಥೆಯಲ್ಲಿ ಈ ಬೇಡಿಕೆಗಳ ಮೇಲಿನ ಚರ್ಚೆಗೆ ಒಂದು ಚೌಕಟ್ಟು ಇದೆ. ಈ ಬೇಡಿಕೆಗಳ ಮೇಲಿನ ಚರ್ಚೆ ಅಂತ ಹೇಳಿದರೆ, ಸಾಮಾನ್ಯವಾಗಿ ಎಲ್ಲಾ ರಾಜಕಾರಣದ ಆಯಾಮಗಳನ್ನು ಬದಿಗಿರಿಸಿ ಬೇಡಿಕೆಗಳಲ್ಲಿ ಅಡಕವಾಗಿರತಕ್ಕಂಥ ಆಡಳಿತಾತ್ಮಕ ವಿಷಯಗಳ ಬಗ್ಗೆ ವಿಮರ್ಶೆ ನಡೆಯಬೇಕು ಎನ್ನತಕ್ಕಂಥ ಒಂದು ಚೌಕಟ್ಟು ಇದೆ. ಈ ಚೌಕಟ್ಟಿನ ಬಗ್ಗೆ ನಾನು ಬಲ್ಲೆ. ಆದರೆ ಇವತ್ತು ನಾನು ಇಲ್ಲಿ ಭಾಷಣ ಮಾಡುವಂತಹ ಪರಿಸ್ಥಿತಿ ಸ್ವಲ್ಪ ಈ ಚೌಕಟ್ಟಿಗೆ ವ್ಯತಿರಿಕ್ತವಾಗುವ ಸಂಭವ ಇದೆ. ಅದಕ್ಕಾಗಿ ನಾನು ತಮ್ಮ ಕ್ಷಮೆಯನ್ನು ಕೇಳಬೇಕಾಗಿದೆ. ಅದಕ್ಕೆ ನಾನು ಹೊಣೆಗಾರನೂ ಅಲ್ಲ. ಈ ಚರ್ಚೆಯನ್ನು ಪ್ರಾರಂಭ ಮಾಡಿದ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಇಡೀ ಚರ್ಚೆಗೆ ರಾಜಕಾರಣದ ಶೃತಿಯನ್ನು ಇಟ್ಟರು. ಈಗತಾನೇ ಆಡಳಿತಪಕ್ಷದ ಪೊರೆಯನ್ನು ಕಳಚಿಕೊಂಡು ವಿರೋದಿ ರಂಗಕ್ಕೆ ನುಗ್ಗಿರುವ ಅವರು ಆ ಒಂದು ಉತ್ಸಾಹದ ಭರದಲ್ಲಿ ಈ ಚರ್ಚೆಗೆ ಇರತಕ್ಕಂಥ ಚೌಕಟ್ಟು, ಔಚಿತ್ಯ ಇವುಗಳನ್ನೊಂದನ್ನೂ ಯೋಚನೆ ಮಾಡದೇ ಅದಕ್ಕೆ ಸಂಪೂರ್ಣವಾಗಿ ರಾಜಕೀಯದ ಶೃತಿಯನ್ನು ಇಟ್ಟು ತಮ್ಮ ಹೊಸ ರಾಜಕಾರಣದ ತಾಳವನ್ನು ಇಲ್ಲಿ ಭಾರಿಸಿ, ಅದೇ ರಾಗ ಮತ್ತು ಲಯದಿಂದ ಈ ಚರ್ಚೆಯನ್ನು ನಿರ್ದೇಶಿಸಿರುವುದರಿಂದ, ನಾನು ಎಷ್ಟೇ ಪ್ರಯತ್ನಪಟ್ಟರೂ ಕೂಡ ಈ ಒಂದು ಚೌಕಟ್ಟಿನಿಂದ ಚರ್ಚೆಯನ್ನು ಸಂಪೂರ್ಣವಾಗಿ ಹೊರಕ್ಕೆ ತರುವುದಕ್ಕೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಆ ಬಗ್ಗೆ ಕೆಲವು ಮಾತುಗಳನ್ನು ಹೇಳಲೇಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಈ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ; ಅದರಲ್ಲೂ ಕೂಡ ಮುಖ್ಯವಾಗಿ ನನ್ನ ವಿರೋದಪಕ್ಷದ ಮಿತ್ರರುಗಳಿಗೆ ಅದನ್ನು ತಮ್ಮ ಮೂಲಕ ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ನಾನು ಕೆಲವು ದಿವಸಗಳ ಹಿಂದೆ ಆ ವಿರೋಧಪಕ್ಷದಲ್ಲಿದ್ದೆ. ಇವತ್ತು ನಾನು ಆಡಳಿತ ಪಕ್ಷದಲ್ಲಿದ್ದೇನೆ. ಅದರಿಂದಾಗಿ ನನ್ನ ಮೂಲಭೂತವಾದ ದೃಷ್ಟಿಕೋನದಲ್ಲಿ ಯಾವುದೇ ಬದಲಾವಣೆಯೂ ಆಗಿಲ್ಲ. ಅಥವಾ ಹಾಗೆಯೇ ಕಾಲಾನುಕಾಲಕ್ಕೆ ಸ್ಥಿತ್ಯಂತರವಾಗತಕ್ಕಂಥ ಜೊಳ್ಳು ದೃಷ್ಟಿಕೋನವನ್ನು ನಾನು ಮೊದಲಿನಿಂದಲೂ ಇಟ್ಟುಕೊಂಡಿಲ್ಲ ಆದ್ದರಿಂದ ನಾನು ಇಲ್ಲಿ ಈ ಕಡೆ ನಿಂತು ಮಾತನಾಡುವಾಗಲೂ ಕೂಡ ಯಾವುದೇ ಇರಿಸು–ಮುರಿಸು ಇಲ್ಲದೇ ಮಾತನಾಡತಕ್ಕಂಥ ಧೈರ್ಯವಿದೆ. ನಾನು ಅಲ್ಲಿದ್ದೆ, ಇಲ್ಲಿದ್ದೆ ಎನ್ನುವ ಕಾರಣಕ್ಕೋಸ್ಕರ ಮೂಲಭೂತವಾದ ವಿಚಾರದ ಪರಿಶುದ್ಧತೆಗೆ ಧಕ್ಕೆ ತಂದುಕೊಳ್ಳತಕ್ಕಂಥ ಕೆಲಸವನ್ನು ನಾನು ಮಾಡುವುದಿಲ್ಲ. ವಿರೋಧಪಕ್ಷದಲ್ಲಿದ್ದಾಗ ಆಡಳಿತ ಮಾಡತಕ್ಕಂಥ ಜನರ ಜವಾಬ್ದಾರಿಯ ಬಗ್ಗೆ ಮತ್ತು ಆಡಳಿತಪಕ್ಷದಲ್ಲಿದ್ದಾಗ ವಿರೋಧಪಕ್ಷದ ಜನರ ಬಗ್ಗೆ ಇರತಕ್ಕಂಥ ಕಳಕಳಿ ಈ ಎರಡನ್ನೂ ಲಕ್ಷಿಸಿ ಮಾತನಾಡಬೇಕೆನ್ನುವುದು ನನ್ನ ಜಾಯಮಾನ ಹಾಗೂ ನಂಬಿಕೆ. ಆಡಳಿತ ಪಕ್ಷದಲ್ಲಿದ್ದಾಗ ಹುಚ್ಚುಹುಚ್ಚಾಗಿ ಹೊಗಳತಕ್ಕಂಥಾದ್ದು ಮತ್ತು ವಿರೋಧಪಕ್ಷದಲ್ಲಿದ್ದಾಗ ರೊಚ್ಚಿನಿಂದ ತೆಗೆಳತಕ್ಕಂಥಾದ್ದು ಈ ಎರಡೂ ನನ್ನ ಜಾಯಮಾನಕ್ಕೆ ಹೊಂದಿರತಕ್ಕಂಥಾದ್ದು ಅಲ್ಲ. ಅನುಚಿತವಾಗಿ ಹೊಗಳತಕ್ಕಂಥಾದ್ದು, ಅನುಚಿತವಾಗಿ ತೆಗೆಳತಕ್ಕಂಥದ್ದು ಆಗಲಿ ಈ ಎರಡೂ ಕಾರ್ಯಗಳು ಸರಿಯಾದಂಥವುಗಳಲ್ಲ. ಅಂತಹ ಒಂದು ಕಾರ್ಯ ಈ [illegible] ಯಾರೇ ಒಬ್ಬ ಸದಸ್ಯನಿಗೆ, ಅವರು ಯಾವ ಒಂದು ಪಕ್ಷದಲ್ಲಿರಲಿ ಅದು ಭೂಷಣವಲ್ಲ ಎನ್ನತಕ್ಕ [illegible] ನಾನು ದೃಢ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಹಾಗೆಯೇ ಅಲ್ಲಿರತಕ್ಕಂಥ ಮಾನ್ಯ ಸದಸ್ಯರು ಬೇರೆ, ಇಲ್ಲಿರತಕ್ಕಂಥ ಮಾನ್ಯ ಸದಸ್ಯರು ಬೇರೆ, ಅವರು ನಮ್ಮ ವಿರೋಧಿಗಳು, ಅವರು ಹೇಳಿದ್ದನ್ನೆಲ್ಲಾ ಖಂಡಿಸಬೇಕು; ನಾವು ಹೇಳಿದ್ದಕ್ಕೆಲ್ಲಾ ಪುಷ್ಟಿ ಕೊಟ್ಟುಕೊಂಡು ಅದನ್ನು ಬೆಳೆಸಿಕೊಂಡು ಹೋಗಬೇಕೆನುವಂತಹ ಭಾವನೆಯನ್ನು ನಾನು ಇಟ್ಟುಕೊಂಡಿಲ್ಲ. ಮನುಷ್ಯನ ಜೀವನದಲ್ಲಿ ಪ್ರಾಪಂಚಿಕ ಸಿದ್ಧಾಂತ ಏನಿದೆ ಅದರ ಪ್ರಕಾರ ಎಲ್ಲಾ ಸದಸ್ಯರೂ ನಮ್ಮವರೇ, ನಾವೆಲ್ಲರೂ ತಾರತಮ್ಯ ದೃಷ್ಟಿಯಿಲ್ಲದೇ ಬದುಕಬೇಕು, ಹಾಗೆಯೇ ಸಾಯಬೇಕಾದರೂ ಕೂಡ ಈ ಪ್ರಪಂಚಕ್ಕೂ ನನಗೂ ಏನೂ ಸಂಬಂಧವಿಲ್ಲ ಎಂದು ನಿಶ್ಚಿಂತೆಯಿಂದ ಸಾಯಬೇಕು; ಈ ಒಂದು ಧ್ಯೇಯಕ್ಕೆ ಅನುಗುಣವಾಗಿ ನಾನು ನನ್ನ ರಾಜಕೀಯ ಜೀವನವನ್ನು ನಿರ್ದೇಶಿಸಿಕೊಂಡು ಬಂದಿದ್ದೇನೆ. ಅದಕ್ಕನುಗುಣವಾಗಿಯೇ ನಾನು ಇವತ್ತು ಶ್ರದ್ಧಾಪೂರ್ವಕವಾಗಿ ಇಲ್ಲಿ ಮಾತನಾಡುವುದಕ್ಕೆ

---

† Indicates that remakers or speeches haove not been revised by the member concerned

ಬಯಸುತ್ತೇನೆ. ಆದ್ದರಿಂದ ನಾನು ಇಷ್ಟೆಲ್ಲಾ ಪೀಠಿಕಾರೂಪವಾಗಿ ಹೇಳಬೇಕಾಯಿತು. ಏನೋ ಈ ಕಡೆ ಬಂದಿದ್ದೇನೆ, ಅದಕ್ಕೋಸ್ಕರ ನಾನು ಮಾತನಾಡುತ್ತಿದ್ದೇನೆ ಎನ್ನುವ ಭಾವನೆ ಈ ಸದನದ ಸದಸ್ಯರಿಗೆ ಅದರಲ್ಲೂ ಮುಖ್ಯವಾಗಿ ನನ್ನ ವಿರೋಧಪಕ್ಷದ ಮಿತ್ರರಿಗೆ ಬರಬೇಕಾದ್ದು ಇಲ್ಲ ಎಂದು ವಿನಯಪೂರ್ವಕವಾಗಿ ಸೂಚಿಸುವುದಕ್ಕೋಸ್ಕರ ಈ ಮಾತನ್ನು ನಾನು ಪ್ರಪ್ರಥಮವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಬಂಗಾರಪ್ಪನವರು ಈ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಿ ಅದಕ್ಕೆ ರಾಜಕಾರಣದ ಶೃತಿಯನ್ನು ಅಥವಾ ಚೌಕಟ್ಟನ್ನು ಕೊಟ್ಟಿದ್ದಾರೆ ಎಂದು ನಾನಾಗಲೇ ಹೇಳಿದ್ದೇನೆ. ಮಾನ್ಯ ಶ್ರೀ ಬಂಗಾರಪ್ಪನವರು ಅದರಲ್ಲಿ ಹೊಸದಾಗಿ ಏನನ್ನೂ ಹೇಳಿಲ್ಲ. ಅವರು ಹೊಸದಾಗಿ ಇವತ್ತು ವಿರೋಧಪಕ್ಷಕ್ಕೆ ಹೋಗಿರುವುದರಿಂದ ಈಗಾಗಲೇ ಅನೇಕಬಾರಿ ಚರ್ಚೆಯಾಗಿರತಕ್ಕಂಥ, ಅದಕ್ಕೆ ಸಾಕಷ್ಟು ರೀತಿಯಲ್ಲಿ ಉತ್ತರ ನೀಡಿರತಕ್ಕಂಥ ವಿಚಾರಗಳನ್ನೇ ಪ್ರಸ್ತಾಪ ಮಾಡಿದ್ದಾರೆ. ಅವರು ಮಾತನಾಡಿರತಕ್ಕಂಥ ವಿಚಾರದಲ್ಲಿ ಯಾವುದೇ ಸ್ವಂತಿಕೆಯನ್ನಾಗಲೀ ಅಥವಾ ನಾವೀನ್ಯತೆಯನ್ನಾಗಲೀ ನಾನು ಕಾಣಲಿಲ್ಲ. ಅವರು ಮಾತನಾಡತಕ್ಕಂಥ ಕಾಲದಲ್ಲಿ ನಾನು ಬಹಳ ತಾಳ್ಮೆಯಿಂದ ಅವರ ಸಂಪೂರ್ಣವಾದ ಭಾಷಣವನ್ನು ಕೇಳಿದ್ದೇನೆ. ಅವರು ನನ್ನ ಭಾಷಣವನ್ನು ಕೇಳುವುದಕ್ಕೆ ಇಲ್ಲಿ ಈ ಸಭೆಯಲ್ಲಿ ಇರಬೇಕಾಗಿತ್ತು. ಆದರೆ ಅವರು ಇಲ್ಲಿ ಇಲ್ಲ ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಹಿಂದೆ ಆದಂತಹ ವಿಚಾರಗಳ ಬಗ್ಗೆ ಅವರು ಹೇಳುವಾಗ ತಮ್ಮ ಸ್ವಂತ ಮಾತುಗಳನ್ನು ಅವರು ಬಳಸಿಲ್ಲ. ಎಲ್ಲಾ ಎರವಲು ಮಾತುಗಳನ್ನು ಬಳಸಿ ಇಲ್ಲಿ ಮಾತನಾಡಿದ್ದಾರೆ. ಅವರು ಇಲ್ಲಿ ಯಾವ್ಯಾವ ವಿಚಾರಗಳನ್ನು ಹೇಳಿದ್ದಾರೆ ಅದಕ್ಕೆ ನಾನು ವಿಶೇಷವಾಗಿ ಏನೂ ಉತ್ತರ ಕೊಡಬೇಕಾದ್ದು ಇಲ್ಲ. ಹಾಗೆ ಉತ್ತರ ಕೊಡುವ ಜವಾಬ್ದಾರಿ ನನ್ನದಲ್ಲ. ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ಇದೆ ಮೇಲಾಗಿ ಮಾನ್ಯ ಮುಖ್ಯ ಮಂತ್ರಿಯವರು ಇದ್ದಾರೆ; ಅವರೇ ಅದಕ್ಕೆ ಉತ್ತರವನ್ನು ಕೊಡುತ್ತಾರೆ. ಆದರೆ ಈ ಬಗ್ಗೆ ನನ್ನ ಅನ್ನಿಸಿಕೆ ಏನಿದೆ ಎಂಬುದನ್ನು ನಾನು ಪ್ರಾಮಾಣಿಕವಾಗಿ ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಹೇಳಿದ್ದಾರೆ. ನಾನು ಆಗಲೇ ಹೇಳಿದಂತೆ ಅದರಲ್ಲಿ ಹೊಸ ವಿಚಾರಗಳು ಏನೂ ಇಲ್ಲ. ಅವರು ಆಡಿರತಕ್ಕಂಥ ಮಾತುಗಳಲ್ಲಿ ನೈತಿಕತೆ ಏನೂ ಇಲ್ಲ. ಮಾತುಗಳನ್ನು ಆಡಬೇಕಾದರೂ ಕೂಡ ಅದರ ಹಿಂದೆ ನೈತಿಕತೆ ಇರಬೇಕಾಗುತ್ತದೆ. ಮಾತುಗಳನ್ನು ಯಾರು ಬೇಕಾದರೂ ಆಡಬಹುದು ಈ ಸದನದಲ್ಲಿ ಮಾತು ಬರದೇ ಇರುವವರು ಬಹಳ ಕಡಿಮೆ. ಆ ಮಾತಿಗೆ ಯಾವಾಗ ಯೋಗ್ಯತೆ ಬರುತ್ತದೆ ಎಂದರೆ ಆ ಮಾತಿನ ಹಿಂದೆ ಒಂದು ತಪಸ್ಸು, ಪ್ರಾಮಾಣಿಕತೆ, ನೈತಿಕತೆ ಇದ್ದರೆ ಮಾತ್ರ ಆ ಮಾತಿಗೆ ಬೆಲೆ ಬರುತ್ತದೆ ಮತ್ತು ಯೋಗ್ಯತೆ ಬರುತ್ತದೆಯೇ ಹೊರತು ಸುಮ್ಮನೆ ಎಷ್ಟೇ ಚೆಂದವಾಗಿ ಮಾತನಾಡಿದಗೂ ಕೂಡ ಅದಕ್ಕೆ ಬೆಲೆ ಬರುವುದಕ್ಕೆ ಸಾಧ್ಯವಿಲ್ಲ. ಈ ಬಿ.ಡಿ.ಎ. ಬಗ್ಗೆ ಮಾತನಾಡುತ್ತಾ ಮಾನ್ಯ ಬಂಗಾರಪ್ಪನವರು ಅಲ್ಲಿನ ಚೇರ್ಮನ್ ಬಗ್ಗೆ ಹೇಳಿದ್ದಾರೆ. ಈ ಬಿ.ಡಿ.ಎ. ಯಲ್ಲಿರತಕ್ಕಂಥ ಸಮಸ್ಯೆಗಳ ಬಗ್ಗೆ ದಿವಂಗತ ಶ್ರೀ ದೇವರಾಜ ಅರಸ್‌ರವರು ಇತಿಹಾಸ ಸ್ವರೂಪವಾದ ಭಾಷಣವನ್ನು ಕೆಲವು ದಿವಸಗಳ ಹಿಂದೆ ಮಾಡಿದರು. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಬಂಗಾರಪ್ಪನವರು ಈ ಬಿ.ಡಿ.ಎ. ಅಧ್ಯಕ್ಷರ ಬಗ್ಗೆ ಮತ್ತು ಅವರ ಚಾರಿತ್ರ್ಯದ ಬಗ್ಗೆ ಮಾತನಾಡಿದರು. ನಾನು ಈ ಸಂದರ್ಭದಲ್ಲಿ ಒಂದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ; ಬಿ.ಡಿ.ಎ. ಅಧ್ಯಕ್ಷರು ಯಾರ ಶತ್ರುವೂ ಅಲ್ಲ, ಯಾರ ಮಿತ್ರರೂ ಅಲ್ಲ. ನಾನು ಅವರನ್ನು ಯಾವುದೇ ಕಾಲದಲ್ಲಾಗಲೀ, ಯಾವುದೇ ಕೆಲಸಕ್ಕಾಗಲೀ ಅವರನ್ನು ಉಪಯೋಗಿಸಿಕೊಂಡಿಲ್ಲ. ಮಾನ್ಯ ಸದಸ್ಯರು ಶ್ರೀ ಕೆ.ಕೆ. ಮೂರ್ತಿಯವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿ ಅವರ ಚಾರಿತ್ರ್ಯ ಇಂತಹದು ಎನ್ನತಕ್ಕಂಥ ಮಾತನ್ನು ಅವರು ಆಡಿದ್ದಾರೆ. ನನಗೂ ಕೂಡ ಮಾನ್ಯ ಸದಸ್ಯರ ಬಗ್ಗೆ ಮಾತನಾಡುವುದಕ್ಕೆ ಧೈರ್ಯವಿದೆ. ಆದರೆ ಅವರ ಬಗ್ಗೆ ಮಾತನಾಡಬೇಕಾದ ಅಗತ್ಯ ನನಗಿಲ್ಲ, ಅಂತಹ ಸಂದರ್ಭವೂ ಇಲ್ಲ, ನಾನು ಆಡುವುದೂ ಇಲ್ಲ. ಒಬ್ಬ ಒಳ್ಳೆಯ ವ್ಯಕ್ತಿಯನ್ನು ತಮ್ಮ ರಾಜಕಾರಣಕ್ಕೆ ಉಪಯೋಗಿಸಿಕೊಂಡು ಅವರ ಉಪಯುಕ್ತತೆ ಮುಗಿದಕೂಡಲೇ ಕಬ್ಬು ತಿಂದು ಬಿಸಾಕಿದಹಾಗೆ ಬಿಸಾಕತಕ್ಕಂಥಾದ್ದು ಯಾವುದೇ ಒಬ್ಬ ರಾಜಕಾರಣಿಗೆ ಭೂಷಣವಲ್ಲ. ಬಿ.ಡಿ.ಎ. ಯಲ್ಲಿ ಸಾಕಷ್ಟು ಲೋಪದೋಷಗಳು ಇರಬಹುದು. ಆ ಲೋಪದೋಷಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಮೂರ್ತಿಯವರು ಮಾಡಿರತಕ್ಕಂಥ ಎಲ್ಲಾ ಕೆಲಸಗಳೂ ಸರಿಯಾಗಿದೆ ಎಂದು ನಾವು ಸರ್ಟಿಫಿಕೇಟ್ ಕೊಡಬೇಕಾದ್ದೂ ಇಲ್ಲ. ಇವತ್ತು ಅವರು ಮಾಡಿರತಕ್ಕಂಥ ಅನೇಕ ಒಳ್ಳೆಯ ಕೆಲಸಗಳ ಬಗ್ಗೆ ಪತ್ರಿಕೆಗಳಲ್ಲಿ ಮೆಚ್ಚುಗೆಯ ಲೇಖನಗಳೂ ಕೂಡ ಬಂದಿದೆ. ಅಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸತಕ್ಕಂಥ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಇವತ್ತು ಆ ವ್ಯಕ್ತಿಯ ಹೆಸರನ್ನು ಹೇಳಿ ನಿಂದನೆ

ಮಾಡತಕ್ಕಂಥಾದ್ದು ಸರಿಯಲ್ಲ. ಮಾನ್ಯ ಬಂಗಾರಪ್ಪನವರು ಕಾಂಗ್ರೆಸ್ (ಐ) ಅಧ್ಯಕ್ಷರಾಗಿದ್ದ ತಾರುಣ್ಯದಲ್ಲಿ ಹೇಗೆ ಮಾನ್ಯ ಮೂರ್ತಿಯವರ ಜೊತೆಯಲ್ಲಿ ಕಾರಿನಲ್ಲಿ ತಿರುಗಾಡಿಕೊಂಡು, ಅವರನ್ನು ಹೊಗಳಿಕೊಂಡು ಇದ್ದರು ಎಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

೧೦-೩೦ ಎ. ಎಂ.

ತಾವು ಇವತ್ತು ವಿರೋಧಪಕ್ಷದಲ್ಲಿ ಕುಳಿತುಕೊಂಡು ಈ ರೀತಿಯಾಗಿ ತೆಗಳಿದರೆ ತಮಗೆ ಯಾವ ಬೆಲೆ ಬರುತ್ತದೆ. ? ಸರ್ಕಾರದವರು ಮಾಡಿರುವಂತಹ ಲೋಪದೋಷಗಳನ್ನು ಯಾವ ರೀತಿಯಲ್ಲಿ ಸರಿಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ತಾವು ವಿಮರ್ಶೆ ಮಾಡಿ ಅದನ್ನು ಎತ್ತಿ ತೋರಿಸಿದ್ದರೆ ಆಗ ತಾವು ಮಾಡಿದಂತಹ ವಾದಕ್ಕೆ ಶಕ್ತಿ ಬರುತ್ತದೆ ಹಾಗೂ ಅದಕ್ಕೆ ಒಂದು ಚಾರಿತ್ರ್ಯವನ್ನು ರೂಪಿಸಿದಂತೆ ಆಗುತ್ತದೆ ಎನ್ನುವ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದು ಬಿಟ್ಟು ತಾವು ಈ ರೀತಿ ತೆಗಳುವುದು ಸಲ್ಲದು ಎಂದು ನಾನು ನನ್ನ ಅಭಿಪ್ರಾಯವನ್ನು ತಿಳಿಯಬಯಸುತ್ತೇನೆ. ಮತ್ತೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಎಸ್. ಬಂಗಾರಪ್ಪನವರು ಮೊಟ್ಟಮೊದಲನೆಯದಾಗಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೇಳಿದರು ಈ ಸರ್ಕಾರ ಅನನುಭವಿಗಳಿಂದ ಕೂಡಿದ ಸರ್ಕಾರವೆಂದು ಆದರೆ ಇದೇ ರೀತಿಯ ಮಾತನ್ನು ಮಾನ್ಯ ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ಸಹ ಈ ಮನೆಯಲ್ಲಿ ಹೇಳಿದ ಜ್ಞಾಪಕ ನನಗೆ ಇದೆ. ಆದರೆ ಶ್ರೀಮಾನ್ ದೇವರಾಜ ಅರಸ್‌ರವರಿಗೆ ನೈತಿಕವಾಗಿ ಈ ಮಾತನ್ನು ಹೇಳುವಂತಹ ಅಧಿಕಾರ ಇತ್ತು. ಏತಕ್ಕೆಂದರೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಹೆಚ್ಚಿನ ಅನುಭವವನ್ನು ಪಡೆದು ರಾಜಕೀಯ ಧುರೀಣರೆನಿಸಿಕೊಂಡಿದ್ದರು. ಆದರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರಿಗೆ ಈ ರೀತಿ ಹೇಳುವಂತಹ ನೈತಿಕ ಹಕ್ಕು ಇಲ್ಲ. ಇನ್ನು ನಮ್ಮ ಮಾನ್ಯ ಸದಸ್ಯರಾದಂತ ಶ್ರೀಮಾನ್ ಬಂಗಾರಪ್ಪನವರು ಮಾತನಾಡುವಂತಹ ಸಂದರ್ಭದಲ್ಲಿ ರೈತರ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ನರಗುಂದ ಮತ್ತು ನವಲಗುಂದಗಳಲ್ಲಿ ಗೋಳಿಬಾರ್ ನಡೆದಂತಹ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಆದರೆ ನರಗುಂದ ಮತ್ತು ನವಲಗುಂದಗಳಲ್ಲಿ ಗೋಳಿಬಾರ್ ನಡೆದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರೇ ವ್ಯವಸಾಯ ಮತ್ತು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದರು. ವಿರೋಧಪಕ್ಷದಲ್ಲಿದ್ದಂತಹ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಹಾಗೂ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಹಾಗೂ ಶ್ರೀಮಾನ್ ಬೊಮ್ಮಾಯಿಯವರ ನರಗುಂದ ಮತ್ತು ನವಲಗುಂದಗಳ ಸಮಸ್ಯೆಯನ್ನು ಪರಿಹಾರ ಮಾಡಿ ಎಂದು ಚರ್ಚೆ ಮಾಡಿದ್ದು ಉಂಟು. ಅಲ್ಲಿ ರೈತರು ಚಳುವಳಿಯನ್ನು ಮಾಡಲು ಮುಖ್ಯವಾದಂತಹ ಕಾರಣ ಏನೆಂದರೆ ಒಂದು ಎಕರೆ ಜಮೀನಿಗೆ ಸುಮಾರು ೫೦೦ ರೂಪಾಯಿಗಳಿಂದ ಹಿಡಿದು ೧೫೦೦ ರೂಪಾಯಿ ಗಳವರಿವಿಗೆ ವಾಟರ್ ರೇಟ್‌ನ್ನು ಹಾಕಿದ್ದರು ಇದು ಜಾಸ್ತಿ ಇದನ್ನು ಸರಿಮಾಡಿ ಎಂದು ರೈತರು ಧರಣ ಸತ್ಯಾಗ್ರಹವನ್ನು ಮಾಡಿದರು ಆಗ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರು ಅವರ ಸಮಸ್ಯೆಗಳನ್ನು ಮನಗಂಡು ಬಗೆಹರಿಸಿದ್ದರೆ ನಾನು ಖಂಡಿತವಾಗಿ ಅವರನ್ನು ಮೆಚ್ಚುತ್ತಿದ್ದೆ. ಮತ್ತು ವಿರೋಧಪಕ್ಷದವರು ಹೆಚ್ಚು ವತ್ತು ರೈತರು ಇದರ ವಿರುದ್ಧ ತಡೆಯಾಜ್ಞೆಯನ್ನು ತಂದರೂ ಸಹ ಸರ್ಕಾರದವರು ರೈತರಿಂದ ವಾಟರ್ ರೇಟ್‌ನ್ನು ವಸೂಲು ಮಾಡಿದ್ದಾರೆ. ಆಗ ತಾವು ರೈತರ ಸಮಸ್ಯೆಗಳನ್ನು ಬಗೆಹರಿಸಿದ್ದರೆ ಇಂತಹ ವಾತಾವರಣ ಉಂಟಾಗುವುದಕ್ಕೆ ಆಗುತ್ತಿರಲಿಲ್ಲ ಎನ್ನುವ ಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮತ್ತು ನಿಮ್ಮ ಸರ್ಕಾರಿ ಅಧಿಕಾರಿಗಳಾದಂತಹ ತಹಶೀಲ್ದಾರ್‌ರು ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳು ರೈತರ ಮನೆಗಳನ್ನು ನುಗ್ಗಿ ಗಲಾಟೆ ಮಾಡಿ ಸಾಲವನ್ನು ವಸೂಲು ಮಾಡಿದಾಗ ರೈತರು ಚಳುವಳಿಯನ್ನು ಮಾಡಬೇಕಾಗಿ ಬಂತು. ಇದರಿಂದ ಪೋಲೀಸಿನವರು ರೈತರ ಮೇಲೆ ಗೋಳಿಬಾರ್ ಮಾಡಬೇಕಾಗಿ ಬಂತು, ಈ ಗೋಳಿ ಬಾರ್ ಮಾಡುವುದಕ್ಕೆ ಯಾರು ಹೊಣೆ, ಆದರೆ ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ ಉತ್ತರ ಪ್ರದೇಶದ ವಿ. ಪಿ. ಸಿಂಗ್ ರವರನ್ನು ನಾನು ಉದಾಹರಣೆ ಕೊಡಬಹುದು. ಅವರು ಮಾಡಿದಕ್ಕೆ ಯಾವ ಬೆಲೆ ಬರುತ್ತದೆ. ನರಗುಂದದಲ್ಲಿ ರೈತರ ಮೇಲೆ ಗೋಳಿಬಾರ್ ಮಾಡಿದಾಗ ತಾವು ತಕ್ಷಣ ತಮ್ಮ ಮಂತ್ರಿ ಪದವಿಗೆ ರಾಜಿನಾಮೆಯನ್ನು ಕೊಡಬೇಕಾಗಿತ್ತು. ಆ ರೀತಿ ಏನಾದರು ತಾವು ರಾಜೀನಾಮೆಯನ್ನು ಕೊಟ್ಟಿದ್ದರೆ ಖಂಡಿತವಾಗಿ ನಾನು ನಿಮ್ಮನ್ನು ಪೂಜೆ ಮಾಡುತ್ತಿದ್ದೆ ಮತ್ತು ನಿಮ್ಮನ್ನು ಮೆಚ್ಚುತ್ತಿದ್ದೆ. ಆದರೆ ತಾವು ಆ ರೀತಿ ಮಾಡಲಿಲ್ಲ. ತಾವು ಹಾಗೆಯೇ ಅಧಿಕಾರದಲ್ಲಿ ಮುಂದುವರಿದರೆ ಅದಕ್ಕೆ ಯಾವ ಬೆಲೆ ಬರುತ್ತದೆ. ತಾವು ಏತಕ್ಕೆ ಮಹಾತ್ಮ ಗಾಂಧೀಜಿಯವರ ತತ್ವವನ್ನು ಹೇಳು

ತ್ತಿರೋ ನನಗೆ ಅರ್ಥವಾಗುವುದಿಲ್ಲ ಆದ್ದರಿಂದ ತಾವು ಏನು ಒಂದು ಆಪಾದನೆಯನ್ನು ಮಾಡಿದೀರಿ ಇದು ನಿಜವಾಗಿಯೂ ಸತ್ಯಕ್ಕೆ ದೂರವಾದ ಸಂಗತಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಬರೀ ಜುಳ್ಳು ಆಪಾದನೆ ಇದರಲ್ಲಿ ಯಾವುದೇ ವಿಧವಾದಂತಹ ತಿರಳು ಇಲ್ಲ.

ಮಾನ್ಯ ಅಧ್ಯಕ್ಷರೇ ಇನ್ನು ಮತ್ತೊಂದು ವಿಷಯವನ್ನು ನಮ್ಮ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದಾರೆ ಅದು ಏನೆಂದರೆ ನಮ್ಮ ಸರ್ಕಾರದವರು ಶ್ರೀಮಾನ್ ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು, ಆ ಬಂಗಾರಪ್ಪನವರ ಸಮಿತಿಯನ್ನು ಸರ್ಕಾರ ರದ್ದು ಪಡಿಸಿತು. ಆದರೆ ಆ ಸಮಿತಿಯನ್ನು ಸರ್ಕಾರ ರದ್ದು ಪಡಿಸಿದ ಕೂಡಲೆ ಅವರು ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಡಬೇಕಾಗಿತ್ತು, ಆದರೆ ಅವರು ರಾಜಿನಾಮೆಯನ್ನು ಕೊಡಲಿಲ್ಲ, ಮತ್ತು ಆಗ ಅವರು ಹೊರಗಡೆ ಸಹ ಬರಲಿಲ್ಲ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಬಂಗಾರಪ್ಪನವರು ಅಧ್ಯಕ್ಷತೆ ಯಲ್ಲಿ ನೇಮಕ ಗೊಂಡ ಸಮಿತಿಯನ್ನು ರದ್ದು ಪಡಿಸಿದಂತಹ ಕಾಲದಲ್ಲಿ ನಾನು ವಿರೋಧ ಪಕ್ಷದಲ್ಲಿ ಇದ್ದೆ. ಆದರೆ ಈ ಸಮಿತಿಯ ಅಧ್ಯಕ್ಷರು ಒಬ್ಬ ಜವಾಬ್ದಾರಿಯುತ ಮಂತ್ರಿ ಸ್ಥಾನದಲ್ಲಿದ್ದುಕೊಂಡು ಅವರು ಮಾಡಿರತಕ್ಕಂತಹ ಶಿಫಾರಸ್ಸುಗಳಿಗೆ ಅನುಸಾರವಾಗಿ ಆ ಶಿಫಾರಸ್ಸುಗಳ ಸಾಧಕ ಬಾಧಕಗಳನ್ನು ಚನ್ನಾಗಿ ಅಧ್ಯಯನ ಮಾಡಿ ಸರ್ಕಾರದ ಮೇಲೆ ಬೀರುವಂತಹ ಪರಣಾಮಗಳನ್ನು ಆರ್ಥಿಕವಾಗಿ ಪರಿ ಶೀಲನೆ ಮಾಡಿ ಆ ವರದಿಯನ್ನು ಅವರು ಸಲ್ಲಿಸಬೇಕಾಗಿತ್ತು..

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಎಲ್ಲಾ ಸಾಧಕ ಬಾಧಕಗಳನ್ನು ಚನ್ನಾಗಿ ಆಲೋಚನೆ ಮಾಡಿ ರಿಪೋರ್ಟ್ ಕೊಡಬೇಕು, ಆ ರಿಪೋರ್ಟ್ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಆಚರಣೆಗೆ ತರತಕ್ಕಂತಹ ಭರವಸೆಯನ್ನು ಸಹ ಕೊಟ್ಟಿದ್ದಾರೆ. ಅದೂ ಇನ್ ಟೊಟೋ ಜಾರಿಗೆ ತರುತ್ತೇವೆಂದು. ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಆ ಸಮಿತಿಯ ವರದಿಯನ್ನು ಈ ಸದನದಲ್ಲಿ ಇಟ್ಟಿದ್ದಾರೆ ಮತ್ತು ಆ ವರದಿಯನು ನಾನು ಸರ್ಕಾರಕ್ಕೆ ಸಲ್ಲಿಸಿದ್ದೇನೆ. ಆ ಸಮಿತಿಯವರು ಸಲ್ಲಿಸಿದಂತ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ನೋಡಿ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಆ ಹೇಳಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಜಾರಿಗೆ ಕೊಡುತ್ತೇನೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಆ ರೀತಿ ಹೇಳಿದ ಮೇಲೆ ಇನ್ನೇನು ಉಳಿದಿದೆ. ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ನಾನು ಹೇಳತಕ್ಕಂತಹ ವಿಚಾರ ಅದುಅಲ್ಲ. ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂತ ಮತ್ತು ಅವರ ಈಡೇರಿಸತಕ್ಕಂಥದ್ದು ಬೇರೆ ವಿಚಾರ ಆದರೆ ಈ ಸಮಿತಿಯವರು ಸರ್ಕಾರಕ್ಕೆ ಕೊಟ್ಟಿರುವಂತಹ ಶಿಫಾರಸ್ಸುಗಳು ಎಷ್ಟರ ಮಟ್ಟಿಗೆ ಕಾರ್ಯಸಾಧನೆ ಮಾಡಬಲ್ಲವು ಎಂದು ತಾವು ಮಾಡಿರುವಂತಹ ಶಿಫಾರಸ್ಸಿನಲ್ಲಿ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಸಮಿತಿಯವರು ಕೊಟ್ಟಿರುವ ವರದಿಯನ್ನು ಸಂಪೂರ್ಣವಾಗಿ ವಿಚಾರ ಮಾಡಿ ಅದರ ಚರಾ ಚರಾ ಸಾಧಕಬಾದಕಗಳನ್ನು ಯೋಚನೆ ಮಾಡಿ ಉತ್ತರ ಕೊಡಬೇಕಾಗುತ್ತದೆ. ಮತ್ತೆ ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಹೇಳಿರತಕ್ಕಂತಹ ಮಾತು. ಆ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಹೇಳಿರುವುದರಿಂದ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ ಆದರೆ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನಾನು ಉತ್ತರ ಕೊಡುವ ಅವಶ್ಯಕತೆ ಕೂಡ ಇಲ್ಲ. ಆದರೆ ನಾನು ಹೇಳುವುದೇನೆಂದರೆ ಸರ್ಕಾರದ ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವಂತಹ ಮಂತ್ರಿಗಳು ಈ ರೀತಿಯ ಶಿಫಾರಸ್ಸು ಮಾಡಿ ವರದಿಯನ್ನು ಸರ್ಕಾರಕ್ಕೆ ಕೊಟ್ಟರೆ ಆದರ ಪರಿಣಾಮ ಏನಾಗುತ್ತದೆ ಎಂಬುದನ್ನು ಆಲೋಚನೆ ಮಾಡಿ ವರದಿಯನ್ನು ಸಲ್ಲಿಸಬೇಕಾಗಿತ್ತು ಎನ್ನುವ ಮಾತನ್ನು ಮಾತ್ರ ನಾನು ಹೇಳಿದ್ದು, ಆದರೆ ತಮ್ಮ ಶಿಫಾರಸಿನಲ್ಲಿ ಯಾವುದೇ ವಿಧವಾದಂತಹ ಅಂಶಗಳು ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ರೈತರ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಪರಿಶೀಲನೆ ಮಾಡಬೇಕು ಎನ್ನುವುದರ ಬಗ್ಗೆ ವರದಿಯನ್ನು ಸಲ್ಲಿಸಬೇಕಾಗಿತ್ತು, ಅಥವಾ ಬಿಡಬೇಕಾಗಿತ್ತು ಎನ್ನು

ವುದು ಬೇರೆ ವಿಚಾರ. ಆದರೆ ಈ ಸಮಿತಿಯನ್ನು ರದ್ದುಪಡಿಸಿದ ವಿಚಾರವನ್ನು ತಾವು ಇಲ್ಲಿ ಪ್ರಸ್ತಾಪ ಮಾಡುವುದು ಸತ್ಯಕ್ಕೆ ದೂರವಾದಂತಹ ಆಪಾದನೆಗಳು ಮಾಡುವುದು ಅಷ್ಟು ಸೂಕ್ತವಲ್ಲವೆಂದು ನನ್ನ ಭಾವನೆ.

ಇಲ್ಲಿ ಸದನದ ಎಲ್ಲಾ ಮಾನ್ಯ ಸದಸ್ಯರೂ ಕೂಡ ಇದು ಶ್ರೇಷ್ಟವಾದ ಕ್ರಮವೆಂದು ಅಭಿಪ್ರಾಯಕ್ಕೆ ಬಂದು ಒಮ್ಮತದ ತೀರ್ಮಾನವನ್ನು ಮಾಡಿದ್ದಾರೆ. ಬೆಂಗಳೂರು ನಗರದ ಸುತ್ತಮುತ್ತ ಅನಧೀಕೃತ ವಾಗಿ ಅಸ್ತವ್ಯಸ್ತ ರೀತಿಯಲ್ಲಿ ಕಟ್ಟಡಗಳು ದೊಡ್ಡ ಪ್ರಮಾಣದಲ್ಲಿ ಆಗುತ್ತಿವೆ, ವ್ಯವಸಾಯೇತರ ಉದ್ದೇಶಕ್ಕಾಗಿ ಎಂದು ಭೂಮಿಯನ್ನು ಪರಿವರ್ತನೆ ಮಾಡಿ ಭೂಸುಧಾರಣೆ ಕಾನೂನಿನಿಂದ ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡದರೆ ಇದರಿಂದ ಒಂದು ದೊಡ್ಡ ಅನಾಹುತವೇ ಆಗುತ್ತದೆಂದು ಶ್ರೀ ದೇವರಾಜ್ ಅರಸ್‌ರವರು ಇದು ಬಹಳ ಅವಿವೇಕದ ಕೆಲಸವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದರು. ಈ ಸದನದಲ್ಲಿ ಚರ್ಚೆಗೆ ಬಂದಾಗಲೂ ಕೂಡ ಹಾಗೆಯೇ ಇಟ್ಟುಬಿಡಿ ಎಂದು ಬೆಂಬಲ ಮಾಡಲಿಲ್ಲ, ತಾವು ಬಡವರ ಕೆಲಸ ಮಾಡುವುದಕ್ಕೇ ತೊಂದರೆಯಾಗಿದೆ ಎಂದರೆ ಅದು ಕೇವಲ ಸರ್ಕಾರದ ಅಷ್ಟೇ ಅಲ್ಲ, ಇಡೀ ಸದನದ ಬಗ್ಗೆ ದೂಷಣೆಯಾಗುತ್ತದೆ ಎಂಬ ಅಂಶವನ್ನು ಈ ಸಭೆಯ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಆಡಳಿತದ ಅನುಭವದ ಬಗ್ಗೆ, ಮಂತ್ರಿ ಪದವಿ ನಡೆಸುವ ಬಗ್ಗೆ ಶ್ರೀಮಾನ್ ಬಂಗಾರಪ್ಪನವರು ಹೇಳಿದರು. ಅದನ್ನು ಅವರು ಎಷ್ಟರಮಟ್ಟಿಗೆ ತೋರಿಸಿಕೊಟ್ಟಿದ್ದಾರೆ ಎಂದರೆ, ಹಿಂದೆ ಅವರು ಲೋಕೋಪಯೋಗಿ ಸಚಿವರಾಗಿದ್ದಾಗ ಒಂದು ಮಾಸ್ಟರ್ ಪ್ಲಾನ್ ತಯಾರಿಸಿ ದರು. ಸುಮಾರು ಒಂಬೈನೂರು ಕೋಟಿ ರೂಪಾಯಿ ವೆಚ್ಚದ ಮಾಸ್ಟರ್ ಪ್ಲಾನ್ ತಯಾರಿಸಿ ಪ್ರತಿ ಹಳ್ಳಿಗೂ ಕೂಡ ಸುವ್ಯವಸ್ಥಿತವಾದ ರಸ್ತೆಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ಹೇಳಿದರು. ತಿಂಗಳು ಗಟ್ಟಲೆ ಎಲ್ಲಾ ಶಾಸಕರು ಸೇರಿಕೊಂಡು ಮ್ಯಾಪ್ ಮೇಲೆ ಒಂದೊಂದು ಹಳ್ಳಿಯ ಮೇಲೂ ಗೆರೆಯನ್ನು ಹಿಡಿದಿದ್ದೇ ಹಿಡಿದದ್ದು. ನಾನು ದುರಾದೃಷ್ಟವಶಾತ್ ಆ ಕಾಲದಲ್ಲಿ ಯೋಜನಾ ಇಲಾಖೆಯಲ್ಲಿ ತುಂಡು ಸಚಿವನಾಗಿದ್ದೆ. ಅವರು ಹೇಳಿದರು ಮುಖ್ಯಮಂತ್ರಿಗಳು ಭರವಸೆ ಕೊಟ್ಟುಬಿಡುತ್ತಾರೆ, ಒಂದರ ಬಗ್ಗೆಯೂ ಹಿಂದುಮುಂದೆ ಯೋಚನೆ ಮಾಡುವುದಿಲ್ಲ ಎಂದು ಇವರು ಯೋಚನೆ ಮಾಡಿ ಕೆಲಸ ಮಾಡಿದ್ದೀರಾ ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಒಂಬೈನೂರು ಕೋಟಿ ರೂಪಾಯಿಗಳನ್ನು ಎಲ್ಲಿಂದ ತರುತ್ತೀರಿ ಎಂದು ಕೇಳಿದರೆ, ವರ್ಲ್ಡ್ ಬ್ಯಾಂಕ್‌ನಿಂದ ತರುತ್ತೇನೆಂದು ಘಂಟಾಘೋಷವಾಗಿ ಹೇಳಿದರು. ಆದರೆ, ವರ್ಲ್ಡ್ ಬ್ಯಾಂಕ್ ಹಣ ಕೊಡುವುದರಲ್ಲಿ ಅದಕ್ಕೆ ತನ್ನದೇ ಆದ ಒಂದು ಆದ್ಯತೆಯ ಪಟ್ಟಿ ಇದೆ. ಯಾವ ಕಾರಣಕ್ಕಾಗಿ ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಹಣ ಕೊಡಬೇಕೆಂದ ಕೇಂದ್ರ ಸರ್ಕಾರದ ಆದ್ಯತೆಯ ಪಟ್ಟಿ ಇರುತ್ತದೆ. ಹಾಗಿಲ್ಲಾ ಅವರು ಕೊಡುವುದಕ್ಕೆ ಬರುವುದಿಲ್ಲ. ಯಾವುದೇ ರೀತಿಯಲ್ಲಿ ಕೇಂದ್ರ ಸರ್ಕಾರದವರು ಅದನ್ನು ಬಳಸಿಕೊಳ್ಳಲು ರಾಜ್ಯ ಜನತೆಯ ೩೩ ಅಂಶಗಳ ಪಟ್ಟಿ ಇದೆ. ಯಾವ ಆದ್ಯತೆಯಲ್ಲೂ ರಸ್ತೆಗಳು ಆಗತಕ್ಕಂಥ ಕೆಲಸ ಬರುವುದಿಲ್ಲ, ಆದ್ದರಿಂದ ವರ್ಲ್ಡ್ ಬ್ಯಾಂಕ್‌ನಿಂದ ಸಾಲ ಪಡೆಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಎಲ್ಲಾ ಶಾಸಕರೂ ವರ್ಲ್ಡ್ ಬ್ಯಾಂಕ್‌ನಿಂದ ಒಂಬೈನೂರು, ಎಂಟುನೂರು ಕೋಟಿ ರೂಪಾಯಿ ಬರುತ್ತದೆ, ಮಾಸ್ಟರ್ ಪ್ಲಾನ್‌ನಂತೆ ಎಲ್ಲಾ ಗ್ರಾಮಗಳಿಗೂ ರಸ್ತೆಗಳು ಆಗುತ್ತದೆ ಎಂದು ನಂಬಿದರು. ಆದರೆ ಅದು ಆಗಲಿಲ್ಲ.

ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂತಾದ್ದು ಈ ಆಡಳಿತ ಏನು ಅನುಭವಿಗಳಿಂದ ಕೂಡಿರುವುದು ಎಂದು ಅವರು ಹೇಳಿದರು, ಇರಬಹುದು. ಕೆಲವರಿಗೆ ಅನುಭವ ಕಡಿಮೆ ಇರಬಹುದು. ಕೆಲವರಿಗೆ ಅನುಭವ ಜಾಸ್ತಿ ಇರಬಹುದು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಎಲ್ಲಾ ದಿಕ್ಕಿನಲ್ಲೂ, ಎಲ್ಲಾ ರೀತಿಯಲ್ಲೂ ಅನುಭವ ಇಟ್ಟುಕೊಂಡಿರತಕ್ಕಂತಹವರು ರಾಜಕೀಯ ವ್ಯವಸ್ಥೆಯಲ್ಲಿ ಬರುವುದು ಸಾಧ್ಯ ಇಲ್ಲ. ಅದರಲ್ಲೂ ಪಕ್ಷಗಳ ವ್ಯವಸ್ಥೆಯಲ್ಲಿ ಏನಾಗುತ್ತದೆ ಎಂದರೆ ಜನಗಳೆಲ್ಲಾ ಹಾಜಿಹೋಗಿ ಹುಡುಕಿ ಕೊಡೋಣ ಎಂದರೆ ಒಬ್ಬರೂ ಸಿಗುವುದಿಲ್ಲ, ಅಂತಹ ಪರಿಸ್ಥಿತಿ ಆಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ದೇವೇಗೌಡರು ಇದ್ದಾರೆ, ಬೊಮ್ಮಾಯಿಯವರು ಇದ್ದಾರೆ, ಜೆ. ಎಚ್. ಪಟೇಲರು ಇದ್ದಾರೆ, ಲಕ್ಷ್ಮೀಸಾಗರ್‌ರವರು ಇದ್ದಾರೆ, ಮಂತ್ರಿ ಪದವಿಯನ್ನು ಚೆನ್ನಾಗಿ ನಡೆಸುವ ಯೋಗ್ಯತೆ ಅವರಿಗಿದೆ. ಅದು ಏನು ಮಾಡುವುದು ? ಅದು ಹೇಗೆ ಆಗುತ್ತದೆ ? ಆದರೆ ಅನುಭವದ ಬಗ್ಗೆ ಇನ್ನೊಬ್ಬರನ್ನು ದೋಷಾರೋಪಣೆ ಮಾಡಬೇಕಾದರೆ ಆಡಳಿತ ತನ್ನ ಕೈಯಲ್ಲಿದ್ದಾಗ ಆಡಳಿತಾತ್ಮಕ ಅನುಭವವನ್ನು, ಆಡಳಿತಾತ್ಮಕ ಪ್ರಜ್ಞೆಯನ್ನು, ಜನರ ಕಷ್ಟಸಂಕಷ್ಟಗಳನ್ನು ಅರಿತು, ಸೂಕ್ಷ್ಮ ಸಂವೇದನೆಗಳನ್ನು ತೋರಿಸಿ ದ್ದೇನೆ ಎನ್ನುವುದು ಮೊದಲು ಖಚಿತಮಾಡಿಕೊಂಡು ನಂತರ ಇನ್ನೊಬ್ಬರ ಮೇಲೆ ಆರೋಪ ಮಾಡಬೇಕು

ಗುತ್ತದೆ. ಹೋಗಲಿ, ಆಡಳಿತದ ಅನುಭವದ ಬಗ್ಗೆ ಮಾತನಾಡಿದರು. ನಂತರ, ಚಾರಿತ್ರ್ಯದ ಬಗ್ಗೆಯೂ ಮಾತನಾಡಿದ್ದಾರೆ. ಚಾರಿತ್ರ್ಯ ಶುದ್ಧ ಇಲ್ಲದೆ ಆಡಳಿತದ ಜವಾಬ್ದಾರಿ ಸ್ಥಾನವನ್ನು ಸಮರ್ಥವಾಗಿ ನಡೆಸುವುದಕ್ಕೆ ಸಾಧ್ಯವಿಲ್ಲ. ಅವರು ಆ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಅಲ್ಲಿರತಕ್ಕಂಥ ಕೆಲವು ಒಳ್ಳೆಯ ಅಂಶಗಳನ್ನು ಹಂಸಕ್ಷೀರನ್ಯಾಯದಂತೆ ಪರಿಗ್ರಹಿಸಬೇಕೆಂದು ನಾನಾದರೂ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಒಂದು ಗಾದೆ ಮಾತಿದೆ. ಪರಾಕ್ರಮದಿಂದ ಒಂದೆರಡು ರಾಜ್ಯ ಗೆಲ್ಲಬಹುದು, ಆದರೆ ವಿನಯದಿಂದ ಇಡೀ ಪ್ರಪಂಚವನ್ನೇ ಗೆಲ್ಲುವುದಕ್ಕೆ ಸಾಧ್ಯವಿದೆಯಂತೆ. ವೈಯಕ್ತಿಕವಾಗಿ ಚಾರಿತ್ರ್ಯವೆಂದು ಹೇಳುವವರು ತಮ್ಮ ಚಾರಿತ್ರ್ಯವನ್ನು ಅಷ್ಟೇ ಚೆನ್ನಾಗಿ ಇಟ್ಟುಕೊಳ್ಳಬೇಕು. ಇವತ್ತು ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಪ್ರತಿಯೊಬ್ಬ ವ್ಯಕ್ತಿಗೂ ನಾನಾ ಆಪಾದನೆಗಳು ಬರುತ್ತವೆ. ನನ್ನ ಬಗ್ಗೆ ಇರಬಹುದು, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಇರಬಹುದು, ಬಸವಲಿಂಗಪ್ಪನವರ ಬಗ್ಗೆ ಇರಬಹುದು ಅಥವಾ ಬಂಗಾರಪ್ಪನವರ ಬಗ್ಗೆ ಇರಬಹುದು. ಅಂತಹ ಎಲ್ಲಾ ಆರೋಪಗಳಿಗೆ ಬೆಂಬಲ ಸೂಚಿಸಿ ಏನಾದರೂ ವಿರೋಧ ಮಾಡಬೇಕೆಂದು, ಒಂದೆರಡು ಆರೋಪಗಳನ್ನೆತ್ತಿ ಲಗಾಯಿಸುವುದಕ್ಕೆ ನನಗೆ ಮನಸ್ಸಿಲ್ಲ. ಹಾಗೆ ಮಾಡುವುದಕ್ಕೆ ನಾನು ತಯಾರಾಗಿಲ್ಲ. ಎಷ್ಟೋ ಆರೋಪಗಳಲ್ಲಿ ಸತ್ಯಾಂಶಗಳೇ ಇರುವುದಿಲ್ಲ, ನಾನು ಸ್ವತ: ಆರೋಪಗಳಿಗೆ ಗುರಿಯಾಗಿದ್ದೇನೆ. ನಾನು ದೇವರಾಜ ಅರಸರ ರಾಜಕೀಯ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದಾಗ ನನಗೆ ಒಂದು ಮನೆಯನ್ನು ಸದಾಶಿವನಗರದಲ್ಲಿ ರೆಂಟ್ ಕಂಟ್ರೋಲ್‌ನವರು ಅಲಾಟ್ ಮಾಡಿದ್ದರು. ಆ ಮನೆಯ ಮಾಲೀಕನ ಹೆಸರು ಶ್ರೀನಿವಾಸ ಎಂದು. ಸಹಜವಾಗಿಯೇ ಅವರು ತಮ್ಮ ಮನೆಗೆ ‘ಶ್ರೀನಿವಾಸ’’ ಎಂದು ಹೆಸರು ಇಟ್ಟಿದ್ದರು. ಇದೊಂದು ಕಾಕತಾಳೀಯ ನ್ಯಾಯ. ಸುಧಾ ವಾರಪತ್ರಿಕೆಯಲ್ಲಿ ‘‘ಅರಸು ಆಡಳಿತ ರಂಗ’’ ಎನ್ನುವ ಲೇಖನ ಬರೆದಂತಹ ಮಾನ್ಯ ಲೇಖಕ ಸ್ನೇಹಿತರೊಬ್ಬರು ಮೂರು ತಿಂಗಳ ಒಳಗೆ ಶ್ರೀನಿವಾಸರವರು ಸದಾಶಿವ ನಗರದಲ್ಲಿ ಮನೆ ಮಾಡಿಕೊಂಡುಬಿಟ್ಟರು ಎಂದು ಬರೆದರು. ಆದರೆ ಮನೆಯ ಮಾಲೀಕನ ಹೆಸರು ಶ್ರೀನಿವಾಸ ಮತ್ತು ಮನೆಯ ಹೆಸರು ಶ್ರೀನಿವಾಸ ಅಂತ ಇದ್ದರೆ—ಕರಿ ಸೀರೆ ಉಟ್ಟವರೆಲ್ಲಾ ನನ್ನ ಹೆಂಡತಿ ಎಂದು ಹೇಳಿದ ಹಾಗೆ ಆಯಿತು. ಆಮೇಲೆ ನಾನು ಆ ಮನೆಯನ್ನು ಮಾಲೀಕರಿಗೇ ಬಿಟ್ಟುಕೊಟ್ಟು ನಾನು ಸಣ್ಣ ಮನೆಯಲ್ಲಿ ಬಾಡಿಗೆಗೆ ಇದ್ದೇನೆ. ನನ್ನ ಕ್ಷೇತ್ರದ ಜನರು ಸದಾಶಿವನಗರದಲ್ಲಿ ನಾನು ಮನೆ ಮಾಡಿಕೊಂಡುಬಿಟ್ಟಿದ್ದೇನೆಂದೇ ತಿಳಿದುಕೊಂಡುಬಿಟ್ಟಿದ್ದರು ಹಿಂದಿದ್ದ ಮನೆಗೆ ಹೋಗಿ ‘‘ಶ್ರೀನಿವಾಸರು ಎಲ್ಲಿ ಎಂದು ಕೇಳಿದಾಗ ಮನೆ ಮಾಲೀಕರು ‘‘ನಾನೇ ಶ್ರೀನಿವಾಸ’’ ಎಂದು ಹೇಳಿರಬೇಕು. ಆಗ ಅವರಿಗೆ ಗೊತ್ತಾಯಿತು ಮನೆ ನನ್ನದಲ್ಲ ಎಂದು. ಆದ್ದರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಆದರಲ್ಲೂ ರಾಜಕಾರಣದಲ್ಲಿ ಒಬ್ಬನ್ನೊಬ್ಬರು ದೋಷಾರೋಪಣೆ ಮಾಡಿದರಂತೂ, ಇವತ್ತು ಜನರು ಯಾರ ಮೇಲೆ ಆರೋಪ ಮಾಡಿದರೂ, ರಾಜಕಾರಣಿಯ ಮೇಲೆ ಮೊದಲು ಮಾಡುತ್ತಾರೆ. ಹಾಗೇನೆ ಬಂಗಾರಪ್ಪನವರ ಮೇಲೆ ಆಪಾದನೆ ಬರಬಹುದು. ಆ ರೀತಿ ನಾನು ಮಾಡುವುದಕ್ಕೆ ತಯಾರಾಗಿಲ್ಲ. ಆದರೆ ಅವರನ್ನು ಬಲ್ಲಂಥವರೂ, ಅವರ ಮತದಾರ ಕ್ಷೇತ್ರದಲ್ಲಿರತಕ್ಕಂಥವರು, ಮಾಜಿ ವಿಧಾನಸಭಾ ಸದಸ್ಯರೂ ಆದ ಮಾನ್ಯ ಶ್ರೀ ಲಕ್ಷ್ಮೀಕಾಂತಯ್ಯನವರು ತಾರೀಖು ೧೬–೨–೧೯೮೧ ರಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ನಾನು ಅದರಲ್ಲಿರತಕ್ಕಂಥ ಆರೋಗಳನ್ನು ಎತ್ತಿ ಹಿಡಿಯುವುದಕ್ಕೆ ಬಯಸುವುದಿಲ್ಲ. ಅದರಲ್ಲಿ ಬೇರೆ ಬೇರೆ ಆರೋಪಗಳು ಇವೆ. ಬಂಗಾರಪ್ಪನವರು, ಅವರ ಸ್ನೇಹಿತರು, ಸಂಬಂಧಿಕರು, ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ. ಏಜೆನ್ಸಿ ಪಡೆದುಕೊಂಡಿದ್ದಾರೆ ಎಂದು ಅದರಲ್ಲಿರುವಂತೆ ಹೇಳುವುದಕ್ಕೆ ನಾನು ಬಯಸುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಏನು ಹೇಳಿ.

ಶ್ರೀ ಕೆ. ಹೆಚ್ ಶ್ರೀನಿವಾಸ್.—ಅದು ಬೇಕಾಗಿಲ್ಲ, ಅದನ್ನು ನಾನು ಹೇಳುವುದಿಲ್ಲ. ಯಾವುದರ ಬಗ್ಗೆ ಕಣ್ಣಿಗೆ ಕಾಣುವಂಥ ಅತ್ಯಂತ ಸ್ಪಷ್ಟವಾದಂಥ ಪುರಾವೆಗಳಿವೆಯೋ, ನನ್ನ ಕೈಯಲ್ಲಿ ದಾಖಲೆಗಳಿವೆಯೋ ಅದರ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ರಾಜಕಾರಣದಲ್ಲಿರುವವರು ಎಲ್ಲಿ ಹಣ ಸಂಪಾದನೆ ಮಾಡಿದರು, ಎಲ್ಲಿ ಹಣ ಖರ್ಚು ಮಾಡಿದರು ಎಂಬ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಬಯಸುವುದಿಲ್ಲ, ಆದರೆ ಅಧಿಕಾರದಲ್ಲಿರತಕ್ಕವರು, ಜನರ ಪ್ರತಿನಿಧಿಯಾಗಿರತಕ್ಕವರು ನಮ್ಮ ನೀತಿಯನ್ನು ನಾವೇ ಕುಲಗೆಡಿಸಿದರೆ ಅದರಿಂದ ಏನಾದರೂ ಸಂಪಾದನೆ ಮಾಡಿದರೆ, ಅದರ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಇವತ್ತು ಜನಕ್ಕೆ ಅನ್ಯಾಯ ಮಾಡದೆ ಏನೋ ಸಂಪಾದನೆ ಮಾಡಿಕೊಂಡರೆ ಅದಕ್ಕೆ ಏನು ತಲೆಕೆಡಿಸಿಕೊಳ್ಳಬೇಕು, ಯಾರೋ ಸಂಪಾದನೆ ಮಾಡುತ್ತಾರೆ, ಯಾರೋ ಕಳೆಯುತ್ತಾರೆ.

ಇವತ್ತು ನಾನು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿ ಇಟ್ಟರೆ, ನಾಳೆ ನನ್ನ ಮಗ ಕುದುರೆ ಬಾಲಕ್ಕೆ ಕಟ್ಟಿ ಕಳೆಯಬಹುದು, ಅದಕ್ಕೆ ಏಕೆ ತಲೆ ಕೆಡಿಸಿಕೊಳ್ಳಬೇಕು.

ಭೂಸೇಧಾರಣ ಕಾನೂನಿನ ಬಗ್ಗೆ ಮಾನ್ಯ ಬಂಗಾರಪ್ಪನವರು ಭಾಷಣ ಮಾಡಿದಾಗ ಲ್ಯಾಂಡ ಟ್ರಿಬ್ಯುನಲ್‌ಗಳಲ್ಲಿ ಏನು ಲೋಪದೋಷಗಳಿವೆ ಎನ್ನುವುದರ ಬಗ್ಗೆ ಹೇಳಿದರು. ಮಾನ್ಯ ಅಧ್ಯಕ್ಷರೆ, ನಿಜ. ಲ್ಯಾಂಡ್‌ಟ್ರಿಬ್ಯುನಲ್‌ಗಳಲ್ಲಿ ಲೋಪದೋಷಗಳು ಆಗಿದ್ದಾವೆ. ಸರ್ಕಾರ ಅದರ ಬಗ್ಗೆ ಸತತವಾಗಿ ಕಣ್ಣು ಇಡಬೇಕಾದುದು ಅಗತ್ಯವಿದೆ. ಎಲ್ಲೆಲ್ಲಿ ಲೋಪದೋಷಗಳು ಇವೆಯೋ ಅದರ ಬಗ್ಗೆ ವರದಿ ತರಿಸಿಕೊಂಡು ಬದಲಾವಣೆ ಮಾಡಬೇಕು. ಹಿಂದಿನ ಸರ್ಕಾರವೂ ಅದೇ ಕೆಲಸ ಮಾಡಿತ್ತು ಈ ಸರ್ಕಾರವೂ ಅದನ್ನೇ ಮಾಡಬೇಕೇ ಹೊರತು ಬೇರೆ ಗತ್ಯಂತರವಿಲ್ಲ. ಹಿಂದೆ ಇದ್ದಂಥ ಅವರಿಗೆ ಸಂಬಂಧಪಟ್ಟಂಥ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಅವರ ಜನಗಳನ್ನೇ ಅಲ್ಲಿ ಇಟ್ಟುಕೊಂಡು ಏನು ಕೆಲಸಗಳು ನಡೆದಿವೆ ಅದು ಮಾತ್ರ ಮೂರೇ ಮೂರು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ನಾನು ಹೇಳತಕ್ಕಂಥಾದ್ದು ಆರೋಪದ ದೃಷ್ಟಿಯಿಂದ ಅಲ್ಲ, ಪ್ರಾಮಾಣಿಕವಾಗಿ ನಮ್ಮನ್ನು ನಾವು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು ಎನ್ನತಕ್ಕ ಕಳಕಳಿಯ ದೃಷ್ಟಿಯಿಂದ ನಾನು ಹೇಳಲಿಕ್ಕೆ ಬಯಸುತ್ತೇನೆ. ಮೊದಲನೆಯದು, ಸೊರಬ ತಾಲ್ಲೂಕಿನ ಲಕ್ಕುವಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ ೧೧೪–೧೧೫ರಲ್ಲಿ ಇದಕ್ಕೆ ಬಸಪ್ಪ ಸನ್ ಆಫ್ ಮೂಗೂರು ಪರಸಪ್ಪ ಎನ್ನತಕ್ಕವರು ಫಾರಂ ನಂಬರ್ ೭ನ್ನು ಗೇಣೀದಾರರ ಪರವಾಗಿ ಹಾಕಿದರು. ೧೯೫೮–೫೯ ರಿಂದ ೧೯೬೫–೬೬ನೇ ಇಸವಿವರೆಗೆ ಪಹಣಿ ಸಂಪೂರ್ಣವಾಗಿ ಈ ಮೂಗೂರು ಪರಸಪ್ಪ ಎಂಬ ಅರ್ಜಿದಾರರ ತಂದೆ ಹೆಸರಿನಲ್ಲಿದೆ. ೧೯೬೬-೬೭ ರಿಂದ ಈ ಪಹಣಿ ಬದಲಾವಣೆಯಾಗುತ್ತದೆ ಅದು ಮಧ್ವಾಚಾರ್, ನಾಗಾಚಾರ್ ಎಂಬ ಜಂಟಿ ಖಾತೆಗೆ ಬದಲಾವಣೆಯಾಗುತ್ತದೆ. ಇದನ್ನು ಕಾಯಿದೆ ಬದ್ಧವಾಗಿ ಬಿಡಿಸಿಕೊಂಡಿದ್ದಕ್ಕೆ ಯಾವ ದಾಖಲೆ ಇಲ್ಲ, ಕಾಯಿದೆ ಬದ್ಧವಾಗಿ ಟೆನೆಂಟ್ ಇದನ್ನು ಸರಂಡರ್ ಮಾಡಿರುವುದಕ್ಕೆ ಯಾವುದೇ ದಾಖಲೆ ಇಲ್ಲ, ದಿಢೀರಾಗಿ ಪಹಣಿ ಬದಲಾವಣೆಯಾಗುತ್ತೆ. ಪಹಣಿ ಬದಲಾವಣೆಯಾದ ಮೇಲೆ ಇದ್ದಕ್ಕಿದ್ದಂತೆ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಈ ಬಸಪ್ಪ ಮೂಗೂರು ಪರಸಪ್ಪನಿಂದ, ಇಲ್ಲ ಸುಮ್ಮನೆ ನನ್ನ ಹೆಸರಿನಲ್ಲಿ ಪಹಣಿ ಇತ್ತು, ನಾನು ಏನೂ ಮಾಡಿಲ್ಲ ಎಂದು ಹೇಳಿಕೆ ಇದ್ದಂತೆ ದಾಖಲೆ ಮಾಡಿ ಅದನ್ನು ಡಿಸ್‌ಮಿಸ್ ಮಾಡಿದ್ದಾರೆ. ಇದನ್ನು ಯಾರು ಡಿಸ್‌ಮಿಸ್ ಮಾಡಿದರು ಡಿಸ್‌ಮಿಸ್ ಮಾಡುವ ಲ್ಯಾಂಡ್ ಟ್ರಿಬ್ಯುನಲ್ ಸದಸ್ಯರಾದಂಥ ವೀರಪ್ಪ ಎನ್ನುವವರು ಮಾನ್ಯ ಬಂಗಾರಪ್ಪನವರ ಖಾಸಾ ಶಿಷ್ಯರು. ಅವರ ಹೆಸರಿಗೆ ೧೦ ಎಕರೆ ೧೩ ಗುಂಟೆ ಜಮೀನು ತಾರೀಖು ೪–೫–೧೯೭೬ರಲ್ಲಿ ೭,೦೦೦ ರೂಪಾಯಿಗಳಿಗೆ ಕ್ರಯವಾಗಿದೆ. ನಂತರ ಅದೇ ಜಮೀನು ತಾರೀಖು ೮–೨–೧೯೮೦ರಲ್ಲಿ ಅದೇ ೭,೦೦೦ ರೂಪಾಯಿಗಳಿಗೆ ಇದೇ ಶ್ರೀಮಾನ್ ಬಂಗಾರಪ್ಪನವರಿಗೆ ಕ್ರಯವಾಗಿದೆ ಇಲ್ಲಿ ಕ್ರಯದ ಪಟ್ಟಿ ಇದೆ, ಲ್ಯಾಂಡ್ ಟ್ರಿಬ್ಯುನಲ್ ತೀರ್ಮಾನವಿದೆ, ಈ ರೆಕಾರ್ಡ್‌ಸನ್ನು ನಾನು ತಮಗೆ ಕಳಿಸಿಕೊಡುತ್ತೇನೆ.

ಶ್ರೀ ಜೆ.ಡಿ. ಸೋಮಪ್ಪ.—ಇದೇ ಬಂಗಾರಪ್ಪನವರೋ ಅಥವಾ ಬೇರೆ ಬಂಗಾರಪ್ಪನವರೋ

ಶ್ರೀ ಕೆ.ಹೆಚ್. ಶ್ರೀನಿವಾಸ್.—ನನಗೆ ಗೊತ್ತಿಲ್ಲ, ಎಸ್. ಬಂಗಾರಪ್ಪನವರು ಎಂದು ಇದೆ. ಹಾಗೆ ೧೧–೨–೧೯೮೦ ರಂದು ಆ ನವೆಂಬರ್‌ನಲ್ಲಿ ಉಳಿದಂಥ ಜಮೀನೂ ಕೂಡ ೪,೦೦೦ ರೂಪಾಯಿಗಳಿಗೆ ಮಾನ್ಯ ಬಂಗಾರಪ್ಪನವರಿಗೆ ಕ್ರಯವಾಗಿದೆ. ಅದಕ್ಕೆ ಸೇರಿದಂಥ ೧೧೫ನೇ ಸರ್ವೆ ನಂಬರಿನಲ್ಲಿ ೧೦ ಎಕರೆ ೩೦ ಗುಂಟೆ ಜಮೀನು ಕೆ. ಫಾಲಾಕ್ಷಪ್ಪ ಅವರು ಮಾನ್ಯ ಬಂಗಾರಪ್ಪನವರ ಸ್ವಂತ ಸೋದರಿಯ ಮಗ. ಅವರ ಹೆಸರಿಗೆ ೮–೨–೧೯೮೦ರಲ್ಲಿ ಕ್ರಯವಾಗಿದೆ. ಇನ್ನು ಉಳಿದಂಥ ಜಮೀನು ಮತ್ತೊಬ್ಬ ಸೋದರಳಿಯ ಕೆ. ಸುರೇಶ್ ಎಂಬುವರಿಗೆ ಕ್ರಯವಾಗಿದೆ. ಆ ಎರಡು ಜನರಿಗೆ ಈ ಜಮೀನನ್ನು ಕೊಂಡುಕೊಳ್ಳತಕ್ಕ ಯಾವ ಸಾಮರ್ಥ್ಯವೂ ಇಲ್ಲ. ಇದಿಷ್ಟೂ ಜಮೀನನ್ನು ಒಂದೇ ಘಟಕವಾಗಿ ಮಾನ್ಯ ಬಂಗಾರಪ್ಪನವರು ಅನುಭವಿಸುತ್ತಿದ್ದಾರೆ, ಅದನ್ನು ಸಾಗುವಳಿ ಮಾಡುತ್ತಿದ್ದಾರೆ ಅದರ ಮೇಲೆ ದೊಡ್ಡ ಪ್ರಮಾಣದಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಇಷ್ಟೇ ಅಲ್ಲ, ಅವರೇ ಪಿ.ಡಬ್ಲ್ಯುಡಿ ಮಂತ್ರಿಯಾಗಿ ಉದ್ಘಾಟಿಸಿರತಕ್ಕಂಥ ಲಕ್ಕುವಳ್ಳಿ ಏತ ನೀರಾವರಿ ಆಶ್ರಯಕ್ಕೆ ಈ ಜಮೀನು ಒಳಪಟ್ಟಿದೆ. ಶ್ರೀಮಾನ್ ದೇವೇಗೌಡರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳಲಿಕ್ಕೆ ಬಯಸುತ್ತೇನೆ ಮೊನ್ನೆ ಯಾವುದೋ ಒಂದು ಸಂದರ್ಭದಲ್ಲಿ ಅವರು ಹೇಳಿದರು. ನಾನು ಆಪಾದನೆ ಮಾಡುವುದಿಲ್ಲ, ಆದರೆ ಈ ಫ್ಲೋ ಆಫ್ ಇವೆಂಟ್ಸ್ ಏನು ಹೇಳುತ್ತೆ ನಿಜ ಫ್ಲೋ ಆಫ್ ಇವೆಂಟ್ಸ್‌ಗೆ ಒಂದು ಫೋರ್ಸ್ ಇದ್ದರೆ ಅದನ್ನು ಏನು ಹೇಳುತ್ತದೆ ಎನ್ನುವುದನ್ನು ದಯ ಮಾಡಿ ನೋಡಿ, ನಾನು ಆಪಾದನೆ ಮಾಡುವುದಕ್ಕೆ ತಯಾರಿಲ್ಲ,

ಇದರಲ್ಲಿ ಏನು ಅಂಶ ಇದೆ ಎನ್ನುವುದನ್ನು ನೋಡಬೇಕು. ೧೯೬೬–೬೭ರೊಳಗೆ ಪಹಣಿ ಇರತಕ್ಕ ಒಬ್ಬ ಟೆನೆಂಟ್ ಅವನೇ ಸ್ವಯಂ ಇಚ್ಛೆಯಿಂದ ಲ್ಯಾಂಡ್ ಟ್ರಿಬ್ಯುನಲ್‌ಗೆ ಬಂದು ಹೇಳಿಕೆ ಕೊಟ್ಟರೂ ಕೂಡ ಖಾತೇದಾರರಿಗೆ ಯಾವ ಪ್ರಕಾರ ಖಾತೆ ಮಾಡುವುದಕ್ಕೆ ಅವಕಾಶವಿದೆ? ನಮ್ಮ ಭೂಸುಧಾರಣಾ ಕಾಯಿದೆ ಪ್ರಕಾರ ರಾಜಿ ಮಾಡಿಕೊಳ್ಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಆ ಟೆನೆಂಟ್ ಸಾಗುವಳಿ ಮಾಡುತ್ತಾ ಇಲ್ಲ, ಖಾತೇದಾರ ಕಾನೂನುಬದ್ಧವಾಗಿ ಯಾವುದೇ ರಿಸಂ ಮಾಡಲಿಲ್ಲ ಅಂದರೆ ಅದು ಸರ್ಕಾರದ ವಶಕ್ಕೆ ಹೋಗಬೇಕು, ಬಡ ಜನರಿಗೆ ಹೋಗಬೇಕು. ಅದನ್ನು ಖಾತೇದಾರನ ಹೆಸರಿಗೆ ಕ್ರಯಮಾಡಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿರತಕ್ಕ ವ್ಯಕ್ತಿಗಳೇ ಸೂತ್ರಧಾರರಾಗಿ ಅದನ್ನು ಕೊಂಡುಕೊಳ್ಳುವುದಕ್ಕೆ ಲ್ಯಾಂಡ್ ರಿಫಾರ್ಮ್ ಆಕ್ಟ್‌ನಲ್ಲಿ ಅವಕಾಶವಿದೆಯೇ, ಇದರ ವಿರುದ್ಧವಾಗಿ ಅನೇಕ ಹರಿಜನ ಬಂಧುಗಳು

ಶ್ರೀ ಜೆ.ಹೆಚ್. ಪಟೇಲ್.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ನಮ್ಮ ನಿಯಮಾವಳಿಗಳ ಪ್ರಕಾರ ಯಾವುದೇ ಸದಸ್ಯರ ಮೇಲೆ ಆರೋಪಗಳನ್ನು ಮಾಡುವಾಗ ಅದು ಸತ್ಯವೋ ಅಸತ್ಯವೊ ಆ ಮಾತು ಬೇರೆ, ಮೊದಲು ನೋಟೀಸ್ ಕೊಟ್ಟು ತಿಳುವಳಿಕೆ ಕೊಟ್ಟು ಅವರು ತಯಾರಾಗಿ ಬರಬೇಕಲ್ಲ. ಸರ್ವೆ ನಂಬರ್ ೧೧೫ ಅವರಿಗೆ ಹೋಯಿತು, ೧೧೬ ಇವರಿಗೆ ಹೋಯಿತು ಎಂದು ಹೇಳುವುದಕ್ಕಿಂತ ಮಾನ್ಯ ಸದಸ್ಯರು ನೋಟೀಸ್ ಕೊಟ್ಟದ್ದರೆ ಹೇಳುವುದಕ್ಕೆ ಏನೂ ಅಭ್ಯಂತರವಿಲ್ಲ. ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆಯೋ ಎಂದು ಕೇಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಬಂಗಾರಪ್ಪನವರು ಆರೋಪ ಮಾಡುವಾಗ ಯಾವ ನೋಟೀಸ್ ಕೊಟ್ಟಿದ್ದರು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ನಿಯಮಾವಳಿಯನ್ನು ಬಲ್ಲೆ. ಅದರ ಬಗ್ಗೆ ನನಗೆ ಗೌರವವಿದೆ, ಅದಕ್ಕಾಗಿ ನಾನು ಹೇಳಿದ್ದೇನೆ. ಇದನ್ನು ಆರೋಪದ ರೂಪದಲ್ಲಿ ಹೇಳುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಟ್ಟಿರತಕ್ಕ ಮನವಿ ಕಾಪಿ, ನನ್ನ ಹತ್ತಿರ ಬಂದಿರುವುದು, ಈ ರೀತಿ ಬಂದಿದೆ ಎಂದು ಸದನದ ಗಮನಕ್ಕೆ ತರುತ್ತಿದ್ದೇನೆ ಇದರ ಸತ್ಯಾಸತ್ಯತೆಯನ್ನು ವಿಮರ್ಶೆ ಮಾಡುವುದು ನಿಮಗೆ ಬಿಟ್ಟಿದ್ದು. ಈ ರೀತಿ ಇಲ್ಲಿ ಬಂದಿದೆ. ಅವರು ವಿವರಣೆ ಕೊಡುವುದಕ್ಕೆ ಸಮಯ ತೆಗೆದುಕೊಳ್ಳಬಹುದು, ಅಭ್ಯಂತರವಿಲ್ಲ ಪುನಃ ಸೂಚನೆ ಕೊಟ್ಟರೆ ಚರ್ಚೆ ಮಾಡಬೇಕು, ಅದಕ್ಕೆ ನನ್ನ ಅಭ್ಯಂತರವಿಲ್ಲ. ನನಗೆ ಸೂಚನೆ ಕೊಟ್ಟು ಅವರ ಮೇಲೆ ಗೂಬೆ ಕೂರಿಸಬೇಕು ಎಂದು ಇಲ್ಲ. ನನಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ, ಕೆಲವೇ ಕೆಲವು ಗಂಭೀರ ವಿಷಯಗಳ ಬಗ್ಗೆ ಸದನದ ಗಮನವನ್ನು ಸೆಳೆಯುವುದು. ಈಗಲೂ ಕೂಡ ನನಗೆ ಆರೋಪದಲ್ಲಿ ಆಸಕ್ತಿ ಇಲ್ಲ. ಇನ್ನೊಂದು ಪ್ರಕರಣ, ಸರ್ವೆ ನಂಬರ್ ೨–೩ ಆಫ್ ಕೋಡಿಕೊಪ್ಪ......

ಶ್ರೀ ಪಿ. ರಾಮದೇವ್.—ಇವತ್ತು ತಾವು ಕಳಿಸಿರತಕ್ಕ ಕಾರ್ಯಸೂಚಿ ಪ್ರಕಾರವಾಗಿ, ಗವರ್ನರ್, ಮಿನಿಸ್ಟರ್ಸ್ ಅಂಡ್ ಪಬ್ಲಿಕ್ ಸರ್ವಿಸ್ ಕಮಿಷನ್–ಸೆಕ್ರೆಟರಿಯೇಟ್–ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್, ಮೈನರ್ ಇರಿಗೇಷನ್, ಪವರ್ ಪ್ರಾಜೆಕ್ಟ್ ಎಂದು ಇದೆ. ಎಂ.ಎಲ್.ಎ. ಬಗ್ಗೆ ಏನೂ ಇಲ್ಲ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು......

(ಗೊಂದಲ)

ಶ್ರೀ ಜಿ. ರಾಜೂಗೌಡ.—ನೀವು ಕಾನೂನಿನ ಚೌಕಟ್ಟಿನಲ್ಲಿ ಮಾಡಿದಿರಾ?

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆಯೆಲ್ಲಾ ಆರೋಪ ಮಾಡುವಾಗ ಏನು ಮಾಡುತ್ತಾ ಇದ್ದಿರಿ.

ಶ್ರೀ ಪಿ. ರಾಮದೇವ್.—ನನ್ನ ಕ್ರಿಯಾಲೋಪವಿದೆ. ಡಿಮ್ಯಾಂಡ್ಸ್‌ಗೆ ಸಂಬಂಧಪಟ್ಟ ಮಾತನಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ, ಬರೀ ಅಲಿಗೇಷನ್ಸ್ ಮಾಡಿದರೆ ನಾವೇನು ಮಾಡುವುದು?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಡ್ಮಿನಿಸ್ಟ್ರೇಷನ್ ಯಾವ ರೀತಿ ಇದೆ ಎನ್ನುವುದರ ಬಗ್ಗೆ ಮಾತನಾಡಿದರು.

ಶ್ರೀ ಪಿ. ರಾಮದೇವ್.—ನನ್ನ ಕ್ರಿಯಾಲೋಪ ಏನೆಂದರೆ, ಡಿಮ್ಯಾಂಡ್ಸ್ ಬಗ್ಗೆ ಮಾತನಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಬರೀ ಅಲಿಗೇಷನ್ಸ್ ಮಾಡಿಕೊಂಡು ಹೋದರೆ ನಾವೇನು ಮಾಡುವುದು.

ಡಿಮ್ಯಾಂಡ್ಸ್‌ಗೆ ಸಂಬಂಧಪಟ್ಟ ಹಾಗೆ ಮಾತನಾಡಲಿ. ಒಬ್ಬರ ಮೇಲೆ ಒಬ್ಬರು ಅಲಿಗೇಷನ್ಸ್ ಮಾಡಿ ಕೊಂಡು, ಈ ಕಡೆ ಬಂದಾಗ ಒಂದು ಮಾತು, ಆ ಕಡೆ ಬಂದಾಗ ಒಂದು ಮಾತು, ಇದಕ್ಕಿಂತ ಒಂದು ಡಿಸ್‌ಹಾನೆಸ್ಟ್ ಇನ್ಯಾವುದೂ ಇಲ್ಲ ಎಂದು ಅನ್ನಿಸುತ್ತಾ ಇದೆ.

೧೧–೦೦ ಪಿ ಎಂ

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ನಿಯಮಾವಳಿ ಪ್ರಜ್ಞೆ ಅವರು ಮಾತನಾಡುವಾಗ ಎಲ್ಲಿ ಹೋಗಿತ್ತು?

ಶ್ರೀ ಪಿ. ರಾಮದೇವ್.—ಮಂತ್ರಿಗಳ ಕಾರ್ಯಗಳ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಜನರಲ್ ಆಗಿ ಅವರ ಕಾರ್ಯಗಳ ಬಗ್ಗೆ ಮಾತನಾಡಿದ್ದೇನೆ. ನಿಮಗೆಲ್ಲ ಪುಸಲಾವಣೆ ಮಾತುಗಳನ್ನು ಹೇಳಿದ್ದೇನೆ.

ಶ್ರೀ ಬಿ ವಿ. ಕಕ್ಕಿಲಾಯ.—ತಾವು ಯಾವುದೋ ಒಂದು ದಾಖಲೆಯನ್ನು ಓದಿ ಕ್ರಯ ಆದದ್ದರ ಬಗ್ಗೆ ಮನವಿ ಕೊಟ್ಟಿರುವುದಾಗಿ ಹೇಳಿದಿರಿ. ಅದನ್ನು ಯಾವ ಮುಖ್ಯ ಮಂತ್ರಿಗಳಿಗೆ ಯಾವಾಗ ಕೊಟ್ಟಿದ್ದೀರಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇದೇ ಮುಖ್ಯ ಮಂತ್ರಿಗಳಿಗೆ ಎಂದು ಹೇಳಿದ್ದೇನೆ. ಆ ದಾಖಲಾತಿ ಗಳನ್ನು ಅಧ್ಯಕ್ಷರಿಗೆ ಕಳುಹಿಸಿಕೊಡುತ್ತೇನೆ. ಕೋಡಿಕೊಪ್ಪದ ಸರ್ವೆ ನಂಬರ್ ೨–೩ರಲ್ಲಿರತಕ್ಕ ೩೬ ಎಕರೆ ಜಮೀನಿಗೆ ಗೋಪಾಲರಾವ್ ನಾಡಿಗರ್ ಎಂಬುವವರು ಖಾತೆದಾರರು. ೬೫–೬೬ರವರೆಗೆ ಅವರ ಹೆಸರಿನಲ್ಲಿ ಆ ಜಮೀನು ಇತ್ತು. ೧೯೬೬ರಿಂದ ಬಂಗಾರಪ್ಪನವರ ತಂದೆಯ ಹೆಸರಿಗೆ ಪಹಣಿ ಇದೆ. ಆಮೇಲೆ ಅದು ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಬಂದಿದೆ. ಸ್ವತ: ಬಂಗಾರಪ್ಪನವರೇ ಲ್ಯಾಂಡ್ ಟ್ರಿಬ್ಯುನಲ್‌ನ ಸದಸ್ಯರಾಗಿದ್ದಾಗ ಅವರ ಹಾಜರಾತಿಯಲ್ಲಿ ಅದು ತೀರ್ಮಾನವಾಗಿದೆ ಅವರ ಹೆಸರಿನಲ್ಲೇ ಪಹಣಿ ಇರತಕ್ಕುದ್ದು ಅವರೇ ಅರ್ಜಿದಾರರು ಮತ್ತು ಅವರೇ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಕುಳಿತು ಕೊಂಡು ಕೇಸನ್ನು ತೀರ್ಮಾನ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಏನು ತಪ್ಪು?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇಲ್ಲ Propriety ಪ್ರಶ್ನೆ ಬರುತ್ತದೆ. ಆದ್ದರಿಂದ, ಕಾನೂನು ಪ್ರಕಾರ ಆ ರೀತಿ ಮಾಡುವುದಕ್ಕೆ ಅವಕಾಶ ...

ಶ್ರೀ ಎಸ್ ಬಂಗಾರಪ್ಪ.—ನಾವು ... ದಾರರ ಮನೆತನದವರು. ನಾನು ಚಿಕ್ಕ ಹುಡುಗನಾಗಿ ದ್ದಾಗಿನಿಂದಲೂ ಅದು ನಮ್ಮ ಮನೆತನದ ಜ... ೨–೩–೧೯೭೪ರಲ್ಲಿ ತಿದ್ದುಪಡಿ ಮಸೂದೆ ಬಂದ ಮೇಲೆ ಫಾರಂ ನಂ. ೭ರಲ್ಲಿ ಅರ್ಜಿ ಹಾಕತಕ್ಕ ಅವಕಾಶ ಉಂಟಾಯಿತು, ಆಗ ನಮ್ಮ ತಂದೆ ೧೯೭೧ರಲ್ಲೇ ಸತ್ತಿದ್ದರಿಂದ ನಾನೇ ಅರ್ಜಿ ಹಾಕಿದೆ. ನಾನು ಆಗ ಶಾಸಕನಾಗಿದ್ದೆ ಮತ್ತು ಕಾನೂನು ಪ್ರಕಾರ ಟ್ರಿಬ್ಯುನಲ್ ಸದಸ್ಯನಾಗಿದ್ದೆ. ಶಾಸಕರು ಮತ್ತು ಟ್ರಿಬ್ಯುನಲ್ ಸದಸ್ಯರಾಗಿರತಕ್ಕವರಿಗೆ ಸಂಬಂಧಪಟ್ಟ ಕೇಸು ಟ್ರಿಬ್ಯುನಲ್ ಮುಂದೆ ಬಂದಾಗ ಎದ್ದು ನಿಂತು ಪಾರ್ಟಿಯಾಗಿ ಹೇಳಿಕೆ ನೀಡಬೇಕಾಗುತ್ತದೆ, ಅದೇ ಪ್ರಕಾರ ನಾನು ಹೇಳಿಕೆ ಕೊಟ್ಟಿದ್ದೇನೆ. ನಾವು ಆ ಜಮೀನಿನ ಒಡೆಯರು ಹೌದು, ನಾವು ಅದನ್ನು ಮೊದಲಿನಿಂದಲೂ ಮಾಡಿಕೊಂಡು ಬಂದಿದ್ದೇವೆ, ನಮ್ಮ ಹೆಸರಿಗೆ ಖಾತೆಯಾಗಿದೆ, ಪಹಣಿ ಇದೆ ಎಂದು ಹೇಳಿದ್ದೇನೆ. ಇದರಲ್ಲಿ ಏನು ತಪ್ಪಿದೆ ಎಂದು ಅರ್ಥವಾಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಪ್ಪು ಏನು ಎಂದು ಹೇಳಿದರೂ ಅರ್ಥ ಮಾಡಿಕೊಳ್ಳದೆ ಉತ್ತರ ಕೊಡುತ್ತಿದ್ದೀರಿ. ಮತ್ತೊಮ್ಮೆ ಹೇಳುತ್ತೇನೆ ಕೇಳಿ. ನಿಮ್ಮ ಹೆಸರಿಗೆ ಖಾತೆ ಇರುವುದರಲ್ಲಿ ಏನು ತಪ್ಪಿಲ್ಲ. ಆದರೆ ಕೇಸು ಟ್ರಿಬ್ಯುನಲ್ ಮುಂದೆ ಬಂದಾಗ ನೀವೇ ಕೂತು ತೀರ್ಮಾನ ಮಾಡತಕ್ಕದ್ದು ಸರಿಯಲ್ಲ. ಆದರೂ ಕೂಡ ಏನು ತಪ್ಪಿದೆ ಎಂದು ಕೇಳಿದರೆ......

ಅಧ್ಯಕ್ಷರು.—ಜುಡಿಶಿಯಲ್ ತೀರ್ಮಾನದ ಪ್ರಕಾರ ಹಾಜರಿರಬಾರದೆಂದು ನಿಯಮ ಇದೆ.

ಶ್ರೀ ಎಸ್. ಬಂಗಾರಪ್ಪ—. ನಾನು, ಕೇಸ್ ನಡೆಯುವಾಗ ಸದಸ್ಯನಾಗಿ ಕುಳಿತಿರಲಿಲ್ಲ, ಕಾನೂನು ವಿಷಯಗಳು ನನಗೆ ಗೊತ್ತು. ನಾನು ಸದಸ್ಯನಾಗಿ ಕುಳಿತಿರಲಿಲ್ಲವೆಂದರೂ ಅನುಮಾನ ಏಕೆ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ತಪ್ಪೆಲ್ಲಿದೆ ಎಂಬುದನ್ನು ಹೇಳುತ್ತೇನೆ. ಪೂರಾ ಜಮೀನನ್ನು ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರೆ ಪ್ರಶ್ನೆ ಎತ್ತುತ್ತಿರಲಿಲ್ಲ. ಆದರೆ ಅದು ತೀರ್ಮಾನವಾಗುವುದಕ್ಕೆ ಮುನ್ನ ಹೊಸದಾಗಿ ಸ್ಕೆಚ್ ತಯಾರು ಮಾಡಿ ಆ ಜಮೀನನ್ನು ಪೂರಾ ವಿಂಗಡಣೆ ಮಾಡಿ ಸ್ವಲ್ಪ ಭಾಗವನ್ನು ನಿಮ್ಮ ಸಂಬಂಧಿಕರಾದ ಪಾಲಾಕ್ಷಪ್ಪ ಮತ್ತು ಮಂಜಪ್ಪನವರ ಹೆಸರಿಗೆ ಮಾಡಿ ಉಳಿದ ಜಮೀನನ್ನು ನಿಮ್ಮ ಹೆಸರಿನಲ್ಲಿಟ್ಟುಕೊಂಡಿದ್ದೀರಿ. ಪೂರಾ ಜಮೀನನ್ನು ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರೆ ಏನು ತಪ್ಪಿರುತ್ತಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ವಿಷಯಗಳನ್ನು ಈ ಸದನದಲ್ಲಿ ಪ್ರತಿಪಾದನೆ ಮಾಡುತ್ತಿದ್ದಾರೆ. ನನ್ನ ಭಾಗದ ಟ್ರಿಬ್ಯೂನಲ್‌ಗೆ ನಾನು ಸದಸ್ಯನಾಗಿದ್ದರೆ, ಅವರ ಭಾಗದ ಟ್ರಿಬ್ಯೂನಲ್‌ಗೆ ಅವರು ಸದಸ್ಯರಾಗಿದ್ದಾರೆ. ಕೆಲವು ಭೂಮಿಗೆ ಪಹಣಿ ಇರುತ್ತದೆ, ಮತ್ತು ಕೆಲವಕ್ಕೆ ಇರುವುದಿಲ್ಲವೆಂದು ಅವರಿಗೂ ತಿಳಿದಿರತಕ್ಕ ವಿಷಯ. ಬೀಳು ಭೂಮಿ ಎಂದು ಬರುತ್ತದೆ, ಅದಕ್ಕೆ ಪಹಣಿ ಇರುವುದಿಲ್ಲ, ಏಕೆಂದರೆ ಅದನ್ನು ಸಾಗು ಮಾಡುತ್ತಿರುವುದಿಲ್ಲ, ಸಾಮಾನ್ಯವಾಗಿ, ಅದನ್ನು ದನಗಳನ್ನು ಮೇಯಿಸಲು ಉಪಯೋಗಿಸುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಅರ್ಜಿಯನ್ನು ನಾವು ಮತ್ತು ಅವರ ಅರ್ಜಿಯನ್ನು ಅವರು ಹಾಕಿದ್ದರು, ಇಲ್ಲಿ ತಕರಾರು ಎತ್ತುವವರು ಶ್ರೀನಿವಾಸರಾಯರು ಮಾತ್ರ. ಆ ಬಗ್ಗೆ ಅವರೂ ಹೇಳಿಕೆ ಕೊಟ್ಟಿದ್ದಾರೆ. ಅವರು ಹೇಳಿಕೆ ಕೊಡುವಾಗ ಮತ್ತು ಕೇಸು ತೀರ್ಮಾನವಾಗುವಾಗ ಕಾನೂನು ಪ್ರಕಾರ ನಾನು ದೂರವೇ ಇದ್ದೆ. ಆದರೆ ಇವರ ವ್ಯಾಖ್ಯಾನ ಇಲ್ಲಿ ಭಿನ್ನವಾಗಿದೆ. ಅದು ಟ್ರಿಬ್ಯೂನಲ್ಲಿಗೆ ಮತ್ತು ಭೂಮಾಲೀಕರಿಗೆ ಬಿಟ್ಟ ವಿಷಯ. ಆ ಜಮೀನು ಸಂಪೂರ್ಣ ಬಂಗಾರಪ್ಪನವರ ಹೆಸರಿಗೆ ಇತ್ತು ಮತ್ತು ಲ್ಯಾಂಡ್ ಸೀಲಿಂಗ್ ಲಿಮಿಟ್ಟಿಗೆ ಜಾಸ್ತಿ ಇತ್ತು ಎಂದು ಹೇಳಿಕೆ ಕೊಟ್ಟಿದ್ದರೆ ಆ ಪ್ರಶ್ನೆ ಬರುತ್ತಿತ್ತು. ಯಾರೂ ಪ್ರಸ್ತಾಪಿಸತಕ್ಕ ವಿಷಯ ಅಲ್ಲ, ವ್ಯಕ್ತಿನಿಂದನೆ ಮಾಡತಕ್ಕ ಮಾತುಗಳನ್ನು ಆಡುವುದಿಲ್ಲ. ಈ ಬಗ್ಗೆ ನಾನು ನೇರವಾಗಿ ಮುಖ್ಯ ಮಂತ್ರಿಗಳನ್ನು ಕೇಳಿದರೆ ರಾಜಕಾರಣ ಅರ್ಥವಾಗುತ್ತದೆ. ನಾನು ಯಾವಾಗ ಇಲ್ಲಿ ಭಾಷಣ ಮಾಡಿದೆ ಆಗಿನಿಂದ ಸಂಪೂರ್ಣವಾಗಿ ಡಿಮ್ಯಾಂಡ್ಸ್ ಎಲ್ಲ ಸೈಡ್ ಟ್ರ್ಯಾಕ್ ಆಗಿ ಹೊರಟು ಹೋಗಿವೆ. ಕೆಲವು ಸದಸ್ಯರ ಬಗ್ಗೆ......

(ಗೊಂದಲ)

ಅಧ್ಯಕ್ಷರು.—ಶ್ರೀನಿವಾಸ್‌ರವರು ಈಲ್ಡ್ ಆಗಿದ್ದಾರೆ, ಅವರಿಗೆ ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳತಕ್ಕ ಶಕ್ತಿ ಇದೆ. ಆದರೆ ನೀವುಗಳೆಲ್ಲ ಏಕೆ ಮಧ್ಯೆ ಪ್ರವೇಶಿಸುತ್ತೀರಿ

ಶ್ರೀ ಎಸ್. ಬಂಗಾರಪ್ಪ.—ಮೊನ್ನೆ ನಾನು ಏನು ಭಾಷಣ ಮಾಡಿದೆ ಅದನ್ನು ದಯಮಾಡಿ ಅಧಿಕಾರ ಸ್ಥಾನದಲ್ಲಿರುವವರು ಮಾತ್ರ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು. ನಾನು ಈಗ ಯಾವ ಅಧಿಕಾರದಲ್ಲಿಯೂ ಇಲ್ಲ. ಶಾಸಕನಾಗಿ ವಿಷಯ ಹೇಳುತ್ತಿದ್ದೇನೆ. ಶಾಸಕರು ಅಧಿಕಾರದಲ್ಲಿದ್ದಾರೆಂದು ತಿಳಿಯುವುದಾದರೆ ತಾವೂ ಕೂಡ ಅಧಿಕಾರದಲ್ಲಿದ್ದೀರೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಬನ್ನಿ

ಶ್ರೀ ಎಸ್. ಬಂಗಾರಪ್ಪ.—ಬನ್ನಿ ಅಲ್ಲ, ನಿಮ್ಮ ಮಾತೇ ನಿಮಗೆ ತಿರುಗಿ ಬೀಳುತ್ತದೆ. ಮೊನ್ನೆ ನಾನು ಭಾಷಣ ಮಾಡತಕ್ಕ ಕಾಲದಲ್ಲಿ ಮುಖ್ಯ ಮಂತ್ರಿಗಳ ವಿಷಯ ಮತ್ತು ಅಧಿಕಾರಿಗಳ ವಿಷಯ ಹೇಳಬೇಕಾಯಿತು. ತಾವು ಕೂಡ ಇಲ್ಲಿ ಕುಳಿತಿದ್ದಾಗ ನೀತಿ ಬಗ್ಗೆ ಹೇಳಿದ್ದೀರಿ, ವ್ಯಾಖ್ಯಾನ ಮಾಡಿದ್ದಿರಿ. ಆದುದರಿಂದ, ಆ ವಿಷಯಗಳನ್ನೆಲ್ಲ ಹೇಳಬೇಕಾಗುತ್ತದೆ. ಅಧಿಕಾರ ದುರುಪಯೋಗವಾಗತಕ್ಕ ಪ್ರಸಂಗಗಳು ಇರುತ್ತವೆ, ಇಲ್ಲವೆಂದು ಹೇಳುವುದಿಲ್ಲ. ನಾನು ಶಾಸಕನಾಗಿದ್ದಾಗಲೂ ಕಾನೂನು ಪ್ರಕಾರ ಇದ್ದುದರಿಂದ ಇಲ್ಲಿ ಈ ಚರ್ಚೆ ಬೇಕಾಗಿಲ್ಲ. ಯಾವುದೇ ವಿಚಾರಣೆಗೆ, ತೀರ್ಮಾನಕ್ಕೆ ನಾನು ಸಿದ್ಧನಾಗಿದ್ದೇನೆ. ನೀವು ಮಾಡಿರತಕ್ಕ ಎಲ್ಲ ಆರೋಪಗಳನ್ನು ಎದುರಿಸಲು ನಾನು ತಯಾರಿದ್ದೇನೆ. ಸದಸ್ಯರಾಗಲಿ, ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ ಅವರ ಮೇಲೆ ಆಪಾದನೆ ಬಂದಾಗ ಅವರೂ ಕೂಡ ಸಂಪೂರ್ಣವಾಗಿ ಕಮೀಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ಯಾವ್ಯಾವ ನಿಯಮಗಳಿವೆ ಅವಕ್ಕೆ ಬದ್ಧರಾಗಿ ವಿಚಾರಣೆಗೆ ಸಿದ್ಧರಾಗಲೇಬೇಕಾಗುತ್ತದೆ. ಅದೇ ರೀತಿ, ನಾನೂ ಕೂಡ ಸಿದ್ಧನಾಗಿದ್ದೇನೆ. ನಾನು ನಿಮ್ಮಿಂದ ಇನ್ನೊಂದು ನಿರೀಕ್ಷೆ ಮಾಡುತ್ತೇನೆ. ಕೇವಲ ಬಂಗಾರಪ್ಪನವರ ವಿಷಯ ಹೇಳಿ ಭಾಷಣ

ಮುಂಗಿಸುವುದು ನಿಮಗೆ ಒಳ್ಳೆಯದಲ್ಲ, ಕೆ.ಪಿ.ಸಿ.ಸಿ.ಯ ಜನರಲ್ ಸೆಕ್ರೆಟರಿಗೆ ೩ ಸಾವಿರ ಎಕರೆ ಜಮೀನನ್ನು ಏನು ಕೊಟ್ಟಿದ್ದಾರೆ ಆ ಬಗ್ಗೆಯೂ ಅಷ್ಟೇ ನಿರರ್ಗಳವಾಗಿ ವ್ಯಾಖ್ಯಾನ ಬರಲಿ. ಈ ಸದನದ ಮೂಲಕ ಜನತೆ ತಿಳಿದುಕೊಳ್ಳಲಿ.

ಶ್ರೀ ಕೆ ಹೆಚ್. ಶ್ರೀನಿವಾಸ್.—ನಿರರ್ಗಳವಾಗಿ ನೀವೇ ಮಾತನಾಡಿದ್ದೀರಿ. ನಿಮಗಿಂತ ಚೆನ್ನಾಗಿ ಮಾತನಾಡುವುದಕ್ಕೆ ನಮಗೆಲ್ಲಿದೆ ಶಕ್ತಿ.

ಶ್ರೀ ಎಸ್. ಬಂಗಾರಪ್ಪ.—ಅದೇ ರೀತಿ ಮಾತನಾಡಲಿ ಎಂದು ನಮ್ಮ ಆಸೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಸದಸ್ಯರಾಗಿ ರುಜು ಮಾಡಿದ್ದು ತಪ್ಪು. ಅವರು ಅದರಲ್ಲಿ ಪಾಲುದಾರರಾಗಿದ್ದಾರೆ ಅವರ ಅರ್ಜಿಗಳು ಇಲ್ಲ. ಕೊನೇ ಹಂತದಲ್ಲಿ ಸ್ಕೆಚ್ ತಯಾರಾಗಿರುವುದು ನಿಮ್ಮ ಒಪ್ಪಿಗೆಯಿಂದ.

ಶ್ರೀ ಎಸ್. ಬಂಗಾರಪ್ಪ.—ಅರ್ಜಿಗಳು ಇವೆ. ನೀವು ಸಂಪೂರ್ಣವಾಗಿ ತಪ್ಪು ಮಾಹಿತಿ ಕೊಟ್ಟಿದ್ದೀರಿ. ಏತಕ್ಕೆ ಇಂಥ ಇಲ್ಲದ ಸಲ್ಲದ ಆರೋಪ ಮಾಡುತ್ತೀರಿ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆರೋಪ ಮಾಡತಕ್ಕ ಸಂದರ್ಭ ಇದ್ದುದರಿಂದ ವಿವೇಕಯುತವಾಗಿ ಮಾಡಿದ್ದೇನೆ. ಇಲ್ಲದಿದ್ದರೆ, ಮಾತನಾಡತಕ್ಕ ಅವಶ್ಯಕತೆಯೇ ಇರಲಿಲ್ಲ. ತಾವು ಸ್ವತಃ ಆ ಪ್ರಕರಣದಲ್ಲಿ ಪಾಲ್ಗೊಂಡಿದ್ದೀರೆಂಬುದು ಮುಖ್ಯವಾದ ವಿಚಾರ. Ceasers wife must be above suspicion.

ಶ್ರೀ ಎಸ್. ಬಂಗಾರಪ್ಪ.—ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ನನಗಿದ್ದ ಭೂಮಿಯನ್ನು ಲೆಕ್ಕಾಚಾರ ಹಾಕುವುದಾದರೆ ಈಗಿರತಕ್ಕದ್ದನ್ನು ಸೇರಿಸಿದರೂ ಲ್ಯಾಂಡ್ ಸೀಲಿಂಗ್ ಲಿಮಿಟ್ಟಿನ ಒಳಗೇ ಇರುತ್ತದೆ. ನೀವು ಮಂತ್ರಿಗಳಾಗಿದ್ದಾಗ ತುಂಗ ಅಣೆಕಟ್ಟಿನ ಭಾಗದಲ್ಲಿ ನೂರಾರು ಎಕರೆ ಜಮೀನನ್ನು ಸರ್ಕಾರದಿಂದ ಕಂಟ್ರಾಕ್ಟ್ ಮಾಡಿಕೊಂಡ ಹಾಗೆ ಮತ್ತು ಲಿಫ್ಟ್ ಇರಿಗೇಷನ್ ಸ್ಕೀಂ ಅನ್ನು ಮಾಡಿಕೊಂಡ ಹಾಗೆ ನಾವೇನು ನೂರಾರು ಎಕರೆ ಭೂಮಿಯನ್ನು ಮಾಡಿಕೊಂಡಿಲ್ಲ.

ನೀವು ಮಾಡಿಕೊಂಡಿದ್ದೀರಲ್ಲಾ ಆ ರೀತಿ ನಾನು ನೂರಾರು ಎಕರೆ ಮಾಡಿಕೊಂಡಿಲ್ಲ. ನಿಮ್ಮ ಹಾಗೆ ಅಡಿಕೆ ತೋಟ ಅದೆಲ್ಲಾ ನನಗಿಲ್ಲ. ಇದನ್ನು ನೀವು ತಿಳಿದುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಹೆಸರಿನಲ್ಲಿ ಎಷ್ಟು ಜಮೀನಿದೆ, ಅದನ್ನು ನೋಡಿ. ನನ್ನ ಕೆಳಗೆ ಅನೇಕ ಜನ ಗೇಣೀದಾರರಿದ್ದರು. ಪಹಣಿ ನಮ್ಮ ಹೆಸರಿನಲ್ಲಿತ್ತು. ಇವತ್ತೂ ಬೇಕಾದರೆ ವಿಚಾರಣೆ ಮಾಡಿಸಿ. ನಾನೇನಾದರೂ ಒಂದು ತುಂಡು ಜಮೀನನ್ನು ಲಪಟಾಯಿಸಿದ್ದೇನಾ ನೋಡಿ. ವಿಚಾರಣೆ ಮಾಡಿದರೆ ಈಗಲೂ ಅದಕ್ಕೆ ನಾನು ಸಿದ್ಧ.

ಶ್ರೀ ಎಸ್. ಬಂಗಾರಪ್ಪ.—ನನ್ನ ವಿಚಾರದಲ್ಲೂ ನಾನು ಸಿದ್ಧನಾಗಿದ್ದೇನೆ. ಸರ್ಕಾರಕ್ಕೆ ಅಧಿಕಾರ ಇದೆ. ಈಗಲೂ ವಿಚಾರಣೆ ಮಾಡಲಿ. ನನ್ನ ಬಗ್ಗೆಯೂ ವಿಚಾರಣೆ ಮಾಡಲಿ, ಅವರ ಬಗ್ಗೆಯೂ ವಿಚಾರಣೆ ಮಾಡಲಿ.

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ನಿಮ್ಮ ಮೇಲೆ ಆರೋಪಣೆ ಮಾಡುವುದಿಲ್ಲ ಎಂದ ಮೊದಲೇ ಹೇಳಿದ್ದೇನೆ. ಈಗಲೂ ಕೂಡ ಹೇಳುತ್ತಿದ್ದೇನೆ. subtle distinction ತಾವು ಕಲ್ಪನೆ ಮಾಡಬೇಕು. ಆಡಳಿತದಲ್ಲಿ ಹೇಗಿರಬೇಕು, ಹೇಗೆ ನಡೆದುಕೊಳ್ಳಬೇಕು ಯಾವರೀತಿ ಮೇಲ್ಪಂಕ್ತಿ ಹಾಕಬೇಕು ಎಂದು ನೀವು ಹೇಳಿರುವುದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತಿದೆ, * * ಇವರು ಹೇಗೆ ಮಾತು ತಿರುಗಿಸುತ್ತಾರೆ ಎಂಬುದು ನನಗೆ ಅರ್ಥವಾಗುತ್ತದೆ

MR. SPEAKER —That is not fair. That won't go to the records.

---

* x words expunged as ordered by the chair.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ತುಂಬಾ ಗೌರವದಿಂದ ಹೇಳುತ್ತಿದ್ದೇನೆ...

ಶ್ರೀ ಎಸ್. ಬಂಗಾರಪ್ಪ.—ನಾನು ಏತಕ್ಕೆ ಹೇಳಿದೆ ಎಂದರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವಾಗ ನಿಯಮಾವಳಿ ಪ್ರಕಾರ ಮಾತನಾಡಬೇಕು. ಹಾಗೆಲ್ಲಾ ಹೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ನಾನೇನು ಹೇಳಿದ್ದೇನೆ? ನಾನು ಬುದ್ಧಿವಂತ ವರ್ಗ ಎಂದು ಹೇಳಿದ್ದೇನೆ.** ಎಂದು ಹೇಳಿಲ್ಲ. ನಾನು ಜನಾಂಗದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ತೆಗೆಯುವುದು ಬಿಡುವುದು ತಮಗೆ ಬಿಟ್ಟ ವಿಚಾರ.

ಅಧ್ಯಕ್ಷರು.—ತಾವು ಹೇಳಿದ್ದೀರಿ. ಆದರೆ ಇಲ್ಲಿ ಮಾತನಾಡುವಾಗ ನಿಯಮಾವಳಿ ಪ್ರಕಾರ ಮಾತನಾಡುವುದು ಒಳ್ಳೆಯದು.

ಶ್ರೀ ಕೆ.ಹೆಚ್. ಶ್ರೀನಿವಾಸ್—ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ತುಂಬಾ ವಿನಯಪೂರ್ವಕವಾಗಿ, ಗೌರವಪೂರ್ವಕವಾಗಿ ಸ್ಪಷ್ಟಪಡಿಸುತ್ತೇನೆ. ನೀವು ಭ್ರಷ್ಟ ಕೆಲಸ ಮಾಡಿದ್ದೀರಿ ಎಂಬುದು ನನ್ನ ಆರೋಪವಲ್ಲ. ಆರೋಪ ಮಾಡತಕ್ಕ ಅಭ್ಯಾಸ ಕೂಡ ನನ್ನಲ್ಲಿಲ್ಲ. ಈ ವಿಚಾರಗಳಲ್ಲಿ ಪ್ರಾಮಾಣಿಕವಾಗಿ ವ್ಯವಹಾರ ಮಾಡಿದರೆ ನಾಳೆ ದಿವಸ ಇನ್ನೊಬ್ಬರಿಗೆ ಬುದ್ಧಿವಾದ ಹೇಳತಕ್ಕ ನೈತಿಕ ಹಕ್ಕು ನಮಗೆ ಇರುತ್ತದೆ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ಮುಖ್ಯವಲ್ಲ, ಜನಗಳ ದೃಷ್ಟಿಯಲ್ಲಿ ಏನಿದೆ ಎಂಬುದು ಮುಖ್ಯ. ಇದನ್ನು ತಾವು ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ.

ಶ್ರೀ ಕೆ.ಎಚ್. ಶ್ರೀನಿವಾಸ್ —ಒಬ್ಬರು ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಿದ್ದಾರೆ. ಅವರು ಬಂಗಾರಪ್ಪನವರ ಶಿಷ್ಯರು. ಅವರ ಜೊತೆಯಲ್ಲೇ ಅವರ ಪಕ್ಷಕ್ಕೆ ಹೋಗಿರತಕ್ಕವರು. ಡಿ. ಪರಶುರಾಮಪ್ಪ ಎಂದು ಅವರ ಹೆಸರು. ಭೂನ್ಯಾಯ ಮಂಡಳಿಯ ಸದಸ್ಯರಾಗಿ ಅವರು ಕುಳಿತುಕೊಂಡು ಅವರ ತಂದೆ ಖಾತೇದಾರರಾಗಿರುವ ಜಮೀನನ್ನು ಗೇಣಿದಾರರಾದ ಹರಿಜನರು ಅರ್ಜಿ ಹಾಕಿದ್ದರೂ ಅವರ ಅರ್ಜಿಯನ್ನು ಡಿಸ್‌ಮಿಸ್ ಮಾಡಿ ಅವರ ತಂದೆ ಹೆಸರಿನಲ್ಲಿ ಖಾತೆ ಮಾಡಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರು ಈ ಸದನದ ಸದಸ್ಯರಲ್ಲ. ಅವರು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಆ ವಿಚಾರ ನನಗೂ ಗೊತ್ತಿದೆ ಅದು ಸಂಪೂರ್ಣವಾಗಿ ಸತ್ಯವಾದ ವಿಷಯ ಇರಬಹುದು. ಅದು ಬೇರೆ ವಿಚಾರ. ಆದರೆ ಅವರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಾದ ಸಂಪ್ರದಾಯ ಅಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ನನ್ನ ಹತ್ತಿರ ದಾಖಲೆಗಳಿವೆ. ಅವರು ಮಂತ್ರಿಗಳಾಗಿದ್ದಾಗ ಆರೋಪಣೆ ಮಾಡಿದ್ದರೆ ಕಮಿಷನ್ ಆಫ್ ಎನ್‌ಕ್ವೈರಿ ನೇಮಿಸಿ ಎಂದು ಒತ್ತಾಯ ಮಾಡುತ್ತಿದ್ದೆ. ಆದರೆ ಅವರು ಮಂತ್ರಿಗಳಲ್ಲ. ಮುಖ್ಯಮಂತ್ರಿಗಳು ಅಧಿಕಾರ ಚಲಾವಣೆ ಮಾಡಿ ಯಾವುದೇ ಎನ್‌ಕ್ವೈರಿ ಮಾಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಯಾರೇ ಆಗಲಿ ನೈತಿಕ ವಿಚಾರಗಳನ್ನು ಚಾರಿತ್ರ್ಯದ ವಿಚಾರಗಳನ್ನು ಇನ್ನೊಬ್ಬರಿಗೆ ಬೋಧನೆ ಮಾಡುವಾಗ ಅವರು ಸರಿಯಾಗಿ ಪ್ರಾಮಾಣಿಕರಾಗಿ ಇರಬೇಕು ಎಂದು ಹೇಳುತ್ತಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್ ಅವರು, ದೇವೇಗೌಡರು, ಕಕ್ಕಿಲಾಯ ಅವರು, ಆರ್ಮುಗಂ ಅವರು ಈ ದಾಖಲೆಗಳನ್ನು ನೋಡಿ, ತಮ್ಮ ಮನಸ್ಸಿನಲ್ಲಿ ಏನು ಭಾವನೆ ಬರುತ್ತದೆ ಅದರ ಪ್ರಕಾರ ತಾವೇ ತೀರ್ಮಾನ ಮಾಡಿಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಸದನದ ಮುಂದೆ ಇಡಿ. ಸದನದ ಸಮಿತಿ ಆಗಲಿ.

ಶ್ರೀ ಕೆ.ಎಚ್. ಶ್ರೀನಿವಾಸ್.—ತಾವು ಗಾಜಿನ ಮನೆಯಲ್ಲಿದ್ದುಕೊಂಡು ದಾರಿಯಲ್ಲಿ ಹೋಗುವ ಜನರ ಮೇಲೆ ಕಲ್ಲು ಹೊಡೆಯುವುದಕ್ಕೆ ಹೋಗಬಾರದು.

ಶ್ರೀ ಎಸ್. ಬಂಗಾರಪ್ಪ.—ಅದು ನನಗೆ ಗೊತ್ತಿದೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಮುಖ್ಯಮಂತ್ರಿಗಳ ಚಾರಿತ್ರ್ಯ ಹೇಗಿರಬೇಕು, ಅವರು ಯಾವರೀತಿ ಮೇಲ್ಪಂಕ್ತಿ ಹಾಕಬೇಕು, ಅವರ ವರ್ತನೆ ಹೇಗಿರಬೇಕು ಎಂಬ ಬಗ್ಗೆ ತಾವು ಭಾಷಣ ಮಾಡಿದ್ದರಿಂದ ನಾನು ಈ ಮಾತುಗಳನ್ನು ಹೇಳಿದ್ದೇನೆ. ನಾನೇನೂ ಮುಖ್ಯಮಂತ್ರಿಗಳನ್ನು ಇಂದ್ರ ಚಂದ್ರ ಎಂದು

ಹೊಗಳುವುದಕ್ಕೆ ತಯಾರಿಲ್ಲ. ಹೊಗಳಿ ನಮಗೆ ಆಗಬೇಕಾದುದು ಏನೂ ಇಲ್ಲ. ಆದರೆ ಒಂದು ಮಾತು ಮಾತ್ರ ನಿಜ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಸದಸ್ಯರು ಮಾತನಾಡುವ ಶೈಲಿ ಮತ್ತು ಜೋಕ್ಸ್ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಗಾಜಿನ ಮನೆಯಲ್ಲಿರುವವರು ಬೇರೆಯವರ ಮೇಲೆ ಕಲ್ಲು ಒಗೆಯಬಾರದು ಎಂದು ಅವರು ಹೇಳಿದರು.

ಶ್ರೀ ಕೆ.ಎಚ್. ಶ್ರೀನಿವಾಸ್.—ನಾನು ಯೀಲ್ಡ್ ಆಗಿಲ್ಲ.

ಶ್ರೀ ಜೆ.ಎಚ್. ಪಟೇಲ್.—ಒಂದೇ ಒಂದು ನಿಮಿಷ ಕುಳಿತುಕೊಳ್ಳಿ ಅಷ್ಟೂ ಧೈರ್ಯ ಇಲ್ಲವೆ ನಿಮಗೆ?

ಶ್ರೀ ಕೆ.ಎಚ್ ಶ್ರೀನಿವಾಸ್.—ನನಗೆ ಧೈರ್ಯ ಇದ್ದರೂ ಮಾನ್ಯ ಪಟೇಲರ ಎದುರುಗಡೆ ನನಗೆ ನಿಜವಾಗಿಯೂ ಭಯ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಒಪ್ಪಿಕೊಳ್ಳುವುದರಿಂದ ನನಗೇನೂ ಅಶ್ರೇಯಸ್ಸಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಇಡೀ ದೇಶದ ಜನತೆ ಮತ್ತು ಈ ಸದನದಲ್ಲಿ ಕುಳಿತಿರತಕ್ಕ ಎಲ್ಲ ಸದಸ್ಯರೂ ಒಪ್ಪುವ ಒಂದು ಮಾತಿದೆ. ಅವರೇನೂ ದೊಡ್ಡ ಬುದ್ಧಿ ಮಂತರಲ್ಲದಿರಬಹುದು. ಅಥವಾ ಒಳ್ಳೆಯ ಆಡಳಿತ ತಜ್ಞರಲ್ಲದೇ ಇರಬಹುದು. ಆದರೆ ನೇರ ವರ್ತನೆಯ, ವಿಶಾಲ ಹೃದಯದ, ಸ್ವಲ್ಪ ಮುಂಗೋಪ ಎನಿಸಿದರೂ ಹಾಲಿನಂಥ ಮನಸ್ಸಿನ ಧೈರ್ಯ ಇರತಕ್ಕ ವ್ಯಕ್ತಿಯೆಂಬುದನ್ನು ಈ ದೇಶದ ಜನರೆಲ್ಲಾ ಒಪ್ಪುತ್ತಾರೆ. ಆಳುವುದಕ್ಕೆ ಮುಖ್ಯವಾಗಿ ಧೈರ್ಯ ಬೇಕು. ನೈತಿಕ ಧೈರ್ಯ ಬೇಕು, ಮನಸ್ಸಿನ ವೈಶಾಲ್ಯತೆ ಬೇಕು. ನಮ್ಮ ಮುಖ್ಯಮಂತ್ರಿಗಳಿಗೆ ಅದಿದೆ ಬರೀ ಡಿಗ್ರಿಗಳು ಮುಖ್ಯವಲ್ಲ. ನಮ್ಮ ಮುಖ್ಯಮಂತ್ರಿಗಳಿಗೆ ಆ ಧೈರ್ಯ ವೈಶಾಲ್ಯ ಇದೆ ಎಂಬುದು ಜನರ ಮನಸ್ಸಿಗೆ ನಾಟಿದೆ. ಅದನ್ನು ಯಾರೂ ಇಲ್ಲ ಎಂದು ಹೇಳುವುದಿಲ್ಲ. ಯಾರನ್ನು ಕೇಳಿದರೂ ಒಳ್ಳೆಯ ಮನುಷ್ಯ ದೊಡ್ಡ ದೇಹ ಅಷ್ಟೇ ಅಲ್ಲ, ದೊಡ್ಡ ಮನಸ್ಸೂ ಇದೆ, ಒಳ್ಳೆಯ ಹೃದಯ ಇದೆ ಎಂದು ಹೇಳುತ್ತಾರೆ. ಹೈದರಾಲಿಖಾನನಿಗೇನು ವಿದ್ಯಾಭ್ಯಾಸ ಇತ್ತು? ಅವನು ಹೇಗೆ ರಾಜ್ಯವಾಳಿದ? ಬುದ್ಧಿವಂತಿಕೆ ಮಾರ್ಕೆಟ್ಟಿನಲ್ಲಿ ಸಿಗುತ್ತದೆ. ದುಡ್ಡು ಕೊಟ್ಟರೆ ಜ್ಞಾನ ಸಿಗುತ್ತದೆ. ಆದರೆ ದೊಡ್ಡ ಹೃದಯ, ಮನಸ್ಸು, ಧೈರ್ಯ ಹುಟ್ಟಿನಿಂದ ಬರುತ್ತದೆ. ಇದನ್ನು ಮಾತ್ರ ಎಲ್ಲಿ ಬೇಕಾದರೂ ನಿರ್ಭಯವಾಗಿ ಹೇಳುತ್ತೇನೆ.

ಶ್ರೀ ಎಚ್. ಶಿವಪ್ಪ.—ಜೆ.ಎಚ್. ಪಟೇಲರೂ ಎಷ್ಟೋ ಸಲ ಹೇಳಿದ್ದಾರೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಹತ್ತು ಬಂಗಾರಪ್ಪನವರನ್ನು ಸೇರಿಸಿದರೂ ಒಂದು ಗುಂಡೂರಾವ್ ಆಗುವುದಿಲ್ಲವೆಂದು ನನ್ನ ಭಾವನೆ.

ಶ್ರೀ ಎಸ್. ಬಂಗಾರಪ್ಪ.—ಆಕಾರ ನೋಡಿ ಹೇಳುತ್ತಿದ್ದೀರೋ ಏನೋ ಗೊತ್ತಾಗುತ್ತಿಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಮೊನ್ನೆ ನಡೆದ ಸಮ್ಮೇಳನದ ಬಗ್ಗೆ ಒಂದು ಮಾತು ಹೇಳುತ್ತೇನೆ. ಗಾಜಿನ ಮನೆ ಅನೇಕ ಸಂಪ್ರದಾಯಗಳನ್ನು ಕಂಡಿದೆ. ಪ್ರತಿಯೊಬ್ಬರೂ, ಪ್ರತಿಯೊಂದು ರಾಜಕೀಯ ಪಕ್ಷಗಳು ಅನೇಕ ವರ್ಷಗಳಿಂದ ಗಾಜಿನ ಮನೆಯಲ್ಲಿ ಅನೇಕ ಮಹತ್ವಪೂರ್ಣವಾದ ನಿರ್ಣಯಗಳನ್ನು ತೆಗೆದುಕೊಂಡು ಬಂದಿದೆ. ಬಂಗಾರಪ್ಪ ನವರ ಸಮಾವೇಶದಿಂದ ನನಗೆ ತೋಚಿದ್ದು, ಶ್ರೀಮಂತಿ ಇಂದಿರಾಗಾಂಧಿಯವರ ವಿರುದ್ಧವಾದ ತೀರ್ಮಾನ ವನ್ನು ಹಿಂದೆಲ್ಲಾ ಅದೇ ಗಾಜಿನ ಮನೆಯಲ್ಲಿ ತೆಗೆದುಕೊಂಡಿದ್ದರೂ ಅವುಗಳೆಲ್ಲಾ ವಿಫಲವಾಗಿವೆ. ಬಂಗಾರಪ್ಪನವರ ತೀರ್ಮಾನವೂ ಕೂಡ ಅದೇ ಜಾಡನ್ನು ಹಿಡಿಯಬಹುದೆಂಬ ಆತಂಕ ನನಗೆ ಇದೆ. ಬಂಗಾರಪ್ಪನವರ ಬುದ್ಧಿವಂತಿಕೆ ಬಗ್ಗೆ ಅವರ ರಾಜಕೀಯ ಜೀವನದ ಬಗ್ಗೆ ನನಗೆ ಗೌರವ ಇದೆ. ಅವರು ಸಮಾವೇಶ ಸೇರಿದ್ದು ಕಾಂಗ್ರೆಸ್ ಹೆದರಿಸಲಿಕ್ಕಲ್ಲ, ಉಳಿದಿರತಕ್ಕಂಥ ವಿರೋಧ ಪಕ್ಷಗಳನ್ನು ಹೆದುರಿಸುವುದಕ್ಕೆ ಎನ್ನುವ ಭಯ ಬಂದಿದೆ.

ಶ್ರೀ ಎಸ್.ಆರ್, ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್, ನಾವು ಯಾರಿಗೂ ಹೆದ ರುತ್ತಿಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ತಾವು ಹೆದುರುತ್ತೀರಿ ಎಂದು ನಾನು ಹೇಳಲಿಲ್ಲ. ಈ ಸಮಾ ವೇಶದಿಂದ ಒಂದು ರೀತಿಯ ಭಾವನೆ ಬಂದಿದೆ, ಅದನ್ನು ತಡೆಯಬಹುದಾಗಿತ್ತು ಎಂದು ಹೇಳಿದೆ. ಅಲ್ಲಿನ

ಸಮಾವೇಶಕ್ಕೆ ಬಹಳಷ್ಟು ಹೋಗಿದ್ದರು. ಅದರಿಂದ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಏಟು ಬೀಳುವಂತಾಗಿದೆ ಎನ್ನುವ ಭ್ರಮೆ ಏನು ಇಟ್ಟುಕೊಂಡಿದ್ದೀರಿ, ಅದರ ಬಗ್ಗೆ ನಾವು ಯಾರೂ ಭಯಪಡಬೇಕಾಗಿಲ್ಲ. ಭಯಪಡಬೇಕಾದಂಥ ಅಗತ್ಯವೂ ಇಲ್ಲ. ಪಂಚತಂತ್ರದಲ್ಲಿ ಕೆಲವು ಕಥೆಗಳು ಬರುತ್ತವೆ. ಆ ರೀತಿ ಇದು ನಡೆದಿದೆ. ಬಂಗಾರಪ್ಪನವರ ಜೊತೆಯಲ್ಲಿ ದೀವಟಿಗೆ ಹಿಡಿದುಕೊಳ್ಳುವುದಕ್ಕೆ ಕೆಲವರು ಹೊರಟಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಬಂಗಾರಪ್ಪನವರ ಬಗ್ಗೆ ಮಾತನಾಡುವುದಕ್ಕೆ ಬೇರೆ ವೇದಿಕೆ ನಿರ್ಮಾಣ ಮಾಡೋಣ.

ಶ್ರೀ ಕೆ.ಎಚ್. ಶ್ರೀನಿವಾಸ್.—ಸ್ವಾಮಿ, ನಾನು ಯೀಲ್ಡ್ ಆಗಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ದೇವೇಗೌಡರು ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ,

ಶ್ರೀ ಕೆ.ಎಚ್. ಶ್ರೀನಿವಾಸ್ —ಸ್ವಾಮಿ ನಾನು ಮೊದಲೇ ಸ್ಪಷ್ಟಪಡಿಸಿದ್ದೇನೆ. ನೀವು ಕೂಡ ನಿಯಮಾವಳಿಗೆ ಅನುಸಾರವಾಗಿ ಮಾತನಾಡಿದ್ದೀರಿ. ನಾನು ನಿಯಮಾವಳಿಯನ್ನು ತಪ್ಪಿ ಒಂದು ಇಂಚೂ ಕೂಡ ಮಾತನಾಡುವುದಿಲ್ಲ, ತಾವು ನಮ್ಮನ್ನು ಇಂದಿರಾ ಕೃಪಾಪೋಷಿತ ನಾಟಕ ಮಂಡಲಿ ಎಂದು ಹೇಳಿದ್ದೀರಿ. ನಾವು ನಿಮ್ಮನ್ನು ಇಂದಿರಾ ದೂಷಿತ ಮಂಡಲಿ ಎಂದು ಹೇಳುತ್ತೇವೆ. ಹಿಂದೆ ನಿಜಲಿಂಗಪ್ಪನವರು ಏನು ಮಾಡಿದರು ಅದು ಎಲ್ಲರಿಗೂ ಗೊತ್ತಿದೆ, ಜನ ಕಾಂಗ್ರೆಸ್ ಪಕ್ಷಕ್ಕೆ ಮತಕೊಟ್ಟಿದ್ದಾರೆ. ಈ ದೇಶದಲ್ಲಿನ ವಿರೋಧ ಪಕ್ಷಗಳ ಬಗ್ಗೆ ನನಗೆ ಅನಿಸಿದ್ದನ್ನು ಹೇಳುವುದಕ್ಕೆ ಅವಕಾಶ ಇದೆ, ತಾವು ಕೂಡ ತಾಳ್ಮೆಯಿಂದ ಕೇಳಬೇಕು. ಇವತ್ತು ಇಂದಿರಾಗಾಂಧಿಯವರ ವಿರುದ್ಧ ನಡೆದಂಥ ರಾಜಕೀಯವನ್ನು ಈ ದೇಶದ ಜನತೆ ತಿರಸ್ಕರಿಸಿದ್ದಾರೆ. ಈ ದೇಶದಲ್ಲಿ ಎಲ್ಲಿಯವರೆಗೆ ಶ್ರೀಮತಿ ಇಂದಿರಾ ಗಾಂಧಿಯವರ ತೇಜೋವಧೆಯನ್ನು ವಿರೋಧ ಪಕ್ಷಗಳು ಮಾಡುತ್ತವೆಯೋ ಅಲ್ಲಿಯವರೆಗೆ ವಿರೋಧ ಪಕ್ಷಗಳು ಬಲವಾಗಿ ಬೆಳೆಯುವುದಕ್ಕೆ ಆಗುವುದಿಲ್ಲ. ಈ ದೇಶದ ಜನತೆಯ ಮನಸ್ಸಿನಲ್ಲಿ ಕಾಂಗ್ರೆಸ್ ಸಂಸ್ಥೆಯೊಂದೇ ಜನತೆಯ ಕಷ್ಟಸುಖಗಳನ್ನು ಅರ್ಥ ಮಾಡಿಕೊಂಡಿರುವಂಥ ಸಂಸ್ಥೆಯಾಗಿದೆ ಎನ್ನುವಂಥ ಭಾವನೆ ಇದೆ. ರಾಷ್ಟ್ರದಲ್ಲಿ ಎರಡು ಪಕ್ಷಗಳ ಪದ್ಧತಿ ಇದ್ದರೆ ಅದಕ್ಕೆ ನನ್ನ ಬೆಂಬಲ ಇದೆ. ವಿರೋಧ ಪಕ್ಷದವರು ಇರುವುದು ಬರೀ ವಿರೋಧ ಮಾಡುವುದಕ್ಕೆ ಎನ್ನುವಂಥ ಭಾವನೆಯನ್ನು ದಯವಿಟ್ಟು ಬದಲಾಯಿಸಿಕೊಳ್ಳಿ. ವಿರೋಧ ಪಕ್ಷಕ್ಕೂ ಜವಾಬ್ದಾರಿ ಇರುವುದರಿಂದ ಸರಿಯಾದ ರೀತಿಯಲ್ಲಿ ಸರ್ಕಾರದ ಕಾರ್ಯಕ್ರಮಗಳಲ್ಲಿ ತಪ್ಪುಗಳಾಗಿದ್ದರೆ, ಟೀಕೆ ಮಾಡಿ, ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಕಾಂಗ್ರೆಸ್‌ನಲ್ಲಿಯೂ ಒಳಜಗಳ ಇದೆ. ವಿರೋಧ ಪಕ್ಷದಲ್ಲಿಯೂ ಒಳಜಗಳ ಇದೆ. ಆದರೆ, ಕಾಂಗ್ರೆಸ್ಸಿನವರು ಕೈಗೆ ಸಿಗುವಂಥ ಗಂಟೆಗೆ ಹೊಡೆದಾಡುತ್ತಾರೆ, ವಿರೋಧ ಪಕ್ಷಗಳು ಕನ್ನಡಿಯಲ್ಲಿನ ಗಂಟೆಗೆ ಹೊಡೆದಾಡುತ್ತಿವೆ.

ಇವತ್ತು ರಾಷ್ಟ್ರದ ಮಟ್ಟದಲ್ಲಿ ರಾಷ್ಟ್ರದ ಹಿತದೃಷ್ಟಿಯಿಂದ ಬದಲಿ ಪಕ್ಷ ಅಧಿಕಾರಕ್ಕೆ ಬಂದರೆ ನಾವು ಏನೂ ಭಯಪಡಬೇಕಾಗಿಲ್ಲ. ಸ್ವಾಗತ ಮಾಡುತ್ತೇವೆ. ಆ ದಿಕ್ಕಿನಲ್ಲಿ ವಿರೋಧ ಪಕ್ಷಗಳು ಪ್ರಯತ್ನ ಮಾಡಲಿ ಎಂದು ಹೇಳುತ್ತೇನೆ.

೧೧–೩೦ ಎ.ಎಂ.

ಅಂಥ ಒಂದು ರಾಜಕಾರಣಕ್ಕೆ ತಳಹದಿಯನ್ನು ಹಾಕೋಣ. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಕಥೆ ನನಗೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ವಿದ್ಯಾರ್ಥಿಗೆ ಒಂದುಕಡೆ ಭೂಪಟ, ಇನ್ನೊಂದು ಕಡೆ ಒಬ್ಬ ಮನುಷ್ಯನ ಚಿತ್ರವನ್ನು ಬರೆದು ಅದನ್ನು ಚೂರುಚೂರಾಗಿ ಹರಿದು ಇದನ್ನು ಜೋಡಿಸು ಅಂತ ಒಬ್ಬರು ಹೇಳಿದರಂತೆ. ಆ ವಿದ್ಯಾರ್ಥಿ ಬಹಳ ಹೊತ್ತಿನವರೆಗೂ ಆ ಭೂಪಟ ಚೂರುಗಳನ್ನು ಇಟ್ಟುಕೊಂಡು ಬೆಂಗಳೂರು ಎಲ್ಲಿದೆ, ಮೈಸೂರು ಎಲ್ಲಿದೆ, ಮಧ್ಯಪ್ರದೇಶ ಎಲ್ಲಿದೆ, ಹೈದರಾಬಾದ್ ಎಲ್ಲಿದೆ ಅಂತ ಎಷ್ಟು ಪ್ರಯತ್ನಪಟ್ಟು ಹುಡುಕಿದರೂ ಅದನ್ನು ಸೇರಿಸುವುದಕ್ಕೆ ಸಾಧ್ಯವಾಗಲಿಲ್ಲ. ಆಗ ಅದನ್ನು ತಿರುಗಿಸಿಕೊಂಡು ಮೂಗು, ಬಾಯಿ ಕೈ ಕಾಲು ಮುಂತಾದುವನ್ನೆಲ್ಲಾ ಜೋಡಿಸಿದ ಕೂಡಲೇ ಈ ಕಡೆ ಇದ್ದಂಥ ಭೂಪಟ ಕೂಡ ಸರಿಹೊಂದಿಕೊಂಡಿತಂತೆ ಅಂದರೆ ಇದು ಏನು ಸೂಚಿಸುತ್ತದೆ ಎಂದರೆ ಜಗತ್ತನ್ನು ತಿದ್ದುವುದಕ್ಕೆ ಮುಂಚಿತವಾಗಿ ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಇಂದಿರಾ ಗಾಂಧಿ ಕಾಂಗ್ರೆಸ್‌ನಲ್ಲಿ ನೊಣ ಸತ್ತು ಬಿದ್ದಿದೆ ಎಂದು ಎಷ್ಟು ವರ್ಷಗಳವರೆಗೂ ನೀವು ಹೇಳುತ್ತೀರಿ ?

ನಿಮ್ಮ ಎಲೆಯಲ್ಲಿ ಕತ್ತೆ ಸತ್ತು ಬಿದ್ದಿರುವುದನ್ನು ಮೊದಲು ಎತ್ತಿ ಬಿಸಾಡಿದರೆ ಖಂಡಿತ ನಾವು ಒಂದು ದೊಡ್ಡ ಹೆಜ್ಜೆಯನ್ನು ಮುಂದಿಟ್ಟಂತಾಗುತ್ತದೆ.

ಶ್ರೀ ಎಸ್.ಆರ್, ಬೊಮ್ಮಾಯಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಯಾರ ಎಲೆಯಲ್ಲಿ ಕತ್ತೆ ಸತ್ತು ಬಿದ್ದಿದೆ ಎಂಬುದನ್ನು ಜನರು ಹೇಳಬೇಕು. ತಾವು ಈ ಕಡೆ ಇದ್ದಾಗ ಏನು ಹೇಳಿದ್ದೀರಿ ಎಂಬುದೂ ರೆಕಾರ್ಡ್‌ನಲ್ಲಿದೆ. ಇವತ್ತು ಅಲ್ಲಿ ನಿಂತು ಏನು ಹೇಳುತ್ತಿದ್ದೀರಿ ಎಂಬುದನ್ನೂ ನಾವು ಕೇಳುತ್ತಿದ್ದೇವೆ. ಅದು ರೆಕಾರ್ಡ್‌ನಲ್ಲಿ ಹೋಗುತ್ತಿದೆ. ನಿಮ್ಮ ಉಪದೇಶವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಕತ್ತೆ ಎಲ್ಲಿ ಸತ್ತು ಬಿದ್ದಿದೆ ಎಂಬುದು ಜನರಿಗೆ ತಿಳಿಯಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇನ್ನೊಂದು ಪಾಯಿಂಟ್ ಆಫ್ ಆರ್ಡರ್. ಸ್ವಾಮಿ, ಅವರು ಮೊದಲು ಉತ್ತರ ಕೊಡಲಿ. ನಿನ್ನೆಯ ದಿವಸ ನಾನು ಸುಮಾರು ಒಂದೂವರೆ ಗಂಟೆ ಮಾತನಾಡಿದ್ದೇನೆ. ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನಾನು ಪ್ರಗತಿಪರವಾದ ವಿಚಾರಗಳ ಬಗ್ಗೆ ಅಂಕಿಅಂಶಗಳನ್ನು ಇಟ್ಟುಕೊಂಡು ಮಾತನಾಡಿರುವಂತೆ ಅವರೂ ಮಾತನಾಡಲಿ...

ಅಧ್ಯಕ್ಷರು.—ಇದರಲ್ಲಿ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ?

ಶ್ರೀ ಕೆ.ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಬೊಮ್ಮಾಯಿ ಅವರ ಕ್ಷಮಾಪಣೆಯನ್ನು ಕೇಳುತ್ತೇನೆ. ನಿನ್ನೆಯ ದಿವಸ ನಾನು ಅನಿವಾರ್ಯ ಕಾರಣಗಳಿಂದಾಗಿ ಇಲ್ಲಿ ಇರಲಿಲ್ಲ ಬಹುಶಃ ಅವರ ಭಾಷಣವನ್ನು ನಾನು ಕೇಳಿದ್ದಿದ್ದರೆ ಮಾನ್ಯ ಬಂಗಾರಪ್ಪನವರ ಭಾಷಣವನ್ನು ಕೇಳಿಕೊಂಡು ಹೋದುದರ ಪರಿಣಾಮ ಸ್ವಲ್ಪಮಟ್ಟಿಗೆ ಬದಲಾವಣೆ ಆಗಿ ನಾನು ಇನ್ನೂ ಒಳ್ಳೆಯ ಭಾಷಣವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಇನ್ನೊಮ್ಮೆ ಅವರ ಭಾಷಣವನ್ನು ಕೇಳಿಕೊಂಡು ಒಳ್ಳೆಯ ಭಾಷಣವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಅವರು ನಮಗೆ ಉಪದೇಶ ಮಾಡಿದ್ದರಿಂದ, ಈಗ ನಾನು ಮಾನ್ಯ ಬಂಗಾರಪ್ಪನವರಿಗೆ ಎರಡು ಉಪದೇಶಗಳನ್ನು ಮಾತ್ರ ಮಾಡಬಯಸುತ್ತೇನೆ. ಆದರೆ ಅವರು ಒಳ್ಳೆಯ ದೃಷ್ಟಿಯಿಂದ ಇದನ್ನು ಗ್ರಹಿಸಿಕೊಳ್ಳಬೇಕು. ಅವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರಿಗೆ ಕೆಲವು ಚಟಗಳನ್ನು ಬಿಡಿ ಅಂತ ಹೇಳಿದರು. ಆದ್ದರಿಂದ ನಾನು ಅವರಿಗೆ ಹೇಳುತ್ತಿದ್ದೇನೆ, ಮಾನ್ಯ ಬಂಗಾರಪ್ಪನವರಿಗೂ ಎರಡು ಚಟ ಇದೆ, ಯಾವುದೇ ಮಾತು ಬಂದಾಗಲೂ "ನನ್ನ ಪ್ರಕಾರ" ಅಂತ ಅನ್ನುವುದು, ಇನ್ನೊಂದು "ಯೂ ಡೋಂಟ್ ನೋ" ಅಂತ ಅನ್ನುವುದು. ಖಂಡಿತವಾಗಿ ನಾನು ಹೇಳುತ್ತಿದ್ದೇನೆ, "ನನ್ನ ಪ್ರಕಾರ" ಅಂತ ಹೇಳುವುದು ಮತ್ತು "ಯೂ ಡೋಂಟ್ ನೋ" ಎನ್ನುವುದು ಇವೆರಡು ಚಟಗಳನ್ನು ಬಿಟ್ಟರೆ ಅವರು ಒಳ್ಳೆಯ ಸೇವೆಯನ್ನು ರಾಜಕೀಯದಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ತಿಳಿದುಕೊಂಡಿದ್ದೆ ನನಗಿರತಕ್ಕ ಹಕ್ಕನ್ನು ರೆಸ್ಪೆಕ್ಟ್ ಮಾಡುತ್ತೀರಿ ಅಂತ, ಆದರೆ ಇಷ್ಟೊಂದು ರೆಸ್ಪೆಕ್ಟ್ ಮಾಡದೇ ಇರುತ್ತೀರಿ ಅಂತ ತಿಳಿದುಕೊಂಡಿರಲಿಲ್ಲ.

ಶ್ರೀ ಕೆ.ಎಚ್, ಶ್ರೀನಿವಾಸ್.—ನಾನು ಎಲ್ಲರ ಬಗ್ಗೆಯೂ ರೆಸ್ಪೆಕ್ಟ್ ಇಟ್ಟುಕೊಂಡು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಡಿಸ್‌ರೆಸ್ಪೆಕ್ಟ್ ಮಾಡಬೇಕೆಂದಿಲ್ಲ. ಒಳ್ಳೆಯ ನಿಷ್ಕಲ್ಮಶ ಮನಸ್ಸಿನಿಂದ ನಿಮಗೆ ಹೇಳುತ್ತಿದ್ದೇನೆ, ಈ ಎರಡು ಮಾತಿನಿಂದ ನಿಮಗೆ ಅನೇಕ ಧಕ್ಕೆಗಳು ಬಂದಿವೆ. ನೀವು ಶ್ರೀಮತಿ ಇಂದಿರಾಗಾಂಧಿಯವರ ಹತ್ತಿರ ಹೋದಾಗಲೇ ನಾನು ಹೇಳಿದೆ. ಒಂದು ದಿವಸ ಹೋಗಿ "ನನ್ನ ಪ್ರಕಾರ" ಅಂತ ಹೇಳುತ್ತಾರೆ, ಇನ್ನೊಂದು ದಿವಸ ಹೋಗಿ "you dont't know" ಅಂತ ಹೇಳುತ್ತಾರೆ. ಆದ್ದರಿಂದ ಅವರಿಗೆ ಒಳ್ಳೆಯ ಭವಿಷ್ಯ ಇಲ್ಲವೆಂದು ನಾನು ಮೊದಲೇ ಹೇಳಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಭವಿಷ್ಯ ಯಾರಿಗೆ ಇದೆ, ಯಾರಿಗೆ ಇಲ್ಲ, ಎಂಬುದು ಈಗಾಗಲೇ ನಿರ್ಣಯವಾಗಿದೆ. ಅಧಿಕಾರ ಎಲ್ಲಿ ಇರುತ್ತದೆ ಅಲ್ಲಿಗೆ ಭವಿಷ್ಯವನ್ನು ಹುಡುಕಿ ಕೊಂಡು ಹೋಗಿ ರುಜುವಾತು ಪಡಿಸಿರತಕ್ಕ ವ್ಯಕ್ತಿ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು. ಇಲ್ಲಿ ಬಹಳ ಪ್ರಯತ್ನ ಮಾಡಿ ನೋಡಿದರು. ಇಲ್ಲಿ ಯಾವುದೂ ಬಗೆಹರಿಯಲಿಲ್ಲ. ಏನಾದರೂ ಮಾಡಿ ಆ ಕಡೆಗೆ ಹೋಗಬೇಕೆಂದು ಸಂಧಾನ ಮಾಡುತ್ತಿದ್ದು ಸಮಯ ಸಿಕ್ಕಿದಾಗ ದಾಟಿದರು. ಆದರೆ ನಾನು ಅಂಥ ವ್ಯಕ್ತಿಯಲ್ಲ. ಅಧಿಕಾರ ಇದ್ದಂಥ ಪಕ್ಷವನ್ನು ಬಿಟ್ಟು ಭವಿಷ್ಯದಲ್ಲಿ ಅಧಿಕಾರವೇ ಇಲ್ಲದಿರತಕ್ಕ ವಿರೋಧ ಪಕ್ಷದ ಕಡೆಗೆ ಬಂದಿರತಕ್ಕವನು ನಾನು. ಅಧಿಕಾರ ಇರತಕ್ಕ ಪಕ್ಷದ ಕಡೆಗೆ ವಿರೋಧ ಪಕ್ಷದವರು ಬರು ವುದಿಲ್ಲವೆಂದು ಖಾತ್ರಿ ಆದಮೇಲೆ ಈ ಕಡೆಯಿಂದ ಓಡಿಹೋಗಿರುವವರು ನೀವು. ನಿಮ್ಮ ಚರಿತ್ರೆ ಇಡೀ ದೇಶಕ್ಕೇ ಮನದಟ್ಟಾಗಿರುವಾಗ ನೀವು ನನಗೆ ಉಪದೇಶ ಮಾಡುವುದಕ್ಕೆ ಬರುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಉಪದೇಶವನ್ನು ಕೊಡಬೇಕಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ನಾನು ಮಾತನಾಡುತ್ತಿಲ್ಲ. ನಾನು ಮಾತನಾಡಬಹುದು ಎನ್ನುವ ಭಾವನೆ ನಿಮಗೆ ಇದ್ದರೆ ಅದು ನನ್ನ ಪ್ರಕಾರ ನಡದೇ ನಡೆಯುತ್ತದೆ.

ಶ್ರೀ ಕೆ. ಎಚ್, ಶ್ರೀನಿವಾಸ್.—ನೋಡಿದಿರಾ, ನಾನು ಆಗಲೇ ಹೇಳಿದಂತೆ ಮತ್ತೆ "ನನ್ನ ಪ್ರಕಾರ" ಎಂಬುದನ್ನು ಶುರು ಮಾಡಿದಿರಲ್ಲಾ.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಕಾರವೇ ನಾನು ಹೇಳುವುದಕ್ಕೆ ಇದ್ದೇನೆ. ಜನತೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ನನ್ನ ಅಭಿಪ್ರಾಯದ ಪ್ರಕಾರವೇ ಹೇಳಬೇಕೆಂದಿದ್ದೇನೆ. ಕೇಳುವುದಕ್ಕೆ ಇಷ್ಟವಿದ್ದರೆ ಕೇಳಿ, ಇಲ್ಲದಿದ್ದರೆ ನಿಮ್ಮ ಕೆಲಸವನ್ನು ನೀವು ಮಾಡಿಕೊಳ್ಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧಿಕಾರಕ್ಕೋಸ್ಕರ ನಾನು ಆಡಳಿತ ಪಕ್ಷಕ್ಕೆ ಬಂದಿರಬಹುದು. ಅಧಿಕಾರವನ್ನು ಬಯಸುವುದು ತಪ್ಪೇನೂ ಅಲ್ಲ. ಹಾಗೆಂದರೆ ವಿರೋಧ ಪಕ್ಷಕ್ಕೆ ಹೋದವರೆಲ್ಲಾ ಅಧಿಕಾರದ ಬಗ್ಗೆ ತಿರಸ್ಕಾರ ಹೊಂದಿ ಹೋಗಿದ್ದಾರೆಂದು ಅರ್ಥವಲ್ಲ. ನಾನೂ ಹೇಳಬಲ್ಲೆ, ಮಾನ್ಯ ಬಂಗಾರಪ್ಪನವರಿಗೆ ಈ ಮಂತ್ರಿ ಪದವಿ ಯಃಕಶ್ಚಿತ್ ಆಗಿ ಕಂಡು ಏನೇ ಆಗಲಿ ನಾನು ಮುಖ್ಯಮಂತ್ರಿ ಆಗಲೇಬೇಕೆಂದೂ, ಈ ಕಾಂಗ್ರೆಸ್‌ನಲ್ಲಿದ್ದರೆ ಅದು ಸಾಧ್ಯವಾಗುವುದಿಲ್ಲವೆಂದೂ ತಿಳಿದು ಹೊರಗಡೆಯಿಂದ ಆದರೂ ಇದಕ್ಕೆ ಪ್ರಯತ್ನ ಮಾಡೋಣವೆಂದು ಏತಕ್ಕೆ ಆ ಕಡೆಗೆ ಹೋಗಿರಬಾರದು ?

ಶ್ರೀ ಎಸ್. ಬಂಗಾರಪ್ಪ.—ಅದು ನಿಮ್ಮ ಸ್ವಂತ ಅಭಿಪ್ರಾಯ. ನನ್ನದು ಅದಲ್ಲ ಎನ್ನುವ ಸ್ಪಷ್ಟ ಅಭಿಪ್ರಾಯವನ್ನ ಮೊನ್ನೆ ದಿವಸದ ನನ್ನ ಭಾಷಣದಲ್ಲೇ ಹೇಳಿದ್ದೇನೆ. ಇದು ಇಷ್ಟಕ್ಕೇ ನಿಲ್ಲುವುದಿಲ್ಲ ೩ ಸಾವಿರ ಎಕರೆ ಜಮೀನನ್ನು ಕೊಟ್ಟ ವಿಚಾರದ ಬಗ್ಗೆ ಕೂಡ ತಾವು ಹೇಳಬೇಕು. ಅಷ್ಟು ಸುಲಭವಾಗಿ ನೀವು ಭಾಷಣವನ್ನು ಮುಗಿಸುವುದಕ್ಕೆ ನಾನು ಬಿಡುವುದಿಲ್ಲ...

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಬೇರೆ ವಿಷಯಗಳನ್ನು ಮಾತನಾಡಬಾರದು ಎನ್ನುವ ಬಗ್ಗೆ ತಾವು ಅಬ್ಜಕ್ಷನ್ ರೈಸ್ ಮಾಡುವುದಕ್ಕೆ ಅಧಿಕಾರ ಇದೆ. ಆದರೆ ಇಂಥಾದ್ದೇ ಮಾತನಾಡ ಬೇಕೆಂದು ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವೂ ಕೂಡ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಅವರು ತೆಗೆದುಕೊಂಡಿರತಕ್ಕ ಕ್ರಮವನ್ನು ರಕ್ಷಣೆ ಮಾಡುವುದಕ್ಕೋಸ್ಕರವಾಗಿಯೇ ಈ ವಿಷಯವನ್ನು ನೀವು ಮಾತನಾಡುತ್ತಿಲ್ಲವೆಂದು ಕಾಣುತ್ತದೆ...

ಶ್ರೀ ಆರ್. ಗುಂಡೂರಾವ್.—೩ ಸಾವಿರ ಎಕರೆಯನ್ನು ಕೊಟ್ಟಿರುವುದು ಸರ್ಕಾರದಮೇಲೆ ಮಾಡಿರತಕ್ಕ ಆಪಾದನೆ. ಸರ್ಕಾರದವರು ಯಾರೋ ಒಬ್ಬರಿಗೆ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಆಪಾದನೆ ಮಾಡಿದ್ದಾರೆ. ಸರ್ಕಾರದ ಪರವಾಗಿ ೩ ಸಾವಿರ ಎಕರೆ ಮಾತ್ರವಲ್ಲ, ೩೦ ಸಾವಿರ ಎಕರೆಯನ್ನು ಯಾವರೀತಿ ಕೊಟ್ಟಿದ್ದಾರೆ ಎಂಬ ಬಗ್ಗೆ ಕೂಡ ನಾನು ಇವತ್ತು ಮಧ್ಯಾಹ್ನ ಉತ್ತರ ಕೊಡುವವ ನಿದ್ದೇನೆ......

ಅಧ್ಯಕ್ಷರು.—ಅದನ್ನು ಅವರೇನೂ (ಶ್ರೀ ಕೆ. ಹೆಚ್. ಶ್ರೀನಿವಾಸನ್) ಕೊಟ್ಟಿಲ್ಲವಾದ್ದರಿಂದ ಅವರು ಏತಕ್ಕೆ ಉತ್ತರ ಕೊಡಬೇಕು?

ಶ್ರೀ ಆರ್. ಗುಂಡೂರಾವ್.—ಮಾನ್ಯ ಶ್ರೀನಿವಾಸ್‌ರವರು ಮಂತ್ರಿಯಾಗಿದ್ದಾಗ ಕೊಟ್ಟಿದ್ದಾರೆಂದು ಯಾರು ಆಪಾದನೆ ಮಾಡಿಲ್ಲ, ಅಥವಾ ಮಾನ್ಯ ರಾಮೇಗೌಡರು ಮಂತ್ರಿ ಆಗಿದ್ದಾಗ ಎಷ್ಟು ಎಕರೆ ಕೊಟ್ಟಿದ್ದಾರೆಂದೂ ಯಾರೂ ಆಪಾದನೆ ಮಾಡಿಲ್ಲ, ಮಾನ್ಯ ನಾಣಯ್ಯನವರು ಇವತ್ತು ಮಧ್ಯಾಹ್ನ ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಮಾನ್ಯ ಸದಸ್ಯರುಗಳು ಆಪಾದನೆ ಮಾಡಿ ಹೊರಟು ಹೋಗಿಬಿಡುತ್ತಾರೆ. ಅದು ಸರಿಯಲ್ಲ ಇವತ್ತು ಮಧ್ಯಾಹ್ನ ನಾನು ಉತ್ತರ ಕೊಡಬೇಕಾಗಿರುವುದರಿಂದ ಮಾನ್ಯ ನಾಣಯ್ಯನವರನ್ನು ದಯವಿಟ್ಟು ಸಭೆಗೆ ಕರೆಸಬೇಕು. ಏಕೆಂದರೆ. ನಾನೂ ಮತ್ತು ಅವರೂ ಒಂದೇ ಜಿಲ್ಲೆಯಿಂದ ಬಂದಿರುವವರು. ಆದ್ದರಿಂದ ಅವರೂ ಇರಬೇಕು. ಮಾನ್ಯ ಬಂಗಾರಪ್ಪನವರು ಮೊನ್ನೆ ದಿವಸ ಮಾತನಾಡಿದ್ದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅವತ್ತು ಭಾಷಣ ಮಾಡಿ ಹೋದವರು ಇವತ್ತು ಬಂದಿದ್ದಾರೆ. ಸದನದಲ್ಲಿ ಪರಸ್ಪರ ಚರ್ಚೆ, ಪರಸ್ಪರ ಅಂಕಿ ಅಂಶಗಳ ದಾಖಲುಗಳಾಗಬೇಕಾಗುತ್ತದೆ. ಅದೇ ಪ್ರಕಾರ ಏನು ನಡೆದಿದೆ ಏನು ನಡೆದಿಲ್ಲ ಎಂಬುದನ್ನು ಸರ್ಕಾರದವರು ಹೇಳಬೇಕಾಗುತ್ತದೆ. ಇದನ್ನೆಲ್ಲಾ ಕನ್ನಡಿಯಂತೆ ತಮ್ಮ ಮುಂದಿಡುವಾಗ ಎಲ್ಲಾ ಮಾನ್ಯ ಸದಸ್ಯರೂ ಹಾಜರಿರಬೇಕು. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ೩ ಸಾವಿರ ಎಕರೆಯ ವಿಚಾರ ಏನು? ೩೦ ಸಾವಿರ ಎಕರೆಯ ವಿಚಾರ ಏನು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದರೆ ಎಲ್ಲ ಮಾನ್ಯ ವಿರೋಧಪಕ್ಷದ ಸದಸ್ಯರೂ ಸಭೆಯಲ್ಲಿ ಹಾಜರಿರಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಶ್ರೀಮಾನ್ ಬಂಗಾರಪ್ಪನವರೂ ಕೂಡ ಇಲ್ಲಿರಬೇಕು ಏಕೆಂದರೆ ಅವರು ಅವತ್ತು ಭಾಷಣ ಮಾಡಿ ಹೋದವರು ಇವತ್ತು ಬಂದಿದ್ದಾರೆ. ಬಹಳ ಸಂತೋಷ. ಆದರೆ ೩ ಸಾವಿರ ಎಕರೆಗೆ ಸಂಬಂಧಪಟ್ಟಂತೆ ಮಾನ್ಯ ಶ್ರೀನಿವಾಸ್‌ರವರು ಉತ್ತರ ಕೊಡಬೇಕಾಗಿಲ್ಲ. ಅದಕ್ಕೆ ಉತ್ತರ ಕೊಡಬೇಕಾದವನು ನಾನು.

ಶ್ರೀ ಎಸ್. ಬಂಗಾರಪ್ಪ —ಸರ್ಕಾರದ ೩ ಸಾವಿರ ಎಕರೆಯ ವಿಚಾರದಲ್ಲಿ ಏನು ಅನ್ಯಾಯ ಮಾಡಿದ್ದಾರೆ ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ ಎಂದು ನಾನು ಮಾನ್ಯ ಶ್ರೀನಿವಾಸ್‌ರವರನ್ನು ಕೇಳುತ್ತಿದ್ದೇನೆ ಅಷ್ಟೆ. ಆದರೆ ಅವರಿಗೂ, ಈ ಪ್ರಕರಣ ಸಂಬಂಧಕ್ಕೂ ಇಲ್ಲ ಎಂಬುದು ನನಗೆ ಗೊತ್ತಿದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ನಾನು ಇಷ್ಟು ಹೇಳಿ ಭಗವಂತನು ಮಾನ್ಯ ಬಂಗಾರಪ್ಪನವರನ್ನೂ ಸೇರಿಸಿ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಪ್ರಾರ್ಥಿಸಿಕೊಳ್ಳುವುದರೊಂದಿಗೆ ನನ್ನ ಭಾಷಣದ ಪೀಠಿಕಾ ಪ್ರಕರಣದ ಪ್ರಥಮಕ್ಕೆ ಅಧ್ಯಾಯ ಮಂಗಳವನ್ನು ಹಾಡಿ ಈ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ......

ಶ್ರೀ ಜೆ. ಹೆಚ್. ಪಟೇಲ್.—ನಿಮ್ಮ ದಕ್ಷಿಣೆಯನ್ನು ಆಮೇಲೆ ಬಂದು ತೆಗೆದುಕೊಳ್ಳಿ.

(ನಗು)

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಕೊಡುತ್ತೀರೆಂಬ ಬಗ್ಗೆ ನನಗೆ ನಂಬಿಕೆ ಇದೆ. ಸಾಮಾನ್ಯ ಆಡಳಿತದ ಬಗ್ಗೆ, ಜಿಲ್ಲಾ ಆಡಳಿತದ ಬಗ್ಗೆ ನೀರಾವರಿಯ ಬಗ್ಗೆ ಸ್ವಲ್ಪ ಮಾತುಗಳನ್ನು ಆದಷ್ಟೂ ವಿವರವಾಗಿ ಮಾತನಾಡುವುದಕ್ಕೆ ಸಮಯ ಇಲ್ಲವಾದ್ದರಿಂದ ಸ್ವಲ್ಪದರಲ್ಲಿಯೇ ಮುಗಿಸುವುದಕ್ಕೆ ಬಯಸುತ್ತೇನೆ.

ಈವತ್ತು ನಮಗೆ ಗೊತ್ತಿರುವ ಹಾಗೆ ಆಡಳಿತ ಯಂತ್ರದ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಾನು ಇಲ್ಲಿ ಮಾತನಾಡಿದ್ದೇನೆ. ಈವತ್ತು ಆಡಳಿತ ಯಂತ್ರ ನಮ್ಮ ರಾಷ್ಟ್ರದಲ್ಲಿ ವ್ಯವಸ್ಥಿತವಾಗಿ ಬಂದಿದೆ. ಈ ಯಂತ್ರ ಆಂಗ್ಲರ ಕೊಡುಗೆ, ಈ ಯಂತ್ರವನ್ನು ಮೂಲತಃ ಒಂದು ವಸಹತನ್ನು ಆಳುವುದಕ್ಕೆ, ಶೋಷಣೆ ಮಾಡುವುದಕ್ಕೋಸ್ಕರ ರಚನೆಯಾದುದೇ ಹೊರತು, ಒಂದು ಸ್ವತಂತ್ರ ರಾಷ್ಟ್ರವೆಂದು ಆಡಳಿತ ಮಾಡುವುದಕ್ಕೋಸ್ಕರವಾಗಿ ರಚನೆಯಾದುದಲ್ಲ. ಆದ್ದರಿಂದಲೇ ಈ ಯಂತ್ರದ ಮನಸ್ಸು ನೇತ್ರ್ಯರ್ಥಕವಾಗಿದೆ. ಒಬ್ಬ ಅಧಿಕಾರಿ ಯಾವುದೇ ಕೆಲಸವನ್ನು ಯಾವರೀತಿ ಮಾಡಲಿಕ್ಕೆ ಬರುವುದಿಲ್ಲವೆಂದು ಯೋಚನೆ ಮಾಡುತ್ತಾನೆಯೋ ಹೊರತು, ಯಾವುದೇ ಕೆಲಸವನ್ನು ಮಾಡಲಿಕ್ಕೆ ಹೇಗೆ ಬರುತ್ತದೆ ಎನ್ನುವುದನ್ನು ಯೋಚನೆ ಮಾಡುವುದಿಲ್ಲ. ಪರಸ್ಪರ ಸಮಸ್ಯೆಯ ಮೇಲೆ ಕಟ್ಟಿರತಕ್ಕಂಥ ಒಂದು ಆಡಳಿತ ಯಂತ್ರ. ಇದನ್ನು ಸರ್ಕಾರದವರು ಸುಧಾರಣೆ ಮಾಡಬೇಕಾದರೆ ಅನೇಕ ಮಹತ್ವ ಬಂದಿದೆ. ಅನೇಕ ಸುಧಾರಣೆಗಳು ಕಾಲಕಾಲಕ್ಕೆ ಬರುತ್ತಿದೆ. ಮತ್ತೆ ತಿರುಗಾಮುರುಗಾ ಆಗುತ್ತಿದೆ. ಈವತ್ತು

ಈ ಸರ್ಕಾರ ಬಂದಮೇಲೆ ಟ್ರಾನ್ಸ್‌ಫರ್ ಹಾವಳಿಯನ್ನು ತಪ್ಪಿಸಿದ್ದಾರೆ, ನನಗೆ ಬಹಳ ಸಂತೋಷ. ಇದು ಒಂದು ಸ್ಟ್ಯಾಂಡರ್ಡ್ ಬೇಡಿಕೆಯಾಗಿಬಿಟ್ಟಿರುತ್ತದೆ. ನಮ್ಮ ತಾಯಿಗೆ ಉಷಾರಿಲ್ಲ, ನಮ್ಮ ತಂದೆಗೆ ಉಷಾರಿಲ್ಲ, ವಯಸ್ಸಾಗಿ ಬಿಟ್ಟಿದೆ. ಅದಕ್ಕೆ ಟ್ರಾನ್ಸ್‌ಫರ್ ಮಾಡಿಕೊಡಬೇಕೆಂದು ಹೇಳತಕ್ಕಂಥದ್ದು ಒಂದು ರೆಗ್ಯುಲರ್ ದಾಟಿಯಾಗಿರುತ್ತದೆ. ಇದು ಸ್ವಲ್ಪಮಟ್ಟಿಗೆ ಮೋಟಕು ಆಗಿರುತ್ತದೆ, ನಾನು ಮಂತ್ರಿಯಾಗಿದ್ದಾಗ ಒಬ್ಬ ಬಂದು ನಮ್ಮ ತಾಯಿಗೆ ಆರೋಗ್ಯ ಸರಿಯಾಗಿಲ್ಲ. ನನಗೆ ಊರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಬಂದು ಕೇಳಿದ. ಅವನು ಬಂದು ಕೇಳಿಹೋದ ನಾಲ್ಕು ದಿವಸಗಳಲ್ಲಿ ಅವರ ತಾಯಿಯವರ ಕಡೆಯಿಂದ ಒಂದು ಕಾಗದ ಬಂದಿತು. ನನ್ನ ಮಗ ಟ್ರಾನ್ಸ್‌ಫರ್ ಮಾಡಿಕೊಂಡು ಊರಿಗೆ ಬರುವುದಕ್ಕೆ ಪ್ರಯತ್ನ ಮಾಡುತ್ತಿರುತ್ತಾನೆ. ಅವನು ಬಂದರೆ ಇಲ್ಲಿ ನನಗೆ ಹೊಡೆದು ಬಡಿದು ನನಗೆ ತೊಂದರೆಯನ್ನು ಕೊಡುತ್ತಾನೆ. ಆದ್ದರಿಂದ ಅವನಿಗೆ ಟ್ರಾನ್ಸ್‌ಫರ್ ಕೊಡಬೇಡಿ ಎಂದು ಕಾಗದ ಬಂದಿತ್ತು. ಅವನು ಎಂಟು ದಿವಸ ಬಿಟ್ಟು ನನ್ನ ಹತ್ತಿರ ಬಂದಮೇಲೆ ಅವನ ಮುಖಕ್ಕೆ ಕಾಗದವನ್ನು ಹಿಡಿದು ತೋರಿಸಿದೆ. ಹೀಗೆ ಏನಾದರೂ ಒಂದು ಸ್ಟ್ಯಾಂಡರ್ಡ್ ನೆವ ಮಾಡಿಕೊಂಡು ಟ್ರಾನ್ಸ್‌ಫರ್ ಮಾಡಿಕೊಳ್ಳತಕ್ಕಂಥ ಒಂದು ಅವ್ಯವಸ್ಥೆ ಇತ್ತು. ಅದಕ್ಕೆ ಈವತ್ತು ಮೋಟಕು ಹಾಕಿದ್ದೀರಿ. ಇನ್ನೊಂದು ಸಂಗತಿ, ಅವರು ರಂಗೋಲಿ ಕೆಳಗೆ ನುಸಿಯತಕ್ಕಂಥವರು. ಟ್ರಾನ್ಸ್‌ಫರ್ ಆಗುವುದಕ್ಕೆ ಮುಂಚೆ ಸರಿಯಾದ ಜಾಗವನ್ನು ಕಂಡುಹಿಡಿದುಕೊಂಡು ಹಾಕಿಸಿಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತಾರೆ ಎನ್ನುವ ಆರೋಪ ಕೂಡ ಇದೆ ಎನ್ನುವ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಹೀಗೆ ಇದ್ದಾಗ್ಯೂ ಆರೋಪಕ್ಕೆ ಎಡೆಯಿಲ್ಲದ ರೀತಿಯಲ್ಲಿ ನಿಷ್ಪಕ್ಷಪಾತವಾದ ರೀತಿಯಲ್ಲಿ ಸರ್ಕಾರದವರು ಉದ್ದೇಶಕ್ಕೆ ಹೊಂದಿಕೊಂಡು ಟ್ರಾನ್ಸ್‌ಫರ್‌ಗಳನ್ನು ಮಾಡಿದರೆ ಒಂದು ಒಳ್ಳೆಯ ವಾತಾವರಣ ಮೂಡುತ್ತದೆ ಎನ್ನುವ ಅಂಶವನ್ನು ಹೇಳಬಯಸುತ್ತೇನೆ. ಇಂದು ರಾಜ್ಯವನ್ನು, ರಾಷ್ಟ್ರವನ್ನು ಯಾರು ಆಳುತ್ತಾ ಇರತಕ್ಕಂಥವರು ಎಂದರೆ ಮಾನ್ಯ ಮುಖ್ಯಮಂತ್ರಿಗಳು ನಾವು ನೀವು ಯಾರೂ ಅಲ್ಲ. ರಾಜ್ಯವನ್ನು ಆಳುತ್ತಿರತಕ್ಕಂಥದು ಫೈಲುಗಳು. ಈ ಫೈಲುಗಳಿಗೆ ಜೀವವಿಲ್ಲ. ಫೈಲಿನ ಒಳಗಡೆ ಏನು ಇದೆ ಎಂದರೆ ತೆಳ್ಳಗೆ ಹಾಕಿದರೆ ದೋಸೆ. ದಪ್ಪಗೆ ಹಾಕಿದರೆ ರೊಟ್ಟಿಯಾಗತಕ್ಕಂಥ ಒಂದು ಸೂತ್ರ ಇದರಲ್ಲಿ ಜೋಡಣೆಯಾಗಿದೆ. ಈ ಫೈಲುಗಳು ಯಾವರೀತಿ ವಿಲೇವಾರಿಯಾಗುತ್ತಿದೆ ಎಂದರೆ ಕೆಳಗಿನವರ ಮೇಲೆ ಮೇಲಿನವರು, ಮೇಲಿನವರ ಮೇಲೆ ಕೆಳಗಿನವರು ಹಾಕಿ ಜವಾಬ್ದಾರಿಯಿಂದ ಜಾರಿಕೊಳ್ಳತಕ್ಕಂಥ ಒಂದು ತಂತ್ರ ಈ ಆಡಳಿತ ಯಂತ್ರದಲ್ಲಿ ನಡೆಯುತ್ತಿದೆ. ನಿಯಮಾವಳಿ ಪ್ರಕಾರ ಲೂಟಿ ಮಾಡಿದರೂ ಪರವಾಗಿಲ್ಲ, ನಿಯಮ ತಪ್ಪಿ ಒಂದು ಬಿಲ್ಲೆ ಉಪಕಾರ ಮಾಡಬಾರದು ಎನ್ನುವುದೇ ಈ ಫೈಲುಗಳ ವಿಲೇವಾರಿ ಕಾರ್ಯಕ್ರಮ. ಇದನ್ನು ನೀವು ಬದಲಾವಣೆ ಮಾಡಿದರೆ ಮಾತ್ರ ನಮ್ಮ ದೇಶದಲ್ಲಿ ಆಡಳಿತಕ್ಕೆ ಒಂದು ಹೊಸ ಮೆರಗು ಬರುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಒಂದು ದೊಡ್ಡ ರೀತಿಯಲ್ಲಿ ವಿಕೇಂದ್ರೀಕೃತ ಅಗತ್ಯವಿದೆ. ಜಿಲ್ಲಾಮಟ್ಟದಲ್ಲಿ ಪಂಚಾಯತಿ ಮಟ್ಟದಲ್ಲಿ ಪಂಚಾಯತಿ ರಾಜ್ಯ ವ್ಯವಸ್ಥೆಯನ್ನು ನಾವು ಈವತ್ತು ಸ್ವಲ್ಪ ಶುಷ್ಕವಾಗಿಸಿ ಆದಕ್ಕೆ ಒಳ್ಳೆಯ ಶಕ್ತಿಯನ್ನು ಒದಗಿಸಿದರೆ ಮಾತ್ರ ನಮ್ಮ ಆಡಳಿತ ಯಂತ್ರವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿದೆ. ಹಾಗಿಲ್ಲದೆಹೋದರೆ ಈಗಿರತಕ್ಕಂಥ ವ್ಯವಸ್ಥೆಯಿಂದಾಗಿ ಎಷ್ಟೇ ಇದರಲ್ಲಿ ಪ್ರಯತ್ನ ಪಟ್ಟರೂ ಕೂಡ ಹೆಚ್ಚಿನ ಪ್ರತಿಫಲ ಸಿಕ್ಕುವುದಕ್ಕೆ ಸಾಧ್ಯವೇ ಇಲ್ಲ. ಈವತ್ತು ಐ.ಎ.ಎಸ್. ಅಧಿಕಾರಿಗಳ ಮೇಲೆ ನಮ್ಮ ಆರ್ಮುಗಮ್‌ರವರು ಹೇಳಿದ್ದಾರೆ. ನಾನು ಕೂಡ ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೇ ಕುದುರೆಗೆ ನಾವು ಕಣ್ಣು ಕಪಾಟ ಹಾಕಿ, ಚಾಟಿ ಹಿಡಿದು ನಾವು ಎಷ್ಟು ಓಡಿಸಬೇಕೋ ಅಷ್ಟು ಹೊಡೆದು ಚುರುಕುಮುಟ್ಟಿಸಿದರೆ ಮಾತ್ರ ನಾವು ತಲುಪಬೇಕಾದ ಊರಿಗೆ ಹೋಗಿ ತಲುಪುತ್ತೇವೆಯೋ ಹೊರತು, ಸುಮ್ಮನೆ ಬಾಯಲ್ಲಿ ಹೇಳಿದರೆ ಏನು ಪ್ರಯೋಜನವಾಗುವುದಿಲ್ಲ. ಐ.ಎ.ಎಸ್. ಅಧಿಕಾರಿಗಳು ಎಷ್ಟೇ ಒಳ್ಳೆಯವರು ಇರಲಿ, ಎಷ್ಟೇ ಸಮರ್ಥರು ಇರಲಿ ಅವರಿಗೆ ಮಟ್ಟ ಇರುತ್ತದೆ. ಆ ಒಂದು ಮಟ್ಟವನ್ನು ಮೀರಿ ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆಡಳಿತದ ಎಲ್ಲ ಹಂತಗಳಲ್ಲಿಯೂ ಕೇವಲ ಐ.ಎ.ಎಸ್. ಅಧಿಕಾರಿಗಳನ್ನು ನಂಬದೆ ಜನರನ್ನು ದೊಡ್ಡ ರೀತಿಯಲ್ಲಿ ತೊಡಗಿಸತಕ್ಕಂಥ ಕೆಲಸಮಾಡಿ. ಮಾನ್ಯ ದೇವರಾಜ ಅರಸರ ಕಾಲದಲ್ಲಿ ಈ ಕಾರಣಕ್ಕಾಗಿಯೇ ಪ್ರಾರಂಭವಾಯಿತು. ಅದರಲ್ಲಿ ಸ್ವಲ್ಪ ಲೋಪದೋಷಗಳು ಇರಬಹುದು. ಆದರೆ ಅದನ್ನು ತಡೆ ಹಿಡಿದಿದ್ದೀರಿ. ಅದನ್ನು ಮುಂದುವರಿಸಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಪಡಿಸುತ್ತೇನೆ. ಒಂದು ಕಡೆ ಕಾನೂನು ಇರಲಿ, ಒಂದು ಕಡೆ ಜನರು ಕೂಡ ಸರಿಯಾಗಿ ನಡೆಸಲಿ ಎನ್ನುವ ಸ್ಥಿತಿಯಲ್ಲಿ

ತಾವು ಒಂದು ಹೊಸ ಆಡಳಿತ ರಂಗವನ್ನು ನಿರ್ಮಾಣ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈವತ್ತು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ರಕ್ಷಣಾಧಿಕಾರಿಗಳೆಂದು ಇರುತ್ತಾರೆ, ಅವರನ್ನು ಆರು ಆರು ತಿಂಗಳಿಗೆ ಬದಲಾಯಿಸತಕ್ಕಂಥದ್ದು ಮತ್ತು ತೀರ ಎಳೆನಿಂಬೆ ಕಾಯಿಗಳಂಥ ಐ.ಎ.ಎಸ್. ಅಧಿಕಾರಿಗಳನ್ನು ಜಿಲ್ಲೆಗಳಿಗೆ ಪೋಸ್ಟ್ ಮಾಡುತ್ತಿರುವುದರಿಂದ ಬಹಳವಾಗಿ ಅನಾಹುತಗಳು ಆಗುತ್ತಿದೆ. ನಿಯಮಾವಳಿಗಳು ಏನು ಇದಿಯೋ ಅದನ್ನು ಸ್ವಲ್ಪ ಬದಲಾವಣೆ ಮಾಡಿ ಸರಿಯಾದಂಥ ನಾಯಕತ್ವ ಇರತಕ್ಕಂಥ ಆಫೀಸರ್‌ಗಳನ್ನು ಹಾಕಬೇಕು. ಇದು ಎರಡು ಹಂತಗಳಲ್ಲಿ ಇರಬೇಕು, ಅವರು ಸೀನಿಯರ್ ಆಗಿರತಕ್ಕಂಥ ಮನುಷ್ಯರಾಗಿರಬೇಕು, ಬೇಕಾದರೆ ಡೆಪ್ಯುಟಿ ಕಮಿಷನರ್, ಸೀನಿಯರ್ ಡೆಪ್ಯುಟಿ ಕಮಿಷನರ್‌ರವರನ್ನು, ಜಿಲ್ಲಾ ರಕ್ಷಣಾಧಿಕಾರಿಗಳನ್ನು ಹಾಕಿಬಿಟ್ಟರೆ ಅರ್ಧ ತಲೆ ನೋವು ಕಡಿಮೆಯಾಗಿಬಿಡುತ್ತದೆ. ಆಡಳಿತದಬಗ್ಗೆ ಅನುಭವ ಇಲ್ಲದವರನ್ನು, ಆರು ತಿಂಗಳಿಗೆ ಒಬ್ಬ ಡೆಪ್ಯುಟಿ ಕಮಿಷನರ್‌ರನ್ನು ಮೂರು ತಿಂಗಳಿಗೆ ಒಬ್ಬ ಡೆಪ್ಯುಟಿ ಕಮಿಷನರನ್ನು ಹಾಕಿ ಅವರು ಡಿಸ್ಟ್ರಿಕ್ಟ್ ಚಾರ್ಜ್ ಕೊಡಬೇಕೆಂದು ಬಂದು ಬಿಡುತ್ತಾರೆ. ಐ.ಎ.ಎಸ್. ಕೊಟ್ಟಮಾತ್ರಕ್ಕೆ ಎಲ್ಲರಿಗೂ ಕೆಲಸ ಬರುತ್ತದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಇದಕ್ಕೆ ಖಂಡಿತವಾಗಿಯೂ ಪೂರ್ಣ ವಿರಾಮ ಹಾಕಬೇಕು. ಅವರ ಶಕ್ತಿ, ಟೆಂಪರ್‌ಮೆಂಟ್, ಈ ದಿಸೆಯಲ್ಲಿ ಕೆಲಸ ಮಾಡುವುದಕ್ಕೆ ವಿಶೇಷವಾದ ಯೋಗ್ಯತೆ ಇರತಕ್ಕಂಥವರಿಗೆ ಕೊಡಬೇಕು. ಈ ಮಟ್ಟದಲ್ಲಿ ಬದಲಾವಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಪೋಲೀಸ್ ಇಲಾಖೆಯಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಪೋಲೀಸ್‌ನವರ ಕತೆ ಬಹಳ ಕಷ್ಟದ್ದು. ಅವರಮೇಲೆ ಯಾವಾಗಲೂ ಎರಡು ರೀತಿಯಲ್ಲಿ ಪ್ರಯೋಗವಾಗುತ್ತದೆ, ಅವರು ಏನಾದರೂ ಕ್ರಮ ತೆಗೆದುಕೊಂಡರೆ ಏತಕ್ಕೆ ತೆಗೆದುಕೊಂಡಿರಿ ಎಂದು ಹೇಳುತ್ತಾರೆ. ಕ್ರಮ ತೆಗೆದುಕೊಳ್ಳಲಿಲ್ಲವೇ ಏತಕ್ಕೆ ತೆಗೆದುಕೊಳ್ಳಲಿಲ್ಲವೆಂದು ಕೇಳುತ್ತಾರೆ. ಪಾಪ ಈ ರೀತಿಯಾದ ಕಷ್ಟ ಅವರಿಗೆ. ಇದನ್ನು ಬದಲಾವಣೆ ಮಾಡಬೇಕು. ಮಾಡಬೇಕಾದರೆ ಕೆಳ ಹಂತದಲ್ಲಿ ಪೋಲೀಸ್ ವ್ಯವಸ್ಥೆಯನ್ನು ಸ್ವಲ್ಪ ಬೇರೆ ಬೇರೆ ರೀತಿಯಲ್ಲಿ ನಿರ್ಮಾಣ ಮಾಡಬೇಕು, ಇದರಲ್ಲಿ ಕಾನ್‌ಸ್ಟೇಬಲ್ಸ್ ಎಂದು ಏನು ಇರುತ್ತಾರೆ ಅವರ ಸ್ಥಿತಿ ತುಂಬಾ ಚಿಂತಾಜನಕ ಸ್ಥಿತಿ. ಅವರು ಜನಪ್ರಿಯ ವ್ಯಕ್ತಿಗಳಾಗಿಲ್ಲ. ಆ ಒಂದು ವ್ಯಕ್ತಿತ್ವವನ್ನು ನಿರ್ಮಾಣ ಮಾಡಬೇಕು. ಆವಾಗ ಅವರು ಜನರ ಸ್ನೇಹಿತರಾಗುತ್ತಾರೆ ಮತ್ತು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸುಧಾರಣೆ ಯನ್ನು ಕಾನ್‌ಸ್ಟೇಬಲ್ ಮಟ್ಟದಲ್ಲಿಯೇ ತರಬೇಕು, ತರಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಿಂದೆ ಒಂದು ಸಂದರ್ಭದಲ್ಲಿ ಸರ್ಕಾರದ ಚಿಂತನೆ ಇತ್ತು. ಪೋಲೀಸ್ ಠಾಣೆಗೆ ಸಂಬಂಧಪಟ್ಟಂತೆ ಜಿಲ್ಲಾ ಪ್ರತಿನಿಧಿಗಳನ್ನು ಒಳಗೊಂಡಂತೆ ಒಂದು ಉಸ್ತುವಾರಿ ಸಮಿತಿ ಇರಬೇಕು. ಎನ್ನುವ ವಿಚಾರ ಸರ್ಕಾರ ಪರಿಶೀಲನೆಯಲ್ಲಿತ್ತು ನನಗೆ ಗೊತ್ತಿರುವ ಹಾಗೆ ಮಾನ್ಯ ಬಂಗಾರಪ್ಪನವರು ಹೋಮ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ಅದರ ಬಗ್ಗೆ ಕೆಲವು ಕಾರ್ಯಕ್ರಮ ತೆಗೆದು ಕೊಳ್ಳಲಾಗಿತ್ತು. ಆದರೆ ಕೊನೆಗೆ ಅಲ್ಲಿಗೆ ನಿಂತುಹೋಯಿತು. ಈಗಲೂ ಕೂಡ ಈ ವ್ಯವಸ್ಥೆಯನ್ನು ಪರಿಗಣನೆ ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ನೀರಾವರಿ ಸಾಮರ್ಥ್ಯವೇನೋ ನಮ್ಮ ದೇಶದಲ್ಲಿ ಇದೆ. ಇದರೆ ಎಷ್ಟು ನೀರಾವರಿ ಆಗಬೇಕಿತ್ತೋ ಅದರ ಅರ್ಧಭಾಗ ಕೂಡ ಆಗಿಲ್ಲ. ಇದರಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ದೇವೇಗೌಡರು ಮಾತ ನಾಡಿದ್ದಾರೆಂದು ಕೇಳಿದ್ದೇನೆ, ಆದರೆ ಒಂದು ವಿಚಾರವನ್ನು ಹೇಳಬೇಕಾಗಿದೆ. ನೀರನ್ನೇನೋ ನಿಲ್ಲಿಸಿರು ತ್ತಾರೆ. ನಿಲ್ಲಿಸಿರತಕ್ಕಂಥ ನೀರಿನ ಒಂದೊಂದು ಹನಿಯೂ ಕೂಡ ಸಮರ್ಪಕವಾದ ರೀತಿಯಲ್ಲಿ ಉಪ ಯೋಗವಾಗಬೇಕು. ಈ ಕಾರಣಕ್ಕೋಸ್ಕರವಾಗಿ ತಾವು ಅಚ್ಚುಕಟ್ಟು ಪ್ರಾಧಿಕಾರವೆಂದು ಮಾಡಿರು ತ್ತೀರಿ. ಅದಕ್ಕೆ ಒಂದು ವ್ಯವಸ್ಥಿತವಾದ ಸ್ಕೀಮ್ ಇದ್ದರೂ ಈವತ್ತು ಏನು ಒಂದು ರಿಪೋರ್ಟ್ ಕೊಟ್ಟಿರುತ್ತಾರೆ ಅದನ್ನು ನೋಡಿದ್ದೇವೆ, ಈ ಪ್ರಾಧಿಕಾರ ತಾವೇ ಸ್ವತಃ ಸ್ಕೀಮ್‌ಗಳನ್ನು ಮಾಡಿ ಹೊಸದಾಗಿ ಉತ್ಪಾದನೆ ಮಾಡತಕ್ಕಂಥ ಒಂದು ಕತೃತ್ವ ಈ ಮಂಡಲಿ ನಿರ್ಮಾಣ ಮಾಡಿಲ್ಲ, ಅಗತ್ಯ ವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸರ್ಕಾರ ತೀವ್ರವಾದ ರೀತಿಯಲ್ಲಿ ಪರಿಶೀಲನೆ ಮಾಡ ಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ.

ಹಾಗೆಯೇ ನೌಕಾಯಾನ, ಪ್ರವಾಹ ನಿಯಂತ್ರಣದ ಬಗ್ಗೆ ಕೇಂದ್ರ ಸರ್ಕಾರದವರು ಕೊಡತಕ್ಕಂಥ ಅನುದಾನವನ್ನು ನಮ್ಮ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಂಡಿಲ್ಲ ಎನ್ನುವ ಭಾವನೆ ಉಂಟಾಗಿರುತ್ತದೆ. ಇದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ಹಾಗೇನಾದರೂ ಲ್ಯಾಪ್ಸ್ ಆಗಿದ್ದರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಮೈನರ್ ಇರಿಗೇಷನ್ ಸಂಬಂಧಪಟ್ಟ ಹಾಗೆ ಶಿವಮೊಗ್ಗ ಜಿಲ್ಲೆ ಗಾಜನೂರು ಅಣೆಕಟ್ಟು ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಿ ಬೆಂಗಾಡಾಗಿರತಕ್ಕಂಥ ಹಲವಾರು ಹಳ್ಳಿಗಳಿಗೆ ನೀರನ್ನು ಒದಗಿಸಿ ಕೊಡುವ ಬಗ್ಗೆ ಬಡ್ಜೆಟೆಡ್ ವರ್ಕ್ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸೂಕ್ತ ವಿವರಣೆಯನ್ನು ಕೊಡುತ್ತಾರೆಂದು ಆಶಿಸುತ್ತೇನೆ

ಹಾಗೆಯೇ ಪವರ್ ಪ್ರಾಜೆಕ್ಟ್ ಮಾಡುತ್ತೇವೆಂದು ಹೇಳಿದಿರಿ. ಈ ಪವರ್ ಪ್ರಾಜೆಕ್ಟ್ ಬಗ್ಗೆ ನಾವು ಸುಮ್ಮನೆ ತೃಪ್ತಿಯಿಂದ ಇರತಕ್ಕಂಥದ್ದು ಸರಿಯಾದುದಲ್ಲ. ಈ ಗೇನೋ ಮೂರು ವರ್ಷಗಳಿಂದ ಮಳೆ ಬಹಳ ಚೆನ್ನಾಗಿ ಆಗಿರುತ್ತದೆ. ಸದ್ಯಕ್ಕೆ ಅಭಾವ ಕಾಣುವುದಿಲ್ಲ. ಆದರೆ ಮುಂಬರುವ ದಿವಸಗಳಲ್ಲಿ ಕ್ಷಾಮ ಬರತಕ್ಕಂಥ ಸೂಚನೆಗಳು ಕಂಡುಬರುತ್ತಿದೆ. ಆದ್ದರಿಂದ ಅನ್ ಷೆಡ್ಯೂಲ್ ಮುಗಿಸಬೇಕಾಗಿರತಕ್ಕಂಥ ಕೆಲಸಗಳನ್ನು ಮುಗಿಸಲು ಕ್ರಮ ತೀವ್ರರೀತಿಯಲ್ಲಿ ತೆಗೆದುಕೊಳ್ಳಬೇಕು. ಈವತ್ತು ಪವರ್ ಕಾರ್ಪೊರೇಷನ್ ಇದೆ ಎಂದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಒಳ್ಳೆಯ ನೀರಾವರಿಗಳು ಇದೆ ಅದನ್ನು ಸೂಕ್ತರೀತಿಯಲ್ಲಿ ಮಾರ್ಪಾಡು ಮಾಡಬೇಕು, ಕೇವಲ ಮಡಿ ಹೊತ್ತುಕೊಂಡು ಕುಳಿತುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳಬಯಸುತ್ತೇನೆ

ಯಾವುದೇ ಪ್ರಯತ್ನದಲ್ಲಿ ಸರ್ಕಾರ ನಿರ್ಣಯ ತೆಗೆದುಕೊಂಡರೂ ಒಂದಲ್ಲ ಒಂದು ಆರೋಪ ಬಂದೇ ಬರುತ್ತದೆ. ಒಳ್ಳೆಯ ಕೆಲಸಗಳನ್ನು ಮಾಡುವಾಗ ಆರೋಪಗಳನ್ನು ಎದುರಿಸಿ ನಿಷ್ಠೂರ ನಿರ್ಣಯ ಮಾಡಬೇಕಾಗುತ್ತದೆ. ಅಂತಹ ವಿಚಾರಗಳು ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡುತ್ತಾರೆ ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಕನ್ನಡ ಅಭಿವೃದ್ಧಿ, ಕಲಾವಿದರು, ಸಾಹಿತಿಗಳ ವಿಚಾರದಲ್ಲಿ ಹೇಳುವುದಾದರೆ ಅನೇಕ ಜನ ಸರ್ಕಾರದಿಂದ ಮಾಶಾಸನ ಪಡೆಯುತ್ತಿದ್ದಾರೆ. ಮೊದಲಿನಿಂದಲೂ ಪಡೆಯುತ್ತಿದ್ದಾರೆ ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ನಡೆಯುತ್ತಿಲ್ಲ. ಅದರ ಬಗ್ಗೆ ಸಿದ್ಧವಾದ ಫೈಲುಗಳು ಸರ್ಕಾರದಲ್ಲಿವೆ ಅವುಗಳನ್ನು ಶೀಘ್ರವಾಗಿ ತೀರ್ಮಾನ ಮಾಡಿ. ಕನ್ನಡದ ಅಭಿವೃದ್ಧಿ ಬಗ್ಗೆ ಕನ್ನಡ ಸಂಸ್ಕೃತಿಯ ಬಗ್ಗೆ ಕಲಾವಿದರು, ಸಾಹಿತಿಗಳ ಬಗ್ಗೆ ಉದಾರವಾಗಿ ನಡೆದುಕೊಳ್ಳಬೇಕು. ನಿಧಾನ ವಿಧಾನವನ್ನು ಅನುಸರಿಸದೆ ಅದನ್ನು ಕಾರ್ಯಗತ ಮಾಡಬೇಕೆಂದು ನಾನು ಮುಖ್ಯ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಒತ್ತಾಯಿಸಿ ಅವರ ಬೇಡಿಕೆಗಳಿಗೆ ನನ್ನ ಬೆಂಬಲ ಸೂಚಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ.—ಮುಖ್ಯ ಮಂತ್ರಿಗಳು ನಾನು ಮಂತ್ರಿಯಾಗಿದ್ದಾಗ ಏನೇನು ಮಾಡಿದ್ದೇನೆ ಎನ್ನುವ ವಿವರಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ಅವರು ಹೇಳಿದ ಮೇಲೆ ನಾನು ಎಷ್ಟು ಫ್ಲೈವುಡ್ ಫ್ಯಾಕ್ಟರಿಗಳಿಗೆ ಲೈಸೆನ್ಸ್ ಕೊಟ್ಟಿದ್ದೇನೆ ? ಎಷ್ಟು ಫ್ಲೈವುಡ್ ಕೊಟ್ಟಿದ್ದೇನೆ ? ಎಷ್ಟು ಎಕರೆ ಅರಣ್ಯ ಭೂಮಿಯನ್ನು ಬೇರೆಯವರಿಗೆ ಕೊಟ್ಟಿದ್ದೇನೆ ? ಎಷ್ಟು ಕ್ಯೂಬಿಕ್ ಮೀಟರ್ ಮರ ಕೊಟ್ಟಿದ್ದೇನೆ ? ಆಗಿನ ಯೋಜನೆ ಎಷ್ಟು ? ಆ ಫ್ಯಾಕ್ಟರಿಗಳು ಎಷ್ಟು ವರ್ಷಗಳ ಕಾಲದಿಂದ ಇದ್ದವು? ಎಲ್ಲಾ ವಿವರಗಳನ್ನು ದಯವಿಟ್ಟು ತರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ತಮಗೆ ಏತಕ್ಕೆ ಈಗ ?

ಶ್ರೀ ಜಿ. ರಾಮೇಗೌಡ.—ತಾವು ಹೇಳುತ್ತೇನೆಂದು ಹೇಳಿದ್ದೀರಿ ? ಈಗ ಹೇಳಬೇಕು ?

ಶ್ರೀ ಆರ್. ಗುಂಡೂರಾವ್.—ನಿಮಗೆಲ್ಲಾ ಟೈಪು ಮಾಡಿಸಿ ಹಂಚುತ್ತೇನೆ.

† SRI WILLIAM ST. JOHN: SINCLAIR MARLEY (Nominated).—Mr. Speaker, Sir, there are two points that I would like to discuss on these demands. One is "cultural affairs" and the other is about the Police. Regarding the cultural affairs it seems there is a very obnoxious practics that is prevailing in Bangalore. I refer to the

practice that is carried on in Ravindra Kalakshetra, Town Hall, Bal Bhavan and Chowdaiah Memorial Hall. Anybody who hires these premises has to give a certain number of seats free to the managements. I mean, the public are maintaining these halls and the public who hire them have to pay for them. Why there should be this practice of reserving a certain number of seats in the front row for certain people of the Government ? I would like a clarification on this. The second point about this is that when you hire these halls you are told that if the Government should require this hall for any function, you will be given 24 hours' notice and you may not be able to have your function. Am I to understand from this that the Government are not planning the functions that they are going to hold ? What should the people do who have hired these Halls if they are given a notice of 24 hours and told that they cannot hold their function ? I do hope the Government will take cognisance of these two points. I think this practice is most obnoxious and I would request the Government to give a very serious consideration and see that this practice is stopped.

Regarding the Police, Sir, I am going to confine myself purely and solely to this Report because from what I have found the police always seem to be on the receiving end. Brickbats are hurled at them. May be in certain cases there is justification. It is not my intention to hurl brickbats at the Police. I take the opening sentence of the Report "Protection of life and property of the Citizens is the basic function of the Police Department". Excellent But what we as citizenes, have done to help the Police in co-ordinating their job ? Sir, it is very easy for us to say that police are not doing their duty properly. But what about the apathy of the public in helping the Police ? This is the point I would like to stress. Do we ever come to the aid of a constable if we find him surrounded while he is doing his duty ? No. Not at all. We would rather see that he is hammered. And that is how we are helping to tarnish the image of the Police. What help are we giving them ? Do we expect the policemen everywhere whenever there is a trouble? It is impossible. We would have no police. I feel that it is the responsibility of every citizen of the City to at least help in certain ways. I will deal with that in detail with regard to how we can do this. But I still say that the apathy of the public has to a great extent tarnished the image of the police. Let me refer to one item here. On Page 8 of the Report there is a mention about the matter of calling 'Bundhs', 'Hunger Strikes' and things of this nature. We always hear that if there is going to be a procession, if there is going to be a hunger strike, it is going to be very peaceful. Do you really

think, when we have a large crowd of thousands in a procession, it is going to be peaceful ? Can any one of the Organizers guarantee that it is going to be peaceful ? Are we not as common citizens also to be protected ? Don't we have a right ? How is it that we give freevent to anybody ? If there is going to be a procession, the traffic on the road will come to a stand-still. Don't we also have a right ? Why these things should take place, I ask. Then we come to the matter of hunger strike. I do not have anything against it. But what I object is the inconvenience you put to the public. And what happens is eventually action is taken when a man is very ill and he is taken to the hospital. Why can't be action taken in the very beginning ? Yes. There is a way of protest. You do protest. But you should not do in a manner whereby you put the ordinary citizens to inconvenience. And this is where I feel the police should really take stern action in the very beginning and nip all this in the bud. I have experience of this. I do believe that the police or the Government should put a stop to this sort of things. I now want to really ask the Police. This is the situation. You have installed automatic traffic signals at great expense to the public.

12-00 NOON

Are they being maintained in the manner that they should be maintained ? Are they functioning as they should function ? Whether police authorities have checked these signals to see that they are working correctly and see that lamps are replaced ? All these things are not being done. We have spent lot of money on these and why should not these things be maintained in good working order ? Then I come to road hops. Here, the police should come down heavily on these people who overtake from the left. The biggest culprits are your autorikshaw drivers, your motor-cyclists. The motor-cyclists feel that they are on death track. The overtake on the left and they do all sorts of things. This is where. I think, the police have failed badly, very badly. The behaviour of our citizens who drive cars is quite opposite. We would expect them to be an example to the public by observing traffic rules and see that accidents are avoided. They commit accidents and most of them go scot free. I should like to draw the attention of the police department with regard to these 'No Entry' signs. I am put to a tremendous trouble because I have a No Entry sign near my house. But what the public is doing ? With impunity they are going down, and we, the people who live in that locality have to suffer because we are law abiding citizens. It is a very important road, the Church street. You have allowed high rised buildings, you have allowed commercial buildings, and see the

state of affairs of parking there ? There are three picture houses. I would request the police authorities to remove all cars parked in the non-parking area whatsoever. What is the wrong with the parade ground ? Let them use that for parking. I ask, why can't you make use of those places where they are available. Is it that we can't get it from the military ? That is a beautiful big ground and possibly we use it twice a year. I request the police authorities to do something about parking of vehicles there. Have they ever thought of it ? I appeal to the Minister concerned to kindly depute somebody to see the state of affairs of Church street with the parking over there. This is something I would question the Police to really look into very seriously. I would like even to make a suggestion to the Department. I made this suggestion to your present Commi-ssioner more than fifteen years ago. The people are breaking these laws with impunity. Can't we set up a cell of civic minded people to help the police to book these offenders ? We do not want any salary. I voluntarily will do that. I don't want any salary but I want authority to book the offenders. We could help the police in this manner. This is vital and something must be done. We can't expect the policemen to be all over the place. There were some members here who spoke about the police helping prostitution, matka, gambling and things like that. Let us look at the prostitution. Who are to blame ? We, men, because we behave like beasts. We do not behave like human beings. That is why prostitution flourishes in any city. I don't blame the women. I always respect them. I blame us, men, because we behave like beasts. We just want to satisfy our carnal lust and straightaway we put the blame on the police that they are not doing this and that We should examine ourselves. It is very easy to point our fingers at somebody and say that this person is wrong and that person is wrong. I think, we are the people who are wrong. With regard to gambling I cannot say anything. I am not interested in that. So, I am afraid, I cannot express my views. But, here I should like to digress you for a moment to what happened on Sunday, the eleventh. Two young girls or let us call them young women, robbed a house situated at two doors away from that of mine. They robbed kitchen utensils and made their way and carried them from Saint Marks road to Queens road where our malis apprehended them. They ran over and went and they were caught again near the Oriental buildings. There was a hue and cry from the men. They were saying that "you can't hold these women like this. How dare are you. Please let them go." They were let go. Then, you want to blame th police. If they carry on their job they are beaten with a stick by us and if they don't

carry on their job, they are still beaten by us. This is the tragedy. People are not prepared to help the police in discharging their duties.

Then I come to housing for the police. I personally feel, sir, this is something which should be given a very high priority. We should see that the people who are employed especially in that Department atleast have their houses. We are saying all over the State about Scheduled Castes and Scheduled Tribes people. Why don't we think about our police force and try to given them maximum housing facilities for their staff.

Sir, I have heard a lot about the castes. This is an evil from top to bottom. I think, after family planning, corruption is the biggest thing that we should try to eradicate. After all, if a man has to pay a large sums of money to get a job it is obvious that he is going to climb because of money. I am not saying that graft is being taken. I have no facts to make such a statement. I am making a statement on the basis of what appear in the press and on the basis of what has been raised on the floor of the House. Unless we recruit the correct type of people, the people who have a conscience, I am afraid that any matter what you do, you are not going to improve your police force.

Then I come to the last item. I have something to say against the Press. Whenever there is a crime committed there will be a photograph on the first page stating that the Police have not done this and that, and not apprehended the culprits, etc. But when the Commissioner of Police has his meeting and makes a report and say that so much has been recovered, so many thieves have been apprehended, in one little corner of our papers we see a small article.

But let there be something about robbery and big photograpns and big write-ups about what is our police force doing. I believe that the Press should be really honest when reporting. When they are giving tremendous publicity to what might be termed as lack of duties of the police, why don't they even praise them when the praise is due to them. With these few words, I thank you for giving me the opportunity of participating in this debate. Thank you.

ಕುಮಾರಿ ಎಸ್. ಪ್ರಮೀಳ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥಾ ಬೇಡಿಕೆಗಳ ಮೇಲೆ ನಾನು ಕೆಲವಾರು ಮಾತನ್ನಾಡಲು ಬಯಸುತ್ತೇನೆ.

ಶ್ರೀ ಕೆ. ಭಾಸ್ಕರ ನಾಯಿಡು.—ನಾನು ಈ ಮೊದಲು ಕುಮಾರಿ ಎಸ್. ಪ್ರಮೀಳ ಅವರ ಬಗ್ಗೆ ಏನು ಹೇಳಿದ್ದೆ ಅದನ್ನು ಫೈನಲ್ ಆಗಿ ನಾನು ಈ ದಿನ ನೋಡಿದ್ದರಿಂದ ಆಕ್ಸೆಪ್ಟ್ ಮಾಡಿಕೊಂಡಿದ್ದೇನೆ. I accept the defeat ಏತಕ್ಕೆಂದರೆ ಅವರು ಈ ದಿನ ಟ್ರ್ರಪರ್ ಹಾಕಿಕೊಂಡು ಬಂದು ನಾವು ಹೇಳಿದ ಹಾಗೆ ಬಂದು ತೋರಿಸಿದ್ದಕ್ಕೆ ನಾನು ಬಹಳ ಸಂತೋಷ ಪಡುತ್ತೇನೆ. ಅವರು ಈ ದಿನ ಟ್ರೌಪರ್ ಹಾಕಿಕೊಂಡು ಬಂದಿದ್ದಾರೆ.

ಶ್ರೀ ಘಟ್ಟಿ ಚಂದ್ರಶೇಖರ್.—ಅವರನ್ನು ಈಪ್ರೊತ್ತು ನೋಡಿದರೆ ಅವರು ಕುಮಾರಿ ಅಲ್ಲ, ಕುಮಾರ ಇದ್ದಹಾಗೆ ಕಾಣುತ್ತದೆ, ಅದಕ್ಕೆ ಅವರು ಹೇಳುತ್ತಾ ಇರುವುದು.

ಕುಮಾರಿ ಎಸ್. ಪ್ರಮೀಳ.—ಮಾನ್ಯ ಭಾಸ್ಕರ ನಾಯಿಡು ಅವರು ಹೆಣ್ಣು ಮಕ್ಕಳ ಬಗ್ಗೆ ಒಂದು ವ್ಯಾಖ್ಯಾನ ಮಾಡಿದ್ದಾರೆ, ಆ ವಿಚಾರದಲ್ಲಿ ಒಂದು ಮಾತು ಹೇಳಿ ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಸ್ವಾಮಿ. ಭರ್ತೃಹರಿ ಶತಕದಲ್ಲಿ ಒಂದು ಶ್ಲೋಕ ಇದೆ, ಅದನ್ನು ಉದಹರಿಸುತ್ತೇನೆ. ಅದು ಈರೀತಿ ಇದೆ.

> "ಕಯೂರಾಣಿ ನಭೂಷಯತಿ ಪುರುಷ ಹಾರಾ ನ ಚಂದ್ರುಜ್ವಾಲಾ, ನರನಾನ
> ನವಿಲೋಪನ ನ ಕುಸುಮಂ ನಾಲಕೃತಾ ಮೂರ್ಧಜಾ, ವಾಣ್ಣೇಕಾ ಸಮಲಕರೋತಿ
> ಪುರುಷ ಯಾ ಸಂಸ್ಕೃತಾ ಧಾರ್ಯತೇ, ಕ್ಷಿಯಂತೇ ಖಲು ಭೂಷಯಾಣೀ ಸತತಂ
> ವಾಗ್ಭೂಷಣ ಭೂಷಣಂ" ಎಂದು ಇದೆ.

ಅಂದರೆ ಇದರ ಅರ್ಥ ಏನೆಂದರೆ ಪ್ರಪಂಚದಲ್ಲಿ ಯಾರಿಗೇ ಆಗಲಿ ಅವರು ಹಾಕಿಕೊಳ್ಳತಕ್ಕಂಥಾ ವಸ್ತ್ರದ ಮೇಲಾಗಲಿ ಅಥವಾ ಅವರು ಹಾಕಿಕೊಳ್ಳತಕ್ಕಂಥಾ ಆಭರಣದ ಮೇಲಾಗಲಿ ಮತ್ತು ಸ್ನಾನ ಮಾಡತಕ್ಕಂಥಾ ಅಭಿನಂದನಗಳ ಮೇಲಾಗಲಿ ಅದನ್ನು ಈ ಸಭೆಯಲ್ಲಿ ತರತಕ್ಕಂಥಾದ್ದು ಸರಿಯಲ್ಲ. ಕಾರಣ ಏನೆಂದರೆ ಅದನ್ನು ಹಾಕಿಕೊಂಡು ಬಂದ ಮಾತ್ರಕ್ಕೆ ಭೂಷಣವಲ್ಲ, ಅದರ ಬಗ್ಗೆ ಮುಂದೆ ಸಂದರ್ಭ ಬಂದಾಗ ಮಾತನಾಡುತ್ತೇನೆ. ಆದುದರಿಂದ ಯಾರೇ ಆಗಲಿ ಅವರ ಬಟ್ಟೆ ಮೇಲಾಗಲಿ, ಆಭರಣಗಳ ಮೇಲಾಗಲಿ ಯಾವುದರ ಮೇಲಾಗಲಿ ವ್ಯಾಖ್ಯಾನ ಮಾಡಬಾರದು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಆ ಮಾತನ್ನು ಆಡಿದವರು ಗಟ್ಟಿ ಚಂದ್ರಶೇಖರ್‌ರವರು.

ಕುಮಾರಿ ಎಸ್. ಪ್ರಮೀಳ.—ಅವರಿಗೂ ಸಹ ಅದೇ ಉತ್ತರವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಅವರು ನನ್ನನ್ನು ಈರೀತಿಯಾಗಿ ಅನ್ನುವುದಾದರೆ ನಾನೂ ಸಹ ಅವರಿಗೆ ಹೇಳಬಯಸುತ್ತೇನೆ ಅವರೂಕೂಡ ಮಾರ್ಪಾಡ ಮಾಡಿಕೊಂಡು ವಿದೇಶಿಯರ ಡ್ರೆಸ್ ಬಿಟ್ಟು ಇನ್ನು ಮೇಲೆ ಅವರು ಪ್ಯಾಂಟ್ ಹಾಕಿಕೊಳ್ಳುವುದನ್ನು ಬಿಟ್ಟು, ಕ್ರಾಪ್ ಮಾಡಿಕೊಳ್ಳುವುದನ್ನು ಬಿಟ್ಟು ಪಂಚೆ ಧರಿಸಿಕೊಂಡು ಬರಬೇಕು ಯಾವಾಗಲೂ ಇನ್ನೊಬ್ಬರ ಮೇಲೆ ಈ ರೀತಿಯಾಗಿ ಹೇಳುವವರು ಅವರು ಸರಿಯಾಗಿ ನಡೆದುಕೊಂಡಿದ್ದಾರೆಯೋ ಅನ್ನುವುದನ್ನು ನೋಡಿ ಹೇಳಬೇಕು. ಅದು ಬಿಟ್ಟು ಸುಮ್ಮನೆ ಇನ್ನೊಬ್ಬರ ಮೇಲೆ ಹೇಳುವುದಾದರೆ ಅದು ತಪ್ಪಾಗುತ್ತದೆ ಅನ್ನುವುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ, ನಾನು ಇಷ್ಟು ಹೇಳಿ ಮುಂದೆ ಈ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಈಗ ಹಿಂದುಳಿದ ವರ್ಗದವರು ಮತ್ತು ಮುಂದುವರೆದ ವರ್ಗದವರು ಎಂದು ದೇಶದಲ್ಲಿ ಏನು ಇದ್ದಾರೆ ಇವರ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡಬೇಕಾಗಿದೆ. ತಮಗೆ ನೆನಪು ಮಾಡಿಕೊಡುತ್ತೇನೆ, ಈ ದೇಶದಲ್ಲಿ ಹಿಂದುಳಿದ ವರ್ಗದವರನ್ನು ಮೇಲಕ್ಕೆ ತಂದವರು ಯಾರು ಎಂದರೆ ಮುಂದುವರೆದ ವರ್ಗದವರೇ, ಹಿಂದುಳಿದ ವರ್ಗದವರಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಹಿಂದುಳಿದ ವರ್ಗದವರ ಬಗ್ಗೆ ಒಂದು ಆಯೋಗವನ್ನು ನೇಮಕ ಮಾಡಿ ಅವರು ಒಂದು ವರದಿಯನ್ನೂ ಸಹ ಕೊಟ್ಟಿದ್ದಾರೆ. ಮೊದಲು ಇದ್ದುದು ವೀರಶೈವ ಜನಾಂಗದವರು ಈ ದೇಶದಲ್ಲಿ ಒಂದು ಕೋಟಿ ಮೇಲೆ ಇತ್ತು. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ೨$\frac{1}{4}$ ಲಕ್ಷ ಹಿಂದುಳಿದ ವರ್ಗದವರು ೩೦ ಲಕ್ಷ ಇತ್ತು. ಈ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಹಿಂದುಳಿದ ವರ್ಗದವರು ಯಾರು ಮುಂದಕ್ಕೆ ಬಂದಿದ್ದರೋ ಅವರೇನಾದರೂ ಅದೇ ಜನಾಂಗಕ್ಕೆ ಅಂದರೆ ಹಿಂದುಳಿದ ವರ್ಗಕ್ಕೆ ಏನಾದರೂ ಅನುಕೂಲ ಮಾಡಿಕೊಟ್ಟಿದ್ದಾರೆಯೋ ಎಂದು ನಾನು ಪ್ರಶ್ನೆ ಹಾಕುತ್ತೇನೆ. ಹೋಗಲಿ, ಅವರೇನಾದರೂ ಇವರ ಬಗ್ಗೆ ಏನಾದರೂ ಚಿಂತನೆ ಏನಾದರೂ ಮಾಡಿದ್ದಾರೆಯೋ ? ಮುಂದುವರೆದ ವರ್ಗದವರು ಈ ಹಿಂದುಳಿದ ವರ್ಗದವರನ್ನು ಮೇಲಕ್ಕೆ ತರದೇ ಹೋಗಿದ್ದರೆ ಅನಾಹುತವಾಗುತ್ತಿತ್ತು, ಅವರು ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕಾಗಿತ್ತು, ಆದುದರಿಂದ ಯಾರೇ ಆಗಲಿ ಇಂತಹ ಮಾತುಗಳನ್ನಾಡುವುದು ಅಸಗತ್ಯ ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಜನಾಂಗಕ್ಕೆ ಅಂದರೆ ವೀರಶೈವ ಜನಾಂಗಕ್ಕೆ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ೧೯೭೭ ನೇ ಇಸವಿಯಲ್ಲಿ ಹಿಂದುಳಿದ ಆಯೋಗದಲ್ಲಿ ನಮಗೆ ಏನು ಅನ್ಯಾಯವಾಗಿದೆ ಅನ್ನುವುದನ್ನು ಅವರ ಗಮನಕ್ಕೆ ತಂದಾಗ ನಾನು ಈ

ವಿಷಯುವನ್ನು ಕ್ಯಾಬಿನೆಟ್ ಮುಂದೆ ಸರಿಪಡಿಸುತ್ತೇನೆಂದು ಹೇಳಿದರು. ಅಲ್ಲದೆ ಚಿತ್ರದುರ್ಗದಲ್ಲಿ ಭಾಷಣ ಮಾಡಿದಾಗಲೂ ಕೂಡ ಈ ವಿಷಯುವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಹಿಂದುಳಿದ ವರ್ಗದ ಆಯೋಗ ಏನು ಇದೆ ಇದೇನೂ ಬೈಬಲ್ ಅಲ್ಲ, ಕುರಾನ್ ಅಲ್ಲ. ಇದರಲ್ಲಿ ಏನು ಒಂದು ನ್ಯೂನತೆ ಇದೆ ಅನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ, ಅವರು ಈ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಕರ್ನಾಟಕ ದೇಶದಲ್ಲಿ ಘೂರ್ಖಾ ಜನಾಂಗ ಒಂದು ಕಮ್ಯೂನಿಟಿ ಇದೆ. ಈವಾಗಲಂತೂ ಪ್ರತಿಯೊಂದು ಮನೆ ಮನೆಯಲ್ಲೂ ಈ ಘೂರ್ಖಾಗಳು ಇದ್ದಾರೆ. ಈ ಹಿಂದುಳಿದ ವರ್ಗದ ಆಯೋಗದಲ್ಲಿ ಏನು ಬರೆದಿದ್ದಾರೆ ಎಂದರೆ ನಮ್ಮ ಕರ್ನಾಟಕ ದೇಶದಲ್ಲಿ ಈ ಕೇವಲ ೧೧ ಜನ ಮಾತ್ರ ಇದ್ದಾರೆ. ಮತ್ತು ಆ ಬಗ್ಗೆ ೨೫ ಫ್ಯಾಮಿಲಿ ಮಾತ್ರ ಇದೆ ಎಂದು ಬರೆದಿದ್ದಾರೆ. ಹೀಗೆ ಬರೆದಿರುವುದರಿಂದ ನಾನು ಅವರನ್ನು ಕೇಳುತ್ತೇನೆ ಈ ಬಗ್ಗೆ ಅವರು ಸರಿಯಾದ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಬರೆದಿದ್ದಾರೆಯೋ ಎಂದು, ತಮಗೆ ಗೊತ್ತಿರುವ ಹಾಗೆ ಹಾಗೂ ನನಗೆ ಗೊತ್ತಿರುವ ಹಾಗೆ ಹೇಳಬೇಕಾದರೆ ನಮ್ಮ ಬೆಂಗಳೂರು ಒಂದು ಸಿಟಿಯಲ್ಲೇ ಎಷ್ಟು ಜನ ಘೂರ್ಖಾಗಳು ಇದ್ದಾರೆ ಅನ್ನುವ ಅಂಕಿಅಂಶ ತೆಗೆದುಕೊಂಡರೆ ಸಾವಿರಾರು ಸಿಕ್ಕುತ್ತಾರೆ. ನಾನು ಈ ಬಗ್ಗೆ ಹೆಚ್ಚು ಹೇಳುವುದಿಲ್ಲ. ಒಟ್ಟಿನಲ್ಲಿ ಹೇಳುವುದು ಈ ಜನಾಂಗವನ್ನು ಮೇಲಕ್ಕೆ ತರುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂಥು ಹೇಳುತ್ತೇನೆ.

ಇನ್ನು ತಮಗೆಲ್ಲಾ ಗೊತ್ತಿರುವ ಹಾಗೆ ಬಳ್ಳಾರಿ ರಾಯಚೂರು, ಗುಲ್ಬರ್ಗಾ ಮತ್ತು ಬೆಳಗಾಂ ಈ ಭಾಗಗಳಲ್ಲಿ ರೆಡ್ಡಿ ಲಿಂಗಾಯಟ್ಸ್ ಹೆಚ್ಚಾಗಿದ್ದುದನ್ನು ನಾವು ನೋಡಿದ್ದೇವೆ. ಅವರನ್ನು ವಕ್ಕಲಿಗರು ಎಂದು ಗಣಿಸಿ ಅವರ ಪಾಪುಲೇಷನ್ ೪,೧೩,೦೪೧ ಎಂದು ಈ ರಿಪೋರ್ಟಿನಲ್ಲಿ ಕೊಟ್ಟಿದ್ದಾರೆ ಅವರನ್ನೆಲ್ಲಾ ವಕ್ಕಲಿಗ ಜನಾಂಗದವರು ಎಂದು ಸೇರಿಸಿದ್ದುದರಿಂದ ಈವೊತ್ತು ಅವರ ಸಂಖ್ಯೆ ಜಾಸ್ತಿಯಾಗಿದೆ. ಈವೊತ್ತು ನಮ್ಮದೇಶದಲ್ಲಿ ವಕ್ಕಲಿಗರೇ ಜಾಸ್ತಿ ಇದ್ದಾರೆ. ೧೯೭೭ನೇ ಇಸವಿಯಲ್ಲಿ ಇವರು ಮಾಡಿದಂಥಾ ಒಂದು ಆಯೋಗದಿಂದ ವೀರಶೈವ ಜನಾಂಗಕ್ಕೆ ಅನ್ಯಾಯವಾಗಿದೆ. ಮೊದಲು ಒಂದು ಕೋಟಿ ಮೇಲೆ ಇದ್ದುದು ಈ ಒಂದು ಆಯೋಗದಿಂದ ಕೆಳಕ್ಕೆ ಇಳಿದಿರುವುದರಿಂದ ಈಗ ಈ ವೀರಶೈವ ಜನಾಂಗದ ಮಕ್ಕಳಿಗೆ ಕಾಲೇಜಿಗೆ ಹೋದರೆ ಅಡ್ಮಿಷನ್ ಇಲ್ಲ ಇನ್ನೂ ಬೇರೆ ಯಾದ ರೀತಿಯಲ್ಲಿ ಅನಾನುಕೂಲವಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನೀವು ಈಗಲೂ ಕೂಡ ೫ ಪರ್ಸೆಂಟ್ ಮುಂದಿದ್ದೀರಿ, ದೇವರು ನಿಮಗೆ ಆ ಒಂದು ಶಕ್ತಿ ಕೊಟ್ಟಿದ್ದಾನೆ, ಮತ್ತೇನಾದರೂ ತಾವು ಹೀಗೆ ಹೇಳಿದರೆ ಇರುವ ಶಕ್ತಿಯನ್ನೂ ಕಳೆದುಕೊಳ್ಳುತ್ತೀರಿ ಅಷ್ಟೆ.

ಕುಮಾರಿ ಎಸ್. ಪ್ರಮೀಳ.—ಈ ಜನಾಂಗದ ರೂರಲ್ ಪಾಪ್ಯುಲೇಷನ್ ತೆಗೆದುಕೊಂಡರೆ ೬೬.೫ ಪರ್ಸೆಂಟ್ ಆಗುತ್ತದೆ. ಈ ಒಂದು ಜನಾಂಗಕ್ಕೆ ಬಹಳ ಅನ್ಯಾಯವಾಗಿರುವುದರಿಂದ ಅದನ್ನು ಸರಿಪಡಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ೧೯೪೧ ನೇ ಇಸವಿಯಲ್ಲಿರತಕಂಥಾ ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಂಡು ನೋಡಿದರೆ ೨ ಪರ್ಸೆಂಟ್ ಹೆಚ್ಚು ಮಾಡಿಕೊಂಡು ಬಂದಿದ್ದಾರೆ. ಅದೇ ೧೯೭೨ನೇ ಇಸವಿಯಲ್ಲಿ ಒಟ್ಟು ೪೨ ಲಕ್ಷ ೯೨ ಸಾವಿರ ಆಗುತ್ತದೆ. ನಮ್ಮ ಬೆಂಗಳೂರು ಒಂದರಲ್ಲೇ ತೆಗೆದುಕೊಂಡರೆ ವಕ್ಕಲಿಗರು ೩ ಲಕ್ಷ ಇದ್ದುದು ೯ ಲಕ್ಷ ಆಗಿದ್ದಾರೆ. ೧೯೭೧ ನೇ ಇಸವಿಯಲ್ಲಿ ವಕ್ಕಲಿಗರು ೩ ಲಕ್ಷ ಇದ್ದುದು ೯ ಲಕ್ಷ ಆಗಿದ್ದಾರೆ. ಲಿಂಗಾಯಿತರು ೪೪ ಸಾವಿರ ಇದ್ದುದು ೧ ಲಕ್ಷ ೫೬ ಸಾವಿರಆಗಿದ್ದಾರೆ, ಇದು ಸರಿಯಾದ ರಿಪೋರ್ಟ್ ಅಂತ ತಾವು ಒಪ್ಪುತ್ತೀರಾ ? ಈ ಒಂದು ವಕ್ಕಲಿಗರ ಜನಾಂಗ ೩ ಲಕ್ಷ ಇದ್ದುದು ೯ ಲಕ್ಷ ಆಗಿದ್ದಾರಲ್ಲಾ ? ಇದು ಯಾವ ರಿಪೋರ್ಟ್? ಇದೇ ವೀರಶೈವ ಜನಾಂಗ ೧೯೭೧ನೇ ಇಸವಿಯ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ೪೪ ಸಾವಿರ ಇದ್ದುದು ೧ ಲಕ್ಷ ೫೬ ಸಾವಿರ ಆಗಿದೆ, ಇದು ಎಂತಹ ಸ್ಟ್ಯಾಟಿಸ್ಟಿಕ್ಸ್ ಎಂದು ನಾನು ಕೇಳುತ್ತೇನೆ.

ಮಾನ್ಯ ಬಸವಲಿಂಗಪ್ಪನವರು ಇಲ್ಲಿದ್ದಾರೆ – ಅವರ ಹೆಸರಿನಂತೆ, ಸ್ಟ್ಯಾಟಿಸ್ಟಿಕ್ಸ್‌ನಲ್ಲಿ ಬಸಪ್ಪ, ಶಿವಪ್ಪ ಎನ್ನುವವರು ಇದ್ದರೆ ಅವರೆಲ್ಲರೂ ಕೂಡ ವೀರಶೈವರೇ, ಈ ಆಧಾರವನ್ನು ಇಟ್ಟುಕೊಂಡು ವರದಿಯಲ್ಲಿ ಹೇಳಿದ್ದಾರೆ. ಅವರು ಹೇಳಿದ ರೀತಿಯಲ್ಲಿ ತಾವೆಲ್ಲರೂ ನಮ್ಮಲ್ಲಿಗೆ ಬಂದರೆ ನಾವು ಕರೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಬಸವಣ್ಣನವರು ಹೇಳಿದ ಮಾತು ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ನಾನು ಯಾರನ್ನೂ ಬ್ಯಾಕವರ್ಡ್ ಎಂದು ಹೇಳಿಲ್ಲ. ಯಾವ ಆಧಾರದ ಮೇಲೂ ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡಿಲ್ಲ. ತಾವು ಹೇಳುವ ರೀತಿಯಲ್ಲಿ ನಾನು ಸಭೆಯ ಮುಂದೆ ಹೇಳಿಲ್ಲ. ನಾನು ಯಾವತ್ತೂ ಯಾರ ಹೆಸರನ್ನು ತೆಗೆದುಕೊಂಡೂ ಸಹ ಇಲ್ಲಿ ಮಾತನಾಡಿಲ್ಲ.

ಶ್ರೀಮತಿ ಎಸ್. ಪ್ರಮೀಳ.—ಹಾವನೂರ್ ಅವರ ವರದಿಯಲ್ಲಿ ಹೆಸರುಗಳನ್ನು ಆಧಾರವಾಗಿಟ್ಟು ಕೊಂಡು ಜಾತಿಯನ್ನು ಹೇಳಿದ್ದಾರೆ. ಇದು ಯಾವ ನ್ಯಾಯ? ನಾನು ತಮ್ಮ ಹೆಸರನ್ನು ಏಕೆ ಹೇಳಿದೆ ಎಂದರೆ, ವರದಿಯಲ್ಲಿ ತಮ್ಮ ಹೆಸರಿನವರು ಇದ್ದರೂ ಅವರು ಲಿಂಗಾಯಿತರು ಎಂದು ಬರೆದಿದ್ದಾರೆ. ಇವತ್ತು ತಾವು ಸ್ಟ್ಯಾಟಿಸ್ಟಿಕ್ಸ್ ತೆಗೆದುಕೊಂಡು ನೋಡಿದರೆ, ೮೨ನೇ ಇಸವಿಯುವರೆಗೆ, ಒಂದು ಕೋಟಿ ಗಿಂತಲೂ ಹೆಚ್ಚಾಗಿರತಕ್ಕ ಈ ಜನಾಂಗದವರಿಗೆ ಎಲ್ಲಿಯೂ ಕೂಡ ಕೆಲಸ ಸಿಗುತ್ತಿಲ್ಲ, ಇವರಲ್ಲಿ ಬಡವರು ಇಲ್ಲವೇ? ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇದನ್ನು ತಾವು ಸರಿಪಡಿಸಬೇಕಾದರೆ ಯಾವುದೇ ತರಹದ ಹೆಸರಿನ ಆಧಾರವನ್ನು ತಾವು ತೆಗೆದುಕೊಳ್ಳಬಾರದು. ಸರಿಯಾದ ರೀತಿಯಲ್ಲಿ ಈ ತಪ್ಪನ್ನು ಸರಿಪಡಿಸತಕ್ಕದ್ದು ತಮ್ಮ ಕರ್ತವ್ಯ ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಜಿ. ಕೆ. ತಕ್ಕೇದ್.—ಮಾನ್ಯ ಸದಸ್ಯಣಿಯವರು ಸಭೆಗೆ ತಪ್ಪು ಮಾಹಿತಿಯನ್ನು ಕೊಡು ತ್ತಿದ್ದಾರೆ. ಅವರು ಹೇಳುತ್ತಿರುವ ಮಾಹಿತಿ ಯಾವ ಆಧಾರದ ಮೇಲೆ ಎಂದು ಹೇಳಬೇಕು?

ಶ್ರೀಮತಿ ಎಸ್. ಪ್ರಮೀಳ.—ಎಸ್. ಆರ್. ಕಮಿಷನ್ ಪ್ರಕಾರ ಈ ಜನಾಂಗದ ಜನಸಂಖ್ಯೆ ಎಷ್ಟು ಇತ್ತು, ಅದು ರಾಜ್ಯದ ಜನಸಂಖ್ಯೆಯ ಇಪ್ಪತ್ತು ಪರ್ಸೆಂಟಿಗಿಂತ ಹೆಚ್ಚು ಇತ್ತು, ೧೯೫೭ರಲ್ಲಿಯ ಆಧಾರವನ್ನು ನಾವು ತೆಗೆದುಕೊಂಡರೆ, ಪ್ರತಿವರ್ಷಕ್ಕೂ ಎರಡು ಪರ್ಸೆಂಟ್ ಹೆಚ್ಚು ಲೆಕ್ಕ ಹಾಕಿದರೆ ಈ ಜನಾಂಗದ ಜನಸಂಖ್ಯೆ ಒಂದು ಕೋಟಿಗಿಂತಲೂ ಹೆಚ್ಚಾಗುತ್ತದೆ. ಇದನ್ನು ನಾವು ಸರಿಯಾಗಿ ವಿಶ್ಲೇಷಣೆ ಮಾಡಿದರೆ ತಮಗೆ ಗೊತ್ತಾಗುತ್ತದೆ. ೧೯೬೧ನೇ ಇಸವಿಯ ಸೆನ್ಸಸ್ ಪ್ರಕಾರ ವೀರಶೈವರು ಎಷ್ಟು ಇದ್ದಾರೆ ಎಂದು ಅಂಕಿಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕದಲ್ಲಿ ಸರಿಯಾಗಿ ಜಾತಿಯ ಬಗ್ಗೆ ವಿಶ್ಲೇಷಣೆ ಮಾಡಿಲ್ಲ? ಹಾವನೂರ್ ಅವರು ಹಳೆಯ ಮೈಸೂರು ಏರಿಯಾದಲ್ಲಿದ್ದಂಥ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಅದನ್ನೇ ಆಧಾರ ವಾಗಿಟುಕೊಂಡು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆದಕಾರಣ ನಾನು ತಮ್ಮಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ, ಈ ವರದಿಯಿಂದಾಗಿರತಕ್ಕ ಅನ್ಯಾಯವನ್ನು ಸರಿಪಡಿಸತಕ್ಕ ಒಂದು ಯೋಜನೆ ಯನ್ನು ತಾವು ಹಾಕಿಕೊಳ್ಳಬೇಕು. ರಿಪೋರ್ಟನ್ನು ಕೊಡತಕ್ಕ ಸಂದರ್ಭದಲ್ಲಿ ಇವರಿಗೆ ಕೊಟ್ಟ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ತಾವು ಸ್ವಲ್ಪ ಗಮನಿಸಬೇಕು. ರಾಜ್ಯದಲ್ಲಿ ಯಾವ ಜನಾಂಗ ಹಿಂದುಳಿದಿದೆಯೆಂದಲ್ಲ ಹಿಂದುಳಿದ ಜನರು ರಾಜ್ಯದಲ್ಲಿ ಎಷ್ಟು ಜನರಿದ್ದಾರೆಂದರೆ ತಿಳಿದು ವರದಿ ಕೊಡಲು ತಿಳಿಸಿದ್ದಾರೆ.

ಶ್ರೀ ಎ. ಲಕ್ಷ್ಮಿಸಾಗರ್,—ಈ ವಿಷಯ ಸುಪ್ರೀಂ ಕೋರ್ಟಿನಲ್ಲಿದೆ, ಎಂದು ಮಾತ್ರ ನಾನು ಮಾನ್ಯ ಸದಸ್ಯಣಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀಮತಿ ಎಸ್. ಪ್ರಮೀಳ.—ತಾವು ಅದು ಸುಪ್ರೀಂ ಕೋರ್ಟಿನಲ್ಲಿದೆಯೆಂದು ಹೇಳಬಹುದು, ಆದರೆ ಒಂದು ಜನಾಂಗವನ್ನು ಕೆಳಕ್ಕೆ ತಳ್ಳಬೇಕು ಎಂದರೆ ಅದನ್ನು ನಾವು ಸ್ವಲ್ಪ ಯೋಚನೆ ಮಾಡ ಬೇಕಾಗುತ್ತದೆ. ಅಲ್ಲಿ ಬರತಕ್ಕ ವಿಷಯವೇ ಬೇರೆ ಇಲ್ಲಿ ನಾನು ಹೇಳುವ ವಿಷಯವೇ ಬೇರೆ. ಅಲ್ಲಿ ಚಾಲೆಂಜ್ ಮಾಡಿರುವುದು ಸರ್ಕಾರದ ಆಜ್ಞೆಯನ್ನು ಮಾತ್ರ, ಬೇರೆನೂ ಅಲ್ಲ. ಮಾನ್ಯ ಹಾವನೂರ್ ಅವರಿಗೆ ಕೊಟ್ಟ ವಿಷಯ ಬೇರೆ ಆದರೆ ಅವರು ವರದಿಯಲ್ಲಿ ಮಾಡಿದ ವರದಿಯೇ ಬೇರೆ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಯನ್ನು ಯಾವ ರೀತಿಯಾಗಿ ತಂದರು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಯಾರು ಹಿಂದುಳಿದ ವರ್ಗದವರು ಇದ್ದಾರೆ ಆ ಜನಾಂಗವನ್ನು ಗುರುತಿಸಿ ಅಂಥವರನ್ನು ಸರ್ಕಾರದ ಸೌಲಭ್ಯ ಪಡೆಯುವುದಕ್ಕೆ ಅರ್ಹರನ್ನಾಗಿ ಮಾಡುವುದು ಇವರ ಕೆಲಸ, ಇಂಥವರನ್ನು ಎಸ್‌ಸಿ ಎಂದು ಮಾಡಬೇಕು, ಇಂಥವರನ್ನು ಎಸ್‌ಟಿ ಎಂದು ಮಾಡಬೇಕು ಎಂದು ಸರ್ಕಾರದವರು ಇವರಿಗೆ ಹೇಳಿರಲಿಲ್ಲ. ಇವರು ರಾಜ್ಯಾಂಗದ ವಿರುದ್ಧವಾಗಿ ತಮ್ಮ ವರದಿ ಯನ್ನು ಕೊಟ್ಟಿದ್ದಾರೆ. ಅಲ್ಲದೆ ಇವರು ಇವರಿಗೆ ಕೊಟ್ಟಂಥ ಟರ್ಮ್ಸ್ ಆಫ್ ರೆಫರೆನ್ಸ್ ವಿರುದ್ಧ ಕೆಲಸ ಮಾಡಿ ಒಂದು ಜನಾಂಗವನ್ನು ಕೆಳಕ್ಕೆ ತಳ್ಳಬೇಕು ಎಂದು ವರದಿ ಕೊಟ್ಟು ಅದರಂತೆ ೧೯೭೭ನೇ ಇಸವಿ

ಯಿಂದ ಈ ಜನಾಂಗಕ್ಕೆ ಯಾವ ಅನುಕೂಲಗಳು ದೊರೆಯಬೇಕಾಗಿತ್ತೋ ಅವುಗಳು ಸಿಕ್ಕದೆ ತೊಂದರೆಗೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ಅನೇಕ ಜನ ಹೆಣ್ಣುಮಕ್ಕಳಿಗೆ ಇವತ್ತು ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಕೆಲಸಗಳು ದೊರೆಯುತ್ತಿಲ್ಲ. ಯಾವುದೇ ರೀತಿಯ ಕೆಲಸಗಳು ಈ ಜನಾಂಗಕ್ಕೆ ಸಿಕ್ಕದೆ, ಇರುವುದು ಸರ್ವರಿಗೂ ತಿಳಿದ ವಿಷಯವಾಗಿದೆ. ಆದ್ದರಿಂದ ಸರ್ಕಾರದವರು ಎಲ್ಲರಿಗೂ ಸರಿಸಮನಾದ ಅವಕಾಶ ಸಿಕ್ಕುವಂತೆ ತಮ್ಮ ತೀರ್ಮಾನವನ್ನು ಕೊಡತಕ್ಕದ್ದು ಮತ್ತು ಈ ಜನಾಂಗದವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸತಕ್ಕ ಒಂದು ಆಜ್ಞೆಯನ್ನು ಕೂಡಲೇ ಹೊರಡಿಸಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ಕನ್ನಡ ಮತ್ತು ಕಲ್ಚರ್-ಇದರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು-ಇದರ ಬಗ್ಗೆ ಬಹಳ ವ್ಯಾಖ್ಯಾನಗಳು ಆಗಿವೆ. ಇವತ್ತು ರಾಜ್ಯದಲ್ಲಿ ಒಂದು ಸಂಸ್ಥೆಯ ಬಗ್ಗೆ ಪೇಪರ್‌ನಲ್ಲಿ ಹೇಳಿಕೆಗಳು ಬಂದಿರುವುದನ್ನು ನೋಡಿದರೆ ಇದರಷ್ಟು ಹೇಳಿಕೆಗಳು ಬೇರೆಯಾವುದೂ ಬಂದಿಲ್ಲ. ಇದು ಒಂದು ವರ್ಷದ ಹಿಂದೆ ಹುಟ್ಟಿದಂಥ ಒಂದು ವಿಪರ್ಯಾಸ, ಅದು ಇಲ್ಲಿಯವರೆಗೂ ಕೊನೆ ಗೊಂಡಿಲ್ಲ. ಪರಿಷತ್ತಿಗೆ ನಾವು ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಇಲ್ಲಿ ಒಬ್ಬ ಅಧ್ಯಕ್ಷರು ಸುಮಾರು ೮೦ ಸಾವಿರ ರೂಪಾಯಿಗಳನ್ನು ತಮ್ಮ ಪ್ರವಾಸ ಭತ್ಯವಾಗಿ ತೆಗೆದುಕೊಂಡಿದ್ದಾರೆ, ನಮ್ಮ ಸರ್ಕಾರದಲ್ಲಿಯೂ ನಮ್ಮ ಮಂತ್ರಿವರ್ಯರು ಇಷ್ಟೊಂದು ಹಣವನ್ನು ಪ್ರವಾಸ ಭತ್ಯವಾಗಿ ತೆಗೆದುಕೊಂಡಿರಲಿಕ್ಕಿಲ್ಲ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ, ಇದಲ್ಲದೆ ಇವರು 'ಮಕ್ಕಳ ಮೇಳ'ವನ್ನು ಪರಿಷತ್ತಿನ ಆಶ್ರಯದಲ್ಲಿ ಮಾಡಲಾಯಿತು. ಇದಕ್ಕೆ ಸರ್ಕಾರದವರು ದುಡ್ಡು ಕೊಟ್ಟಿದ್ದಾರೆ. ಇದನ್ನು ೧೯೭೭ನೇ ಇಸವಿಯಲ್ಲಿ ಮಾಡಿದಾಗ ಇಡೀ ರಾಜ್ಯದ ಜಿಲ್ಲೆಯ ಮಕ್ಕಳನ್ನು ಅರ್ಧ ಚಾರ್ಜಿನಲ್ಲಿ ಬೆಂಗಳೂರಿಗೆ ಕರೆದುಕೊಂಡು ಬರುವುದು ಒಂದು ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮಕ್ಕೆ ಭಾಗವಹಿಸುವ ಮಕ್ಕಳಿಗೆ ಪ್ರಯಾಣದ ಅರ್ಧ ಖರ್ಚನ್ನು ಕೊಡಬೇಕಾಗಿತ್ತು. ಎಲ್ಲಾ ಜಿಲ್ಲೆಯ ಮಕ್ಕಳಿಗೆ ಅರ್ಧ ಪ್ರಯಾಣದ ಖರ್ಚನ್ನು ಕೊಟ್ಟು, ಮಂಡ್ಯಾ ಜಿಲ್ಲೆಯ ಶ್ರೀಮಾನ್ ಧರಣೇಂದ್ರಯ್ಯನವರ ಮಕ್ಕಳನ್ನು ಕರೆದುಕೊಂಡು ಬಂದಿದ್ದಕ್ಕೆ ಅವರು ಒಂದೇ ಜಾತಿಯವರಾದ್ದರಿಂದ ಅವರಿಗೆ ಪೂರಾ ಚಾರ್ಜನ್ನು ಕೊಡತಕ್ಕ ವ್ಯವಸ್ಥೆಯಾಗಿದೆ. ಇದರ ಬಗ್ಗೆ ತಾವು ಗಮನಹರಿಸಬೇಕು. ಇಲ್ಲಿ ಹಣ ಯಾವ ರೀತಿಯಲ್ಲಿ ಉಪಯೋಗವಾಗುತ್ತಿದೆ, ಎಂದು ತಾವು ಏನಾದರೂ ಯೋಚನೆ ಮಾಡಿದ್ದೀರಾ ಎಂದು ನಾನು ತಮ್ಮನ್ನು ಕೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಸಾಹಿತ್ಯ ಪರಿಷತ್ತಿನ ಜನರಲ್ ಬಾಡಿ ಮೀಟಿಂಗ್ ೧೯೮೦ರಲ್ಲಿ ಆಯಿತು. ಜನರಲ್ ಬಾಡಿ ಮೀಟಿಂಗ್‌ನಲ್ಲಿ ಒಂದು ರೆಸಲ್ಯೂಷನ್‌ನ್ನು ಪಾಸ್ ಮಾಡಿದರು. ಅದೇನೆಂದರೆ, ೪೫ನೇ ವಾರ್ಷಿಕ ವರದಿಯಲ್ಲಿ ತಿಳಿಸಿದಂತೆ ೧೯೮೦ನೇ ವರ್ಷದ ಲೆಕ್ಕಪತ್ರಗಳು ಲೆಕ್ಕ ಪರಿಶೋಧನೆಯಾಗಬೇಕು ಇದಕ್ಕೆ ಅನೇಕ ವರ್ಷಗಳಿಂದ ಲೆಕ್ಕ ಪರಿಶೋಧಕವಾಗಿರುವ ಶ್ರೀ ರಾಮಕೃಷ್ಣಯ್ಯ ಅಂಡ್ ಕಂಪನಿ ಇವರಿಗೆ ಬದಲಾಗಿ ಪಿ. ಎಸ್. ಸುಬ್ಬರಾವ್ ಸೂಚಿಸಿದ ವಾಸುದೇವ್ ಅಂಡ್ ಕಂಪನಿ ಅವರು ಲೆಕ್ಕ ಪರಿಶೋಧಕರಾಗಿರತಕ್ಕದ್ದು ಎಂಬುದನ್ನು ಟಿ. ಆರ್. ಅಚ್ಯುತರಾವ್ ಅವರು ಅನುಮೋದಿಸಿದ ಮೇಲೆ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಇದರಂತೆ ವಾಸುದೇವ ಅಂಡ್ ಕಂಪನಿ ಇವರನ್ನು ಪರತ್ತಿನ ಆಡಿಟರ್ ಎಂದು ನೇಮಕ ಮಾಡಿದರು ಮುಂದೆ ಏನು ಮಾಡಿದರು ಎಂದರೆ ಹಿಂದಿನ ಬಹಿರಂಗ ಅಧಿವೇಶನದ ಸೂಚನೆಯ ಪ್ರಕಾರ ಲೆಕ್ಕ ಪರಿಶೋಧಕರ ನೇಮಕವನ್ನು ಪರಿಷತ್ತಿನ ಕಾರ್ಯಕಾರಿ ಸಮಿತಿಯವರಿಗೆ ಒಪ್ಪಿಸಿದ್ದು ಸಮಿತಿ 'ಬಿ. ಆರ್. ವಾಸುದೇವಮೂರ್ತಿ ಅಂಡ್ ಕೋ ಅವರನ್ನು ಲೆಕ್ಕ ಪರಿಶೋಧಕರನ್ನಾಗಿ ನೇಮಿಸಿತು, ಎಂದು ಹೇಳಿದ್ದಾರೆ. ಇದನ್ನು ತಾವು ನೋಡಿದರೆ ಆಶ್ಚರ್ಯವಾಗಬಹುದು. ಜನರಲ್ ಬಾಡಿಯಲ್ಲಿ ಅಪಾಯಿಂಟ್ ಆದ ಆಡಿಟರ್ ಅವರೇ ಬೇರೆ, ಇವರು ಅಪಾಯಿಂಟ್‌ಮೆಂಟ್ ಮಾಡಿಕೊಂಡ ಆಡಿಟರ್ ಅವರೇ ಬೇರೆ. ಇಲ್ಲಿರತಕ್ಕ ಟ್ರಷರರ್ ಮತ್ತು ಅಧ್ಯಕ್ಷರು ಒಂದೇ ಕೋಮಿನವರು ಶ್ರೀ ಬಿ. ಆರ್. ವಾಸುದೇವಮೂರ್ತಿಯವರು ಇವರ ಸ್ನೇಹಿತರು. ಜನರಲ್ ಬಾಡಿಯ ವಿರುದ್ಧ ಇವರನ್ನು ಅಧ್ಯಕ್ಷರು ಮತ್ತು ಟ್ರಷರರ್ ಸೇರಿಕೊಂಡು ಆಡಿಟರ್ಸ್ ಎಂದು ನೇಮಕ ಮಾಡಿದರು. ಇದಲ್ಲದೆ ಇವರು ಜೊತೆಯಲ್ಲಿ ಸೇರಿಕೊಂಡು ಲಕ್ಷಾಂತರ ರೂಪಾಯಿಗಳ ಹಣವನ್ನು ಸಂಗ್ರಹಣೆ ಮಾಡಿದ್ದಾರೆ, ಮತ್ತು ಮಾಡಿದಂಥ ಹಣ ಪೋಲಾಗಿದೆ. ಇವರು ಮಾಡಿರುವಂಥ ಕೆಲಸದ ಬಗ್ಗೆ ನಾನು ಹೆಸರು ಮತ್ತು ಚೆಕ್ ನಂಬರ್‌ಗಳನ್ನು ಬೇಕಾದರೆ ಕೊಡುತ್ತೇನೆ. ಸಾಹಿತ್ಯ ಪರಿಷತ್ತಿಗೆ ಮೆಂಬರ್ ಷಿಪ್ ಮಾಡುವಾಗ ಪರಿಷತ್ತಿನ ಅಧ್ಯಕ್ಷರು ೫೫ ಸಾವಿರ ರೂಪಾಯಿಗಳ ಡಿ.ಡಿ. ಅದರ ನಂಬರ್ ೨೭೬೮, ಮತ್ತೆ ೨೫ ಸಾವಿರ ರೂಪಾಯಿ

ಗಳ ಇನ್ನೊಂದು ಡ್ರಾಫ್ಟ್ ಇದೇ ದಿವಸ ಇನ್ನೊಂದು ಆರು ಸಾವಿರ ರೂಪಾಯಿಗಳ ಡ್ರಾಫ್ಟ್, ೪೪ ಸಾವಿರ ರೂಪಾಯಿಗಳ ಇನ್ನೊಂದು ಡ್ರಾಫ್ಟ್, ೧೧,೧೦೦. ಒಂದು ಲಕ್ಷ ರೂಪಾಯಿಗಳ ಇನ್ನೊಂದು ಡ್ರಾಫ್ಟ್ ೧,೩೩,೨೦೦ ರೂಪಾಯಿಗಳ ಒಟ್ಟು ಹಣವನ್ನು ಷರತ್ತಿನ ಅಧ್ಯಕ್ಷರು ತಮ್ಮ ಹೆಸರಿನಲ್ಲಿ ತೆಗೆದು ಕೊಂಡಿದ್ದಾರೆ. ಇದರಿಂದ ೧೩,೩೨೦ ಜನರನ್ನು ಪರಿಷತ್ತಿಗೆ ಸದಸ್ಯರನ್ನಾಗಿ ನೋಂದಾಯಿಸಿದ್ದಾರೆ, ಈ ರೀತಿಯಾಗಿ ಸದಸ್ಯರನ್ನು ಪಡೆದುಕೊಂಡು ಚುನಾವಣೆಯಲ್ಲಿ ತಾವೇ ಗೆದ್ದಿದ್ದೇವೆಂದು ಹೇಳಿಕೊಂಡಿ ದ್ದಾರೆ. ಆದ್ದರಿಂದ ಸರ್ಕಾರದವರು ಪರಿಷತ್ತಿನ ಹಣ ಯಾವ ರೀತಿಯಲ್ಲಿ ದುರುಪಯೋಗವಾಗಿದೆ ಎನ್ನುವುದನ್ನು ಕಂಡುಹಿಡಿದು ಸಭೆಗೆ ವಿವರವನ್ನು ಕೊಡಬೇಕಾಗುತ್ತದೆಂದು ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ಇದಕ್ಕಿಂತ ಹೆಚ್ಚಾಗಿ ಇವರು ಚುನಾವಣೆ ಆದನಂತರ ಚುನಾವಣೆಗೆ ಯಾರು ಯಾರು ನಿಂತಿದ್ದಾರೆಂದು ಕೇಳಿಕೊಂಡು ಪೋಸ್ಟಲ್ ಬ್ಯಾಲೆಟ್ ಪೇಪರನ್ನು ಡಿಸ್ಪ್ಯಾಚ್ ಮಾಡಿಕೊಂಡಿದ್ದಾರೆ. ಈ ಕೆಲಸವನ್ನು ಅಂದು ೭ ಗಂಟೆಯಾದ ನಂತರ ಮಾಡಿದ್ದಾರೆ. ಕೋಟಿ ಸದಸ್ಯರಿಂದ ಓಟು ತಮ್ಮ ಪ್ರತಿಸ್ಪರ್ಧಿಗೆ ಹೆಚ್ಚು ಮತ ಬಂದಿದೆಯೆಂದು ಹೇಳಿ ಡಿಕ್ಲರೇಷನ್ ಕೊಡಿಸಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡುತ್ತಾ ಮಾನ್ಯ ಜವರೇಗೌಡರು ೧೬ ಸಾವಿರ ಮತಗಳನ್ನು ಪಡೆದಿದ್ದಾರೆ, ಹಂಪ ನಾಗರಾಜಯ್ಯನವರು ೨೨ ಸಾವಿರ ಮತಗಳನ್ನು ಪಡೆದಿದ್ದಾರೆಂದು ಹೇಳಿದ್ದಾರೆ. ಕೋಟಿ ಮತಪತ್ರಗಳು ಮಾನ್ಯ ಜವರೇಗೌಡ ಅವರಿಗೆ ಬಿದ್ದಿದೆಯೆಂದು ಚುನಾವಣೆಯ ಅಧಿಕಾರಿ ಯೊಂದಿಗೆ ಷಾಮೀಲಾಗಿ ಹೇಳಿಕೆಯನ್ನು ಕೊಡಿಸಿದ್ದಾರೆ. ಜನರಿಗೆ ವಂಚನೆ ಮಾಡಿ ಮತ ತೆಗೆದು ಕೊಂಡು ಚುನಾವಣೆಯಲ್ಲಿ ಗೆದ್ದಿದ್ದೇನೆಂದು ಹೇಳಿಕೊಂಡಿದ್ದಾರೆ. ಇದರ ಬಗ್ಗೆ ಸೂಕ್ತ ಎನ್‌ಕ್ವಯರಿ ಆಗಬೇಕು, ಈ ಸಂಸ್ಥೆಯು ಸೊಸೈಟಿಯ ರಿಜಿಸ್ಟ್ರೇಷನ್ ಆಕ್ಟ್ ಕೆಳಗೆ ರಿಜಿಸ್ಟರ್ ಆಗಿರುವುದರಿಂದ ಇದರ ಬಗ್ಗೆ ಎನ್‌ಕ್ವೈಯರಿ ಮಾಡುವುದಕ್ಕೆ ತಮಗೆ ಅಧಿಕಾರವಿದೆ.

೧೦-೩೦ ಪಿ.ಎಂ

ಆ ಪರಿಷತ್ತು ಸಹ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರವಾಗಿ ನೋಂದಣಿ ಆಗಿರತಕ್ಕಂಥ ಸಂದರ್ಭದಲ್ಲಿ ಅಲ್ಲಿ ಆಗಿರತಕ್ಕಂಥ ಅಕ್ರಮಗಳನ್ನು ಬೆಳಕಿಗೆ ತರುವಂತೆ ಕಾನೂನು ಮಾಡುವುದಕ್ಕೆ ಅವ ಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತು ಇರತಕ್ಕಂಥದ್ದು ನನ್ನ ಕ್ಷೇತ್ರ ದಲ್ಲಿ. ಆಗಿರತಕ್ಕಂಥಾ ಅನ್ಯಾಯ ನನ್ನ ಕ್ಷೇತ್ರದಲ್ಲಿ ಇನ್ನು ಮುಂದೆ ಇಂತಹ ಅನ್ಯಾಯಗಳನ್ನು ಸಹಿ ಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಾರ್ವಜನಿಕರು ಯಾರೂ ಅವರನ್ನು ಅಧ್ಯಕ್ಷರು ಎಂದು ಒಪ್ಪಿಕೊಳ್ಳು ವುದಕ್ಕೆ ತಯಾರು ಇಲ್ಲ. ಆ ಅಧ್ಯಕ್ಷರು ನಮಗೆ ಬೇಕಾಗಿಲ್ಲ. ಅಲ್ಲಿಗೆ ಮೋಸದಿಂದ ಬಂದು ಜನಗಳಿಗೆ ಮೋಸ ಮಾಡತಕ್ಕಂಥ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತಿಗೆ ಗೌರವವನ್ನು ತರತಕ್ಕಂಥಾವರು ಅಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಸೂಕ್ತವಾಗಿ ಗಮನಹರಿಸಿ ತಕ್ಷಣ ಅಡ್ಮಿನಿ ಸ್ಟ್ರೇಟರನ್ನು ನೇಮಕ ಮಾಡಿ ಈ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳು ತ್ತೇನೆ. ಈ ಕೆಲಸವನ್ನು ಅವರು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ ಮತ್ತೊಂದು ವಿಚಾರ ಇದೆ. ನಮ್ಮ ರಾಜ್ಯದಲ್ಲಿ ಲಲಿತಕಲಾ ಆಕಾಡೆಮಿ ಇದೆ. ಅದರ ಅಧ್ಯಕ್ಷರಾಗಿದ್ದ ಶ್ರೀ ಹೆಬ್ಬಾರ್ ರವರು ಡೆಲ್ಲಿಗೆ ಹೋದರು. ಈಗ ಅವರ ಸ್ಥಾನಕ್ಕೆ ಬೇರೆಯವರನ್ನು ತಂದಿದ್ದಾರೆ. ಈ ಲಲಿತಕಲಾ ಅಕಾಡೆಮಿಯು ಮುಖಾಂತರ ೧೫ ಜನ ಹುಡುಗರನ್ನು ಶಾಂತಿನಿಕೇತನ ಮುಂತಾದ ಕಡೆಗಳಿಗೆ ಕಳಿಸುತ್ತಿ ದ್ದಾರೆ. ಹೋದಸಲ ಆಗಿರತಕ್ಕಂಥ ಲಲಿತಕಲಾ ಅಕಾಡೆಮಿಯವರು ಯಾರು ಮೆರಿಟ್‌ನಲ್ಲಿ ಇದ್ದರೋ ಅವರನ್ನು ಕಳಿಸದೇ ತಮಗೆ ಬೇಕಾದಂತಹವರನ್ನು ಕಳಿಸಿದಂತಹ ಸಂದರ್ಭದಲ್ಲಿ ಅಲ್ಲಿ ಶಾಂತಿನಿಕೇತನದಲ್ಲಿ ಆ ಹುಡುಗರನ್ನು ನಿಮಗೆ ಯೋಗ್ಯತೆ ಇಲ್ಲವೆಂದು ಹೇಳಿ ಅವರನ್ನು ವಾಪಸ್ಸು ಕಳಿಸಿದ್ದಾರೆ. ಇದು ಬಹಳ ದುರಾದೃಷ್ಟಕರವಾದ ವಿಷಯ. ಈ ಸ್ಕೀಮ್‌ನಲ್ಲಿ ಈಗ ಏನು ಮಾಡಿದ್ದಾರೆಂದರೆ ಈಗ ಯಾರನ್ನು ಕಳಿಸುವುದು ಬೇಡ ಎಂದು ತೀರ್ಮಾನ ಮಾಡಿದ್ದಾರೆ. ಅವರು ಈ ಸ್ಕೀಮ್ ಬೇಡ ಎಂದು ಹೇಳಿದ್ದಾರೆ. ನಾನು ಈ ವಿಚಾರದಲ್ಲಿ ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತಿದ್ದೇನೆ; ನಮ್ಮ ಕರ್ನಾಟಕದ ಮಕ್ಕಳಿಗೆ ಇದರಲ್ಲಿ ಅನ್ಯಾಯವಾಗಬಾರದು. ಅವರಿಗೆ ನಮ್ಮ ಕಲೆ, ಸಂಸ್ಕೃತಿಯ ಬಗ್ಗೆ ಆಳವಾದ ಜ್ಞಾನವನ್ನು ಕೊಡುವ ಅಗತ್ಯವಿದೆ. ಆದ್ದರಿಂದ ಅವರನ್ನು ಅಲ್ಲಿಗೆ ಕಳಿಸುವಂತಹ ವ್ಯವಸ್ಥೆ ಯನ್ನು ಮಾಡಿ ಅವರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ ಇನ್ನು ಸಾಹಿತ್ಯ ಅಕಾಡೆಮಿಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳುವುದಕ್ಕೆ ಬಯಸು ತ್ತೇನೆ. ಇದರಲ್ಲಿ ಯಾರು ಸದಸ್ಯರಾಗಿದ್ದಾರೆ ಎಂದರೆ ಈಗಿರತಕ್ಕಂಥ ಕನ್ನಡ ಸಾಹಿತ್ಯ ಪರಿಷತ್ತಿನ

ಅಧ್ಯಕ್ಷರು ಮತ್ತು ಅವರ ಧರ್ಮಪತ್ನಿ ಗಂಡಹೆಂಡತಿ ಇಬ್ಬರೂ ಕೂಡ ಒಂದೇ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೆ. ಇದು ಯಾವ ನ್ಯಾಯ ಈ ರೀತಿ ಆಗಬಾರದಾಗಿತ್ತು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಗಮನಹರಿಸಿ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ನೆನ್ನೆ ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ನಾನೂ ಕೂಡ ಈ ಬಿ.ಡಿ.ಎ ಸದಸ್ಯೆಯಾಗಿರುವುದರಿಂದ ಇದರ ಬಗ್ಗೆ ಮಾತನಾಡುವ ಅವಶ್ಯಕತೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಯಾರು ಈ ಅಧ್ಯಕ್ಷರು ಎಂದು ಕೇಳಿದರು. ತಮ್ಮ ಮೂಲಕ ನಾನು ಅವರನ್ನು ಕೇಳುತ್ತಿದ್ದೇನೆ, ಅವರು ಯಾರು ಎಂದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೇ? ೧೯೮೦ನೇ ಇಸವಿಯಲ್ಲಿ ಅವರು ಕರ್ನಾಟಕ ಕಾಂಗೆಸ್‌ನ ಅಧ್ಯಕ್ಷರಾಗಿದ್ದಾಗ ಅವರ ಜೊತೆಯಲ್ಲಿ ಹೋಗಿರಲಿಲ್ಲವೇ? ಅವರ ಕಾರಿನಲ್ಲಿ ಅಡ್ಡಾಡಿರಲಿಲ್ಲವೇ ಈ ಕಾಂಗ್ರೆಸ್ ಪಕ್ಷಕ್ಕೆ ಹಣ ಬೇಕು ಎಂದು ಹೇಳಿ ಅವರ ಜೊತೆಯಲ್ಲಿ ತಿರುಗಾಡಲಿಲ್ಲವೇ? ಇವತ್ತು ಅವರನ್ನು ಯಾರು ಎಂದು ಮಾನ್ಯ ಬಂಗಾರಪ್ಪನವರು ಕೇಳುತ್ತಿದ್ದಾರೆ. ಇದು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ಅವರು ಯಾರು ಎಂದು ಕೇಳುವುದಕ್ಕೆ ಮುಂಚೆ ಅವರಿಂದ ಪಡೆದಂತಹ ಅನುಕೂಲ ಅವರ ಜೊತೆಯಲ್ಲಿ ಹೋಗಿಬಂದಂತಹ ವಿಚಾರಗಳನ್ನು ಅವರು ಸ್ಮರಿಸಿಕೊಳ್ಳಬೇಕಾಗಿತ್ತು. ಮತ್ತು ಈ ವಿಷಯವನ್ನು ಅವರು ಕೇಳಬಾರದಾಗಿತ್ತು ಆದರೆ ಬಹುಮುಖ್ಯವಾದ ವಿಷಯ ಏನಿದೆ ಎಂದರೆ, ೩ ವರ್ಷಗಳಿಂದ ಬಿ.ಡಿ.ಎ ನಲ್ಲಿ ಆಗದೇ ಇದ್ದಂತಹ ಕೆಲಸ ಈಗಆಗುತ್ತಾ ಇದೆ ಕಾರಣವೇನು? ಅಲ್ಲಿ ನಾನ್ ಅಫಿಷಿಯಲ್ಸ್ ಮತ್ತು ಐ ಎ ಎಸ್ ಅಧಿಕಾರಿಗಳು ಇದ್ದಾಗ ಏನೂ ಕೆಲಸವಾಗಲಿಲ್ಲ. ಬನಶಂಕರಿ ಬಿಟ್ಟು ಬೇರೆ ಕಡೆಗಳಲ್ಲಿ ಜನರಿಗೆ ಮನೆಗಳನ್ನು ಕೊಡುವುದಕ್ಕೆ ಅವರಿಗೆ ಆಗಲಿಲ್ಲ. ಕಾರಣವೇನೆಂದರೆ ಅವರಿಗೆ ದೂರದೃಷ್ಟಿ ಇರಲಿಲ್ಲ. ಅವರು ಜನರ ಕಷ್ಟಸುಖಗಳನ್ನು ಅರ್ಥ ಮಾಡಿಕೊಂಡಿರಲಿಲ್ಲ. ಮನೆಗಳನ್ನು ಎಲ್ಲಿ ಕೊಡಬೇಕೆಂದು ಅವರಿಗೆ ಗೊತ್ತಾಗಿರಲಿಲ್ಲ, ಈಗಿನ ಅಧ್ಯಕ್ಷರು ಅಧಿಕಾರಕ್ಕೆ ಬಂದ ಕೇವಲ ೬ ತಿಂಗಳಿನಲ್ಲಿ ಈಗಿರತಕ್ಕಂಥ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಎಲ್ಲಾ ಸ್ಕೀಮುಗಳನ್ನು ಹಾಕಿಕೊಂಡು ಬಹಳ ಉನ್ನತ ರೀತಿಯಲ್ಲಿ ಕೆಲಸ ಮಾಡುತ್ತಾ ಇರುವಾಗ ನೀವು ಮಾಡಿರತಕ್ಕಂಥಾದ್ದು ಸರಿಯಿಲ್ಲ. ಎಂದು ಹೇಳುವುದು ನಿಜಕ್ಕೂ ದುರಾದೃಷ್ಟಕರ. ಆ ರೀತಿ ಹೇಳಬಾರದಾಗಿತ್ತು. ಆ ರೀತಿ ಮಾಡಿದ್ದು ತಪ್ಪು, ಎಂದು ನಾನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರವನ್ನು ನಾನು ಮಾನ್ಯ ಸದಸ್ಯರ ಅವಗಾಹನೆಗೆ ತರಬಯಸುತ್ತೇನೆ. ೧೯೮೧ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ೧ಲಕ್ಷ ೮೭ಸಾವಿರ ಅನ್‌ಆತರೈಸ್ಡ್ ಹೌಸ್‌ಗಳನ್ನು ಕಟ್ಟಿಕೊಂಡಿದ್ದಾರೆ, ಇದನ್ನು ತೆಗೆಯಬೇಕು ಎಂದು ನಾವೆಲ್ಲಾ ಹೇಳಿದೆವು. ಏತಕ್ಕೆ ಹೇಳಿದೆವು ಎಂದರೆ, ಬೆಂಗಳೂರಿನ ಜನಸಂಖ್ಯೆ ೩೩ಲಕ್ಷ. ಅವರೆಲ್ಲರಿಗೂ ಮನೆಗಳನ್ನು ಕಟ್ಟಿಕೊಡಬೇಕಾದರೆ ಈ ಅನ್‌ಆತರೈಸ್ಡ್ ಆಗಿ ಕಟ್ಟಿರತಕ್ಕಂಥ ಮನೆಗಳನ್ನು ತೆಗೆಯಬೇಕು. ಒಂದು ಎಕರೆಯಲ್ಲಿ ೨೦ ಮನೆಗಳನ್ನು ರೆಗ್ಯುಲರೈಸ್ ಮಾಡಿದರೆ ೨೦ ಸೈಟುಗಳಾಗುತ್ತವೆ. ಆದರೆ ಅನ್‌ಆತರೈಸ್ಡ್ ಮನೆಗಳು ಅಲ್ಲೊಂದು ಇಲ್ಲೊಂದು, ನಾಯಿ ಕೊಡೆಗಳಂತೆ ಬಂದು ಅಲ್ಲಲ್ಲಾ ಅನಾನುಕೂಲವಾದಾಗ, ಇಂತಹ ಅನ್‌ಆತರೈಸ್ ಮನೆಗಳನ್ನು ಹೊಡೆದು ಹಾಕಿ ಆತರೈಸ್ಡ್ ಮನೆಗಳನ್ನು ಕಟ್ಟಿಕೊಡಿ ಎಂದು ನಾವು ಹೇಳಿದೆವು. ಆಗ ಅಧ್ಯಕ್ಷರು ಏನು ಹೇಳಿದರು ಎಂದರೆ ಯಾರ್‍ಯಾರ ಮನೆಗಳನ್ನು ಹೊಡೆದು ಹಾಕುತ್ತೇವೋ ಅವರಿಗೆ ಬದಲಿ ನಿವೇಶನಗಳನ್ನು ಕೊಟ್ಟು ಅವರನ್ನು ಅಲ್ಲಿಗೆ ಶಿಫ್ಟ್ ಮಾಡಿ ಈ ಕೆಲಸವನ್ನು ಮಾಡುತ್ತೇವೆ. ಎಂದು ಹೇಳಿದರು. ಅದರಂತೆ ಯಾರ್‍ಯಾರ ಮನೆಗಳನ್ನು ಹೊಡೆದು ಹಾಕಿದ್ದಾರೋ ಅವರ ಮನೆಗಳಿಗೆ ಬದಲಾಗಿ ಸೂಕ್ತವಾದ ನಿವೇಶನಗಳನ್ನು ಕೊಟ್ಟು ಅವರನ್ನು ಅಲ್ಲಿಗೆ ಶಿಫ್ಟ್ ಮಾಡಿ ಈಗಿರತಕ್ಕಂಥ ರೆಗ್ಯೂಲರ್ ಗ್ರೋತ್ ಆಗುವಂತೆ ಕೆಲಸ ಮಾಡಿದ್ದಾರೆಯೇ ಹೊರತು ಯಾರದನ್ನೋ ಹೊಡೆದು ಹಾಕಿ ಬೇರೆ ಕೆಲಸ ಮಾಡಬೇಕೆಂದು ಏನೂ ಮಾಡಿಲ್ಲ. ಅವರು ನಮ್ಮೆಲ್ಲರ ಸಹಕಾರವನ್ನು ತೆಗೆದುಕೊಂಡಿದ್ದಾರೆ, ಸದಸ್ಯರ ಒಪೀನಿಯನ್ ತೆಗೆದುಕೊಂಡು ಕೆಲಸಮಾಡಿದ್ದಾರೆಯೇ ಹೊರತು ಅವರು ಅವರಾಗಿಯೇ ಏನನ್ನೂ ಮಾಡಿಲ್ಲ ಎಂದು ಇದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮೇಲ್ಮನೆಯ ವಿರೋಧಪಕ್ಷದ ಸದಸ್ಯರಾದ ಮಾನ್ಯ ಜಾಲಪ್ಪನವರೂ ಕೂಡ ಇದರಲ್ಲಿ ಸದಸ್ಯರಾಗಿದ್ದಾರೆ. ಅವರೂ ಕೂಡ ಈ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಅಧ್ಯಕ್ಷರ ಮೇಲೆ ಗೂಬೆಯನ್ನು ಕೂರಿಸಿ ಈ ರೀತಿ ಹೇಳತಕ್ಕಂಥಾದ್ದು ಸರಿಯಲ್ಲ ಇಂತಹ ಒಂದು ಡೈನಾಮಿಕ್ ಪರ್ಸನ್‌ನ ಅವಶ್ಯಕತೆ ಬಿ.ಡಿ.ಎಗೆ ಇದೆ. ಇವತ್ತು ಅಲ್ಲಿ ಹಲವಾರು ಕೆಲಸಗಳು ಆಗಬೇಕಾಗಿದೆ. ಹಲವಾರು ಒಳ್ಳೆಯ ಕೆಲಸಗಳು ಆಗಬೇಕಾಗಿದ್ದರೆ ಇಂತಹ ಒಬ್ಬ ವ್ಯಕ್ತಿಯ ಅವಶ್ಯಕತೆ ಇದೆಯೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಆ ಕೆಲಸಗಳನ್ನು ಮಾಡುವುದಕ್ಕೆ ಅವರೂ ಸೂಕ್ತರಾದ ವ್ಯಕ್ತಿ ಎಂದು ನಾನು ಅಂದುಕೊಂಡಿದ್ದೇನೆ. ನನಗೆ ಗೊತ್ತಿರುವಹಾಗೆ ಈಗಾಗಲೇ ೬

ಸಾವಿರ ಮನೆಗಳನ್ನು ಬಿ.ಡಿ.ಎಯಿಂದ ಕೊಟ್ಟಿದ್ದಾರೆ. ೧೫೦೦ ಎಕರೆಯನ್ನು ಬೆಂಗಳೂರು ರೋಡ್‌ನಲ್ಲಿ ಅಕ್ವೈರ್ ಮಾಡಿಕೊಂಡಿದ್ದಾರೆ. ನಾಗರಭಾವಿಯಲ್ಲಿ ೧೦೦೦ ಎಕರೆಯನ್ನು ತೆಗೆದುಕೊಂಡಿದ್ದಾರೆ. ಮಡಿವಾಳದಲ್ಲಿ ೧೭೦೦ ಎಕರೆ ತೆಗೆದುಕೊಂಡು ಈಗಾಗಲೇ ೨೦೦೦ ಮನೆ ನಿವೇಶನಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ನೋಟಿಫಿಕೇಷನ್ ಆಗಿದೆ. ಈಗ ಅಲ್ಲಿ ಹೊಸದಾಗಿಬಂದಿರತಕ್ಕಂಥ ಇಂಜಿನಿಯರ್‌ರವರು ೨ ತಿಂಗಳಿಗೊಮ್ಮೆ ೫೦೦ ಸೈಟುಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡುವುದಕ್ಕೆ ಕೊಡುತ್ತೇವೆ ಎನ್ನತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದೇ ಪ್ರಕಾರ ಇನ್ನೂ ೫೦೦ ಸೈಟುಗಳನ್ನು ಈಗಾಗಲೇ ರಿಲೀಸ್ ಮಾಡಿದ್ದಾರೆ ಎಂದು ಹೇಳಿದಾಗ ಇದು ಸಾರ್ವಜನಿಕರು ಸಂತೋಷ ಪಡಬೇಕಾದ ವಿಷಯವಾಗಿದೆ. ಇಂದಿರಾನಗರದಲ್ಲಿರತಕ್ಕಂಥ ಕಾಂಪ್ಲೆಕ್ಸ್ ಹಲವಾರು ವರ್ಷಗಳಿಂದ ನಿಂತುಹೋಗಿತ್ತು. ಈಗ ೨ ಲಕ್ಷಕ್ಕೂ ಮಿಗಿಲಾಗಿ ಆದಾಯ ಬರತಕ್ಕಂಥ ಕಾಂಪ್ಲೆಕ್ಸನ್ನು ಕೇವಲ ೬ ತಿಂಗಳಲ್ಲಿ ಓಪನ್ ಮಾಡಿದ್ದಾರೆ. ಇದಲ್ಲದೇ ಇನ್ನೂ ಎರಡು ಕಡೆ ಇನ್ನು ೬ ತಿಂಗಳಲ್ಲಿ ಕಾಂಪ್ಲೆಕ್ಸ್ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ದೊಮ್ಮಲೂರಿನಲ್ಲಿರತಕ್ಕಂಥ ಪ್ಲಾಟ್ಸ್ ನಿಂತುಹೋಗಿದ್ದಂತಹ ಕಟ್ಟಡಗಳನ್ನು ೩ ತಿಂಗಳಲ್ಲಿ ರೆಡಿಮಾಡಿ ಈಗಾಗಲೇ ಅದು ಅಲಾಟ್‌ಮೆಂಟ್ ಮಾಡತಕ್ಕಂಥ ಸ್ಥಿತಿಗೆ ತಂದಿದ್ದಾರೆ. ಕುಮಾರಸ್ವಾಮಿ ಲೇಔಟಿನಲ್ಲಿ ೯೦೦ ಮನೆಗಳು ೬ ವರ್ಷದಿಂದ ನಿಂತುಹೋಗಿದ್ದನ್ನು ಈಗ ರೆಡಿ ಮಾಡಿದ್ದರಿಂದ ಆ ೯೦೦ ಮನೆಗಳು ಅಲಾಟ್‌ಮೆಂಟ್ ಮಾಡುವ ಸ್ಥಿತಿಗೆ ಬಂದು ನಿಂತಿವೆ. ಈ ಬಗ್ಗೆ ನೋಟಿಫಿಕೇಷನ್ ಆಗುತ್ತಿದೆ. ಬೆಂಗಳೂರಿನಲ್ಲಿ ಸೈಟ್ ಪ್ರಾಬ್ಲಮ್, ಹೌಸಿಂಗ್ ಪ್ರಾಬ್ಲಮ್ ಹೆಚ್ಚಿನ ರೀತಿಯಲ್ಲಿ ಇರುವಾಗ, ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಮನೆಗಳ ಅವಶ್ಯಕತೆ ಇರುವಾಗ ಇಂತಹ ಸ್ಕೀಮ್‌ಗಳನ್ನು ಹಾಕಿಕೊಂಡು ಕೆಲಸಮಾಡಬೇಕೆಂದು ಹೇಳಿದಾಗ ಅದಕ್ಕೆ ಒಪ್ಪಿಗೆ ಕೊಟ್ಟು ಅವರು ಆ ಕೆಲಸಗಳನ್ನೆಲ್ಲಾ ಮಾಡಿದ್ದಾರೆ. ೧೦ಸಾವಿರ ಸೆಲ್ಫ್ ಹೌಸಿಂಗ್ ಸ್ಕೀಮ್ ಎಂದು ಹೇಳಿ ಅದರಲ್ಲಿ ಮನೆಗಳನ್ನು ಕಟ್ಟಿದ್ದಾರೆ ಈಗಾಗಲೇ ೭೫೦೦ಕ್ಕೂ ಮಿಗಿಲಾಗಿ ಈ ಮನೆಗಳ ರಿಜಿಸ್ಟ್ರೇಷನ್ ಆಗಿದೆ ಎಂದು ಹೇಳುವಾಗ ತಮಗೆಲ್ಲಾ ಸಂತೋಷವಾಗಬಹುದು. ಇದನ್ನೆಲ್ಲಾ ಕೇಳಿದಾಗ ಇಂತಹ ಒಬ್ಬ ಡೈನಾಮಿಕ್ ಪರ್ಸನ್ ಬಿ.ಡಿ.ಎ ಅಧ್ಯಕ್ಷರಾಗತಕ್ಕಂಥ ಅವಶ್ಯಕತೆ ಇತ್ತು ಎಂದು ನಮಗೆ ಅನ್ನಿಸುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆಲ್ಲಾ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಎಂದು ಹೇಳಬಯಸುತ್ತೇನೆ. ಅಲ್ಲಿ ಇನ್ನೂ ಹೆಚ್ಚಿನ ಕೆಲಸಗಳು ಆಗಬೇಕಾಗಿದೆ. ಪ್ರೀ ಫ್ಯಾಬ್ರಿಕೇಟೆಡ್ ಹೌಸ್‌ಗಳ ಬಗ್ಗೆ ವಿದೇಶಗಳಲ್ಲಿ ನೋಡಿಕೊಂಡು ಬಂದಮೇಲೆ ಈ ಪ್ರೀ ಫ್ಯಾಬ್ರಿಕೇಟೆಡ್ ಹೌಸ್ ಸ್ಕೀಮನ್ನು ಬೆಂಗಳೂರಿಗೆ ತಂದು ದಿವಸಕ್ಕೊಂದು ಮನೆ ಆಗಬೇಕೆನ್ನುವ ಉದ್ದೇಶದಿಂದ ಮತ್ತು ಈ ಸ್ಲಮ್‌ಡ್ವೆಲ್ಲರ್ಸ್‌ಗಳಿರತಕ್ಕಂಥ ಕೊಳಚೆ ಪ್ರದೇಶಗಳನ್ನು ದೂರ ಮಾಡಬೇಕೆಂದು ಹೇಳಿ ೪೫ ಎಕರೆಗಳನ್ನು ಇವತ್ತು ಬಿ.ಡಿ.ಎಯಿಂದ ಸ್ಲಮ್‌ಡ್ವೆಲ್ಲರ್ಸ್ ಅಥಾರಿಟಿಗೆ ಕೊಟ್ಟಿದ್ದಾರೆ. ಸ್ಲಮ್ ಡ್ವೆಲ್ಲರ್ಸ್ ಅಥಾರಿಟಿಯಿಂದ ಇವತ್ತು ಈ ಮನೆಗಳು ಆಗುತ್ತಾ ಇದೆ. ಕೇವಲ ಆರು ತಿಂಗಳಲ್ಲಿ ಇಂತಹ ಕೆಲಸಗಳೆಲ್ಲಾ ಆದಾಗ ಆ ಅಧ್ಯಕ್ಷರ ಮೇಲೆ ಆಪಾದನೆಗಳನ್ನು ಹೊರಿಸಿ ಹೇಳತಕ್ಕಂಥಾದ್ದು ಮತ್ತು ಅಲ್ಲಿ ಅಧಿಕಾರಿಗಳು ಸರಿಯಿಲ್ಲ ಎಂದು ಹೇಳತಕ್ಕಂಥಾದ್ದು ನಿಜಕ್ಕೂ ಸರಿಯಾದುದಲ್ಲ. ಅಲ್ಲಿಗೆ ಬಂದಿರತಕ್ಕಂಥ ಇಂಜಿನಿಯರ್ ಆಗಲೀ, ಕಮೀಷನರ್ಸ್ ಆಗಲಿ, ಸೆಕ್ರೆಟರಿಗಳಾಗಲೀ ಬೆಳಿಗ್ಗೆ [illegible]ಯಿಂದ ಸಂಜೆಯವರೆಗೆ ಅಧ್ಯಕ್ಷರ ಜೊತೆಯಲ್ಲಿ ನಿಸ್ಪೃಹತೆಯಿಂದ ದುಡಿದು ಈ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ ಬಂದಿದ್ದಾರೆ. ಆ ಕಾರಣದಿಂದಾಗಿ ಅಲ್ಲಿ ಅಧ್ಯಕ್ಷರು ಏನಿದ್ದಾರೆ ಅವರನ್ನು ತೆಗೆಯತಕ್ಕಂಥ ಪ್ರಯತ್ನಕ್ಕೆ ಕೈಹಾಕಬಾರದೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅವರನ್ನು ಅಲ್ಲಿ ಮುಂದುವರಿಸುವುದಕ್ಕೆ ಅವಕಾಶಕೊಟ್ಟು ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ. ಇನ್ನು ಕೊನೆಯದಾಗಿ ಈ ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ೧½ ವರ್ಷದಿಂದ ಅಲ್ಲಿ ಅಪಾಯಿಂಟ್‌ಮೆಂಟ್ ಮಾಡತಕ್ಕಂಥಾದ್ದನ್ನು ನಿಲ್ಲಿಸಿಬಿಟ್ಟಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಬ್ಯಾನ್ ಆರ್ಡರ್ ಹಾಕಿ ಫ್ರೆಷ್ ಅಪಾಯಿಂಟ್‌ಮೆಂಟ್ ಮಾಡಬಾರದು ಎಂದು ಹೇಳಿದ್ದಾರೆ. ಈಗ ಅಲ್ಲಿ ಕೆಲಸಗಳೆಲ್ಲಾ ಸ್ಥಗಿತಗೊಂಡಿದೆ. ಅಲ್ಲಿ ಜೂನಿಯರ್ ಇಂಜಿನಿಯರ್ಸ್ ಇಲ್ಲ, ಅಸಿಸ್ಟೆಂಟ್ ಇಂಜಿನಿಯರ್ಸ್ ಇಲ್ಲ. ಅಲ್ಲಿ ಕಂಬಗಳು ಸಿಕ್ಕುತ್ತಾ ಇಲ್ಲ, ಲೈಟ್‌ಗಳು ಸಿಕ್ಕುತ್ತಾ ಇಲ್ಲ, ಅಲ್ಲಿ ಯಾವುದೂ ಸಿಕ್ಕದೇ ಇಡೀ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ನಿಂತುಹೋಗಿದೆ. ಇದನ್ನು ತಪ್ಪಿಸಬೇಕಾದರೆ ತಕ್ಷಣ ಬ್ಯಾನನ್ನು ದೂರ ಮಾಡಿ, ಫ್ರೆಷ್ ಅಪಾಯಿಂಟ್‌ಮೆಂಟ್ಸ್ ಮಾಡಿ, ಸಾರ್ವಜನಿಕರಿಗೆ ಬೆಳಕನ್ನು ತಂದು ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಈ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಾರೆ ಎಂದು ತಿಳಿದುಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಪಿ. ಹೆಗರೆ (ಚಿಕ್ಕೋಡಿ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂತಹ ಬೇಡಿಕೆಗಳ ಮೇಲೆ ಚರ್ಚೆ ಮಾಡುವಂತಹ ಕಾಲದಲ್ಲಿ ನಾನು ಕೆಲವಾರು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡುವುದಾದರೆ ನಮ್ಮ ಸಂವಿಧಾನದ ಬದ್ಧವಾಗಿ ಹರಿಜನ ಮತ್ತು ಗಿರಿಜನರಿಗೆ ಹಾಗೂ ದೀನದಲಿತರಿಗೆ ಹಿಂದುಳಿದ ವರ್ಗದವರಿಗೆ ಏನೇನು ಸವಲತ್ತುಗಳು ದೊರೆಯಬೇಕಾಗಿತ್ತು ಆ ಎಲ್ಲಾ ರೀತಿಯ ಸವಲತ್ತುಗಳು ಈ ದಿವಸ ದೊರೆಯುತ್ತಿಲ್ಲ ಎನ್ನುವ ಮಾತನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ರಾಜ್ಯದಲ್ಲಿ ಯಾರು ಹರಿಜನ ಮತ್ತು ಗಿರಿಜನರು ಇದ್ದಾರೆ ಹಾಗೂ ಯಾರು ಹಿಂದುಳಿದ ವರ್ಗದವರು ಇದ್ದಾರೆ ಅವರೆಲ್ಲರನ್ನು ಸಹ ಗುರುತಿಸಿ ಅವರಿಗೆ ಎಲ್ಲಾ ವಿಧವಾದಂತಹ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತು ನಮ್ಮ ಸಂವಿಧಾನದಲ್ಲಿಯೂ ಕೂಡ ಯಾವ ಯಾವ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು ಎನ್ನುವುದನ್ನು ಸಹ ನಮೂದು ಮಾಡಿದೆ. ಅದರ ಪ್ರಕಾರ ತಾವು ಈ ಎಲ್ಲಾ ಹಿಂದುಳಿದ ಜನರಿಗೆ ಹಾಗೂ ಹರಿಜನ ಮತ್ತು ಗಿರಿಜನರಿಗೆ ಸಹಾಯ ಮಾಡಬೇಕೆಂದು ನಾನು ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತು ಹರಿಜನ ಮತ್ತು ಗಿರಿಜನರಿಗೆ ಯಾವ ಯಾವ ಸೌಲಭ್ಯಗಳು ದೊರೆಯಬೇಕೋ ಆ ಎಲ್ಲಾ ಸೌಲಭ್ಯಗಳನ್ನು ದೊರಕಿಸಿ ಕೊಡುವುದಕ್ಕೆ ಪಾರ್ಲಿಮೆಂಟ್‌ನಲ್ಲಿಯೂ ಕೂಡ ಒಂದು ಕಾಯ್ದೆಯನ್ನು ಇಟ್ಟುಕೊಂಡಿದ್ದಾರೆ. ಆ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಸಹ ಮಾಡಿದ್ದಾರೆ. ಸಂವಿಧಾನದ ಪ್ರಕಾರ ಈ ಎಲ್ಲಾ ಸೌಲಭ್ಯಗಳು ಹಾಗೂ ಸವಲತ್ತುಗಳನ್ನು ಕನಿಷ್ಟಪಕ್ಷ ೧೦ ವರ್ಷಗಳು ಒದಗಿಸಿಕೊಡಬೇಕು ಎನ್ನುವುದನ್ನು ಸಹ ನಮೂದು ಮಾಡಿದ್ದಾರೆ. ಈ ಸವಲತ್ತುಗಳನ್ನು ಒದಗಿಸಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆ ೧೦ ವರ್ಷಗಳ ಅವಧಿ ಮುಗಿದ ಕೂಡಲೇ ಇನ್ನು ಒಂದು ೧೦ ವರ್ಷಗಳು ಆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವ ಸಲುವಾಗಿ ಆ ಅವಧಿಯನ್ನು ವಿಸ್ತರಿಸಬೇಕು. ಆ ರೀತಿಯಾಗಿ ಮಾಡಿದರೆ ಮಾತ್ರ ಈ ವರ್ಗದ ಜನ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇದುವರೆವಿಗೆ ಯಾವ ಮಟ್ಟದ ಪ್ರಗತಿ ಆಗಬೇಕಾಗಿತ್ತೋ ಆ ಮಟ್ಟದ ಪ್ರಗತಿ ಇನ್ನು ಆಗಿಲ್ಲ. ಇದಕ್ಕೆ ಕಾರಣವಾದರು ಏನೆಂದರೆ ನಮ್ಮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಒಳ್ಳೆಯ ಕೆಲಸ ಮಾಡಲಿಲ್ಲ ಎನ್ನುವಂತಹ ಒಂದು ಆಪಾದನೆಯನ್ನು ನಾನು ತಮ್ಮ ಮೇಲೆ ಹೊರಿಸುತ್ತೇನೆ. ನಮ್ಮ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯವರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಸಹ ನಾನು ಹೇಳುತ್ತೇನೆ. ಮತ್ತು ನಾನು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಬಂದಾಗ ಅದರ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಹೇಳಿದಂತಹ ವಿಷಯಗಳು ಮಾನ್ಯ ಮಂತ್ರಿಗಳ ಗಮನಕ್ಕೆ ಹೋಗಲಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಈ ವರ್ಗದ ಜನತೆಗೆ ಹೆಚ್ಚು ರಕ್ಷಣೆ ಕೊಡಬೇಕು ಮತ್ತು ಈ ವರ್ಗದ ಜನತೆಗೆ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ ಅದು ಏನೆಂದರೆ ನಮ್ಮ ದಿವಂಗತ ಡಿ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಈ ವರ್ಗದ ಜನರನ್ನು ಮೇಲಕ್ಕೆ ತರುವುದಕ್ಕಾಗಿ ಸರ್ವ ಪ್ರಯತ್ನಗಳನ್ನು ನಡೆಸಿದ್ದಾರೆ. ಅವರು ಸುಮಾರು ೭-೮ ವರ್ಷಗಳ ಕಾಲ ಮುಖ್ಯ ಮಂತ್ರಿಗಳಾಗಿದ್ದಾಗ ಅವರು ಮಾಡಿದಷ್ಟು ಪ್ರಗತಿಪಥ ಕಾರ್ಯಕ್ರಮಗಳನ್ನು ಬೇರೆ ಯಾವ ರಾಜ್ಯದ ಮುಖ್ಯಮಂತ್ರಿಗಳು ಈ ವರ್ಗದ ಜನತೆಗೆ ಮಾಡಲಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ನಾನು ನಮ್ಮ ಈಗಿನ ಮುಖ್ಯಮಂತ್ರಿಗಳಿಗೆ ತಿಳಿಸುವುದಾದರೂ ಏನೆಂದರೆ ನಿಮ್ಮ ಕೈಯಲ್ಲಿ ಅಧಿಕಾರವಿದೆ. ನಿಮಗೆ ಜನತೆ ಬೆಂಬಲ ಕೊಟ್ಟಿದ್ದಾರೆ. ಆದ್ದರಿಂದ ಈಗ ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಆಗುತ್ತಿರುವಂಥ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಜನರ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕಾಗಿ ಸರ್ಕಾರ ಕ್ರಾಂತಿಯನ್ನು ಮಾಡಬೇಕು ಕ್ರಾಂತಿ ಎಂದರೆ ರಕ್ತ ಕ್ರಾಂತಿ ಮಾಡಬೇಕೆಂದು ಅಲ್ಲ. ನಮ್ಮ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದಕ್ಕಾಗಿ ನಾವು ವರ್ಷ ವರ್ಷ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ಈ ರೀತಿಯ ಪಂಚವಾರ್ಷಿಕ ಯೋಜನೆ

ಗಳನ್ನು ನಮ್ಮ ದಿವಂಗತ ಪಂಡಿತ್ ಜವಹರಲಾಲ್ ನೆಹರೂರವರು ನಮಗೆ ಹಾಕಿಕೊಟ್ಟಿದ್ದರು. ಅದನ್ನು ನಾವು ಇಲ್ಲಿಯವರೆವಿಗೂ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆದರೂ ಸಹ ಇದುವರೆವಿಗೂ ಯಾವ ರೀತಿಯ ಪ್ರಗತಿಪರ ಕಾರ್ಯಕ್ರಮಗಳನ್ನು ನಾವು ಮಾಡಿಲ್ಲ. ಆದರೂ ಸಹ ಅಂಕಿಅಂಶಗಳು ಹೇಳುತ್ತವೆ ಹರಿಜನ ಮತ್ತು ಗಿರಿಜನರಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದೇವೆ ಅವರಿಗೆ ಎಲ್ಲಾ ರೀತಿಯ ಸಹಾಯಗಳನ್ನು ಮಾಡುತ್ತಲೆ ಬಂದಿದ್ದೇವೆಂದು.

ಇನ್ನು ನಮ್ಮ ಸರ್ಕಾರದವರು ಒಂದು ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅದು ಏನೆಂದರೆ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಕೊಡುವುದು, ಜಾಗ ಇಲ್ಲದವರಿಗೆ ಜಾಗ ಕೊಡುವುದು, ಆದರೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾರ್ಯಾರು ಹರಿಜನ ಮತ್ತು ಗಿರಿಜನರು ಇರುತ್ತಾರೋ ಅಂತಹವರಿಗೆ ಮನೆಗಳನ್ನು ಕಟ್ಟಿಕೊಡಬೇಕು, ಮತ್ತು ಜಾಗ ಇಲ್ಲದವರಿಗೆ ಜಾಗ ಕೊಡುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇನ್ನು ನಮ್ಮ ಸರ್ಕಾರದವರು ಹುಡ್ಕೋ ಮತ್ತು ಹೌಸಿಂಗ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಒಂದು ಮನೆಯನ್ನು ಕಟ್ಟಿಕೊಡಬೇಕಾದರೆ ಕನಿಷ್ಟಪಕ್ಷ ೫೦೦ ರೂಪಾಯಿಗಳನ್ನು ಕೊಡಬೇಕು ಎಂದು ಮಾಡಿದ್ದಾರೆ, ಮತ್ತು ಜನತಾ ಮನೆಗಳನ್ನು ಕಟ್ಟಿಕೊಡುವುದಕ್ಕಾಗಿ ಸರ್ಕಾರದವರು ಒಂದು ಮನೆಗೆ ಸುಮಾರು ೩೦೦೦ ರೂಪಾಯಿಗಳನ್ನು ಕೊಡುತ್ತಾರೆ ಈ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅವರು ಎಂತಹ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ? ಮತ್ತು ಈ ಜನತಾ ಮನೆಗಳನ್ನು ಕಟ್ಟಿಕೊಡುವುದಕ್ಕಾಗಿ ಬಿ.ಡಿ.ಒ.ಗಳು ಕಂಟ್ರಾಕ್ಟ್‌ದಾರರಿಗೆ ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುತ್ತಾರೆ ಆ ಮನೆಗಳು ಸ್ವಲ್ಪ ದಿನಗಳಲ್ಲಿ ಬಿದ್ದು ಹೋಗುತ್ತವೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಸ್ವಲ್ಪ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಅನುಕೂಲವಾಗುವ ರೀತಿಯಲ್ಲಿ ಒಂದೊಂದು ಕಮ್ಯೂನಿಟಿ ಇರಿಗೇಷನ್ ವೆಲ್‌ಗಳನ್ನು ಮಾಡಿಕೊಡಬೇಕೆಂದು ನಾನು ಸಮಾಜ ಕಲ್ಯಾಣ ಇಲಾಖೆಯ ಮೇಲೆ ಚರ್ಚೆ ಮಾಡುವಂತಹ ಕಾಲದಲ್ಲಿ ಪ್ರಸ್ತಾಪ ಮಾಡಿದ್ದೇನೆ ಆದರೆ ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯ ಹೋಗಲೇ ಇಲ್ಲ. ಆದ್ದರಿಂದ ಇಂತಹ ಕಮ್ಯೂನಿಟಿ ಇರಿಗೇಷನ್ ವೆಲ್ಸ್‌ಗಳನ್ನು ಮಾಡಿಕೊಡುವುದಕ್ಕೆ ನಮ್ಮ ಸಮಾಜ ಕಲ್ಯಾಣ ಇಲಾಖೆಯವರು ಪ್ರಯತ್ನ ಮಾಡಬೇಕು. ಒಂದು ಎಕರೆ ೧೦ ಗುಂಟೆ ಜಮೀನು ಇರುವವರು ಮೈಸೂರು ನಗರದಲ್ಲಿ ಸುಮಾರು ೧೦೭ ಜನರು ಇದ್ದಾರೆ ಆದರೆ ಅವರಿಗೆ ಕಮ್ಯೂನಿಟಿ ಇರಿಗೇಷನ್ ವೆಲ್ಸ್‌ಗಳು ಒಬ್ಬರಿಗೂ ಇಲ್ಲ. ಆದ್ದರಿಂದ ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಮಾಡಿಸಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮೈಸೂರಿನಲ್ಲಿ ಒಂದನ್ನೂ ಕೂಡ ಮಾಡಿಲ್ಲ, ಅದೇ ರೀತಿ ಬೆಳಗಾಂನಲ್ಲಿ ಇರಿಗೇಶನ್ ಸ್ಕೀಮ್ ಬಗ್ಗೆ ಹೇಳುವುದಾದರೆ ಅಲ್ಲಿ ೫೬-೫೭ರ ಇಂಡಿವಿಜುಯಲ್ ಸ್ಕೀಮ್‌ನ್ನು ತಾವು ಮಾಡಿದ್ದೀರಿ. ಅಲ್ಲಿ ಕಮ್ಯುನಿಟಿ ವೆಲ್ ಸ್ಕೀಮ್ ಇಲ್ಲ. ನಾನು ಇದರ ಬಗ್ಗೆ ಧಾರವಾಡದ ಡಿ. ಸಿ. ಯವರನ್ನು ಇದು ನಿಮ್ಮ ವಿಚಾರವೊ ಅಥವಾ ಸರ್ಕಾರದ ವಿಚಾರವೋ ಎಂದು ಕೇಳಿದರೆ, ಅದಕ್ಕೆ ಅವರು ಸರ್ಕಾರದಿಂದ ನಮಗೆ ಆದೇಶ ಇದೆ ಇಂಡಿವಿಜುಯಲ್ ಇರಿಗೇಷನ್ ಸ್ಕೀಮ್‌ಗೆ ಎಷ್ಟು ಹಣ ಮಂಜೂರು ಮಾಡಿದ್ದಾರೆ, ಕಮ್ಯುನಿಟಿ ವೆಲ್ ಸ್ಕೀಮಿಂಗೆ ಎಷ್ಟು ಹಣ ಮಂಜೂರು ಮಾಡಿದ್ದಾರೆ, ಎಂದು ವಿವರಿಸಿ ಹೇಳಿದರು. ನಾನು ಸರ್ಕಾರಕ್ಕೆ ಕೇಳಬಯಸುವುದೇನೆಂದರೆ ಯಾರನ್ನು ತಾವು ಇವತ್ತಿನ ದಿವಸ ಮುಂದಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಅಥವಾ ಯಾವ ಸಮಾಜದೊಳಗೆ ಅತ್ಯಂತ ಬಡವನಿಗೆ ತಾವು ಸಹಾಯ ಮಾಡುತ್ತಿದ್ದೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ, ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಬೇಕು. ಡಿಪಾರ್ಟ್‌ಮೆಂಟ್‌ಗಳಿಗೆ ಆದೇಶ ಕೊಟ್ಟು ತಮ್ಮ ಪಾಲಿಸಿಯನ್ನು ಕ್ಯಾನ್‌ಸಲ್ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ ಇದರಿಂದಾಗಿ ಬಡವನಿಗೆ ಬಹಳ ಅನ್ಯಾಯವಾಗಿದೆ. ಹಿಂದೆ ಬ್ರಿಟಿಷರು ಇದ್ದಾಗಲೂ ಕೂಡ ಇರದಂತಹ ಹೀನ ಪರಿಸ್ಥಿತಿಯಲ್ಲಿ ಈ ಜನರಲ್ಲಿ ೯೦ ಪರ್ಸೆಂಟ್ ಜನರು ಇಂದು ಇದ್ದಾರೆ. ಅವರಿಗೆ ಯಾವ ಉಪಯೋಗಗಳೂ ಇಲ್ಲ. ಆದ್ದರಿಂದ ಅವರಿಗೆ ಏನು ತೊಂದರೆಯಾಗಿದೆ. ಅದನ್ನು ನಿವಾರಣೆ ಮಾಡಬೇಕು. ಅವರ ಬಗ್ಗೆ ಹೇಳುವುದಾದರೆ ಈ ರಿಸರ್ವೇಶನ್ ಮತ್ತು ಪಾಪ್ಯುಲೇಶನ್ ಬಗ್ಗೆ ಒಂದು ಮಾತು ಹೇಳಬೇಕಾಗುತ್ತದೆ. ೧೯೭೧ರ ಸೆನ್ಸಸ್ ಪ್ರಕಾರ ಈ ಪರಿಶಿಷ್ಟ ಜನರು ೩೮ ಲಕ್ಷ ಇದ್ದವರು ಈಗ ೪೭ ಲಕ್ಷ ಆಗಿದ್ದಾರೆ. ಈ ಪ್ರಮಾಣ ಇಷ್ಟು ಹೆಚ್ಚಾಗಲು ಏನು

ಕಾರಣ ಎಂದರೆ ಹತ್ತು ಲಕ್ಷ ಜನ ಜಾಸ್ತಿ ಬಂದು ಸೇರಿದ್ದಾರೆ. ಏಕೆಂದರೆ ಈ ಐದಾರು ವರ್ಷಗಳ ಅವಧಿಯಲ್ಲಿ ೩೮ ಲಕ್ಷ ಹೋಗಿ ೪೭ ಲಕ್ಷ ಆಗಲು ಸಾಧ್ಯವಿಲ್ಲ. ೧೯೭೬ರಲ್ಲಿ ಕಾನೂನನ್ನು ತಿದ್ದುಪಡಿ ಮಾಡಿರುವುದರಿಂದ ಕೆಲವು ಜಾತಿ ಮತ್ತು ಪಂಗಡದವರು ಪರಿಶಿಷ್ಟ ಜಾತಿಗೆ ಸೇರಬಹುದು ಅಂತ ಕಾಣುತ್ತದೆ. ಇದರಿಂದಾಗಿ ಹತ್ತು ಲಕ್ಷ ಜನರು ಹೊಸದಾಗಿ ಬಂದು ಈ ವರ್ಗದಲ್ಲಿ ಸೇರಿಕೊಂಡರು, ಆಮೇಲೆ ಶೆಡ್ಯೂಲ್ಡ್ ಕ್ಯಾಸ್ಟ್ ಎಂದರೆ untouchable is a Scheduled caste man. ಇದನ್ನು ನಮ್ಮ ಕೇಂದ್ರ ಸರ್ಕಾರದವರು ಗಾಳಿಗೆ ತೂರಿಬಿಟ್ಟರು. ಬೇರೆ ಬೇರೆ ಜಾತಿಯವರನ್ನು ಈ ವರ್ಗದಲ್ಲಿ ಸೇರಿಸಿಕೊಂಡು ಬಿಟ್ಟರು. ಆದರೆ, ಹಿಂದೆ ಏನು ಪರಿಶಿಷ್ಟ ಜಾತಿಯವರಿಗೆ ೧೮ ಪರ್ಸೆಂಟ್ ಅಂತ ಏನಿತ್ತು ಅದನ್ನು ಜಾಸ್ತಿ ಮಾಡಿದ್ದೀರಾ ೧೯೫೦ನೇ ಇಸವಿಯಲ್ಲಿ ಫಿಕ್ಸ್ ಆದಂತಹ ಈ ಪರ್ಸೆಂಟೇಜ್‌ನ್ನು ಹೊರಗಡೆಯಿಂದ ಹತ್ತು ಲಕ್ಷ ಜನರು ಸೇರಿಸಿಕೊಂಡರೂ ಕೂಡ ಏಕೆ ಜಾಸ್ತಿ ಮಾಡಿಲ್ಲ ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಿ, ಯಾವುದೇ ಇಂಡಸ್ಟ್ರಿಯೊಳಗೆ ಈ ರಿಜರ್ವೇಷನ್ನು ಜಾಸ್ತಿ ಮಾಡಿಲ್ಲ. ಕೇಳಿದ ಕೂಡಲೇ ಏನೋ ಹೇಳಿ ಬಿಡುತ್ತಾರೆ. ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತದೆ. ನಾನು ಇತ್ತೀಚೆಗೆ ಎಂ. ಎಸ್. ಐ ಎಲ್.ಗೆ ಹೋಗಿದ್ದೆ. ಅಲ್ಲಿ ಇತ್ತೀಚೆಗೆ ಕೆಲವರನ್ನು ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಆದರೆ ಅಲ್ಲಿ ಪರಿಶಿಷ್ಟ ಜಾತಿಯವರನ್ನು ಒಬ್ಬರನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ನಾನು ಕೇಳಿದ್ದಕ್ಕೆ ನಮಗೆ ಶೆಡ್ಯೂಲ್ಡ್ ಕಾಸ್ಟ್ ಕ್ಯಾಂಡಿಡೇಟ್ ಒಬ್ಬರೂ ಸಿಗಲಿಲ್ಲ, ಎಂದು ಹೇಳಿದರು. ಹಾಗೇದು ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನವರು ಸರ್ಟಿಫಿಕೇಟ್ ಕೊಟ್ಟಿದ್ದಾರಂತೆ, ಮಾನ್ಯ ಅಧ್ಯಕ್ಷರೇ, ಇವತ್ತು ತಮಗೆ ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೆ ಗೊತ್ತಿರುವ ಹಾಗೆ ಸಾವಿರಾರು ಜನ ಪರಿಶಿಷ್ಟ ಜಾತಿಗೆ ಸೇರಿದ ಪದವೀಧರರು ಇದ್ದಾಗೆ, ಪೋಸ್ಟ್ ಗ್ರಾಜ್ಯುಯೇಟ್‌ಗಳು ಇದ್ದಾರೆ ಹೀಗಿರುವಾಗ ಇಲ್ಲವೆಂದು ಹೇಳಿದರೆ ಏನು ಅರ್ಥವಾಗತ್ತದೆ ಒಂದೊಂದು ರಾಜ್ಯಗಳಲ್ಲಿ ಯಾರು ೧೮ ಪರ್ಸೆಂಟ್ ರಿಜರ್ವೇಶನ್ ನಿಯಮವನ್ನು ಪಾಲನೆ ಮಾಡುವುದಿಲ್ಲವೋ ಅಂತಹವರಿಗೆ ಪನಿಶ್‌ಮೆಂಟ್ ಕೊಡಬೇಕೆಂದು ಕಾನೂನನ್ನು ಮಾಡಿದ್ದಾರೆ. ತಾವು ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಮಾಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಇರಿಗೇಶನ್ ವಿಷಯವಾಗಿ ಸ್ವಲ್ಪ ಮಾತನಾಡಬೇಕಾಗಿದೆ. ಬೆಳಗಾಂ ಜಿಲ್ಲೆಯಲ್ಲಿ ಚಿಕ್ಕೋಡಿ, ರಾಯಬಾಗ್ ಮೊದಲಾದ ಕೆಲವು ಪ್ರದೇಶಗಳು ಸಾಮಾನ್ಯವಾಗಿ ಬರಗಾಲ ಪೀಡಿತ ಪ್ರದೇಶಗಳಾಗಿವೆ, ಸುಮಾರು ೨೦–೨೫ ಬರಗಾಲ ಪೀಡಿತ ಪ್ರದೇಶಗಳಿವೆ ಅಲ್ಲಿ ನೀರಿನ ವ್ಯವಸ್ಥೆಯೇ ಇಲ್ಲ. ದಯವಿಟ್ಟು ಅಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿ. ಕೆಲವು ಕಡೆ ನೀರು ಹೋಗುವುದಿಲ್ಲ ಏತಕ್ಕೆಂದರೆ ಅವುಗಳು ಎತ್ತರದ ಪ್ರದೇಶಗಳಾಗಿವೆ. ಏನಾದರೂ ಮಾಡಿ ಈ ಭಾಗದ ಜನರಿಗೆ ನೀರಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿಯತನಕ ಸರ್ಕಾರ ಏನೂ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಕಿವಿ ಮುಚ್ಚಿಕೊಂಡು ಕೂತಿದೆ. ಈ ವರ್ಷ ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿಗೆ ಬಂದಾಗ ಜನರು ಕೂಡ ವಿನಂತಿಮಾಡಿಕೊಂಡಿದ್ದಾರೆ. ಲಿಫ್ಟ್ ಇರಿಗೇಶನ್ ಅಥವಾ ಬೇರೆ ಏನಾದರೂ ವ್ಯವಸ್ಥೆ ಮಾಡಿ ಎಂದು ಅವರನ್ನು ಪ್ರಾರ್ಥಿಸಿಕೊಂಡಂತೆಯೇ ರಾಜ್ಯಪಾಲರು ಚಿಕ್ಕೋಡಿಗೆ ಬಂದಾಗಲೂ ಕೂಡ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ನನಗೆ ತಿಳಿದ, ಬಂದಿರುವ ಪ್ರಕಾರ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಎಷ್ಟೇ ಖರ್ಚಾದರೂ ಪರವಾಗಿಲ್ಲ. ಇರಿಗೇಶನ್ ಸ್ಕೀಮ್‌ನ್ನು ಮಾಡಿಕೊಡುತ್ತೇವೆ ಎಂದು. ಈಗಾಗಲೇ ನನಗೆ ತಿಳಿದ ಪ್ರಕಾರ ಅದಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ೩೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರಂತೆ ಆದರೆ ಇದನ್ನು ಅಗತ್ಯತೆಗೆ ಆಧ್ಯತೆ ಕೊಟ್ಟು ಮಾಡಬೇಕಾದ್ದರಿಂದ ಮುಖ್ಯಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಸಂಬಂಧಪಟ್ಟವರಿಗೆ ಸೂಕ್ತ ಸಲಹೆ ಕೊಡಬೇಕು. ಇಲ್ಲದಿದ್ದರೆ ಜನ ಸುಮ್ಮನೆ ಕೂಡುವುದಿಲ್ಲ. ಜನರು ಅಂಧೋಳನ ಮಾಡುತ್ತಾರೆ. ಈಗ ನಾವು ನೋಡುತ್ತಿರುವಂತೆ ಎಲ್ಲೆಲ್ಲಿ ನೋಡಿದರೂ ಅಂಧೋಳನಗಳು ನಡೆಯುತ್ತಿವೆ. ಆದರೆ ಇದುವರೆಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಯಾವ ಅಂಧೋಳನವನ್ನೂ ಮಾಡಿಲ್ಲ. ನಮಗೆ ರೊಟ್ಟಿ ಇಲ್ಲ, ರೊಟ್ಟಿ ಕೊಡಿ ಎಂದು ಅವರು ಆಂದೋಳನ ಮಾಡಿಲ್ಲ. ಆದರೆ ಒಂದು ದಿನ ಬರುತ್ತದೆ, A day will come, they will have to rise their hands. ಇದು ಒಂದು ಕಡೆಗಾದರೆ ಇನ್ನೊಂದು ಕಡೆಗೆ ನೀರಾವರಿ ವಿಷಯ ಹೇಳಬೇಕಾದರೆ, ಸುಮಾರು ೨೦–೨೫ ಹಳ್ಳಿಗಳ ಜನರಿಗೆ ಇದರ ಕೊರತೆ ಇದೆ, ಮಳೆ ಇಲ್ಲ, ಬರಗಾಲ ಪರಿಸ್ಥಿತಿ ಅವರನ್ನು ಬಿಡುವ ಹಾಗೆ ಇಲ್ಲ. ಯಾವ ರೀತಿಯಲ್ಲಾದರೂ ಲಿಫ್ಟ್

ಇರಿಗೇಶನ್ ಮಾಡಿಕೊಡಿ ಎಂದು ಅಧಿಕಾರಿಗಳನ್ನು ಕೇಳಿದಾಗ ನಮಗೆ ಟನಲ್ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಅಧಿಕಾರ ಇಲ್ಲ, ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಟನಲ್ ಇರಿಗೇಶನ್ ಮಾಡುವುದಕ್ಕೆ ಬರುವುದಿಲ್ಲವಾದರೆ ಬೇಡ, ಪಿಡಕಲ್ ಡ್ಯಾಮ್ ಮೂಲಕವಾದರೂ ಮಾಡಿ ಕೊಡಬಹುದಲ್ಲ ಯಾವುದು ಫೀಸಿಬಲ್ ಯಾವುದು ಫೀಸಿಬಲ್ ಅಲ್ಲ ಅಂತ ಯೋಚಿಸುತ್ತಾ ಕೂರುವು ದಾದರೆ ಈ ೨೫ ಗ್ರಾಮಗಳ ಜನರ ಗತಿಯೇನಾಗಬೇಕು ಅವರಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಒಂದೋ ಟನಲ್ ಲಿಫ್ಟ್ ಮಾಡಿಕೊಡಿ. ಇಲ್ಲದೇ ಹೋದರೆ ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡಿಕೊಡಿ. ತಾವು ವಚನ ಕೊಟ್ಟಿದ್ದೀರಿ, ಅದರ ಪ್ರಕಾರ ಎಸ್ಟಿಮೇಟ್ ಮಾಡಿದ್ದೀರಿ ಮತ್ತು ೩೨ ಕೋಟಿ ರೂಪಾಯಿ ಖರ್ಚು ಕೂಡ ಮಾಡಿದ್ದೀರಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿ ಯವರನ್ನು ನಾನು ಕೇಳಿಕೊಳ್ಳುತ್ತೇನೆ ಏನೆಂದರೆ ದಯವಿಟ್ಟು ಈ ಕೆಲಸವನ್ನು ಮೊದಲು ಮಾಡಬೇಕು. ಈ ವಿಷಯದ ಬಗ್ಗೆ ಅವರು ತಮ್ಮ ಉತ್ತರ ಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಪರ್ಸನಲ್ ಎಕ್ಸ್‌ಪ್ಲನೇಶನ್ ಕೊಟ್ಟಿದ್ದೀರಿ. ಬೇರೆ ವಿಷಯವಾಗಿ ನೀವು ಮಾತನಾಡಬೇಕಾಗಿದೆಯಾ?

ಶ್ರೀ ಎಸ್. ಬಂಗಾರಪ್ಪ.—ಹೌದು ಸ್ವಾಮಿ, ಬೇರೆ ವಿಷಯವನ್ನು ಕೂಡ ಪ್ರಸ್ತಾಪ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಹಾಗಲ್ಲ, ಸ್ಪೆಸಿಫಿಕ್ ಆಗಿದ್ದರೆ ಮಾತ್ರ ಅಂತ ನಾನು ಕೇಳಿದ್ದು.........ಇಲ್ಲದಿದ್ದರೆ ಇವತ್ತೇ ಆಗಬೇಕೆಂದೇನೂ ಇಲ್ಲ. ಏಕೆಂದರೆ ಶ್ರೀನಿವಾಸ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ ಅವರು ಈಗ ಇಲ್ಲೇ ಇದ್ದಾರೆ.........

ಶ್ರೀ ಬಂಗಾರಪ್ಪ.—ನಾನು ಬಹಳ ಕಾಲ ತೆಗೆದುಕೊಳ್ಳುವುದಿಲ್ಲ. ಇನ್ನು, ತಮಗೆ ಬಿಟ್ಟಿದ್ದು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಆ ದಿವಸವೇ ಮಾತನಾಡತಕ್ಕಂಥ ಸಂದರ್ಭದಲ್ಲಿ ವಿರೋಧಪಕ್ಷದ ಸಾಲಿನಲ್ಲಿ ಕೂತಿರತಕ್ಕಂಥ ಒಬ್ಬ ಮಾನ್ಯ ಸದಸ್ಯರು ಮಾಡಬೇಕಾದಂತಹ ಕರ್ತವ್ಯದ ಹಿನ್ನೆಲೆಯಲ್ಲಿ ನನ್ನ ಕರ್ತವ್ಯವನ್ನು ಮಾಡತಕ್ಕಂಥ ಭಾವನೆಯಲ್ಲಿ ಹೇಳಬೇಕಾದಂತಹ ಸಂದರ್ಭದಲ್ಲಿ ಯಾರೇ ಸದಸ್ಯರಾಗಲೀ ಅವರು ಅಧಿಕಾರದಲ್ಲಿ ಇರಲಿ ಅಥವಾ ಇಲ್ಲದೇ ಇರಲಿ, ಈ ಮನೆಯ ಸದಸ್ಯರಾಗಿ ಕೆಲವು ವಿಷಯಗಳನ್ನು ನಿಯಮ ಪಾಲನೆಗೆ ಸಂಬಂಧಪಟ್ಟಂತೆ ಮಾಡಬೇಕಾಗುತ್ತದೆ ಎಂಬ ಮಾತೊಂದನ್ನು ಹೇಳಿದ್ದೆ. ಸುಮಾರಾಗಿ ದೇಶದ ಜನತೆ ನಿರೀಕ್ಷೆ ಮಾಡುತ್ತದೆ.

೧-೦೦ ಪಿ.ಎಂ.

ಅದರಲ್ಲೂ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಅಧಿಕಾರ ದುರುಪಯೋಗವಾಗದ ರೀತಿಯಲ್ಲಿ ಅವರ ನಡವಳಿಕೆ ಇಟ್ಟುಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಈ ಒಂದು ಮಾತಿನ ಕಕ್ಷೆಯಲ್ಲಿ ಹೇಳುವುದಾದರೆ ನನಗೆ ಗೊತ್ತಿರುವಹಾಗೆ, ನಾನು ಅಧಿಕಾರದಲ್ಲಿದ್ದಾಗ ನಡವಳಿಕೆಯಲ್ಲಿ ತಪ್ಪುಗಳನ್ನು ನಾನೇನೂ ಮಾಡಿಲ್ಲ, ಸ್ಪಷ್ಟತೆಯಿಂದ ಇದ್ದೇನೆ, ಒಂದು ವೇಳೆ ಹಾಗೇನಾದರೂ ಆಗಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶ ವಿದೆ ಎಂದು ನಾನು ಭಾವಿಸಿದ್ದೇನೆ; ಹಾಗೇನಾದರೂ ಇದ್ದರೆ ಅವರು ಕ್ರಮ ತೆಗೆದುಕೊಳ್ಳಬಹುದು. ಅದು ನನಗೂ ಅನ್ವಯವಾಗುತ್ತದೆ, ಸಂಬಂಧಪಟ್ಟಿರತಕ್ಕ ವ್ಯಕ್ತಿಗಳು ಯಾರು ಇದ್ದರೂ ಅವರಿಗೂ ಅನ್ವಯವಾಗುತ್ತದೆ ಎನ್ನತಕ್ಕ ಮಾತಿನ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಿದ್ದೇನೆ. ನಾನು ಮಾತನಾಡತಕ್ಕ ಸಂದರ್ಭದಲ್ಲಿ ರಾಜ್ಯ ಅಥವಾ ಜನತೆಯ ಸ್ವತ್ತು ಎಂದು ಆ ವಿಷಯವನ್ನು ಪ್ರಸ್ತಾಪಮಾಡಬೇಕಾದರೆ ಸಾರ್ವಜನಿಕ ಆಸ್ತಿ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ.........

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಉತ್ತರ ಹೇಳುವಾಗ ಅದಕ್ಕೆ ಉತ್ತರ ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯ ಏನೂ ಹೇಳುತ್ತಾ ಇಲ್ಲ. ನನಗೆ ಗೊತ್ತಾಯಿತು ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು.—ವೈಯುಕ್ತಿಕವಾಗಿ ತಮಗೆ ಸಂಬಂಧಪಟ್ಟಂತೆ ಪ್ರಸ್ತಾಪವಮಾಡಿರತಕ್ಕ ವಿಚಾರಗಳ ಬಗ್ಗೆ ತಾವು ಬೆಳಿಗ್ಗೆ ಇಂಟರ್‌ವಿನ್ ಆಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದಿರಿ. ಆ ರೀತಿ ಇನ್ಯಾವುದಾದರೂ ಇದ್ದರೆ ಪ್ರಸ್ತಾಪ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಆ ದೃಷಿಯಿಂದ ನಾನು ವಿಷಯವನ್ನು ಹೇಳತಕ್ಕಂಥಾದ್ದು. ಅದನ್ನು ಈ ಸದನ ಒಪ್ಪುತ್ತದೆ, ಮಾನ್ಯ ಮಂತ್ರಿಗಳೂ ಒಪ್ಪುತ್ತಾರೆ, ತಾವೂ ಕೂಡ ಒಪ್ಪುತ್ತೀರಿ. ಒಂದುವೇಳೆ ಇಲ್ಲಾ ನಾವು ನ್ಯಾಯವಾಗಿ ತೀರ್ಮಾನಮಾಡಿದ್ದೇವೆ ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಕೊಡಲಿ ಅದು ಸರಿ ಕಂಡರೆ ಸದನ ಒಪ್ಪುತ್ತದೆ, ಸರಿಯಿಲ್ಲ ಎನ್ನತಕ್ಕ ಭಾವನೆ ಬಂದರೆ ಒಪ್ಪದೇ ಇರತಕ್ಕಂಥಾದ್ದು ಇದೆ. ಅದನ್ನು ಅನ್ವಯ ಮಾಡಿಕೊಳ್ಳುವುದಕ್ಕೆ ಸದನದ ಆಯಾ ಸದಸ್ಯರಿಗೆ ಹಕ್ಕಿದೆ. ಆ ಹಿನ್ನೆಲೆಯಲ್ಲಿ ನಾನು ಆ ದಿವಸ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಸುಮಾರಾಗಿ ಈ ಬೇಡಿಕೆಗಳು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಿರತಕ್ಕ ಬೇಡಿಕೆಗಳು, ಈಬೇಡಿಕೆಗಳ ಮೇಲಿನ ಚರ್ಚೆಯನ್ನು ಈ ಸದನದಲ್ಲಿ ನಾನು ವಿರೋಧಪಕ್ಷದ ಸಾಲಿನಲ್ಲಿ ಕುಳಿತು ಪ್ರಾರಂಭಮಾಡಿದ ಮೇಲೆ ಕಳೆದ ೨-೩ ದಿನಗಳಿಂದ ನಡೆದಿರತಕ್ಕಂಥ ಸಭೆಯ ನಡವಳಿಕೆಗಳ ಚೌಕಟ್ಟಿನಲ್ಲಿ ನೋಡುವುದಾದರೆ, ಸುಮಾರಾಗಿ ಇದಕ್ಕೆ ಬಹಳ ವಿಧವಾಗಿ ಕೆಲವು ಸದಸ್ಯರ ಒಂದು ಗುಂಪೇ ಸಿದ್ಧವಾಗಿ ನನ್ನ ಮೇಲೆ ಕೆಲವು ಆಪಾದನೆಗಳನ್ನು ಮಾಡತಕ್ಕ ಪ್ರಯತ್ನವನ್ನು ಸ್ಪಷ್ಟವಾಗಿ ಮಾಡಿದ್ದಾರೆ. ಎನ್ನತಕ್ಕ ಅಂಶ ನನಗೆ ಕಂಡು ಬರುತ್ತಾ ಇದೆ. ನಾನು ವಾದಕ್ಕೋಸ್ಕರ ಈ ಮಾತನ್ನು ಮಂಡನೆ ಮಾಡುತ್ತಾ ಇದ್ದೇನೆ. ನಾನು ಆ ದಿವಸ ಈ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಮಾಡದೇ ಹಾಗೇ ಇದ್ದರೂ ಕೂಡ ಸುಮಾರಾಗಿ ಸದನದಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬರುತ್ತಿತ್ತು. ಅದಕ್ಕೆ ಕಾರಣವಿದೆ. ಒಬ್ಬ ವ್ಯಕ್ತಿ ಒಂದು ಪಕ್ಷ ಬಿಟ್ಟು ಹೋದ ತಕ್ಷಣ ಆ ಸಂದರ್ಭ ಬರುವುದಿಲ್ಲ. ಬಿಟ್ಟು ಹೋದ ನಂತರ ಯಾವ ರಾಜಕಾರಣ ಮಾಡುತ್ತಾನೆ ಎನ್ನತಕ್ಕ ವಿಷಯಕ್ಕೆ ಸಂಬಂಧವಿದೆ ಎಂದು ನಾನು ಭಾವಿಸಿದ್ದೇನೆ. ಮಾನ್ಯ ಅಧ್ಯಕ್ಷರೆ, ೬ನೇ ತಾರೀಖು ನಾನು ಕಾಂಗ್ರೆಸ್—ಐ ಪಕ್ಷವನ್ನು ಬಿಟ್ಟು ಬಂದೆ. ಇದೇ ತಿಂಗಳು ೧೮ನೇ ತಾರೀಖು ಕಳೆದ ಭಾನುವಾರದ ದಿವಸ ರಾಜ್ಯ ಮಟ್ಟದ ಕಾರ್ಯಕರ್ತರ ಸಮಾವೇಶವನ್ನು ನಾನ ಕರೆದೆ. ಏಕೆಂದರೆ ಆ ವಿಷಯವನ್ನು ಶ್ರೀಮಾನ್ ಶೀರ್‍ನಾಳಿ ಚಂದ್ರಶೇಖರ್‌ರವರು ಪ್ರಸ್ತಾಪ ಮಾಡಿದ್ದಾರೆ. ಆ ವಿಷಯ ದಾಖಲೆಗಳಲ್ಲಿ ಕೂಡ ಇದೆ. ನಾನು ಆ ಸಮಾವೇಶವನ್ನು ಮಾಡಿರತಕ್ಕ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಮಾತನಾಡಬೇಕಾದರೂ ಕೂಡ ಮಧ್ಯೆ ಅವರು ಮಾತನಾಡಿದರು. ಆ ಒಂದು ಕಾರ್ಯಕರ್ತರ ಸಮಾವೇಶಕ್ಕೆ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇನೆ ಎನ್ನತಕ್ಕ ಮಾತು ಬಂದಿದೆ. ಆ ವಿಷಯದ ತೀರ್ಮಾನವನ್ನು ತಮ್ಮ ಮೂಲಕ ದೇಶದ ಜನತೆಗೆ ಬಿಡುತ್ತೇನೆ. ಆದರೆ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಈ ಸಂದರ್ಭದಲ್ಲಿ ಅದರ ವಿವರಕ್ಕೆ ಹೋಗುವುದಕ್ಕೆ ನನಗೆ ಆಸೆ ಇಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಏಕೆಂದರೆ, ಕಾರ್ಯಕರ್ತರ ಸಮಾವೇಶ ಆಗಿರತಕ್ಕಂಥಾದ್ದಕ್ಕೂ, ನಾವು ಇಲ್ಲಿ ಬೇಡಿಕ ಮೇಲೆ ಚರ್ಚೆ ಮಾಡುವುದಕ್ಕೂ ಯಾವುದೇ ನೆಂಟಸ್ತನವಿಲ್ಲ, ಸಂಬಂಧವಿಲ್ಲ. ಆ ದೃಷ್ಟಿಯಿಂದ ನಾನು ಆ ದಿವಸ ಈ ವಿಷಯವನ್ನು ಸ್ವಲ್ಪವೂ ಕೂಡ ಪ್ರಸ್ತಾಪ ಮಾಡಲಿಲ್ಲ. ಅಷ್ಟಾದರೂ ಕೂಡ ದಾಖಲೆಯಲ್ಲಿ ಬರತಕ್ಕಂಥ ಕೆಲವು ಮಾತುಗಳನ್ನು ಮಾನ್ಯ ಸದಸ್ಯರು ಆಡಿದ ಮೇಲೆ ನಾನು ವಿವರಣೆಕೊಡದೇಹೋದರೆ ತಪ್ಪಾಗುತ್ತದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಏನೆಂದರೆ, ನಾನು ೫ ರೂಪಾಯಿಯನ್ನೂ ಖರ್ಚುಮಾಡಲಿಲ್ಲ, ವಾಹನಕ್ಕಾಗಲಿ, ಯಾವುದಕ್ಕೇ ಆಗಲಿ ಒಂದು ರೂಪಾಯಿಯನ್ನೂ ಕೂಡ ಖರ್ಚುಮಾಡಲಿಲ್ಲವೆಂದು ನಾನು ತಮ್ಮ ಮೂಲಕ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಬೇರೆ ಯಾರಾದರೂ ಖರ್ಚು ಮಾಡಿದ್ದಾರೋ ಎನ್ನತಕ್ಕ ಪ್ರಶ್ನೆ ಬಂದಿತು. ಒಂದು ಸಮಾವೇಶ ನಡೆದಾಗ ಒಂದು ಕಾರ್ಯಕ್ರಮ ನಡೆದಾಗ ಹಣದ ಖರ್ಚು ಆಗಿರುತ್ತದೆ, ಇಲ್ಲ ಎಂದು ಹೇಳುವುದಿಲ್ಲ. ೧೯೭೭ನೇ ಇಸವಿಯಲ್ಲಿ ನಾನು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗಲೂ ಕೂಡ ಅದೇ ಗಾಜಿನ ಮನೆಯಲ್ಲಿ ಸಮಾವೇಶ ನಡೆಸಿದ್ದೇವೆ. ಮಾನ್ಯ ಸದಸ್ಯರಾದ ಕೆ.ಹೆಚ್. ಶ್ರೀನಿವಾಸ್‌ರವರು, ಅದು ಯಾವಾಗಲೂ ಕೂಡ ಕಾಂಗ್ರೆಸ್ ಕಡೆ

ಒಲವು ಇನತಕ್ಕ ಗಾಜಿನ ಮನೆ ಎಂದು ಹೇಳಿದ್ದಾರೆ ಅವರ ವ್ಯಾಖ್ಯಾನವನ್ನು ಒಪ್ಪುವುದಕ್ಕೆ ನಿಜವಾಗಲು ಕೂಡ ಅವರಿಗೇ ಬಿಡುತ್ತೇನೆ. ಏಕೆಂದರೆ, ಬೇರೆಯವರು ಹೇಳಿರತಕ್ಕದ್ದು ಬೇರೆಯವರಿಗೆ ಬಿಟ್ಟಿರತಕ್ಕ ವಿಷಯ ಆ ಗಾಜಿನ ಮನೆಯ ಒಲವು ಮುಂದೆ ಯಾವುದು ಇದೆ ಎನ್ನತಕ್ಕ ತೀರ್ಮಾನವನ್ನು ಮುಂದೆ ಭವಿಷ್ಯ ತೀರ್ಮಾನ ಮಾಡುತ್ತದೆ. ಅವರು ಸುಮಾರಾಗಿ ಹಳೇ ಚರಿತ್ರೆಯನ್ನು ನಂಬಿ ಮಾತನಾಡತಕ್ಕ ಮಾತುಗಳು. ಹೊಸ ಚರಿತ್ರೆ, ಅಧ್ಯಾಯಗಳು ಈ ರಾಷ್ಟ್ರದಲ್ಲಿ, ಈ ದೇಶದಲ್ಲಿ ನಡೆದಿವೆ. ಆ ದೃಷ್ಟಿಯಿಂದ ಮುಂದಿನ ತೀರ್ಮಾನವನ್ನು ದೇಶದ ಜನತೆಗೆ ಬಿಟ್ಟು ಬಿಡುತ್ತೇನೆ. ಆದ್ದರಿಂದ ಇವರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆ ದಿವಸ ಸುಮಾರು ಒಂದೂವರೆ ಲಕ್ಷ ಜನ ಬಂದಿದ್ದರು. ನಾನು ಎಲ್ಲಾ ಜಿಲ್ಲೆಗಳಿಗೆ ಹೋಗಲಿಕ್ಕೆ ಸಾಧ್ಯವಾಗಲಿಲ್ಲ. ಇಷ್ಟಾದರೂ ಕೂಡ ಸ್ವಯಂ ಪ್ರೇರಿತರಾಗಿ ನಮ್ಮ ಕರೆಗೆ ಓಗೊಟ್ಟು ಅಲ್ಲಿ ಬಂದಿರತಕ್ಕ ಜನ ಕಾಂಗ್ರೆಸ್—ಐ ಪಕ್ಷಕ್ಕೆ ಸೇರಿರತಕ್ಕ ಜನ ಮತ್ತು ಬೇರೆ ಪಕ್ಷಗಳ ನಾಯಕರನ್ನು ವೀಕ್ಷಕರಾಗಿ ನಾನು ಆಹ್ವಾನ ಮಾಡಿದ್ದೇನೆ. ಬೇರೆ ರಾಜಕೀಯ ಪಕ್ಷಗಳ ಸಮಾರಂಭ ನಡೆದಾಗ ಮತ್ತೊಂದು ಪಕ್ಷದವರನ್ನು ವೀಕ್ಷಕರಾಗಿ ಕರೆಯುಂತ್ತಾರೆ, ಆ ಸಂಪ್ರದಾಯ ನಮ್ಮ ರಾಷ್ಟ್ರದಲ್ಲಿದೆ. ಆ ದೃಷ್ಟಿಯಿಂದ ನಾನು ಕರೆದಿದ್ದೇನೆ. ಇಷ್ಟಾದರೂ ಕೂಡ ಮಾನ್ಯ ಶ್ರೀನಿವಾಸ್‌ರವರು ಒಂದು ಮಾತನ್ನು ಹೇಳಿದರು. ಏನೆಂದರೆ, ಮಾನ್ಯ ಬಂಗಾರಪ್ಪನವರು ಆ ಸಮಾವೇಶ ಮಾಡಿರತಕ್ಕಂಥಾದ್ದು, ವಿರೋಧಪಕ್ಷಗಳಲ್ಲಿ ಈ ಒಂದು ಶಕ್ತಿ ಪ್ರದರ್ಶನ ಮಾಡಿಸುವುದಕ್ಕೆ, ಭಯ ಹುಟ್ಟಿಸುವುದಕ್ಕೋಸ್ಕರ ಎಂದು ಹೇಳಿದ್ದಾರೆ. ಭಯ ಹುಟ್ಟಿಸುವುದಾಗಿದ್ದರೆ, ವಿರೋಧಪಕ್ಷದವರು, ನಾವೆಲ್ಲರೂ ಸೇರಿ ಆ ಸಮಾವೇಶವನ್ನು ಮಾಡುವುದಕ್ಕೂ, ವಿರೋಧ ಪಕ್ಷದ ನಾಯಕರನ್ನು ಕರೆದು ಕೂರಿಸಿ ಮಾತನಾಡತಕ್ಕಂಥಾದ್ದು ಏನು? ನಾವು ಅಲ್ಲಿ ಮೌಲ್ಯಗಳ ಬಗ್ಗೆ ಮಾತನಾಡಿದ್ದೇವೆ, ಕಾರ್ಯಕ್ರಮದ ಬಗ್ಗೆ ಮಾತನಾಡಿದ್ದೇವೆ, ವಿರೋಧಪಕ್ಷಗಳ ಒಕ್ಕೂಟದ ಬಗ್ಗೆ ಮಾತನಾಡಿದ್ದೇವೆ, ಅದು ನಮಗೆ ಸೇರಿರತಕ್ಕ ಹಕ್ಕು, ನಾವು ಅದನ್ನು ಚಲಾವಣೆಯಲ್ಲಿ ಕೊಟ್ಟಿದ್ದೇವೆ. ಸುಮಾರಾಗಿ ಅಲ್ಲಿ ಬಂದಿರತಕ್ಕ ಜನ ಯಾರು ಎಂದು ತಿಳಿದುಕೊಳ್ಳುವುದಕ್ಕೆ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರಿಗೆ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ, ಆ ಕಾರ್ಯಕರ್ತರಿಗೂ ಇವರಿಗೂ ನೆಂಟಸ್ತನ ತಪ್ಪಿರತಕ್ಕಂಥ ವಿಷಯ ರಾಷ್ಟ್ರಕ್ಕೆ ಗೊತ್ತಾಗಿದೆ. ವಿರೋಧಪಕ್ಷದ ಸಾಲಿನಲ್ಲಿ ಕೂತಿರತಕ್ಕ ಕಾಂಗ್ರೆಸ್ ಪಕ್ಷದ ಸದಸ್ಯರಾಗಿರತಕ್ಕ ಜನರ ಮುಖಂಡರ ಸಂಪರ್ಕವನ್ನು ಸಂಪೂರ್ಣವಾಗಿ ಕಳೆದುಕೊಂಡಮೇಲೆ ಯಾವುದೇ ಸಂಪರ್ಕ ಅಲ್ಲಿ ಸಾಧ್ಯವಾಗುಗುವುದಿಲ್ಲ. ಆ ದೃಷ್ಟಿಯಿಂದ ಮಾನ್ಯ ಶ್ರೀನಿವಾಸ್‌ರವರಿಗೆ ಗೊತ್ತಿಲ್ಲ. ಅಲ್ಲಿ ಬಂದಿರತಕ್ಕ ಸಾವಿರಾರು ಜನರನ್ನು ಪತ್ತೆಹಚ್ಚಿರತಕ್ಕಂಥಾವರು, ೧೯ ಜಿಲ್ಲೆಗಳಿಂದ ಜನ ಬಂದಿದ್ದಾರೆ ಎಂದು ಸ್ಪಷ್ಟಪಡಿಸುತ್ತಿದ್ದೇನೆ. ಅಲ್ಲಿ ಬಂದಿರತಕ್ಕವರು ಕಾಂಗ್ರೆಸ್—ಐ ಪಕ್ಷಕ್ಕೆ ಸೇರಿರತಕ್ಕ ಕಾರ್ಯಕರ್ತರು. ನಾನು ಅದಕ್ಕೆ ಹೆಸರು ಇಡುವುದಕ್ಕೆ ಹೋಗಲಿಲ್ಲ. ಒಂದುವೇಳೆ ಹೆಸರು ಇಟ್ಟಿದ್ದರೆ ಕಾಂಗ್ರೆಸ್—ಐ ಕಾರ್ಯಕರ್ತರು ಕೆಲವರು ದೊಂಬಿ ಮಾಡತಕ್ಕ ಪ್ರಸಂಗ ಬರಬಹುದು ಎಂಬ ಸಲಹೆಯನ್ನು ನಮ್ಮ ಸ್ನೇಹಿತರು ಕೊಟ್ಟರು, ಕೊಟ್ಟಮೇಲೆ ಸಧ್ಯಕ್ಕೆ ಒಂದು ಹೆಸರನ್ನು ಇಟ್ಟು ಸದ್ಯಕ್ಕೆ ಕರೆಯತಕ್ಕ ಪ್ರಯತ್ನ ಮಾಡಿದೆವು ಬಹಳ ಸಂತೋಷ; ರಾಜ್ಯದ ಜನತೆಗೆ ಅಭಿನಂದನೆ ಸಲ್ಲಿಸುತ್ತೇನೆ. ಅಷ್ಟೊಂದು ಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬರದೇಹೋದರೂ ಕೂಡ ಅಸಂಖ್ಯಾತ ಬೆಂಬಲವನ್ನು ಕೊಟ್ಟರು.

ಶ್ರೀ ಜಿ. ಕೆ. ತಕ್ಕೇದ್.—ಇದು ಪರ್ಸನಲ್ ಎಕ್ಸ್‌ಪ್ಲನೇಷನ್ ಆಗುತ್ತದೆಯೇ, ಇದು ಪರ್ಸನಲ್ ಎಕ್ಸಪ್ಲನೇಷನ್ ಅಲ್ಲ, ಪಕ್ಷದ ಪ್ರಚಾರ ಆಗುತ್ತದೆ ತಾವು ಈಬಗ್ಗೆ ಸೂಕ್ತವಾದ ನಿರ್ಣಯ ಕೊಡಬೇಕು. ಇದು ಪರ್ಸನಲ್ ಎಕ್ಸಪ್ಲನೇಷನ್ ಅಲ್ಲ, ಮಾನ್ಯ ಬಂಗಾರಪ್ಪನವರು ಈ ವೇದಿಕೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ದೃಷ್ಟಿಯಿಂದ ಆ ಕಾರ್ಯಕರ್ತರ ಸಭೆಯನ್ನು ವ್ಯವಸ್ಥೆ ಮಾಡಿದ್ದೇನೆ. ಅವರು ಸುಮಾರಾಗಿ ನಿರೀಕ್ಷಣೆ ಮಾಡಿದ್ದರು. ಬೆಂಗಳೂರಿನ ಗಾಜಿನ ಮನೆಯನ್ನು ನನಗೆ ಕೊಡುವುದಕ್ಕೂ ಕೂಡ ಕೆಲವು ಕಡೆ ಚರ್ಚೆಯಾಗಿದೆ, ಚರ್ಚೆ ನಡೆದಿರತಕ್ಕಂಥ ವಿಷಯ ಕೂಡ ನನಗೆ ಗೊತ್ತಿದೆ.

ಅಧ್ಯಕ್ಷರು.—ಅವರು ೨ ಕೋಟಿ ಎಂದು ಹೇಳಿದ್ದಾರೆ, ಅದಕ್ಕೆ ನೇರವಾಗಿ ಏನಾದರೂ ಹೇಳುವುದಿದ್ದರೆ ಹೇಳಿ. ಮತ್ತೆ ಲ್ಯಾಂಡ್ಸ್ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಈಗಾಗಲೇ ಅರ್ಧ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದಕ್ಕೆ ಸಂಬಂಧಪಟ್ಟಿರತಕ್ಕದ್ದನ್ನು ಹೇಳಿ

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ೧೮ನೇ ತಾರೀಖಿನ ಸಮಾವೇಶ ನಡೀತಲ್ಲ ಅದೇ ಇವರಿಗೆ ಬಿದ್ದಿರತಕ್ಕ ಬೆಂಕಿ. ಸುಮಾರಾಗಿ ಭಯ ಏನಾದರೂ ಹುಟ್ಟಿದರೆ ಈ ಕಡೆ ಅಲ್ಲ, ತಮ್ಮ ಕಡೆ ಹುಟ್ಟಿದೆ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಈಗ ಚುನಾವಣೆಗಳು ಹತ್ತಿರ ಬರುತ್ತಿವೆ. ದೂರ ಇಲ್ಲ. ಮಾನ್ಯ ಸದಸ್ಯರುಗಳಾದ ಕೆ ಹೆಚ್. ಶ್ರೀನಿವಾಸ್‌ರವರನ್ನು, ಶೀರ್ನಾಳಿ ಚಂದ್ರಶೇಖರ್‌ರವರನ್ನು, ಗಟ್ಟಿ ಚಂದ್ರಶೇಖರ್‌ರವರನ್ನು, ಭಾಸ್ಕರನಾಯ್ಡುರವರನ್ನು ಇತ್ಯಾದಿ ಮಿತ್ರರನ್ನು ಸೇರಿಸಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ಸ್ವಾಮಿ, ನನ್ನದು ಕ್ರಿಯಾಲೋಪವಿದೆ. ಮಾನ್ಯ ಸದಸ್ಯರು ನನ್ನ ಹೆಸರನ್ನು ಎತ್ತಿದ್ದಾರೆ, ಆದುದರಿಂದ ನಾನು ಸ್ವಲ್ಪ ವಿವರಣೆ ಕೊಡಬೇಕಾಗಿದೆ. ನಾನು ಅವರ ಬಗ್ಗೆ ಅಪ್ರಿಶಿಯೇಟ್ ಮಾಡಿದೆ. ಮಾನ್ಯ ಬಂಗಾರಪ್ಪನವರು ೧೯೭೭ರಲ್ಲಿ ಅದೇ ಸ್ಥಾನದಲ್ಲಿ ಕುಳಿತಿದ್ದರು. ಅನಂತರ ಭೂ ಪ್ರದಕ್ಷಿಣೆ ಮಾಡಿ ಮತ್ತೆ ಅಲ್ಲಿಗೇ ಬಂದಿದ್ದಾರೆ. ಒಬ್ಬ ಏಕೈಕ ವ್ಯಕ್ತಿ ಬಾಕಿ ಮುಖಂಡರುಗಳನ್ನೆಲ್ಲಾ ಸೇರಿಸಿದರು ಎಂದು ನಾನು ನಿಮ್ಮನ್ನು ಅಪ್ರಿಶಿಯೇಟ್ ಮಾಡಿದೆ. ನಾವು ಹೆದರಿಕೊಂಡಿದ್ದೇವೆ ಎಂದು ನೀವು ಹೆದರಿಸಬೇಡಿ.

ಬಹಳ ಜನರು ನನ್ನನ್ನು ಕೇಳಿದರು, ಏನು ಗಟ್ಟಿಯವರೇ ಎಂದು, ನಾನು ಅವರಿಗೆ ಹೇಳಿದೆ, ದೇವರಾಜ ಅರಸರು ೮ ವರ್ಷಗಳ ಕಾಲ ಮುಖ್ಯ ಮಂತ್ರಿಗಳಾಗಿದ್ದರು, ಅವರ ಕಾಲದಲ್ಲಿ ಹಿಂದುಳಿದವರಿಗೆ ಬೇಕಾದಷ್ಟು ಮಾಡಿದರು. ಆ ಸಂದರ್ಭದಲ್ಲಿ ಅವರ ಪಕ್ಷಕ್ಕೆ ಬೇಕಾದಷ್ಟು ಜನ ಸೇರಿದ್ದರು. ಆದರೆ ಕೊನೆಗೆ ೧೯೮೦ರಲ್ಲಿ ಅವರ ಪಕ್ಷದಲ್ಲಿ ಒಬ್ಬರೂ ಉಳಿಯಲಿಲ್ಲ. ಆದ್ದರಿಂದ, ಇದಕ್ಕೆ ಏತಕ್ಕೆ ಹೆದರುತ್ತೀರೆಂದು ಹೇಳಿದೆ. ನಿಮ್ಮ ಬಗ್ಗೆ ಮೆಚ್ಚಿಗೆಯ ಅಭಿಪ್ರಾಯ ಇದೆ. ನೀವು ಎಲ್ಲರನ್ನೂ ಒಟ್ಟಿಗೆ ಸೇರಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ನೀವು ಅಪಾದನೆ ಮಾಡಿದ್ದಕ್ಕೆ ಹೇಳಲಿಲ್ಲ. ಎಲ್ಲ ಸದಸ್ಯರು ತಿಳಿದು ಕೊಳ್ಳಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ. ಬಾಸ್ಕರನಾಯ್ಡು.—ಬೇರೆ ಯಾರಾದರೂ ಭಯಪಡಬಹುದು. ಆದರೆ ಭಾಸ್ಕರನಾಯ್ಡು ಭಯಬೀಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು, ಸುಮಾರಾಗಿ ಅವರು ಹೇಳಿರುವ ಮಾತನ್ನು ಒಪ್ಪುವುದಾದರೆ ೧೯೭೭ರಲ್ಲಿ ಕೂಡ ದೇಶದ ಪ್ರಮುಖ ವ್ಯಕ್ತಿಗಳ ಪಕ್ಷಕ್ಕೆ ಜನರು ಸೇರುತ್ತಿದ್ದರು. ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ. ೧೮ನೇ ತಾರೀಖಿನ ದಿವಸ ಏನು ಸಮಾವೇಶ ನಡೆಯಿತು ಅದು ಅವರಿಗೆ ಭಯ ಹುಟ್ಟಿಸಿದೆ ಆ ಮೇಲೆ ಬಂಗಾರಪ್ಪನವರಿಗೆ ಏನಾದರೂ ಮಾಡಬೇಕೆಂಬ ಉದ್ದೇಶದಿಂದ ಕಳೆದ ೩ ದಿನಗಳಿಂದ ಸತತವಾಗಿ ಈ ಸದನದಲ್ಲಿ ವ್ಯಕ್ತಿ ನಿಂದನೆ, ಇಲ್ಲದ ಸಲ್ಲದ ವಿಷಯಗಳನ್ನು ಹುಟ್ಟಿಸತಕ್ಕದ್ದು ಬಹಳವಾಗಿ ನಡೆಯುತ್ತಿದೆ. ಇದಕ್ಕೆ ಸಂಚು ತಯಾರಾಗಿದೆ ಎಂದು ನನಗೆ ಗೊತ್ತಾಗಿದೆ. ಈ ಸದನದಲ್ಲಿ ಮಾತನಾಡಿದ ಕೆಲವು ಮಾನ್ಯ ಸದಸ್ಯರು ಆ ಕೆ. ಕೆ. ಮೂರ್ತಿ ಯಾರು ? ಎಂದರು.

ಅಧ್ಯಕ್ಷರು.—ಆ ವಿಚಾರ ಬೇಡ ಅದು ನನಗೆ ಗೊತ್ತಿದೆ. Allotment of land by the Land Tribunal in favour of your nephew, allotment of land in favour of his friend. ಈ ಎರಡು ಪ್ರಸ್ತಾಪಕ್ಕೆ ಉತ್ತರ ಹೇಳಿದ್ದೀರಿ. ಇನ್ನೇನಾದರೂ ತಮ್ಮ ವೈಯಕ್ತಿ ಚಾರಿತ್ರ್ಯಕ್ಕೆ ಸಂಬಂಧಪಟ್ಟದ್ದು ಇದ್ದರೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಆ ಮಾತನ್ನು ಅವರು ಆಡಿರುವುದರಿಂದ ಅದಕ್ಕೆ ಉತ್ತರ ಕೊಡದಿದ್ದರೆ ಆಗುವುದಿಲ್ಲ.

ಅಧ್ಯಕ್ಷರು.—ಪರ್ಸನಲ್ ಎಕ್ಸಪ್ಲನೇಷನ್ ಅಂದರೆ ಏನು ? ರೂಲ್ಸ್ ಏನು ಹೊಸದಲ್ಲ. ನೇರವಾಗಿ ತಮ್ಮ ಚಾರಿತ್ರ್ಯಕ್ಕೆ ಸಂಬಂಧಪಟ್ಟಂತೆ ಇದ್ದರೆ ಹೇಳಿ. ಅದಕ್ಕೆ ಅವಕಾಶ ಇದೆ. ಅದನ್ನು ಬಿಟ್ಟು ಬೇರೆಯದಕ್ಕೆ ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಭೂಮಿ ಬಗ್ಗೆ ಪ್ರಸ್ತಾಪ ಮಾಡಿದಾಗ ಉತ್ತರ ಕೊಟ್ಟಿದ್ದೇನೆ. ಅದರ ಬಗೆ ಮತ್ತೊಂದು ಸಾರಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತು ಮಾತ್ರ ಹೇಳಿ

ಬಯಸುತ್ತೇನೆ. ಗೇಣೀದಾರರ ಮನೆತನದವರಾದ ನಾವು ಅರ್ಜಿ ಹಾಕಿರುವ ಮತ್ತು ಅದಕ್ಕೆ ಭೂಮಾಲೀಕರು ಒಪ್ಪಿಗೆ ಕೊಟ್ಟಿರುವ ವಿಷಯ ಪ್ರಸ್ತಾಪ ಮಾಡಿದ್ದಾರೆ. ಮತ್ತೊಂದು ಖರೀದಿ ಪತ್ರ ವಗೈರೆ ವಿಚಾರ ಹೇಳುತ್ತಿದ್ದಾರೆ. ಖರೀದಿ ಮಾಡಿರುವ ವಿಷಯ ನಿಜ. ಅದಕ್ಕೆ ಹರಿಜನರು ಗೇಣೀದಾರರಾಗಿದ್ದರೆಂಬ ಮಾತನ್ನು ಆಡಿದ್ದಾರೆ. ಅದು ಸತ್ಯಕ್ಕೆ ಸಂಪೂರ್ಣ ದೂರವಾಗಿರತಕ್ಕ ವಿಷಯ. ಯಾವ ಹರಿಜನರ ಅರ್ಜಿಗಳೂ ಇರಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹರಿಜನರು ಎಂದು ಹೇಳಲಿಲ್ಲ. ಪರಶುರಾಮಪ್ಪನವರು ತೀರ್ಮಾನ ಮಾಡಿದ ಕೇಸಿಗೆ ಏನು ಹೇಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೂ ನಮಗೂ ಸಂಬಂಧವಿಲ್ಲ. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ಒಂದು ವೇಳೆ ಅನ್ಯಾಯವಾಗಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ, ಅದನ್ನು ಸರಿಪಡಿಸುವುದಕ್ಕೆ ಅಧಿಕಾರ ಇದೆ. ಅದಕ್ಕೆ ಕಾನೂನು ಇದ್ದರೆ ಆ ಪ್ರಕಾರ ಕ್ರಮ ತೆಗೆದುಕೊಳ್ಳಲಿ, ಇಲ್ಲದಿದ್ದರೆ ಕಾನೂನನ್ನು ಮಾಡಲಿ. ಆದರೆ ಅದಕ್ಕೋಸ್ಕರವೇ ಕಾನೂನು ಮಾಡತಕ್ಕದ್ದು ಸರಿಯಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟ ಹಾಗೆ ಕಾನೂನು ಮಾಡಿ ಆ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು ಸರ್ಕಾರಕ್ಕೆ ಬಿಟ್ಟಿದು. ನಮ್ಮದೇನಾದರೂ ತಪ್ಪಾಗಿದ್ದರೆ ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧರಾಗಿದ್ದೇವೆ. ವಾಸದ ಮನೆ ಬಗ್ಗೆ ಪದೇ ಪದೇ ಮಾತನಾಡಿದ್ದಾರೆ. ಒಬ್ಬರು ಸದಸ್ಯರು ೬ ಸಾವಿರ ರೂಪಾಯಿ ಬಾಡಿಗೆ ಎಂದು ಹೇಳಿದ್ದಾರೆ, ಇನ್ನು ಕೆಲವರು ೨ ಸಾವಿರ ರೂಪಾಯಿ ಎಂದು ಹೇಳಿದ್ದಾರೆ. ಅದು ನಿಜ. ಆ ಮನೆಯಲ್ಲೇ ಇರಬೇಕೆಂಬ ಆಸೆ ನನಗಿಲ್ಲ. ರೆಂಟ್ ಕಂಟ್ರೋಲಿಗೆ ಅನೇಕ ಬಾರಿ ಅರ್ಜಿ ಕೊಟ್ಟಿರತಕ್ಕ ದಾಖಲಾತಿ ಇದೆ. ಇದುವರೆಗೆ ಮನೆ ಸಿಕ್ಕಿಲ್ಲ. ರೆವಿನ್ಯೂ ಸಚಿವರು ಡೈರೆಕ್ಷನ್ ಕೊಟ್ಟಿದ್ದಾರೆ, ಅದಕ್ಕಾಗಿ ಅವರಿಗೆ ನಾನು ಅಭಿನಂದಿಸಬೇಕಾಗಿದೆ. ಮಂತ್ರಿ ಪದವಿಯನ್ನು ಬಿಟ್ಟಮೇಲೆ ಸರ್ಕಾರೀ ಗೃಹದಲ್ಲಿರಬಾರದೆಂದು ಅನೇಕ ಬಾರಿ ರೆಂಟ್ ಕಂಟ್ರೋಲಿಗೆ ಅರ್ಜಿ ಸಲ್ಲಿಸುತ್ತಲೇ ಬಂದಿದ್ದೇನೆ. ಹಲವಾರು ಕಾರಣಗಳಿಂದ ಮನೆ ಸಿಕ್ಕಿಲ್ಲ. ಮೊನ್ನೆ ಕೂಡ ರೆವಿನ್ಯೂ ಸಚಿವರು ಮಲ್ಲೇಶ್ವರಂನಲ್ಲಿರತಕ್ಕ ಒಂದು ಮನೆಗೆ ಡೈರೆಕ್ಷನ್ ಕೊಟ್ಟರು. ಆದರೆ, ಆ ಮನೆಯನ್ನು ಹೈಕೋರ್ಟ್ ಜಡ್ಜ್‌ರಿಗೆ ಕೊಡಬೇಕೆಂದು ಸರ್ಕಾರದಿಂದ ಆದೇಶ ಬಂತು. ಆಗ ಡೈರೆಕ್ಷನ್ ಕೊಟ್ಟಿದ್ದು ಊರ್ಜಿತವಾಗಲಿಲ್ಲ. ಅಲ್ಲೇ ಇರಬೇಕೆಂಬ ಆಸೆ ನನಗಿಲ್ಲ. ಅದಕ್ಕೋಸ್ಕರ ಬೇರೆ ಬೇರೆ ಮನೆಗಳಿಗೆ ಅರ್ಜಿ ಕೊಡುತ್ತಾ ಬಂದೆ. ಬಾಡಿಗೆ ೬ ಸಾವಿರ ರೂಪಾಯಿ ಅಲ್ಲ ೨ ಸಾವಿರ ರೂಪಾಯಿ. ಈ ಹಣ ಅವರಿಗೆ ಎಲ್ಲಿಂದ ಬರುತ್ತದೆ. ಅವರು ಬಹಳ ಅದ್ದೂರಿ ಜೀವನ ನಡೆಸುತ್ತಿದ್ದಾರೆಂದು ಶೀರ್ನಾಳಿ ಚಂದ್ರಶೇಖರ್ ಕೇಳಿದರು. ಅಂಥ ವ್ಯಕ್ತಿ ನಾನಾಗಿದ್ದರೆ ನನ್ನ ಬಾಯಿಂದ ಅಂಥ ಮಾತು ಹೊರಡುತ್ತಿರಲಿಲ್ಲ. ಈ ದೇಶದ ಜನತೆಗೆ ಗೊತ್ತಿದೆ, ಎಲ್ಲರೂ ಅದನ್ನು ಒಪ್ಪಲಾರರು ಎಂದೇ ಮಾತನಾಡುತ್ತಿದ್ದೇನೆ. ನಾನು ಅದ್ದೂರಿ ಜೀವನ ಬಯಸಿದವನೂ ಅಲ್ಲ. ಅಧಿಕಾರ ಬಯಸಿದವನೂ ಅಲ್ಲ. ಅವೆಲ್ಲವನ್ನು ಬದಿಗೊತ್ತತಕ್ಕ ಗುಣಗಳನ್ನು ಹೊಂದಿರತಕ್ಕವನು. ಈ ವಿಷಯವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಇನ್ನು ಉಳಿದಿರತಕ್ಕ ವಿಷಯವನ್ನು ಅವರ ಅವಗಾಹನೆಗೆ ಬಿಡುತ್ತೇನೆ. ಅವುಗಳ ಬಗ್ಗೆ ಹೆಚ್ಚಿನ ವ್ಯಾಖ್ಯಾನ ಮಾಡುವುದಕ್ಕೆ ತಯಾರಾಗಿಲ್ಲ. ಯಾವುದೇ ವ್ಯವಹಾರ ನಡೆದಿದ್ದರೂ ಕಾನೂನು ಪ್ರಕಾರ ನಡೆದಿದೆ. ಬಡವರಿಗೆ ಅನ್ಯಾಯವಾಗದ ಹಾಗೆ ನಡೆದರೂ, ಏನೋ ಮಾತು ಬರುತ್ತದೆಂದು ಛೇಡಿಸಿ ಹೇಳುತ್ತಿದ್ದಾರೆ. ನನಗೆ ವಿರೋಧವಾಗಿರತಕ್ಕ ಜನ ಮುಖ್ಯ ಮಂತ್ರಿಗಳಿಗೆ ಅರ್ಜಿ ಬರೆದಿರುವುದೆಲ್ಲ ಗೊತ್ತಿದೆ. ಏನೇನು ಎನ್‌ಕ್ವೈರಿ ಮಾಡಿದ್ದಾರೆಂಬುದು ಗೊತ್ತು. ಆ ಜನರನ್ನು ಹೋಗಿ ಹೋಗಿ ಪ್ರಚೋದಿಸಿದ್ದಾರೆ. ನೀವು ಹೋಗಿ ದೂರು ಕೊಡಿ ಎಂದು ಹೇಳಿದ್ದಾರೆ. ಇವತ್ತು ನನಗೆ ತೊಂದರೆ ಬಂದರೆ ನಾಳೆ ನಿಮಗೆ ಬರಬಹುದು. ಅರ್ಜಿ ಕೊಡಿಸತಕ್ಕ ಸಲುವಾಗಿ ಮಂತ್ರಿ ಮಂಡಲದಲ್ಲಿ ಸದಸ್ಯರಾಗಿರತಕ್ಕ ಕೆಲವರು ಸ್ಥಳಕ್ಕೆ ಹೋಗಿ ಬಂದಿದ್ದಾರೆ. ಆದರೆ ಆ ಜನರು ಒಪ್ಪಿಲ್ಲ. ಬಂಗಾರಪ್ಪನವರು ಆ ರೀತಿ ಅಲ್ಲ ಎಂದು ಹೇಳಿದ್ದಾರೆ. ನಿಮಗೆ ದರಖಾಸ್ತು ಜಮೀನು ಕೊಡುತ್ತೇವೆಂದು ಅರ್ಜಿಗೆ ಸಹಿ ತೆಗೆದುಕೊಂಡಿದ್ದಾರೆ. ಅವರಿಗೆ ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿ ಈ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ನಡೆದಿರತಕ್ಕ ವಿಷಯಗಳು ಈ ಮಟ್ಟಕ್ಕೆ ಹೋಗಿವೆ. ಇವೆಲ್ಲ ಈ ಸದನಕ್ಕೆ ಸಂಬಂಧಪಡುವುದಿಲ್ಲವೆಂದು ಸದನದ ಮುಂದೆ ತರುವುದಕ್ಕೆ ಇಷ್ಟಪಡದೆ ಸುಮ್ಮನಿದ್ದೆ. ಮಂತ್ರಿಮಂಡಲದಲ್ಲಿರತಕ್ಕ ಸದಸ್ಯರಲ್ಲಿ ಕೆಲವರು ಸಂಪೂರ್ಣವಾಗಿ ವಿಷಯಕ್ಕೆ ಗಮನಕೊಟ್ಟು ತೊಂದರೆ ಕೊಡಬೇಕೆಂದು ಮಾಡಿದ್ದಾರೆ. ಆ ಪಕ್ಷದಲ್ಲಿದ್ದಾಗಲೂ ಸಾಕಷ್ಟು ಸೇಡು ತೀರಿಸಬೇಕೆಂಬ ಪ್ರಯತ್ನ ಮಾಡಿದ್ದಾರೆ. ಈಗ ಪಕ್ಷ ಬಿಟ್ಟು ಬಂದದ್ದು ಅವರಿಗೆ ಅನುಕೂಲವೇ ಆಗಿದೆ. ಆ ರೀತಿ ಏನಾದರೂ

ನಾನು ಮಾಡಿದ್ದರೆ ಅದರ ಪರಿಣಾಮವನ್ನು ಅನುಭವಿಸಲಿಕ್ಕೆ ನಾನು ತಯಾರಾಗಿದ್ದೇನೆ. ಅಷ್ಟಿಲ್ಲದೆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ. ಈ ದೃಷ್ಟಿಯಿಂದ, ಇವರು ರಾಜಕೀಯವಾಗಿ ನನ್ನ ತೇಜೋವಧೆ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಆ ಹಿನ್ನೆಲೆಯಲ್ಲಿ ಇವರು ತೀರ್ಮಾನ ತೆಗೆದು ಕೊಂಡಿದ್ದಾರೆಂದು ಹೇಳಿ ಈ ದಿಸೆಯಲ್ಲಿ ಅವರು ಮಾಡಿರತಕ್ಕ ಎಲ್ಲ ಆಪಾದನೆಗಳನ್ನು ಅಲ್ಲಗಳೆಯುತ್ತೇನೆ. ಅವಕ್ಕೂ ನನಗೂ ಸಂಬಂಧವಿಲ್ಲನೆಂದು ಹೇಳುತ್ತೇನೆ. ಒಂದು ವೇಳೆ ಆ ರೀತಿ ಇದೆ ಎಂಬ ಭಾವನೆ ಬಂದರೆ ನನ್ನ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಹಕ್ಕಿದೆ, ಕ್ರಮ ಕೈಗೊಳ್ಳಲಿ. ಕಾನೂನು ಇಲ್ಲದಿದ್ದರೆ ಕಾನೂನು ಮಾಡಿ ಕ್ರಮ ಕೈಗೊಳ್ಳಲಿ ಎಂದು ಹೇಳುತ್ತೇನೆ. ಇದಕ್ಕಿಂತ ಹೆಚ್ಚಿಗೆ ಹೇಳು ವುದಕ್ಕೆ ಸಾಧ್ಯವಿಲ್ಲ, ತಾವು ಅವಕಾಶ ಕೊಟ್ಟಿದ್ದರಿಂದ ಎಲ್ಲವನ್ನು ಹೇಳುವುದಕ್ಕೆ ಅವಕಾಶವಾಯಿತು, ಹೇಳಿದ್ದೇನೆ. ಅವರು ಮಾಡಿರತಕ್ಕ ಆಪಾದನೆಗಳು ಜನರ ಗಮನಕ್ಕೆ ಹೋದರೆ ಒಳ್ಳೆಯದಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಹೇಳಬೇಕಾದುದೇನಿಲ್ಲ. ಅವರು ಕೊಡಬೇಕಾದ ವಿವರಣೆ ಕೊಟ್ಟಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಣಯಿಸಲು ಸಾರ್ವಜನಿಕರಿದ್ದಾರೆ, ಪತ್ರಿಕೆಯವರಿದ್ದಾರೆ. ಯಾವುದೇ ಸಂಚಿಗೆ ನಾನು ಭಾಗಿಯಾಗಿಲ್ಲ. ಏನು ನಡೆದಿದೆ, ಇಲ್ಲ ಎಂಬುದು ನನಗೆ ಗೊತ್ತಿಲ್ಲ. ನನಗೆ ಯಾವ ದುರುದ್ದೇಶವೂ ಇಲ್ಲ. ಸಂಪೂರ್ಣವಾಗಿ ವಿರೋಧ ಪಕ್ಷಕ್ಕೆ ಹೋದ ಮಾತ್ರಕ್ಕೆ ಅಧಿಕಾರಕ್ಕೆ ಬರುವುದಕ್ಕಾಗುವುದಿಲ್ಲವೆಂದು ತಿಳಿದುಕೊಂಡಿಲ್ಲ. ಆ ರೀತಿ ಮೌಢ್ಯ ನನಗಿಲ್ಲ. ಯಾರೇ ಆಗಲಿ ಒಳ್ಳೆಯ ರೀತಿಯಿಂದ ಸಾರ್ವಜನಿಕ ನಕ್ಷೆಯಲ್ಲಿ ಮೇಲೆ ಬಂದರೆ, ನನಗೆ ಅಧಿಕಾರ ಸಿಗದಿದ್ದರೂ ಅದನ್ನು ನೋಡಿ ಸಂತೋಷಪಡತಕ್ಕ ಶಕ್ತಿ ನನಗಿದೆ ಆಸ್ತಿ ವಿಷಯ ಎತ್ತಿದ್ದರಿಂದ ಆ ಬಗ್ಗೆ ಕೆಲವು ಜನಗಳು ಮಾಡಿರತಕ್ಕದ್ದನ್ನು ಅವರ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಅವರ ವಿರುದ್ಧವಾಗಿ ನಾನು ಯಾವ ಸಂಚಿನಲ್ಲಿಯೂ ಭಾಗಿಯಾಗಿಲ್ಲ. ಅಂಥ ಸಂಚಿನಲ್ಲಿ ನನಗೆ ಆಸಕ್ತಿ ಇಲ್ಲವೆಂದು ಸ್ಪಷ್ಟ ಪಡಿಸುತ್ತೇನೆ.

ಅಧ್ಯಕ್ಷರು.—ಸಭೆ ಈಗ ಮುಂದೂಡಲ್ಪಟ್ಟಿದೆ.

(ಸಭೆ ಮಧ್ಯಾಹ್ನ ೧-೨೦ಕ್ಕೆ ಮುಂದೂಡಿ ಪುನಃ ಮಧ್ಯಾಹ್ನ ೩-೩೦ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(The House re-assembled at 3-33 p.m.)

(MR. SPEAKER (SRI K. H. RANGANATH) In the Chair)

MR. SPEAKER.—Discussion concluded. The Hon'ble Chief Minister to reply.

ಶ್ರೀ ಆರ್. ಗುಂಡೂರಾವ್.—ಸನ್ಮಾನ್ಯ ಅಧ್ಯಕ್ಷರೆ........

ಶ್ರೀ ಕೆ. ಪ್ರಭಾಕರ್.—ಕೆಲವರಿನ್ನೂ ಮಾತನಾಡಬೇಕಾಗಿತ್ತು.

ಅಧ್ಯಕ್ಷರು.—೧೫ ಗಂಟೆ ಚರ್ಚೆಯಾಗಿದೆ. ಇನ್ನೂ ಎಷ್ಟು ಚರ್ಚೆ ಮಾಡಬೇಕು ? ಚರ್ಚೆ ಸಾಕು. ಈಗ ಮುಖ್ಯಮಂತ್ರಿಗಳು ಉತ್ತರ ಕೊಡಲಿ. It was made known in the morning itself. That is why we sat half an hour more.

ಶ್ರೀ ಕೆ. ಪ್ರಭಾಕರ್.—ಈ ಪಟ್ಟಿಯಲ್ಲಿ...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಡಿಸ್ಟರ್ಬ್ ಮಾಡಬೇಡಿ. ಸುಮಾರು ೧೫-೧೬ ಗಂಟೆ ಯಷ್ಟು ಚರ್ಚೆಯಾಗಿದೆ. ಚರ್ಚೆ ಮುಗಿಸಬೇಕು ಎಂದೇ ಬೆಳಿಗ್ಗೆ ಅರ್ಧ ಗಂಟೆ ಜಾಸ್ತಿ ಕೂಡ ಕುಳಿತಿದ್ದೇವೆ. ಇನ್ನೂ ಚರ್ಚೆಯಾಗಬೇಕು ಎಂದರೆ ಅದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಮಂಡಿಸಿದ ಬೇಡಿಕೆ ಮೇಲೆ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಸದನ ಪ್ರಥಮವಾಗಿ ಸ್ಥಾಪನೆಯಾದ ಅನೇಕ ವರ್ಷಗಳ ಕಾಲ ನಾನು ಈ ಸಭೆಯ ಸದಸ್ಯನಾಗಿರಲಿಲ್ಲ. ಆದರೆ ಅನೇಕ ಜನ ಹಿರಿಯ ಸದಸ್ಯರು ಮೊದಲಿನಿಂದ ಇದ್ದವರು

ಇವತ್ತು ಈ ಸದನದಲ್ಲಿದ್ದಾರೆ. ಮಾನ್ಯ ಆರ್ಮುಗಂ ಅವರಿದ್ದಾರೆ, ಮಾನ್ಯ ದೇವೇಗೌಡರಿದ್ದಾರೆ, ಮಾನ್ಯ ಪ್ರಭಾಕರ್ ಅವರಿದ್ದಾರೆ, ಮಾನ್ಯ ರಾಮೇಗೌಡರಿದ್ದಾರೆ, ಇನ್ನೂ ಅನೇಕ ಜನ ಹಿರಿಯ ಸದಸ್ಯರಿದ್ದಾರೆ. ಈ ಸದನದ ಸಂಪ್ರದಾಯ ಮೊದಲಿನಿಂದ ಏನಿದೆಯೆಂದರೆ ಮುಖ್ಯಮಂತ್ರಿ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಯನ್ನು ಮಂಡಿಸಿದಾಗ ಅದರ ಬಗ್ಗೆ ಚರ್ಚೆಯನ್ನು ಅಧಿಕೃತವಾಗಿ ವಿರೋಧ ಪಕ್ಷದ ನಾಯಕರಾಗಿರತಕ್ಕಂಥವರು ಪ್ರಾರಂಭ ಮಾಡುತ್ತಾರೆ. ಇಂಥವರೇ ಮಾತನಾಡಬೇಕು ಎಂದು ಕಾನೂನೇನೂ ಇಲ್ಲ. ಆದರೆ ಅದು ಸಂಪ್ರದಾಯ. ಮಾನ್ಯ ಅಧ್ಯಕ್ಷರು ವಿರೋಧಪಕ್ಷದ ಸದಸ್ಯರ ಪೈಕಿ ಯಾರನ್ನು ಬೇಕಾದರೂ ಕರೆಯಬಹುದು. ಯಾರು ಬೇಕಾದರೂ ಮಾತನಾಡಬಹುದು. ಆದರೆ ನಾನು ಸಂಪ್ರದಾಯಬದ್ಧವಾಗಿ ನಡೆಯುತ್ತಿದ್ದುದನ್ನು ಮಾತ್ರ ಹೇಳುತ್ತಿದ್ದೇನೆ. ಆದರೆ ನಾನು ಮುಖ್ಯಮಂತ್ರಿಯಾದ ಮೇಲೆ ನನ್ನ ಅದೃಷ್ಟವೋ ಏನೋ ಗೊತ್ತಿಲ್ಲ, ಆ ಸಂಪ್ರದಾಯದ ಪ್ರಕಾರ ನಡೆಯುತ್ತಿಲ್ಲ. ೧೯೮೦ನೇ ಜನವರಿ ೧೨ನೇ ತಾರೀಖು ನಾನು ಮುಖ್ಯಮಂತ್ರಿಯಾದೆ. ಆಗ ವಿರೋಧಪಕ್ಷದ ನಾಯಕರಾಗಿ ಶ್ರೀಮಾನ್ ದೇವರಾಜ ಅರಸು ಅವರು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಅವರು ನಾನು ಹತ್ತು ವರ್ಷ ಜೊತೆಯಲ್ಲಿ ಕೆಲಸ ಮಾಡಿದವರು. ಏತಕ್ಕೋಸ್ಕರ ಮುಖ್ಯಮಂತ್ರಿಗಳ ಬೇಡಿಕೆ ಮೇಲೆ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆಂದರೆ ಈ ರಾಜ್ಯದ ಜನತೆಗೆ ಆಡಳಿತ ಪಕ್ಷ ಎಷ್ಟು ಜವಾಬ್ದಾರಿಯುತವಾದೆಯೋ ಅಷ್ಟೇ ಜವಾಬ್ದಾರಿಕೆಯನ್ನು ವಿರೋಧ ಪಕ್ಷದಿಂದಲೂ ಜನತೆ ನಿರೀಕ್ಷೆ ಮಾಡುತ್ತದೆ. ವಿರೋಧಪಕ್ಷ ಇರುವುದು ಕೇವಲ ವಿಧಾನಸಭೆಗೆ ಬಂದು ಯಾವುದೋ ಕೆಲವು ವೈಯಕ್ತಿಕವಾದ ವಿಷಯಗಳನ್ನು ಅಥವಾ ವೈಯಕ್ತಿಕವಾದ ಟೀಕೆಗಳನ್ನು ಮಾತ್ರ ಮಾಡುವುದಕ್ಕಲ್ಲ. ರಾಜ್ಯಾಂಗವನ್ನು ರಚನೆ ಮಾಡಿದಾಗಲೂ ಆಡಳಿತ ಪಕ್ಷ ಮತ್ತು ವಿರೋಧಪಕ್ಷವನ್ನು ಏತಕ್ಕಾಗಿ ಮಾಡಿದರೆಂದರೆ ರಾಜ್ಯದಲ್ಲಿರುವ ಆಡಳಿತ ಪಕ್ಷ ಲೋಪ ಮಾಡಿದಾಗ ಅದನ್ನು ಕಂಡುಹಿಡಿದು ತಿದ್ದುವುದಕ್ಕಾಗಿ ಮಾಡಿದರು. ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ಆಡಳಿತ ಪಕ್ಷ ದಾರಿಯನ್ನು ತಪ್ಪಿದಾಗ, ಆಡಳಿತದಲ್ಲಿ ಲೋಪದೋಷಗಳನ್ನು ಉಂಟು ಮಾಡಿದಾಗ ಅದನ್ನು ಕಂಡು ಹಿಡಿದು ಸರಿಯಾದ ದಾರಿಯಲ್ಲಿ ಹೋಗುವಂತೆ ಮಾಡಲು ಸಹಕಾರಿಯಾಗಿರುವುದಕ್ಕೋಸ್ಕರ ವಿರೋಧ ಪಕ್ಷವನ್ನು ರಚನೆ ಮಾಡಿದರು. ಏನಾದರೂ ಆಡಳಿತದಲ್ಲಿ ಲೋಪದೋಷಗಳಾದರೆ ಅದು ರಾಜಕೀಯ ಅಧಿಕಾರವನ್ನು ಹಿಡಿದಂಥ ಪಕ್ಷದಿಂದ ಆಗುತ್ತಿದೆಯೋ, ಅಥವಾ ಇವತ್ತಿನ ಆಡಳಿತ ಪದ್ಧತಿಯಿಂದ ಆಗುತ್ತಿದೆಯೋ ಅಥವಾ ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆಯೋ ಎಂಬುದನ್ನು ಕಂಡುಹಿಡಿದು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಸಹಾಯಕವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ರಾಜ್ಯಾಂಗ ರಚನೆ ಮಾಡಿದವರು ವಿರೋಧಪಕ್ಷ ಇರಬೇಕು ಎಂದು ಮಾಡಿದರು. ಸಭಾನಾಯಕರು ; ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳಿಗೆ, ಜವಾಬ್ದಾರಿಯುತವಾಗಿ ಅಷ್ಟೇ ಅಧಿಕೃತವಾಗಿ ವಿರೋಧ ಪಕ್ಷದ ನಾಯಕರಾದಂಥವರು ಪ್ರಾರಂಭ ಮಾಡಬೇಕು ; ಅವರಿಗೂ ಅಷ್ಟೇ ಜವಾಬ್ದಾರಿ ಇದೆ. ಆಕಸ್ಮಿಕವಾಗಿ ವಿರೋಧ ಪಕ್ಷದ ನಾಯಕರಿಗೆ ಅನಾರೋಗ್ಯವಾಗಿದ್ದರೆ ; ತನ್ನ ಪಕ್ಷದ ಸಭೆಯಲ್ಲಿ ಭಾಗ ವಹಿಸುವುದಕ್ಕೆ ಡೆಲ್ಲಿಗೆ ಹೋಗಿದ್ದರೆ ? ತನ್ನ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಬಹುದು. ಕರ್ನಾಟಕದ ಶಾಸನ ಸಭೆಯಾಗಿರಲಿ ; ರಾಷ್ಟ್ರದ ಇತರ ರಾಜ್ಯಗಳ ಶಾಸನ ಸಭೆಗಳಾಗಿರಲಿ ಬಂದ ಸಂಪ್ರದಾಯದ ರೀತ್ಯ ವಿರೋಧ ಪಕ್ಷದ ನಾಯಕರೇ ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ. ಆದರೆ, ಕರ್ನಾಟಕದಲ್ಲಿ ೧೯೮೦ನೇ ಇಸವಿಯಿಂದ, ನನ್ನ ಅದೃಷ್ಟವೋ ಏನೋ ? ದಿವಂಗತ ದೇವರಾಜ ಅರಸು ಅವರು ಚರ್ಚೆಯನ್ನು ಪ್ರಾರಂಭ ಮಾಡಿದ್ದರು ; ಅವರು ನ್ಯಾಯವಾಗಿ ಪ್ರಾರಂಭ ಮಾಡಬೇಕಾಗಿರಲಿಲ್ಲ. ನಾನು ಅವರ ಜೊತೆಯಲ್ಲಿಯೇ ಮಂತ್ರಿಯಾಗಿದ್ದವನು ; ಈ ರಾಜ್ಯದ ಪ್ರಗತಿಪರವಾದ ಹಾಗೂ ಅಪ್ರಗತಿಪರವಾದ ಕಾರ್ಯಕ್ರಮಗಳಲ್ಲಿ ಜಂಟೀ ಜವಾಬ್ದಾರಿಯಾಗಿದ್ದೆನು. ನಾನು ಮಂತ್ರಿಮಂಡಲವನ್ನು ಬಿಟ್ಟು ಮೂರು ತಿಂಗಳಿಗೆ ನನ್ನ ಮೇಲೆ ಆಪಾದನೆ ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ನಮ್ಮ ಮೇಲೆ ಆಪಾದನೆ ಮಾಡುವಂತಿದ್ದರೆ ಮಾನ್ಯ ದೇವೇಗೌಡರು ಮಾಡಬೇಕಾಗಿತ್ತು. ಜೆ. ಹೆಚ್. ಪಟೇಲ್‌ರವರು ಮಾಡಬೇಕಾಗಿತ್ತು ; ರಾಜಶೇಖರನ್‌ರವರು ಮಾಡಬೇಕಾಗಿತ್ತು ; ಆರ್ಮುಗಂ ಮತ್ತು ಗಂಗಾಧರನ್‌ರವರು ಮಾಡಬೇಕಾಗಿತ್ತು. ಆದರೆ, ಶ್ರೀಮಾನ್ ಅರಸುರವರು ನನ್ನ ಮೇಲೆ ಆಪಾದನೆ ಮಾಡುವುದಕ್ಕಾಗುವುದಿಲ್ಲ. ಇನ್ನು ಎರಡನೇ ವರ್ಷ ಮಾನ್ಯ ಬಸವಲಿಂಗಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಿದರು ; ಅದು ನನ್ನ ಅದೃಷ್ಟವೇ. ಅವರು ನನ್ನ ಮೇಲೆ ಏನು ಮಾತನಾಡುವುದಕ್ಕೆ ಸಾಧ್ಯ ? ಅವರು ಯಾವತ್ತೂ ಆಡಳಿತ ಪಕ್ಷದಲ್ಲಿದ್ದವರು ; ಅದರಲ್ಲಿಯೂ ಹೆಚ್ಚಿಗೆ ಮಂತ್ರಿಗಳಾಗಿಯೇ ಬಂದವರು. ಸ್ವಲ್ಪ ದಿವಸದಲ್ಲಿ ಈ ಕಡೆ ಬರುತ್ತಾರೆಂದು ಹೇಳಿದ್ದೆ ; ಈಗ ಬಂದೇ ಬಿಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೇ, ಸಮಾಜದ ಹಿಂದುಳಿದ ವರ್ಗದವರ, ಪರಿಶಿಷ್ಟ ವರ್ಗದವರ ಬಗ್ಗೆ ನಾವು ಏನು ಹೇಳುತ್ತಿದ್ದೇವೆ. ಇವತ್ತು ಆರ್ಥಿಕ ಬದಲಾವಣೆ, ಸಾಮಾಜಿಕ ಬದಲಾವಣೆಯಾಗಬೇಕು ; ರಾಜಕೀಯ ಬದಲಾವಣೆಯಾಗಬೇಕು ; ಆಡಳಿತ ಬದಲಾವಣೆಯಾಗಬೇಕೆಂದು ಹೇಳುತ್ತಿದ್ದರೂ ಒಂದು ದಶಕದಲ್ಲಿ ಏತಕ್ಕೆ ಆಗಲಿಲ್ಲ. ಹಿನೇ ವರ್ಷದಲ್ಲಾದರೂ ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಕಾಂಗ್ರೆಸ್ ಪಕ್ಷದ ತತ್ವಗಳನ್ನು ಒಪ್ಪದೇ ಇರುವಂಥ ಹಿಂದುಳಿದ ವರ್ಗಕ್ಕೆ ಸೇರಿದವರೊಬ್ಬರು ವಿರೋಧ ಪಕ್ಷದ ನಾಯಕರಾಗಿದ್ದಾರೆ ; ಸರ್ಕಾರದ ಲೋಪದೋಷಗಳನ್ನು ಎತ್ತಿ ಹಿಡಿಯುತ್ತಾರೆಂದು ತಿಳಿದುಕೊಂಡಿದ್ದೆ. ಅಲ್ಲದೆ, ಲಹಿನೇ ಇಸವಿಯಲ್ಲಿ ಚುನಾವಣೆಗೆ ಹೋಗುವವರಿದ್ದೇವೆ ; ಆಡಳಿತದಲ್ಲಿ ಆಗಿರುವಂಥ ಲೋಪ ದೋಷಗಳ ಬಗ್ಗೆ ಒಂದು ಹೊಸ ಬೆಳಕು ಚೆಲ್ಲಿ ; ರಾಜ್ಯದ ಜನತೆಯ ಮುಂದೆ ಲೋಪದೋಷಗಳನ್ನು ಎತ್ತಿ ಹೇಳುವಂಥ ನೈತಿಕ ಹಾಗೂ ತಾಂತ್ರಿಕ ಹಕ್ಕನ್ನು ಪಡೆದಿದ್ದಾರೆ. ಈ ವರ್ಷವಾದರೂ ರಚನಾತ್ಮಕ ಟೀಕೆಗಳನ್ನು ಕೇಳುತ್ತೇವೆ ಎಂದು ತಿಳಿದುಕೊಂಡಿದ್ದರೆ ; ಈ ಸಾರಿ ಬಂಗಾರಪ್ಪನವರು ಪ್ರಾರಂಭ ಮಾಡುತ್ತಾರೆ. ನಾನು ಯೋಚನೆ ಮಾಡಿದೆ, ನನಗಿನ್ನೂ ಅದೃಷ್ಟ ಗಟ್ಟಿ ಇದೆ ; ಮಾನ್ಯ ಸಾಗರ್ ರವರೇ ತಾವು ವಿರೋಧ ಪಕ್ಷದ ನಾಯಕರಾದ ದಿನ ನಾನು ಬಹಳ ಸಂತೋಷದಿಂದ ಸ್ವಾಗತ ಮಾಡಿದ್ದೇನೆ. ರಾಜ್ಯದ ಆಗುಹೋಗುಗಳ ಬಗ್ಗೆ ತಮಗೂ ಜವಾಬ್ದಾರಿ ಇದೆ ; ಈ ರಾಜ್ಯದ ಜನತೆಗೆ ವಿಧಾನಸೌಧದಲ್ಲಿ ಕೂತುಕೊಂಡು ವಿರೋಧ ಪಕ್ಷದ ನಾಯಕರು ಸರ್ಕಾರದ ಲೋಪದೋಷಗಳ ಬಗ್ಗೆ ಎಷ್ಟರ ಮಟ್ಟಿಗೆ ಬೆಳಕು ಚೆಲ್ಲುತ್ತಾರೆಂದು ಎಲ್ಲರೂ ಕಾಯುತ್ತಿದ್ದಾರೆ. ತಾವು ಜನತೆಗೆ ಮೋಸ ಮಾಡುವುದಕ್ಕಾಗುವುದಿಲ್ಲ. ವಿರೋಧ ಪಕ್ಷದಲ್ಲಿ ನಾಯಕರು ಇರಬೇಕು. ಉಪ ನಾಯಕರು ಇರಬೇಕು. ಆ ಒಂದು ದೃಷ್ಟಿಯಿಂದಲೇ ವಿರೋಧ ಪಕ್ಷಕ್ಕೆ ಮನ್ನಣೆ ಕೊಡುವುದು, ಪರಿಸ್ಥಿತಿ ಹೀಗಿರುವಾಗ ಈ ವರ್ಷ ಪ್ರಾರಂಭ ಮಾಡುವುದಕ್ಕೆ ಯಾರಿಗೆ ಬಿಟ್ಟಿರಿ. ೧೯೮೦ನೇ ಇಸವಿಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಮೇಲೆ, ನಮ್ಮ ಮಂತ್ರಿ ಮಂಡಲದಲ್ಲಿ ಹನ್ನೊಂದುವರೆ ತಿಂಗಳು ಸದಸ್ಯರಾಗಿದ್ದಂಥವರಿಗೆ, ಈ ರಾಜ್ಯದ ಜನತೆ ಯಾವ ಪಕ್ಷವನ್ನು ಅಧಿಕಾರಕ್ಕೆ ತಂದರೋ ; ಆ ಪಕ್ಷದ ಸದಸ್ಯರಾಗಿದ್ದು ; ಶಾಸನ ಸಭೆಯ ಸದಸ್ಯರಾಗಿದ್ದು ; ಆ ಪಕ್ಷದ ನೀತಿ ಮತ್ತು ತತ್ವಗಳಿಗೆ ಬದ್ಧರಾಗಿದ್ದಂತವರು ಈ ಸಾರಿ ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ವಿರೋಧ ಪಕ್ಷದವರಿಗೆ Technically and legally you are hundred per cent right. But morally you have lost. Today, you are there only for technicality sake. But you have no moral courage to face the people of Karnataka as a Leader of the Opposition. Because you have shirked the responsibility of initiating the debate which was the right of the opposition leader and which was in practice since 1956, if I remember correct. I am subject to correction.

SRI A. LAKSHMI SAGAR,—Sir, Your reasoning is not well founded.

I welcome if Mr. Bangarappa criticise the Government as a member of the legislative assembly or as a leader of particular group. But initiating discussion bud get demands by him shows that there is bankruptcy of leaders in the opposition to-day.

SRI A. LAKSHMISAGAR.—That is your reasoning.

SRI R. GUNDU RAO.—Whether it is may reasoning or anybody's reasoning. it is not for me to decide or it is not for the House to decide.

SRI S. BANGARAPPA.—That is exactly the point.

SRI R. GUNDU RAO.—Yes, that is exactly what I am telling. So, let us not worry about it now Neither it is in my hands nor it is in your hands, it is in the hands of voters, the people of Karnataka. It is not our business to discuss here. I am talking about the

propriety and convention of this House. I am questioning it. I am not questioning any other thing. I am not bothered whether I will become the Chief Minister of this State in future also. If the people vote for my party or any otchr party, the leader of that party will be leader of the House. I don't care for it. That is why, I said that it is not only the Government that is responsible to the people, but the opposition party, leaders and members of the opposition one also responsible. They are equally responsible, answerable and accountable to the people.

SRI A. LAKSHMISAGAR.--We are discharging our duties to the best of our abilities.

SRI R. GUNDU RAO.--No, yon have faild to discharge.

MR. SPEAKER.-Please do not interrupt unless he yields......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಈಲ್ಡ್ ಆದರೆ......

ಶ್ರೀ ಆರ್. ಗುಂಡೂರಾವ್.—ಆಗಬಹುದು.

ಶ್ರೀ ಎಸ್. ಬಂಗಾರಪ.—ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರ ಜವಾಬ್ದಾರಿ ಕುರಿತು ಮಾನ್ಯ ಮುಖ್ಯಮಂತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದಾರೆ. bankruptcy of the leaders in the opposition parties ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ಅವರು ಮಾಡಲಿ. ಅವರಿಗೆ ಹಕ್ಕಿದೆ. ಅಂತಿಮವಾಗಿ ಜನರು ತೀರ್ಮಾನ ಮಾಡುತ್ತಾರೆಂದು ಅವರು ಹೇಳಿದ್ದಾರೆ. ನಾವು ಸಹ ಅದನ್ನೇ ಹೇಳಿದ್ದೇವೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಖಾತೆಗಳನ್ನು ೧೯೮೦ನೇ ಇಸವಿಯಿಂದ ಹೊಂದಿದ್ದರೂ ಸಹ ಈ ಖಾತೆಗಳಿಗೆ ಸಂಬಂಧಪಟ್ಟ ಬೇಡಿಕೆಗಳು ಇಲ್ಲಿ ಚರ್ಚೆಗೆ ಬರುವ ಕಾಲದಲ್ಲಿ ಕೆಲವು ಖಾತೆಗಳನ್ನು ಬೇರೆ ಮಂತ್ರಿಗಳಿಗೆ ವಹಿಸಿದ್ದಾರೆ; ಜಂಟಿ ಜವಾಬ್ದಾರಿ ಇದೆ ಎಂಬ ಕಾರಣದಿಂದ ಈ ರೀತಿ ಮಾಡಿದರೂ ಸಹ ನಿಮ್ಮಲ್ಲೂ bankruptcy ಇದೇ ಎಂದು ನಾನು ಏತಕ್ಕೆ ಕೇಳಬಾರದು?

ಶ್ರೀ ಆರ್. ಗುಂಡೂರಾವ್.— ಅದನ್ನು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ವಿರೋಧಪಕ್ಷದವರಿಗೆ ಇರುವಂತಹ ಹಕ್ಕನ್ನು ನಾವು ಹೊಂದಾಣಿಕೆ ಮಾಡಿಕೊಂಡು ಒಬ್ಬೊಬ್ಬರು ಒಂದೊಂದು ವಿಷಯದ ಮೇಲೆ ಮಾತನಾಡಿದ್ದೇವೆ. What is wrong with that? I cannot understand. What is the propriety there?

SRI R. GUNDU RAO.--Please hear me. Whatever you want to tell say it afterwords. I have yielded just because you were my colleague till day before yesterday.

SRI S. BANGARAPPA.—Thank you.

ಶ್ರೀ ಆರ್. ಗುಂಡೂರಾವ್.—ಮಾನ್ಯ ಜೆ.ಎಚ್. ಪಟೇಲ್ ಅವರಿಗೆ ಬೇಕಾದರೆ ಚರ್ಚೆ ಪ್ರಾರಂಭ ಮಾಡುವಂತೆ ಹೇಳಬಹುದಾಗಿತ್ತು. ಆದರೆ ನಿಮಗೆ ಹೇಳಿದರು. I kLow you very well as you know me very will. You were not here when I started.

SRI S. BANGARAPPA.—I also know you very well.

ಶ್ರೀ ಜೆ.ಎಚ್. ಪಟೇಲ್.—ತಾವು ಹೇಳಿದಿರಿ I know you very well ಎಂದು. ಇವರು ಹೇಳಿದರು I also know you very well ಎಂದು. ಇದೇ ಕಾರಣಕ್ಕಾಗಿ ನಾವು ಇವರನ್ನು ಉಪಯೋಗಿಸಿದ್ದು. ಇನ್ನು ಯಾವುದಕ್ಕೂ ಅಲ್ಲ. ಇದೇ ಕಾರಣಕ್ಕಾಗಿ ಉಪಯೋಗಿಸಿದ್ದು. ಬಂದೂಕನ್ನು ಯಾವುದಕ್ಕೆ ಉಪಯೋಗಿಸಬೇಕೆಂಬುದು ನಮಗೆ ಗೊತ್ತಿದೆ.

SRI K.H. SRINIVAS.—Now the cat is out of the bag.

SRI R. GUNDU RAO.—To that extent I am greatful to Mr. J.H. Patel.

ಮಾನ್ಯ ಬೊಮ್ಮಾಯಿ ಅವರು ತಡವಾಗಿ ಬಂದರು. ನಾನು ಪ್ರಾರಂಭದಲ್ಲಿ ಹೇಳಿದೆ, I do not want to repeat it. I just said that it is my fortune that whenever the Chief Minister presents his demands, the convention used to be that the Leader of the Opposition used to initiate discussion and now that it is not so. You are better person than my Hon. friends like Dr. Deve Gowda, and others. ಈ ಸಭೆಯ ಒಂದು ಸಂಪ್ರದಾಯದ ಪ್ರಕಾರ ಮುಖ್ಯಮಂತ್ರಿಗಳ ಬೇಡಿಕೆಗಳು ಇಲ್ಲಿ ಮಂಡನೆಯಾದಾಗ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಮೊದಲು ಪ್ರಾರಂಭ ಮಾಡುತ್ತಾರೆಂದು ನಾನು ಹೇಳಿದೆ. ೧೯೭೨ರಿಂದಲೂ ನಾನು ಈ ಒಂದು ಪದ್ಧತಿಯನ್ನು ಇಲ್ಲಿ ನೋಡುತ್ತಾ ಬಂದಿದ್ದೇನೆ. It is not the question of sharing portfolios as my hon. friend Mr. Bangarappa said. It is the convention that is important. Suppose the Chief Minister moves important demands like Secretariat, police, irrigation etc. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಈ ರಾಜ್ಯದ ಆಡಳಿತದ ಬಗ್ಗೆ ಯಾವ ಹೊಸ ಬೆಳಕನ್ನು ಚೆಲ್ಲುತ್ತಾರೆಂಬುದನ್ನು ಈ ದೇಶದ ಜನರು ನಿರೀಕ್ಷೆ ಮಾಡುತ್ತಿರುತ್ತಾರೆ. ಅದಕ್ಕಾಗಿಯೇ ವಿರೋಧ ಪಕ್ಷದ ನಾಯಕರು ಎಂದು ಮಾನ್ಯತೆ ಮಾಡಿ ಅವರಿಗೆ ಕ್ಯಾಬಿನೆಟ್ ಮಂತ್ರಿಯ ಸ್ಥಾನಮಾನಗಳನ್ನು ಹಾಗೂ ಎಲ್ಲ ಸೌಲಭ್ಯಗಳನ್ನು ಕೊಡುತ್ತಿರುವುದು. It is a convention, and respect for the Constitutional Practices in the whole system. ಅದಕ್ಕೇ ನಾನು ಹೇಳಿದೆ, ಈ ಸಲ ಈ ಒಂದು ಸಂಪ್ರದಾಯ ತಪ್ಪಿಹೋಯಿತು ಎಂದು. ೧೯೮೦ರಲ್ಲಿ ಮಾನ್ಯ ಬಂಗಾರಪ್ಪನವರು ಈ ಕಡೆ ಇದ್ದರು. ಆಗ ಮಾನ್ಯ ದೇವರಾಜ ಅರಸ್ ಅವರು ಚರ್ಚೆಯನ್ನು ಪ್ರಾರಂಭ ಮಾಡಿದರು. ಆದರೆ ಅವರು ಮತ್ತು ನಾನು ೮ ವರ್ಷಗಳ ಕಾಲ ಜೊತೆಯಲ್ಲಿಯೇ ಇದ್ದವರು. ೧೯೭೧ನೇ ಇಸವಿಯಲ್ಲಿ ಈ ರಾಜ್ಯಕ್ಕೆ ರಾಷ್ಟ್ರಪತಿಯವರ ಆಡಳಿತ ಬಂದಾಗಿನಿಂದ ಹಿಡಿದು ೧೯೮೦ನೇ ಇಸವಿ ಜನವರಿ ೧೨ನೇ ತಾರೀಖಿನವರೆಗೆ ಆದಂಥ ಲಾಭ ನಷ್ಟ ಮತ್ತು ಆದಂಥ ಪ್ರಗತಿ ಎಲ್ಲದಕ್ಕೂ ಜವಾಬ್ದಾರರಾದಂಥ ಅವರು ಈ ರಾಜ್ಯದ ಜನತೆಯ ಮೇಲೆ ಹೊಸ ಬೆಳಕನ್ನು ಚೆಲ್ಲಲು ಸಾಧ್ಯವಿಲ್ಲ ಮತ್ತು ಆರೋಪ ಮಾಡುವುದಕ್ಕೂ ಸಹ ಸಾಧ್ಯವಿಲ್ಲ ಅದು ಕಷ್ಟದ ಕೆಲಸ. ಇಂತಹವರು ಏನಾದರು ಆರೋಪ ಮಾಡಬೇಕಾದರೆ ಒಂದು ವರ್ಷವಾದರೂ ಕಾಯಬೇಕಾಗುತ್ತದೆ. ಇಲ್ಲದಿದ್ದರೆ ಜನರು ನಂಬುವುದಿಲ್ಲ. ಏಕೆಂದರೆ, ಇವರೇ ಇದಕ್ಕೂ ಮೊದಲು ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದ ಚಿಹ್ನೆಯಾದ 'ಕೈ' ಬಗ್ಗೆ ಪ್ರಚಾರ ಮಾಡಿದವರು ಮತ್ತು ಇವರೇ ಬಡವರಿಗೆ ದೇವತೆ. ಇವರು ಇಡೀ ಪ್ರಪಂಚಕ್ಕೇ ಬೇಕಾದವರು ಎಂದೆಲ್ಲಾ ಭಾಷಣ ಮಾಡಿ ಇದ್ದಕ್ಕಿದ್ದಂತೆ ಶ್ರೀಮತಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಎಂದು ಹೇಳಿದರೆ ಯಾರು ಕೇಳುತ್ತಾರೆ? ಇವರಿಗೆ ಆ ರೀತಿ ಹೇಳಲು ಹಕ್ಕಿದೆ. ಆದರೆ ಅದನ್ನು ಜನರು ಕೇಳಬೇಕಲ್ಲ? ಆದ್ದರಿಂದಲೇ ನಾನು ಇದಕ್ಕೆ ಸ್ವಲ್ಪ ಸಮಯ ಕಾಯಬೇಕಾಗುತ್ತದೆ ಎಂದು ಹೇಳಿದ್ದು. ೧೯೬೯ನೇ ಇಸವಿಯವರೆಗೆ ಶ್ರೀಮಾನ್ ನಿಜಲಿಂಗಪ್ಪನವರು ಸಹ ಇವರ ಜೊತೆಯಲ್ಲಿಯೇ ಇದ್ದರು. ಅನಂತರ ಅವರೂ ಸಹ ಇವರಿಂದ ಬೇರೆಯಾದರು. ಆದರೆ ಅಲ್ಲಿಯವರೆಗೆ ಇವರು ಬೇರೆಬೇರೆ ಸಮಯದಲ್ಲಿ ಇವರ ಪಕ್ಷದ ಮತಿಯಿಂದಲೇ ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವರು ಇದ್ದಕ್ಕಿದ್ದಂತೆ ಶ್ರೀಮತಿ ಇಂದಿರಾಗಾಂಧಿ ಅವರು ಶ್ರೀ ಮೊರಾರ್ಜಿ ದೇಸಾಯಿ ಅವರನ್ನು ಅಧಿಕಾರದಿಂದ ತೆಗೆದರೆಂಬ ಕಾರಣದಿಂದ ಶ್ರೀಮತಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಎಂದು ಹೇಳಿದರು. ಆದರೆ ಜನತೆ ಅದನ್ನು ಒಪ್ಪಲಿಲ್ಲ. ಒಂದುಪಕ್ಷ ಇಂಥಾದ್ದನ್ನೆಲ್ಲಾ ಹೇಳುವುದಿದ್ದರೆ ಹತ್ತು ವರ್ಷ ಇಲ್ಲವೇ ೧೫ ವರ್ಷಗಳು ಬಿಟ್ಟು ನಂತರ ಹೇಳಬಹುದು. ಇವರ ಬಗ್ಗೆಯೂ ಸಹ ನಾನು ಆಮೇಲೆ ಹೇಳುತ್ತೇನೆ. ೧೯೮೧ನೇ ಇಸವಿಯಲ್ಲಿ ಮಾನ್ಯ ಬೊಮ್ಮಾಯಿ ಅವರು ಚರ್ಚೆ ಪ್ರಾರಂಭ ಮಾಡಬಹುದೆಂದು ನಾನು ಯೋಚನೆ ಮಾಡಿದ್ದೆ. ಆದರೆ ಉಪನಾಯಕರಾಗಿದ್ದ ಶ್ರೀ ಬಸವಲಿಂಗಪ್ಪನವರು ಚರ್ಚೆ ಪ್ರಾರಂಭ ಮಾಡಿದರು. ಇವರೂ ಸಹ ಸುಮಾರು ಎರಡು ದಶಕಗಳ ಕಾಲ ನಮ್ಮ ಜೊತೆಯಲ್ಲಿಯೇ

ಇದ್ದವರು. ಇದರ ಜೊತೆಗೆ ಅವರೂ ನಾನು ಒಂದೆ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದೆವು. ಒಟ್ಟಿಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತಿತ್ತು. ಏಕೆಂದರೆ, It is a joint responsibility. It is responsibility of the Party. It is the responsibility of the Cabinet. Whatever decision is taken in the Cabinet. It is the responsibility of the Leader and every body. It is not the responsibility of the opposition. It is the responsibility of the Party and the Cabinet.

ಅವರು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ನಾನು ಮಿನಿಸ್ಟರ್ ಫಾರ್ ಇನ್ ಫರ್ಮೇಷನ್ ಆಗಿದ್ದೆ. ಅವರು ರೆವಿನ್ಯೂ ಮಂತ್ರಿಯಾಗಿದ್ದಾಗ ನಾನು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿದ್ದೆ. ಎಲ್ಲ ಒಂದೇ ಕಡೆ ಕುಳಿತುಕೊಂಡು ಡಿಸ್ಕಸ್ ಮಾಡಿ ಒಟ್ಟಾಗಿ ಇನಿಷಿಯೇಟ್ ಹೇಗೆ ಮಾಡಲು ಸಾಧ್ಯ. ಗುಂಡೂರಾಯರ ಮೇಲೆ ಮಾಡುವುದಕ್ಕೆ ಆಗುವುದಿಲ್ಲ. ಮಾಡುತ್ತೇವೆಂದು ಹೇಳಬಹುದು. ಆದರೆ ಹೇಗೆ ಮಾಡುತ್ತಾರೆ ಎಂದು ಕೇಳುತ್ತೇನೆ? ಮುಂದೆ ಮಾಡಬಹುದು, ಅದು ಈಗ ಬೇಕಾಗಿಲ್ಲ.

ಶ್ರೀ ಜೆ. ಎಚ್. ಪಟೇಲ್.— ಇನಿಷಿಯೇಟ್ ಮಾಡಲಿಲ್ಲ, ನೆಗೋಷಿಯೇಟ್ ಮಾಡಿದರು.

ಶ್ರೀ ಆರ್. ಗುಂಡೂರಾವ್.—ನೂರಕ್ಕೆ ನೂರು ಕರೆಕ್ಟ್. ತಾವು ಹೇಳಿದನಲ್ಲ, ನೆಗೋಸಿಯೇಷನ್ ಎಂದು, ಇನ್ನೊಬ್ಬರನ್ನು ತಯಾರು ಮಾಡಬೇಕೆಂದು ಹೇಳಿ ನೆಗೋಸಿಯೇಷನ್ ಮಾಡುತ್ತಿರುವಿರಿ. So vehemently he argued on that day. There is nothing wrong. But, you were only telling now why you have chosen him to initiate, that means for negotiation. I can come to the conclusion that you have chosen Sri Bangarappa to negotiate further in future. It is according to you. I never talked about Sri Bangarappa after he left the Ministry.

SRI S. BANGARAPPA.— You have now selected a wrong person for your argument suggesting for negotiation. Now, you have chosen the wrong person undoubtedly.

SRI B. SUBBAIAH SHETTY.— Sri J. H. Patel selected a very competent person.

SRI R. GUNDU RAO.— It is not for me. I will tell you Sri J. H. Patel, you have selected a wrong person according to him.

SRI S. BANGARAPPA — If you say, because Sri Bangarappa was selected for negotiation ಎನ್ನ ತಕ್ಕಂಥ ದೃಷ್ಟಿಯಲ್ಲಿ ಮಾತನಾಡುವುದಾದರೆ you are faling a wrong person.

SRI R. GUNDU RAO.—Please hear what I am telling. ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ, ಅಷ್ಟೇ. ಒಂದು ಸಂದರ್ಭದಲ್ಲಿ ಮಾನ್ಯ ದೇವರಾಜ ಅರಸ್‌ರವರೂ ಕೂಡ ಬ್ಯಾಕ್ ವರ್ಡ್ ಕ್ಲಾಸ್, ಷೆಡ್ಯೂಲ್ ಕ್ಯಾಸ್ಟ್‌ನವರು ತಮ್ಮ ಕಡೆ ಬರುತ್ತಾರೆನ್ನುವ ದೃಷ್ಟಿಯಿಂದ ಇನ್‌ಷಿಯೇಟ್ ಮಾಡಿದರು.

SRI S. R. BOMMAI. — Then, he was the Leader of the Opposition.

SRI R. GUNDU RAO.— Since how long he was the Leader of the Opposition, my dear friend? It is only from 3 months. But, you have to tell this House the laps of one year. My simple point is... ಒಂದು ವರ್ಷದಲ್ಲಿ ೧೯೮೨–೮೩ನೇ ಇಸವಿಯಲ್ಲಿ ಸುಮಾರು ೧೨೦ ಕೋಟಿ ಮಂಜುರಾತಿ ಏನು ಕೊಡುತ್ತಿದ್ದೀರಿ, ಒಂದೆ ಅದಕ್ಕಿಂತಲೂ ಜಾಸ್ತಿ ಮಂಜೂರಾತಿಯನ್ನು ಕೊಟ್ಟಿರಿ. I want to ask one

specific question to my dear friend. You have given approval for one year budget in 1979-80. The person who was standing here, who was holding the office of the Chief Minister from March, 1979 to 1st April......

ಶ್ರೀ ಎಸ್. ಆರ್. ಬೊಮ್ಮಾಯಿ.— ನಮ್ಮ ಮೇಲೆ ಎಷ್ಟು ಉದಾರ ಭಾವನೆ ಇದೆ ತಮಗೆ. ಒಂದು ವಾರದ ಹಿಂದೆ ತಮಗೆ ಇನ್‌ಷಿಯೇಟ್ ಮಾಡತಕ್ಕಂಥ ಅನೇಕ ವಿಚಾರಗಳನ್ನು ಕೊಟ್ಟಾಗ ನೋ ಕಾನ್‌ಫಿಡೆನ್ಸ್ ದೇವರಾಜ ಅರಸ್‌ರವರ ಜೊತೆಯಲ್ಲಿಯೇ ಇದ್ದು ಮಾಡಿದಿರಿ.

SRI R. GUNDU RAO.— You are wrong. I never initiated the debate.

ಶ್ರೀ ಎಸ್. ಆರ್. ಬೊಮ್ಮಾಯಿ.— ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದರಲ್ಲ, ಆವಾಗ ನಿಮಗೆ ಅವಕಾಶ ಮಾಡಿಕೊಡೋಣವೆಂದು ಮಾಡಿದ್ದು. ಆಗ ತಾವು ಒಂದೇ ತಿಂಗಳು ಇದ್ದುದು.

SRI R. GUNDU RAO.— You have got every right to move a No-confidence Motion. It is not my question. You have not ca uht my point. That is what I have earlier said. Technically, I am talking here.

ಶ್ರೀ ಎಸ್. ಆರ್. ಬೊಮ್ಮಾಯಿ.— ಪೊಲಿಟಿಕಲ್ ಆಗಿ ೭ ವರ್ಷಗಳು ಜೊತೆಯಲ್ಲಿಯೇ ಇದ್ದಿರಿ. ಅನಂತರ ತಾವು ಬಂದ ತಕ್ಷಣವೇ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಿರಿ.

SRI R. GUNDU RAO.— You have not caught my point.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಆರ್ಗ್ಯುಮೆಂಟ್ ಏನೆಂದರೆ ಜೊತೆಯಲ್ಲಿಯೇ ಇದ್ದು ತಾವು ಹೊರಗೆ ಬಂದ ತಕ್ಷಣವೇ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಿರಿ.

SRI R. GUNDU RAO.— You have not caught my point. ತಾವು ಇನ್‌ಷಿಯೇಟ್ ಮಾಡುವ ಬಗ್ಗೆ ವಿರೋಧ ಮಾಡುತ್ತಾ ಇಲ್ಲ. I have not opposed him to initiate. I welcomed it. That is a different thing. My simple point is ನೊ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದ್ದು ನಾವು ನೀವು ಸೇರಿಯೇ ಮಾಡಬೇಕಾಯಿತು, You are also a party for that. Why you have chosen me because I was a leader then. Sri Bangarappa is not the leader. Absolutely I have no objection if you elect him to-morrow as the leader. Sri Devaraja Urs was the Leader of the Opposition. Technically, legally, constitutionally and morally everything was right. My simple point is that he was responsible for all the omissions and commissions since 1967 up to 12th January, 1980. For all the budgets you have given approval. So. to criticise that 9 months or 10 months period the people expect from you. That is my point. My simple point i? that the people expeot from you. ೧೯೭೯ನೇ ಇಸವಿಯ ಜನವರಿ ೧೨ನೇ ತಾರೀಖಿನವರೆಗೆ ಆಗಿರುವಂಥ ಲೋಪದೋಷಗಳು ಅನ್ಯಾಯಗಳು ಅಕ್ರಮಗಳು, ಗೋಲಿಬಾರ್ ಆರೋಪಗಳು, ಲ್ಯಾಂಡ್ ಟ್ರಿಬ್ಯುನಲ್ ಅವುಗಳನ್ನೆಲ್ಲ ಜನವರಿ ೧೨ನೇ ತಾರೀಖಿನಿಂದ ಮಾರ್ಚಿ ೩೧ನೇ ತಾರೀಖಿನವರೆಗೆ ಅವರಿಗೆ ಹೇಳುವುದಕ್ಕೆ ಬಿಟ್ಟಿರಿ, ಈಗಲೂ ಜನವರಿವರೆಗೆ ಎಕ್ಸ್‌ಪೆಕ್ಟ್ ಮಾಡಬಹುದಾಗಿತ್ತು. You could have expressed whether may be the Chief Minister, that these are the lapses that have been happened. It is only the simple point that I am telling. ಅವರು ಮಾಡಿದರೂ ಒಂದೇ ಮಾನ್ಯ ಲಕ್ಷ್ಮೀಸಾಗರ್

ಮಾಡಿದರೂ ಒಂದೇ. ಈಗ ನಾನು ಏನು ಹೇಳುತ್ತಿದ್ದೇನೆ ಎಂದರೆ When the Leader of the Opposition is very much present here physically, he could have initiated the debate. ತಾವು ಮಾತನಾಡಿದಿರಿ, ಎಷ್ಟು ಹೊತ್ತು ಮಾತನಾಡಿದಿರಿ, ಒಂದೂ ಮುಕ್ಕಾಲು ಗಂಟೆ ಮಾತನಾಡಿದಿರಿ. ಮಾನ್ಯ ದೇವೇಗೌಡರು ಸುಮಾರು ಎರಡು ಗಂಟೆ ಮಾತನಾಡಿದರು. We have no objection, because you are a senior Member of this House. You were the Opposition Leader and you have got experience. ಮಾನ್ಯ ದೇವೇಗೌಡರಿಗೆ ತಮಗೆ ಏತಕ್ಕೆ ಇಷ್ಟೊಂದು ಅವಕಾಶವೆಂದು ತಾವು ಸಾಕಷ್ಟು ವ್ಯವಹಾರ ಅರಿತವರು. ಹೊಸಬರಿಗೆ ಸಾಕಷ್ಟು ವ್ಯವಹಾರ ತಿಳಿದಿರುವುದಿಲ್ಲ. ಅವರಿಗೂ ನಿಮಗೆ ವ್ಯತ್ಯಾಸವಿದೆ. Because you may highlight certain things and you may throw light on certain things. After I took the Chief Ministership I never told that I know everything. There are certain lapses which you have to bring to my notice by raising, by making certain allegations and charges in this House. If any as a senior-most leader, you may throw light on irrigation problems concerning the State. As Sri Deve Gowda said and as Sri Chowdaiah has said about the Cauvery besin. As you said about Malaprabha, Ghataprabha and so on. After all why you are mentioning it? It is because you are not going to become the Chief Minister over-night. It is only because you are interested in State. You said that the Hubli-Dharwar area has to be developed. They wanted the entire Mandya, Holenarasipur, Tumkur area to be developed. That is the reason why you will be in a better position to charge the Government instead of Sri Bangarappa. Sri Bangarappa could charge the Government only after six months. But, you can charge the whole Government. You can charge my leadership. You can change my past leadership. You have got a betterright. You have got a better experience about these things, whereas a person who was in our party, who was in our Ministry. He will have a less opportunity and less freedom to talk than you.

SRI S. BANGARAPPA.— It is only a convention. Here, it is only a deviation from the existing convention. What is wrong? I cannot understand.

SRI R. GUNDU RAO.— There is nothing wrong according to you. I am telling you it is very important.

SRI S. BANGARAPPA.— I do not think so.

You said it is only a convention. If there is any deviation, it is only a deviation from the exiting convention. Is it not so ? Therefore, what is wrong? I cannot understand, why you have taken that much of pain to explain the whole thing.

SRI R. GUNDU RAO.—According to you it is nothing. I am not worried. But according to me it is more important.

SRI S. BANGARAPPA.—I don't think so.

SRI R. GUNDU RAO.—What all you wanted to say, you said it day before yesterday. It is your concern.

SRI A. LAKSHMISAGAR.—He has no better argument or more convincing argument about administration. Therefore, he is trying to beat about the bush.

ಶ್ರೀ ಮೈಖೇಲ್ ಫರ್ನಾಂಡೀಸ್.—ಬಂಗಾರಪ್ಪನವರು ಮಾತನಾಡುವುದರಿಂದ ನಮಗೆ ಅಸಮಾಧಾನವಿಲ್ಲ. ನಮಗಿಂತ ಅವರಿಗೆ ಒಳಗಂಟ್ಟು ಹೆಚ್ಚಿಗೆ ಗೊತ್ತು. ಬೇರೆಯವರಿಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಆರ್. ಗುಂಡೂರಾವ್.—ದಪ್ಪ ಆದರೆ ರೊಟ್ಟಿ, ತೆಳ್ಳಗಾದರೆ ದೋಸೆ ಆ ರೀತಿ ಹೇಳಬೇಡಿ. Let us be very frank and free about all these things. Where I am wrong, I am prepared to accept that. Whereever you are wrong you must also accept it. Let us develop that spirit. My friend, the Hon'ble Leader of Opposition was telling that I have no better arguments. I am comming to his argument. Another 2½ hours is there before me.

SRI A. LAKSHMISAGAR.—You do it...

SRI R. GUNDU RAO.—Why should I tell now? You lost your chance. You never spoke on the demand at all

SRI A. LAKSHMISAGAR.—I have not lost anything. If there is anything that has been lost it is lost by you. Therefore, it is our responsibility and we have done our duty to the best of our ability. If you are finding fault with meaningless silly things, it is your own fault; not mine.

SRI R. GUNDU RAO.—If the people of Karnataka say that the Opposition Leader sitting there......

SRI A. LAKSHMISAGAR.—That, they will decide. Leave it to them.

SRI R. GUNDU RAO.—If that is the analogy and if that is going to be and that your argument. That the people have voted. They will decide tomorrow. Then you have not answered that. What would you say for that?

SRI A. LAKSHMISAGAR.—You are perfectly in order to adopt that course. It is for you to decide.

SRI R. GUNDU RAO.—I heard you for two and a half days quietly and patiently putting the ear phone in my ears. Whatever you wanted to say, you said on several occasions. But you cannot fill this gap and you cannot filling up this lapse by this way. When hon. members Mr. J. H. Patel and Mr. Lakshmisagar were not Opposition Leaders, they were speaking so well that though I had

some other work. I certainly made it a point to be present in the House to listen to them. That was the only reason. Suppose, Mr. Arumugham speaks I liked to be here and suppose Mr. J H Patel speaks. I like to be here listen to their speeches because they are senior learned parliamentarians and very well suited to the whole subject. They used to throw new lights. Similarly, Mr. Bommai and Mr. Deve Gowda also were speaking. ಮೊದಮೊದಲು ಮಾನ್ಯ ರಾಜಶೇಖರ್ ರವರು ಮಾತನಾಡುತ್ತಿದ್ದರು. ಈಗ ಏತಕ್ಕೋ ರಾಜಕೀಯ ಸನ್ಯಾಸ ತೆಗೆದುಕೊಂಡಮೇಲೆ ಮಾತ ನಾಡುವುದಿಲ್ಲ. ಅವರು ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ಮಾನ್ಯ ಲಕ್ಷ್ಮಿಸಾಗರ್‌ರವರು ವಿರೋಧ ಪಕ್ಷದ ನಾಯಕರಾದ ಮೇಲೆ ಚಳಿ ಬಂದಿದೆ. ಅವರು ಬೆಳಕು ಚೆಲ್ಲುವುದು ಹೋಯಿತು. ಅದರ ಬಗ್ಗೆ ನನಗೆ ಚಿಂತೆ ಇಲ್ಲ. ನಾನು ಇಷ್ಟು ಮಾತ್ರ ಹೇಳುತ್ತಿದ್ದೇನೆ ಮಾನ್ಯ ಗಂಗಾಧರ್‌ರವರು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು ನಾನು ಒಪ್ಪಿಕೊಂಡೆ. He spoken on that day certain things. What he said was definitely right. I cannot say that everything he suggested is wrong just because I am the Chief Minister and just because I have got majority in the House. I am not on that matter at all. I like certain suggestions which he made. ವಿರೋಧ ಪಕ್ಷದ ನಾಯಕರು ಆ ಕೆಲಸ ಮಾಡಬೇಕಾಗಿತ್ತು, ಆ ಕೆಲಸ ಮಾಡಲಿಲ್ಲ. ಅದೊಂದು ಸತ್ ಸಂಪ್ರದಾಯ. ಬಂಗಾರಪ್ಪನವರು ಮಾಡಿದರು, ಅವರಿಗೆ ಅನುಕೂಲವಾಯಿತು. ಯಾವ ತೊಂದರೆಯಾಗಲಿಲ್ಲ. ಸಭೆಗೆ ನಿಧಾನವಾಗಿ ನೀವು ಬಂದಿದ್ದರಿಂದ ಸ್ವಲ್ಪ ರಿಪೀಟ್ ಮಾಡಿದ್ದೇನೆ. ಡಿಮಾಂಡ್ ಮೇಲೆ ಮಾತನಾಡುವಾಗ ಬೇಕಾದಷ್ಟು ಈ ಸದನದಲ್ಲಿ ರಾಜಕೀಯ ಚರ್ಚೆಯಾಗುತ್ತದೆ. ಎಲ್ಲರೂ ಚರ್ಚೆ ಮಾಡಿರುತ್ತಾರೆ. ನಾನು ಯಾವಾಗಲೋ ಭಾಷಣ ಮಾಡುವಾಗ 'ಶ್ರೀಮತಿ ಇಂದಿರಾ ಗಾಂಧಿ ಕೃಪಾ ಪೋಷಿತ ನಾಟಕ ಮಂಡಳಿ' ಎಂದು ಹೇಳಿದ್ದರೆ ಅದರಲ್ಲಿ ತಪ್ಪೇನಿದೆ? ಅದೊಂದೇ ವಿಷಯ ವನ್ನು ಎಲ್ಲದಕ್ಕೂ ಕಂಪ್ಯಾರಿಸನ್ ಕೊಡುತ್ತಿದ್ದಾರೆ ಹಾಗೆ ಹೀಗೆ ಎಂದು ಹೇಳುತ್ತಿದ್ದಾರೆ. ಯಾವುದೇ ರಾಜಕೀಯ ಪಕ್ಷದಲ್ಲಿ ಒಂದು ಗೌರವ, ನಿಯಮ ಧರ್ಮ ಆ ಒಂದು ಪದ್ಧತಿ ಇದೆ. ಮಾನ್ಯ ಕಕ್ಕಿಲಾಯ ರವರಿಗೆ ೧೯೭೭ನೇ ಚುನಾವಣೆಯಲ್ಲಿ ಡೈರೆಕ್ಷನ್ ಬಂತು. The direction came from the Politburo that you should align with Congress (I). He aligned Sri Krishnan also aligned. In 1978, again direction came that you should join with Congress (I) and you must support Smt. Indira Gandhi. If you secretly ask Sri Kakkilaya or Sri M. S. Krishnan they may not agree. Whether the direction is right or wrong it is the party system. It is one party. Suppose, tomorrow in Tamil Nadu the Chief Minister, Sri M. G. Ramachandran, who is also the leader of AIDMK, takes any decision, it is the decision of the party. If the National Executive takes a decision it is the decision of the party. Ultimately, you have to obey the decision of your party, otherwise you have to quit. There are only two chances in the political system of our country today. There is no chance for individual decision in the party system, whichever party it may be You have read in the newspapers that just because Mr. Devilal met the Prime Minister, Mr. Charan Singh suspended him from the party. It is his prorogative right. Nobody can question. It may be questioned in the Executive Committee or the Working Committee or the Parlimentary Board, which is a different issue. But a leader has got all rights and every one who is in the party should obey the

leader of the party. He might be greater or mighter. That is the system of the party. In 1980 a direction came from the party to Mr. Kakkilaya and Mr. Pampapathy that they should not associate with Smt. Indira Gandhi. They did not associate. Again for the coming election, suppose the Poltiburo of the Communist Party of India gives a direction that you must sign with Smt. Indira Gandhi, can you oppose it? I want to ask Mr. Kakkilaya.....

ಶ್ರೀ ಬಿ. ವಿ. ಕಕ್ಕಿಲಾಯ.—ಅದನ್ನು ಮುಂದೆ ನೋಡೋಣ.

SR R. GUNDU RAO.—You have got two options. Either you should accept it or you should quit from the party. ಇಲ್ಲದಿದ್ದರೆ ಡಾಂಗೆ-ಪಾಂಗೆ ಎಂದು ಮುಂರ್ನ್ನಾಲ್ಕು ಪಾರ್ಟಿ ಮಾಡಿಕೊಳ್ಳಬೇಕಾಗುತ್ತದೆ. ನಾವು ಯಾವುದೇ ಪಕ್ಷದಲ್ಲಿ ಕೆಲಸ ಮಾಡಬೇಕಾದರೂ ಅದರಲ್ಲಿ ಅಂಗ ರಚನೆ ಇರುತ್ತದೆ. ಅದರಲ್ಲಿ ಜನರಲ್ ಸೆಕ್ರೆಟರಿ ಇರುತ್ತಾರೆ. ಅದನ್ನು ನಾಟಕ ಕಂಪನಿಗೆ ಹೋಲಿಸಿದ್ದಾರೆ. ನಾನು ದೇವೇಗೌಡರ ಕ್ಷೇತ್ರವಾದ ಹೊಳೆನರಸೀಪುರದಲ್ಲಿ ಈ ಮಾತನ್ನು ಹೇಳಿದ್ದೇನೆ. ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಇತ್ತು. ಅದರಲ್ಲಿ ಅಂದರೆ ನಾಟಕ ಕಂಪನಿಗಳಲ್ಲಿ ಕೆಲವರು ಕೆಲವು ಪಾತ್ರಗಳನ್ನು ಕಟ್ಟುತ್ತಾರೆ. ರಾವಣನ ಪಾತ್ರ ಮಾಡಬಹುದು, ರಾಮನ ಪಾತ್ರ ಮಾಡಬಹುದು, ಪಾರ್ಟ್ ಕಟ್ಟಿದಾಕ್ಷಣ ರಾವಣನ ಪಾತ್ರಕ್ಕೆ ಏನು ನಟನೆ ಮಾಡಬೇಕೋ ಅದನ್ನು ಮಾಡುತ್ತಾನೆ. ಅದೇರೀತಿ ರಾಮನ ಪಾತ್ರಕ್ಕೆ ಏನು ನಟನೆ ಮಾಡಬೇಕೋ ಅದನ್ನು ಮಾಡುತ್ತಾನೆ. ಬಣ್ಣ ತೊಳೆದುಕೊಂಡ ಮೇಲೆ ರಾಮನೂ ಇಲ್ಲ, ರಾವಣನೂ ಇಲ್ಲ. ಅದೇ ರಾಮಪ್ಪ: ಬೋಜಪ್ಪ, "ಇಂದಿರಾ ಗಾಂಧಿ ಕೃಪಾ ಪೋಷಿತ ನಾಟಕ ಮಂಡಳಿ" ಎಂದು ಹೇಳಿದ್ದನ್ನು ಹೇಳುತ್ತಲೇ ಇರುತ್ತಾರೆ. ಯಾರೇ ಆಗಲಿ ಅವರ ಪಕ್ಷದ ನಿಯಮಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. It is a party system. Otherwise I have no place in the party. Either I have to remain in the party or I should come out from the party. What my hon. friend did fifteen days back, exactly the same would happen.

SRI R. GUNDU RAO.—Sri Bangarappa has not resigned the party because of firing that has taken place, in Nargunda and Navalgunda he has not resigned the party because of non-implementation of socio-economic policies announced by the Government, I quote one instance. Smt. Yeshodara Dasappa was incharge of Social Welfare Ministery in Nijalingappa's Cabinet. During that period/Prohibition Policy was scraped in the State by the then Government. At that time Smt. Yeshodara Dasappa opposed it and requested the Chief Minister for introduction of prohibition policy. She also expressed her disagreement about that policy. When she met Sri Nijalingappa she said I cannot agree with this. To this Sri Nijalingappa said it is the decision of the party and the Government, if you are not convinced with this decision, you can quite the Government. On hearing this Smt. Yeshodara Dasappa informed the Chief Minister that she is quitting the Government. Accordingly she resigned. ಆಗ ನಾನು ಹೆಚ್ಚಿಗೆ ರಾಜಕೀಯದಲ್ಲಿ ಇರಲಿಲ್ಲ. ನಾನು ಪೇಪರ್‌ನಲ್ಲಿ ಓದಿದ್ದೆ. ಶ್ರೀಮತಿ ಯಶೋಧರ ದಾಸಪ್ಪನವರು ತತ್ವದ ಮೇಲೆ, ನೀತಿಯ ಮೇಲೆ ಪಕ್ಷವನ್ನು ಬಿಟ್ಟು ಬಂದರು, ಎಂದು ಪ್ರೊಹಿಬಿಷನ್‌ನ್ನು ಲೈಕ್ ಮಾಡಲಿಲ್ಲ. It is the responsibility of the Government It is responsibility of the party which is ruling the State, If a person does not like the

decisions of the Government he can say I did not like it hence I am leaving the party and wanted to come out of that party If that is done people would welcome such steps, would appreciate that stand and would say here is a person who resiged the party on pertain principles. Why I am telling this is in a Cabinet System of Government when once the decision taken by the Leader of the House, the Chief Minister it is deemed to be the decision of the Cabinet. It is the deci ion of the Government which is ruling the State. It is the decision of members of the Council of Ministers. That is the system now prevailing. Even when Sri C. D. Deshmukh was in the Pandit Jawharlal Nehru there was some financial dispute arose between them—in view of that difference Sri C. D. Deshamukh tendered resignation. There are instances. Even when I was Minister I did oppose certain decisions in the Devaraj Urs Cabinet. Today Sri Urs is not with us. Prior to his death he was the Leader of the Opposition. Though he was in that place I had great respect for him. The whole county knows the gesture shown to Sri Urs on his death. So many Leaders of Opposition, eminent men in political field have written letters to me appreciating my gesture. I am not proud of it. I just said about it. I have only done my duty because of close friendship I had with late Sri Devaraj Urs. On the other hand I had the courage to argue with Sri Devaraj Urs also. At one time I told Sri Devaraj Urs as long as you are with Smt. Indira Gandhi I will be with you and the moment you part with our Leader Smt Indira Gandhi I will not stay in your Ministry. If you so fell you can dismiss from the Cabinet. I made my stand very clear to him. Even then I was not sent back. In fact I was very well placed. I was the Minister for Transport, I was the Minister for Tourism, I was the Chairman of the KSRTC—I was given all the facilities. I was denied nothing. Whereas Sri S. Bangarappa became the President of the KPCC (I) Party in the list announced by our High Command. That was the first announcement made in which my name was not there. ಇವರಿಗೂ ಏನೋ ಅಧ್ಯಕ್ಷರನ್ನು ಮಾಡಿದರು ಅಂತಲೋ, ಅಥವಾ ಕಾರ್ಯದರ್ಶಿ ಮಾಡಿದರು ಅಂತಲೋ ಪಾರ್ಟಿ ಬಿಟ್ಟು ಹೋದರು ಎಂದು ನಾವೂ ಹೇಳಬಹುದಿಲ್ಲವೆ ?......

When I went to KGF to attend function—Sri Arumugham knows where I was at that time and when I was coming back to Bangalore I came to know that Sri Bangarappa has been appointed to head KPCC (I) and he was made *ad hoc* President. Do you know who are all the Members ? There are very ie., about 5 to 7 members were in that *ad hoc* Committee—no doubt I would have become the leader but look at the sequence, Sri Bangarappa was made President of the KPCC (I) Party because he left the Devaraj Urs. Ministry. Whereas in my case was not even a member of the KPCC *ad hoc* Committee.

SRI S. R. BOMMAI.—You knew that you would become the Chief Minister.

SRI R. GUNDU RAO.—It is not like that. It is only an accident, I never claimed it. I never knew that. People who are thinking of becoming Chief Minister might have gone to Delhi and other places... But so far as I am concerned I never knew that ಈ ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಬೇಕಾದರೆ ಹಿಂದೆ ಒಂದು ತತ ಇತ್ತು. ಅವರು ಬಹುಮತ ಕೋಮಿಗೆ ಸೇರಿದವರಾಗಿರುತ್ತಿದ್ದರು. ಹಿಂದೆ ಒಂದೇ ಜಾತಿಗೆ ಸೇರಿದವರು ಮುಖ್ಯ ಮಂತ್ರಿಯಾಗಿದ್ದರು. ಅದೂ ನಡೆದು ಹೋಯಿತು. During the time of Nijalingappa's Ministry a no confidence motion was brought and the whole leadership of the party decided to elect Sri Talakere Subramaniam as the Chief Minister of the State who was holding the Municipal Administration Department. But majority of the members said 'No' and further said if a non-lingayath were to become the Chief Minister let Nijalingappa be continued as Chief Minister. That was the argument placed at that time It was said by no less a person then Sri B. D. Jatti. I am not boasting. The whole country knows the whole State knows about that affair. Those were the days. ೧೯೭೧_೭೨ರಲ್ಲಿ ಸಾಮಾಜಿಕ ಬದಲಾವಣೆ ಆಯಿತು. ನಾನು ಹೇಳುವುದರಲ್ಲಿ ತಪ್ಪಿಲ್ಲ. ಇಲ್ಲಿ ಮಾನ್ಯ ರಾಜ್ಯಪಾಲರ ಮನೆಯಲ್ಲಿ ತೀರ್ಮಾನವಾಯಿತು. ಆಗ ನಾನು ಮುಖ್ಯ ಮಂತ್ರಿಯಾಗಬೇಕೆಂದು ಆಸೆಯನ್ನು ಇಟ್ಟುಕೊಂಡವನಲ್ಲ, ನಾನು ಲೀಡರ್ ಆಫ್ ದಿ ಹೌಸ್ ಆಗಬೇಕೆಂದು ಹೇಳಿದಾಗ, ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪ ಮೊಯ್ಲಿಯವರು ಅದು ಆಗುವುದಿಲ್ಲವೆಂದು ಹೇಳಿದರು. ಬ್ರಾಹ್ಮಣರನ್ನು ಲೀಡರ್ ಆಗಿ ಮಾಡಿದರೆ ಯಾರೂ ಒಪ್ಪುವುದಿಲ್ಲ ಆದರೆ ನಾನು ಆಗಬೇಕು ಇಲ್ಲದಿದ್ದರೆ ನೀವು ಆಗಬೇಕೆಂದು ಏನೇನೋ ಮಾತನಾಡಿಕೊಂಡರು. ಆಗ ನನಗೆ ಜಾಂಡಿಸ್ ಕಾಯಿಲೆ ಕೂಡ ಆಗಿತ್ತು....

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನು ಲೀಡರ್ ಆಗಿ ಮಾಡಿಕೊಂಡಾಗ ಬರಬಹುದಾಗಿದ್ದ ಎಂ.ಎಲ್.ಎ. ಗಳೂ ಮತ್ತೆ ವಾಪಸು ಹೋದರು. ನಿಮ್ಮನ್ನು ಕಟ್ಟಿಕೊಂಡು ಅನುಭವಿಸಬಾರದ ಕಷ್ಟಗಳನ್ನೆಲ್ಲಾ ಅನುಭವಿಸಿದೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಮೊಯ್ಲಿಯವರು ನಮ್ಮ ಸ್ನೇಹಿತರು. ಅವರು ಬೇಡ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಹೇಳಿದರೆ ತಾವು ಬಹುಶ: ಒಪ್ಪಿಕೊಳ್ಳುತ್ತೀರಿ ಎಂದು ನಾನು ಅಂದು ಕೊಂಡಿದ್ದೇನೆ. ನಾನು ಯಾವುದನ್ನೂ ಹೇಳಿದವನಲ್ಲ. ಆದರೆ ಅವರ ಮನಸ್ಸಿನಲ್ಲಿ ಏನು ಭಯ ಇತ್ತು ಎಂದರೆ ಈ ದೇಶದಲ್ಲಿ ಪಾರ್ಟಿ ಬೆಳೆಯುತ್ತಿದೆ, ಇಬ್ರಾಹಿಂರವರನ್ನು ಲೀಡರ್ ಆಗಿ ಮಾಡಿಕೊಂಡರೆ ನಮಗೆ ಪುನಃ ದೇವರಾಜ ಅರಸರೇ ಬೇಕೆಂದು ಜನರು ವಾಪಸು ಹೋದರೆ ಆಗ ಪಾರ್ಟಿಯ ಗತಿ ಏನು ಎಂಬುದು ಅವರ ಮನಸ್ಸಿನಲ್ಲಿದ್ದಂಥ ಭಾವನೆ. ಮೊದಲು ನಾವು ೯ ಜನ ಇದ್ದೆವು. ನಾವು ಅಲ್ಲಿ ಕುಳಿತುಕೊಂಡು ಕೆಲಸಮಾಡುವಾಗ ಅವರು ನನ್ನನ್ನು ಲೀಡರ್ ಆಗಿ ಮಾಡಿಕೊಂಡಿರಲಿಲ್ಲ......

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ೯ನೇ ನಂಬರ್ ಅದೃಷ್ಟದ ನಂಬರ್ ಅಂತ ತಾವೇ ಒಮ್ಮೆ ಹೇಳಿದ್ದೀರಿ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಬಂಗಾರಪ್ಪನವರೂ, ಮಾನ್ಯ ವೀರಪ್ಪ ಮೊಯ್ಲಿಯವರೂ ಒಟ್ಟಿಗೇ ಕೂತು ಈಗ ನಾವು ಏನು ಮಾಡೋಣವೆಂದು ಮಾತನಾಡುತ್ತಾ ಇರುವಾಗ ಅವರು ಸೀನಿಯರ್ ಆಗಿದ್ದಾರೆ ಅವರನ್ನೇ ಮಾಡೋಣವೆಂದು ಯೋಚನೆ ಮಾಡಿದ್ದಾಯಿತು. ಮಂತ್ರಿ ಮಂಡಲದಿಂದ ನಾವು ಇಬ್ಬರೂ ಡಿಸ್‌ಮಿಸ್ ಆಗಿದ್ದೆವು. ಅವರು ಮಧ್ಯರಾತ್ರಿಯಲ್ಲಿ ಡಿಸ್‌ಮಿಸ್ ಆಗಿದ್ದರೆ, ಬಹುಶಃ ನಾನು ೧೧–೩೦ ಅಥವಾ ೧೨ ಗಂಟೆ ಸಮಯದಲ್ಲಿ ಡಿಸ್‌ಮಿಸ್ ಆದೆ. ಪೋಲೀಸಿನವನ ಕೈಯಲ್ಲಿ ಮಾನ್ಯ ರಾಜ್ಯಪಾಲರು ಒಂದು ಲೆಟರನ್ನು ಕೊಟ್ಟು ನನ್ನ ಮನೆಯ ಹತ್ತಿರಕ್ಕೆ ಕಳುಹಿಸಿ

ಕೊಟ್ಟರು. ಅವರಿಗೆ ಏನು ಒಕ್ಕಣೆಯನ್ನು ಕಾಗದದಲ್ಲಿ ಬರೆದಿದ್ದರೋ ಅದೇ ಒಕ್ಕಣೆಯನ್ನೇ ನನಗೂ ಬರೆದಿದ್ದರು. ಅವರು ನನ್ನ ರಾಜೀನಾಮೆಯನ್ನು ಕೇಳಿದ್ದರು. ನಮ್ಮ ಕಾಂಗ್ರೆಸ್ ತತ್ವದ ಪ್ರಕಾರ ನಾವು ನಿಮಗೆ ರಾಜೀನಾಮೆಯನ್ನು ಕೊಡಬೇಕಾಗಿಲ್ಲ. ನಮಗೆ ದೆಹಲಿಯಿಂದ ಆದೇಶ ಬರಬೇಕು. ಅಲ್ಲಿಂದ ಬಂದರೆ ನಾನು ಕೊಡುತ್ತೇನೆಂದು ಹೇಳಿದೆ. ಆಗ ನಿಮ್ಮನ್ನು ಡಿಸ್‌ಮಿಸ್ ಮಾಡಿದ್ದೇವೆಂದು ನನಗೆ ಕಾಗದ ಬಂತು.

೪-೩೦ ಪಿ.ಎಂ.

ನಾನು ಹೇಳುತ್ತೇನೆ, ಅಧ್ಯಕ್ಷರೇ ಅವರು ನನಗೂ ಸಹ ಯಾವುದಾದರೂ ಒಂದು ಸ್ಥಾನ ಕೊಡಬೇಕಲ್ಲಾ. ಯಾವುದರೂ ಕೊಡದೇ ಹೋದರೆ ನನಗೂ ಕಷ್ಟವಾಗುತ್ತದೆ. ನಾನೇನೂ ಬೇರೆ ಹೇಳಬೇಕಾಗಿಲ್ಲಾ ಆಮೇಲೆ ಶ್ರೀ ವೀರಪ್ಪಮೊಯ್ಲಿರವರಿಗೆ ಜನರಲ್ ಸೆಕ್ರೆಟರಿ ಪೋಸ್ಟ್ ಕೊಟ್ಟರು, ಆಮೇಲೆ ನಾವು ಒಪ್ಪಿಕೊಂಡೆವು. I must pay compliments to them. They have agreed and they made me the leader of opposition. ಅಧ್ಯಕ್ಷರೇ ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ನಮ್ಮ ಸಿಸ್ಟಂ ಆಫ್ ದಿ ಪಾರ್ಟಿ ಈ ರೀತಿ ಬೆಳೆದುಕೊಂಡು ಬಂದಿರುವುದರಿಂದ ಹೇಳುತ್ತಾ ಇದ್ದೇನೆ. ಇದನ್ನು ಯಾರು ಟೀಕೆ ಮಾಡಬೇಕು ಅನ್ನುವುದು ತಮಗೆಲ್ಲಾ ಗೊತ್ತಿದೆ ನಮ್ಮ ಜೊತೆಯಲ್ಲಿ ಸಹಪಾಟಿಗಳಾಗಿ ಸಡನ್ ಆಗಿ ನಮ್ಮನ್ನು ಬಿಟ್ಟು ಹೋಗಿ ಮಾರನೇ ದಿವಸವೇ ಈ ದೇಶದಲ್ಲಿ ಇವರಿಂದ ಹಾಗಾಗಿದೆ ಹೀಗಾಗಿದೆ ಎಂದರೆ ದೇಶದ ಜನ ಇದನ್ನು ಯಾವ ರೀತಿಯಿಂದಲಾದರೂ ಕೂಡ ಒಪ್ಪಲಿಕ್ಕೆ ಸಾಧ್ಯವೇ? ಸಾಧ್ಯವಿಲ್ಲ ಎಂದು ಹೇಳುತ್ತೇನೆ. ನಾವು ಇಂದಿರಾ ಗಾಂಧಿಯವರ ಪಕ್ಷದಲ್ಲಿ ಇದ್ದೇವೆ ಆ ಪಕ್ಷದಿಂದಲೇ ನಾನು ಮುಖ್ಯಮಂತ್ರಿಯಾಗಿದ್ದೇನೆ, ಶ್ರೀ ವೀರಪ್ಪ ಮೊಯ್ಲಿಯವರು ಹಣಕಾಸಿನ ಮಂತ್ರಿಯಾಗಿದ್ದಾರೆ. ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ನಾವು ಇದ್ದೇವೆ. ತಾವೆಲ್ಲಾ ಆವೊತ್ತಿನ ದಿವಸ ಪತ್ರಿಕೆಯಲ್ಲಿ ನೋಡಿರಬಹುದು. ನಾನಾ ರೀತಿಯಲ್ಲಿ ನನ್ನ ಬಗ್ಗೆ ಅಭಿಪ್ರಾಯ ಬಂದಿರುವುದು, ಏನೇನು ಬರುತ್ತಿತ್ತು ಎಂದರೆ ಗುಂಡೂರಾಯರು ಮುಖ್ಯಮಂತ್ರಿಗಳಾಗಿ ೩-೪ ತಿಂಗಳು ಇರಬಹುದು ಅಷ್ಟೆ ಇನ್ನು ಕೆಲವರು ೬ ತಿಂಗಳು ಇರಬಹುದು ಅದರ ಮೇಲೆ ಇರುವುದಿಲ್ಲ ಅಂದಿದ್ದಾರೆ, ಇನ್ನು ಕೆಲವರು ಇನ್ನು ಒಂದು ತಿಂಗಳಲ್ಲೇ ಚುನಾವಣೆ ಬರುತ್ತದೆ ಅವರು ಇರುವುದಿಲ್ಲ ಅಂತ ಅಂದಿದ್ದಾರೆ, ಇನ್ನು ಕೆಲವರು It is only temporary time-gap arrangements ಅಂತ ಹೇಳಿದ್ದಾರೆ. ಈ ಟೈಂಗ್ಯಾಪ್ ಅರೇಂಜ್‌ಮೆಂಟ್ಸ್ ಸಲುವಾಗಿ ಏತಕ್ಕೆ ಮಂತ್ರಿಮಂಡಲ ಮಾಡಬೇಕಾಗಿತ್ತು ಅಂತ ಹೇಳಿದ್ದಾರೆ. ಇದೆಲ್ಲಾ ಹೇಳುವುದು ಹಾಸ್ಯಾಸ್ಪದವಾದದ್ದೇ. ಏತಕ್ಕೆಂದರೆ ನನ್ನ ಜಾಗದಲ್ಲೇ ಶ್ರೀ ಬಂಗಾರಪ್ಪನವರು ಇದ್ದಿದ್ದರೆ ಅವರೇ ಲೀಡರ್ ಆಫ್ ದಿ ಅಪೋಸಿಷನ್ ಆಗಿದ್ದರೆ ಅವರೇ ಮಂತ್ರಿಮಂಡಲವನ್ನು ರಚನೆ ಮಾಡುತ್ತಿದ್ದರು. It is not unusual. The Governor has to call. When the Government fails, when the Government loses the majority, the leader of the Opposition will be called to form the Government. ಈಗ ಲಕ್ಷ್ಮೀಸಾಗರ್‌ರವರು ಅಧಿಕೃತವಾಗಿ ಹೇಗೆ ಅಪೋಸಿಷನ್ ಲೀಡರ್ ಆಗಿದ್ದಾರೆಯೋ ಹಾಗೆ ನಾನು ಆಗಿದ್ದುದರಿಂದ ನನ್ನನ್ನು ಕರೆದರು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಮಗಿಂತ ನಿಮ್ಮ ಸಂಖ್ಯೆ ಎರಡು ಜಾಸ್ತಿ ಆಗಿದ್ದುದರಿಂದ ನೀವು ಅಪೋಸಿಷನ್ ಲೀಡರ್ ಆದಿರಿ.

ಶ್ರೀ ಆರ್. ಗುಂಡೂರಾವ್.—ಮತ್ತೆ ಏನಾಯಿತು. ಲೋಕಸಭಾ ಚುನಾವಣೆಯಲ್ಲಿ ಏನು ಮಾಡಿದಿರಿ, ಆವಾಗ ಏನು ನಡೆಯಿತು ಎಲ್ಲಾ ಗೊತ್ತಿದೆ, ಈಗ ಆ ಮಾತು ಬೇಡ. ನಾನು ೧೯೭೨-೭೩ ರಲ್ಲಿ ನಾನು ಮಂತ್ರಿಯಾಗಿದ್ದೆ. ಶ್ರೀ ಬಂಗಾರಪ್ಪನವರು ೧೯೭೨ ರಿಂದ ೭೭ರವರೆಗೆ ಪುನಃ ಸೇರಿ ೧೯೭೮ ರವರೆಗೂ ಇದ್ದರು. ಅವರು ಅಪೋಸಿಷನ್ ಬೆಂಚ್‌ನಲ್ಲಿದ್ದರು. ಪಿಎಸಿ ಮೆಂಬರ್‍ಸ್ ಸಹ ಆಗಿದ್ದರು. ನೀವು ಮತ್ತು ಕಾಗೋಡು ತಿಮ್ಮಪ್ಪನವರು ಒಟ್ಟಿಗೆ ಇದ್ದು ಅಪೋಸಿಷನ್‌ನಲ್ಲಿದ್ದುದರಿಂದ ನಿಮಗೆ ಅಪೋಸಿಷನ್ ಅನುಭವ ಏನು ಅನ್ನುವುದು ಗೊತ್ತಿದೆ, ನಾನು ಅಪೋಸಿಷನ್‌ನಲ್ಲಿ ಇಲ್ಲದೇ ಇದ್ದುದರಿಂದ ನನಗೆ ಅನುಭವ ಗೊತ್ತಿಲ್ಲ. ನಾನು ಪಾರ್ಟಿ ಸೆಕ್ರೆಟರಿಯಾಗಿದ್ದೆ. ಅಲ್ಲಿಂದ ನೇರವಾಗಿ ಮಂತ್ರಿಯಾದೆ, ಅದರಿಂದ ನನಗೆ ಗೊತ್ತಿಲ್ಲ. ನನಗೆ ಆ ಸಂದರ್ಭದಲ್ಲಿ ಅಪೋಸಿಷನ್ ಸ್ಥಾನ ಸಿಕ್ಕಿದಾಗ ತಮಗೆ ಹೇಳಬೇಕಾದರೆ ನನಗೆ ಅವರ ಅನುಭವ ಗೊತ್ತಿಲ್ಲದೇ, ಇದ್ದುದರಿಂದ ನಾನು ಅಪೋಸಿಷನ್ ಲೀಡರ್

ಆಗಿರುವುದರಿಂದ ಯಾವರೀತಿ ಮಾತನಾಡಬೇಕು ಎಂದು ಎಸ್.ಆರ್. ಬೊಮ್ಮಾಯಿನವರನ್ನ ಕೇಳಿ ತಿಳಿದುಕೊಂಡಿದ್ದೇನೆ, ಹಾಗೆ ಮಾಡಿದರೆ ತಪ್ಪೇನೂ ಇಲ್ಲ. ಏತಕ್ಕೆಂದರೆ ನನಗೆ ಏನು ಒಂದು ಭಯವಾಗುವುದು ಎಂದರೆ ಏನಾದರೂ ಮಾತನಾಡುವಾಗ ಒಂದು ಮಾತನಾಡಿದರೆ ಹೆಚ್ಚುದರೆ ಅಥವಾ ಕಡಿಮೆಯಾದರೆ ಏನು ತಪ್ಪಾದೀತು ಅನ್ನುವ ಭಯ ಇದ್ದುದರಿಂದ ಮಾನ್ಯ ಎಸ್.ಆರ್. ಬೊಮ್ಮಾಯಿ ಅವರ ಮನೆಗೆ ಹೋಗಿ ಪ್ರತಿದಿವಸವೂ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೆ. ಅವರ ಮನೆಗೆ ಹೋದರೆ ಒಳ್ಳೆಯ ತಿಂಡಿ, ಕಾಫಿ ಕೊಡುವರು ಇನ್ನು ಏನೇನೋ ಕೊಡುವುದು, ಕೆಲವು ಸಂದರ್ಭದಲ್ಲಿ ಬಂಗಾರಪ್ಪನವರೂ ಕೂಡ ಅಲ್ಲಿ ಇರುತ್ತಿದ್ದರು. ಅವರ ಜೊತೆಯಲ್ಲಿ ವೀರಪ್ಪ ಮೊಯ್ಲಿ ಬರುತ್ತಾ ಇದ್ದರು. ನನಗೂ ಅವರಿಗೂ ಆ ಸಂದರ್ಭದಲ್ಲಿ ಗಂಟು ಬಿತ್ತು. ನಮ್ಮ ಹಿಂದೂ ಶಾಸ್ತ್ರದ ಪ್ರಕಾರ ವಧೂವರರಿಗೆ ಯಾವರೀತಿ ಗಂಟು ಹಾಕುತ್ತಾರೋ ಎಲ್ಲೇ ಹೋಗಲಿ ಜೊತೆಯಲ್ಲೇ ಇರಬೇಕು ಎಂದು ಏನು ಗಂಟು ಹಾಕುತ್ತಾರೋ ಹಾಗಾಯಿತು. ಒಟ್ಟಿನಲ್ಲಿ ಮದುವೆ ಶಾಸ್ತ್ರ ಆದ ಹಾಗೆ ಆಯಿತು. ಹಾಗೆಯೇ ಸ್ಪ್ಲಿಟ್ ಆದಮೇಲೂ ಸಹ ಗಂಟು ಹಾಕುವುದಕ್ಕೆ ಶುರು ಮಾಡಿದರು ನಾನು ಸಿಕ್ಕಲಿಲ್ಲಾ.

SRI S. BANGARAPPA.—I was the President and he was the General Secretary of the Party. ಆವಾಗ ನೀವು ಸೆಕ್ರೆಟರಿಯಾಗಿರಲಿಲ್ಲ. ನಮ್ಮನ್ನು ಗಂಟು ಹಾಕೋಣ ಎಂದು ಪ್ರಯತ್ನ ಮಾಡಿದಿರಿ, ನಾನು ನಿಮ್ಮ ಕೈಗೆ ಸಿಕ್ಕಲಿಲ್ಲಾ. ಅದೇ ನನ್ನ ಪುಣ್ಯ.

ಶ್ರೀ ಆರ್. ಗುಂಡೂರಾವ್.—ನೀವು ನನ್ನನ್ನು ಗಂಟು ಹಾಕಿಕೊಳ್ಳಬೇಕು ಅಂತ ಮಾಡಿದಿರಿ ಆದರೆ ನಾನು ಸಿಕ್ಕುತ್ತಿರಲಿಲ್ಲಾ ಅಷ್ಟೆ. ನಾನು ಅದಕ್ಕೇನು ವರಿ ಮಾಡಿಕೊಳ್ಳುವುದಿಲ್ಲ. ಆದರೂ ಸಹ ಅವರನ್ನು ಗಂಟು ಹಾಕಿಕೊಂಡು ೧೧ ತಿಂಗಳು ತಿರುಗಿಸಿದೆ ಅದು ಬೇರೆ ಪ್ರಶ್ನೆ

ಶ್ರೀ ಎಸ್. ಬಂಗಾರಪ್ಪ.—ನಾನು ನಿಮ್ಮ ಕೈಗೆ ಸಿಕ್ಕಲಿಲ್ಲಾ, ನೀವು ಗಂಟು ಹಾಕಿಕೊಳ್ಳೋಣ ಅಂತ ಪ್ರಯತ್ನಿಸಿದಿರಿ, ಅದು ಆಗಲಿಲ್ಲಾ.

ಶ್ರೀ ಆರ್. ಗುಂಡೂರಾವ್.—ಒಟ್ಟಿನಲ್ಲಿ ಹೇಳುವುದಾದರೆ ಶಾಸ್ತ್ರಿಯವಾಗಿಯಾದರೂ ತಾಳಿ ಕಟ್ಟಿ ಆಯಿತಲ್ಲಾ. ಆ ಮೇಲೆ ಏನೋ ಆಯಿತು ಡೈವರ್ಸ್ ಆಯಿತು.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಡೈವರ್ಸ್ ಅನ್ನುವ ಪ್ರಶ್ನೆಯೇ ಬರುವುದಿಲ್ಲ. ನೀವು ಬಹಳ ಪ್ರಯತ್ನಿಸಿದಿರಿ ನಮ್ಮನ್ನು ಗಂಟು ಹಾಕಿಕೊಳ್ಳಬೇಕು ಎಂದು ನಾನು ನಿಮ್ಮ ಕೈಗೆ ಸಿಕ್ಕುತ್ತಿರಲಿಲ್ಲಾ. ಸಿಕ್ಕಲೂ ಇಲ್ಲ ಕೊನೆಗೂ ಕೂಡ ಸಿಕ್ಕಲಿಲ್ಲ.

ಶ್ರೀ ಆರ್. ಗುಂಡೂರಾವ್.—ಸ್ವಲ್ಪ ದಿವಸ ಸಿಕ್ಕಿದ್ದಗಲ್ಲಾ, ಮದುವೆ ಶಾಸ್ತ್ರ ಆದ ಹಾಗೆ ಆಯಿತಲ್ಲಾ. ಇನ್ನು ಬಿಟ್ಟುಬಿಡಿ, ಮತ್ತೆ ಮತ್ತೆ ಏಕೆ ಅದನ್ನೇ ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಬೆಳಗಿನಿಂದಲೂ ಹೀಗೆಯೇ ಆಗುತ್ತಾ ಇದೆ, ದಯವಿಟ್ಟು ಡಿಮ್ಯಾಂಡ್ ಮೇಲೆ ಹೇಳಿ ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ತಾವು ಹೇಳಿದ್ದೆಲ್ಲಾ ರಿಕಾರ್ಡ್‌ನಲ್ಲಿದೆ. ತೆಗೆದುನೋಡಿ ಗೊತ್ತಾಗುತ್ತದೆ. ತಾವು ಇದರ ಬಗ್ಗೆ ೨-೩ ಗಂಟೆ ಕಾಲ ಚರ್ಚೆ ಮಾಡಿದ್ದೀರಿ. It is the last budget session and that is why the Hon. Speaker was also very considerate to all Members. ಅದರಲ್ಲೂ ಕೂಡ ಕರ್ನಾಟಕದ ಚರಿತ್ರೆಯಲ್ಲಿ ಬರುವ ಹಾಗೆ ಮಾಡಿದ್ದೀರಿ. ತಮಗೆ ಹೇಳಬೇಕಾದರೆ ಯಾವ ಬಡ್ಜೆಟ್ ಸೆಷನ್‌ನಲ್ಲೂ ಕೂಡ ಇಷ್ಟು ದೀರ್ಘವಾಗಿ ಇಷ್ಟು ಕಾಲ ತೆಗೆದುಕೊಂಡು ಮಾತನಾಡುತ್ತಿರಲಿಲ್ಲ. ನೀವೊಬ್ಬರೇ ಪೊಲಿಟಿಕಲ್ ಪಾರ್ಟಿ ಅಂತ ತಿಳಿದುಕೊಂಡು ನಾವು ಏನೇನು ಸಾಧನೆಗಳನ್ನು ಮಾಡಿದ್ದೇವೆ ಅದರಲ್ಲಿ ಏನು ತಪ್ಪಿದೆ ಅನ್ನುವುದನ್ನು ಹಿಡಿಯುವುದಕ್ಕೆ ಹೋಗುತ್ತೀರಿ. ಈವೊತ್ತು ತಾವು ಈ ಡಿಮ್ಯಾಂಡ್ ಮೇಲೆ ಎಷ್ಟು ಬೇಕಾದರೂ ಮಾತನಾಡಿಕೊಳಬಹುದು, ನಾಳೆ ದಿವಸ ಈ ಡಿಮ್ಯಾಂಡ್ ಬರುತ್ತದೆಯೋ ಬರುವುದಿಲ್ಲ. ತಾವು ಈ ಬಗ್ಗೆ ಇರತಕ್ಕಂಥಾ ನಾರ್ಮ್ಸ್ ಅನ್ನೂ ಸಹ ಒಪ್ಪಿಕೊಳ್ಳಬೇಕು, ನೀವು ಇದರಲ್ಲಿ ಅನುಮಾನ ಪಟ್ಟುಕೊಂಡು ನಾವೇನೂ ಮಾಡಿಯೇ ಇಲ್ಲ ಹೇಗಾದರೂ ಮಾಡಿ ಇವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಅನ್ನುವ ಪ್ರಯತ್ನ ಮಾಡುತ್ತೀರಿ. ನಾವೂ ಸಹ ಅಷ್ಟೆ ಎಚ್ಚರಿಕೆಯಿಂದ ಇದ್ದೇವೆ, ನಾವು ಯಾವ ರೀತಿಯಾಗಿಯೂ ಇಕ್ಕಟ್ಟಿಗೆ ಸಿಕ್ಕದೇನೇ ನಿಮ್ಮನ್ನೇ

ಸಿಕ್ಕಿಸಬೇಕು ಎನ್ನುವುದನ್ನು ಪ್ರಯತ್ನ ಮಾಡುತ್ತೇವೆ. ಈ ದೃಷ್ಟಿಯಿಂದ ನಾನು ಹೇಳುವುದು, ಆವೊತ್ತಿನ ದಿವಸ ನಾನು ಲೀಡರ್ ಆಗದೇ ಹೋಗಿದ್ದರೆ, ಬಂಗಾರಪ್ಪನವರೇ ಲೀಡರ್ ಆಗಿದ್ದರೆ ಅವರೇ ಚೀಫ್ ಮಿನಿಸ್ಟರ್ ಆಗುತ್ತಿದ್ದರು. ನಾವು ಫ್ರಾಂಕ್ ಆಗೇ ಮಾತನಾಡೋಣ ಆ ದಿವಸ ನನ್ನನ್ನು ರಾಜ್ಯಪಾಲರು ಮಂತ್ರಿಮಂಡಲ ರಚನೆ ಮಾಡುವುದಕ್ಕೆ ಕರೆದರು ನನ್ನನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಬೇಕೋ ಬೇಡವೋ ಅನ್ನುವ ಪ್ರಶ್ನೆ ಬೇರೆ. ಆ ದಿವಸ ಬಂಗಾರಪ್ಪನವರು ಮತ್ತು ವೀರಪ್ಪ ಮೊಯ್ಲಿರವರು ಮಂತ್ರಿಮಂಡಲ ರಚನೆ ಮಾಡುವುದು ಬೇಡ ಅನ್ನುವ ವಾದ ಮಾಡಿದರು. ಮಂತ್ರಿ ಮಂಡಲ ರಚನೆ ಮಾಡುವುದಕ್ಕೆ ನನಗೆ ಏನು ಭಯ ಬಂದಿತ್ತು ಎಂದರೆ ಅದನ್ನು ನಾನು ಈವೊತ್ತು ಹೇಳುತ್ತೇನೆ. ರಾಜ್ಯಪಾಲರು ನನ್ನನ್ನು ೧೦ನೇ ತಾರೀಖಿನ ಒಳಗೆ ಉತ್ತರ ಕೊಡಬೇಕೆಂದು ಪತ್ರ ಬರೆದಿದ್ದಾರೆ. ನಾನು ೧೦ನೇ ತಾರೀಖಿನೊಳಗೆ ಮಂತ್ರಿ ಮಂಡಲ ರಚನೆ ಮಾಡುವುದಕ್ಕೆ ಉತ್ತರವನ್ನು ಕೊಡದೇ ಹೋದರೆ ೧೧ನೇ ತಾರೀಖು ಎಸ್. ಆರ್. ಬೊಮ್ಮಾಯಿಯವರಿಗೆ ಕಾಗದ ಬರೆಯುತ್ತಾರೆ. Because he is the leader of the largest party in the Assembly. ಆಮೇಲೆ ಇನ್ನೊಂದು ಕಾಗದ ಕಳುಹಿಸಿದರು, ನೀವು ೩ ದಿವಸದೊಳಗೆ ಮಂತ್ರಿಮಂಡಲ ರಚನೆ ಮಾಡುತ್ತೀರೋ ಇಲ್ಲವೋ ಎಂದು ಕಾಗದ ಬರೆದರು. ನಾನು ಆಲ್‌ರೈಟ್ ಎನ್ನಬೇಕಾಯಿತು. ಏತಕ್ಕೆಂದರೆ ಇಲ್ಲದೇ ಹೋಗಿದ್ದರೆ ಎಸ್.ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗುತ್ತಿದ್ದರು. ಬಹುಶ: ಅವರು ಆಗಿದ್ದರೆ ೪–೬ ಜನ ಮಂತ್ರಿಗಳು ಅವರ ಕಡೆಯವರು ಆಗುವುದಕ್ಕೆ ಆಶೆ ಇತ್ತೋ ಏನೋ ? ಕೆಲವು ಶಾಸಕರು ನಾವು ಈಗಲೇ ಏತಕ್ಕೆ ಎಲೆಕ್ಷನ್‌ಗೆ ಹೋಗಬೇಕು ಇನ್ನೂ ೩ ವರ್ಷ ಇದೆಯಲ್ಲಾ ಎಂದು ಅವರ ಕಡೆಯವರೂ ಕೂಡ ಸುಮ್ಮನಾದರು ಬಹುಶಃ ಬೊಮ್ಮೈನವರು ಮುಖ್ಯ ಮಂತ್ರಿಯಾಗಿದ್ದರೆ. Only the question of the position of the party ಈ ಸಮಸ್ಯೆ ಉದ್ಭವವಾಗುತ್ತಿತ್ತು. ಬಂಗಾರಪ್ಪನವರು ಇಲ್ಲಿ ಪಿ.ಸಿ.ಸಿ. ಅಧ್ಯಕ್ಷರಾಗಿದ್ದರು. ನಾನು ಲೀಡರ್ ಆಗಿದ್ದೆ ಅಷ್ಟೇ, ನಮ್ಮಿಬ್ಬರಿಗೂ ವ್ಯತ್ಯಾಸ.

SRI H. L. THIMMEGOWDA.—Narrowly he missed the bus. ಹಾಗಾದರೆ ಎಸ್. ಆರ್. ಬೊಮ್ಮೈ ನವರು ಬರಬಾರದು ಅಂತ ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅದು ನಿಮ್ಮ ಪಾರ್ಟಿ ವಿಷಯ. ಆ ಪೋಲ್ ಹೇಗಾಯಿತೋ ಏನೋ ನನಗೆ ಗೊತ್ತಿಲ್ಲ, ಅವರು ಮಂತ್ರಿಮಂಡಲ ಮಾಡಬೇಕಾಗಿತ್ತು ಏಕೆ ಮಾಡಲಿಲ್ಲಾ ಅನ್ನುವುದನ್ನು ತಾವೇ ಕೇಳಿ. ಏನೋ ಆಯಿತು ನಾವು ಮಂತ್ರಿಮಂಡಲ ರಚನೆ ಮಾಡಿದೆವು. ಶ್ರೀಮಾನ್ ಎಸ್. ಬಂಗಾರಪ್ಪನವರು ಎರಡನೇ ದರ್ಜೆಯ ಮಂತ್ರಿಯಾದರು, ರೆವಿನ್ಯೂ ಮತ್ತು ಅಗ್ರಿಕಲ್‌ಚರ್ ಮಿನಿಸ್ಟರ್ ಆದರು, ಇನ್ನೊಬ್ಬರು ಫೈನಾನ್ಸ್ ಮಿನಿಸ್ಟರ್ ಆದರು. ಅವೊತ್ತಿನ ದಿವಸ ಈ ಲೀಡರ್ ಷಿಪ್ ಅನ್ನು ಎಲ್ಲರೂ ಒಪ್ಪಿದರು, ಆವೊತ್ತಿನ ದಿವಸ ಅವರು ಮಂತ್ರಿಮಂಡಲಕ್ಕೆ ಸೇರುವುದಕ್ಕೆ ಇಷ್ಟಪಟ್ಟದ್ದು, ಅವರಿಗೆ ಬಿಟ್ಟ ವಿಷಯ. I do not question that propriety and the will. ಅದುವರೆಗೂ ನಮ್ಮ ಪಾರ್ಟಿಯಲ್ಲಿದ್ದರು. Since he belongs to the party, he should obey the leadership. He should accept the leadership and the High Command.

ಇಲ್ಲದೇ ಹೋದರೆ ಅವರು ನಾನು ಮಂತ್ರಿಯಾಗಿರುವುದಿಲ್ಲ ಎಂದು ಹೇಳಬೇಕಾಗಿತ್ತು. I do not want to serve with Sri R. Gundu Rao. He is a heavy weight man, he has no knowledge, he has no experience you could have said this.

ಶ್ರೀ ಎಸ್. ಬಂಗಾರಪ್ಪ.—ನಾನು ಮಧ್ಯ ಮಧ್ಯ ಹೇಳುವುದಕ್ಕೆ ಹೋಗುವುದಿಲ್ಲ. ಇವರು ಈ ರೀತಿಯಾಗಿ ಹೇಳುತ್ತಾ ಹೋದರೆ ವಿಷಯಗಳು ನೇರವಾಗಿ ನಮ್ಮ ಸಂಪರ್ಕಕ್ಕೆ ಬರುತ್ತವೆ. Let him have his say.

ಶ್ರೀ ಆರ್. ಗುಂಡೂರಾವ್.—ನಾನು ಯಾವರೀತಿಯಲ್ಲಿ ಕೆಲಸ ಮಾಡಿದ್ದೇನೆ ಎಂದು ತಮಗೂ ಗೊತ್ತಿದೆ, ಜನತೆಗೂ ಗೊತ್ತಿದೆ. ತಾವು ಕಾಂಗ್ರೆಸ್ ಕಾರ್ಯಕರ್ತರೇ ಲಾಲ್ ಬಾಗಿನ ಸಭೆಗೆ ಹೆಚ್ಚಾಗಿ ಬಂದಿದ್ದರು ಎಂದು ಹೇಳಿದ್ದೀರಿ, ಸಂತೋಷ. ತಮ್ಮ ಭಾಷಣದಲ್ಲಿ ಲಾಲ್‌ಬಾಗಿನ ತಮ್ಮ

ಸಭೆಗೆ ಪರ್ಮಿಷನ ಕೊಡುವುದರ ಬಗ್ಗೆಯೂ ತಾವು ಪ್ರಸ್ತಾಪ ಮಾಡಿದ್ದೀರಿ. ಅದು ಸ್ವಲ್ಪ ಅನುಮಾನ ದಲ್ಲಿತ್ತು ಎನ್ನುವ ಮಾತನ್ನು ಹೇಳಿದ್ದೀರಿ. ನನ್ನ ಸ್ವಭಾವ ತಮಗೆ ಗೊತ್ತಿದೆ. ನಾನು ಅಂತ ಕೆಲಸ ವನ್ನು ಎಂದೂ ಮಾಡುವುದಿಲ್ಲ ಬಿ. ಜೆ. ಪಿ ಯವರು ಕೇಳಿದರೆ ಇದಕ್ಕೆ ಪರ್ಮಿಷನ್ ಕೊಡುತ್ತೇವೆ. ಯಾವ ಪಕ್ಷದವರು ಕೇಳಿದರೂ ಕೊಡುತ್ತೇವೆ ಯಾರೋ ನಿಮಗೆ ತಪ್ಪು ರೀತಿಯಲ್ಲಿ ಹೇಳಿರಬಹುದು. ನೀವು ಅದನ್ನು ನಂಬಬಾರದು. You know my nature. I will never do that The movement the application came to my knowledge I said give it to him. After all, we have to live in the party system,

SRI S. BANGARAPPA.—I thank you for that

ಶ್ರೀ ಆರ್. ಗುಂಡೂರಾವ್.—ಬಿ. ಜೆ. ಪಿ. ಯವರು ಸಭೆಯನ್ನು ಮಾಡುತ್ತೇವೆಂದು ಕೇಳಿದರೆ ನಾವು ಪರ್ಮಿಷನ್ ಕೊಡಲಿಲ್ಲವೇ ? ಮಾನ್ಯ ಕಕ್ಕಿಲ್ಲಾಯ ಅವರು ಕೇಳಿದರೂ ಕೊಡುತ್ತೇವೆ.

ಶ್ರೀ ಬಿ. ಮೈಕೇಲ್ ಫರ್ನಾಂಡೀಸ್.—ಗ್ಲಾಸ್ ಹೌಸ್ ಕೊಡುವುದರ ಜೊತೆಯಲ್ಲಿ ತಾವು ಸ್ವಲ್ಪ ಹಣವನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಆರ್. ಗುಂಡೂರಾವ್.—ಹಣ ನಿಮಗಿಂತ ನಮಗೆ ಜಾಸ್ತಿ ಸಿಕ್ಕುತ್ತದೆ. In this country people are not so unkind. ರೂಲಿಂಗ್ ಪಾರ್ಟಿಯವರು ಎಂದರೆ ಜನರು ಸ್ವಲ್ಪ ಜಾಸ್ತಿ ಹಣ ಕೊಡುತ್ತಾರೆ. Let us accept that principle. ಹಣ ಇಲ್ಲದೆ ಯಾರೂ ಸಭೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಇದು ಸಹ ತಮಗೆ ಗೊತ್ತಿರತಕ್ಕ ವಿಷಯವೇ. ಇದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ೭೯ ರಲ್ಲಿ ನಾವು ಅಧಿಕಾರವನ್ನು ಕಳೆದುಕೊಂಡಾಗ ಎಷ್ಟು ಕಷ್ಟಪಟ್ಟಿದ್ದೇವೆಂದು ನಾನು ಹೇಳುವುದಿಲ್ಲ. ಮಾನ್ಯ ದೇವರಾಜ ಅರಸ್ ಅವರು ಕನ್‌ವೆನ್‌ಷನ್ ಮಾಡಿದರು, ಆದರೆ ಇದು ಡಿಗ್ರಿಯಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು ಅಷ್ಟೆ ಅವರು ಮಾಡಿದಂಥ ಸಮಯದಲ್ಲಿ ಏರ್‌ಪೋರ್ಟಿನಿಂದ ಮಹಾತ್ಮಗಾಂಧಿ ಸರ್ಕಲ್‌ವರೆಗೆ, ರಿಚ್‌ಮೆಂಡ್ ಸರ್ಕಲ್, ಟ್ರಿನಿಟಿ ಚರ್ಚ್ ಎಲ್ಲಾ ಸರ್ಕಲ್‌ಗಳಲ್ಲಿಯೂ ಮಾಡಿದಂಥ ಡೆಕೋರೇಷನ್ ನೋಡಿದರೆ ತಾವು ಆಶ್ಚರ್ಯಪಡು ತ್ತಿದ್ದಿರಿ. ಇದಕ್ಕೆ ನಮ್ಮ ಹಾಜಿ ಅಬ್ದುಲ್ ಸತ್ತಾರ್ ಸೇಟ್ ಅವರು, ಮಾನ್ಯ ಶ್ರೀಕಂಠಯ್ಯನವರು ಇನ್‌ಚಾರ್ಜ್ ಇದ್ದರು. ಆಗ ಬೆಂಗಳೂರು ಸಿಟಿಯೇ ಒಂದು ರೀತಿಯಲ್ಲಿ ಕಲರ್‌ಫುಲ್ ಆಗಿ ಕಾಣು ತ್ತಿತು. ಇಡೀ ನಗರ ಒಂದು ಹಬ್ಬವನ್ನು ಆಚರಿಸಿದಂತೆ ಕಾಣುತ್ತಿತ್ತು. ಕಲರ್‌ಫುಲ್‌ಲೈಟ್ಸ್‌ನ್ನು ಎಲ್ಲಾ ಬೀದಿಗಳಲ್ಲಿ ಹಾಕಲಾಗಿತ್ತು. ಈ ತರಹದಲ್ಲಿ ಇದೆಲ್ಲಾ ನಡೆಯುತ್ತದೆ. ತಾವು ತಮ್ಮ ಭಾಷಣ ದಲ್ಲಿ ತಮ್ಮ ಸಭೆಗೆ ಕಾಂಗ್ರೆಸ್ ಕಾರ್ಯಕರ್ತರೇ ಜಾಸ್ತಿಯಾಗಿ ಬಂದಿದ್ದರು ಎಂದು ಹೇಳಿದ್ದೀರಿ. ಬಹಳ ಸಂತೋಷ. ನಾನು ಇಲ್ಲಿ ಎಲ್ಲಾ ವಿಚಾರಗಳನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಹೇಳು ತ್ತೇನೆ. ನನಗೆ ಇದಕ್ಕಿಂತ ಹೆಚ್ಚಿನ ಅಧಿಕಾರ ಏನು ಕೊಡುವುದಕ್ಕಾಗುತ್ತದೆ ನಾನು ಮುಖ್ಯಮಂತ್ರಿ ಪದವಿಯನ್ನು ಚೆನ್ನಾಗಿ ಅನುಭವಿಸಿದ್ದೇನೆ. I enjoyed the Chiefministership for 2½ years. I may complete 3 years. Afterwords, it is left to the majority party or whoever, it comes to power ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇದರಲ್ಲಿ ಯಾವುದೇ ರೀತಿಯ ಭಾವನೆಯನ್ನು ವ್ಯಕ್ತ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲ. ನಾಳೆಯೂ ಕೊಡುವುದಿಲ್ಲ. ಮಂತ್ರಿಮಂಡಲ ರಚನೆಯಾಯಿತು, ಇವರು ಮಂತ್ರಿಗಳಾದರು, ಮಂತ್ರಿಗಳಾಗಿ ನಮಗೆ ಪೂರ್ತಿಯಾದ ಸಹಕಾರವನ್ನು ಕೊಟ್ಟರು. Let me be very frank, as long as he was within the Ministry he was always giving me the fullest co-operation in the Cabinet ಕೆಲವು ವಿಚಾರಗಳಲ್ಲಿ ನಮಗೂ ಅವರಿಗೂ ಭಿನ್ನಾಭಿಪ್ರಾಯ ಬರುತ್ತಿತ್ತು, ಅದು ರಾಜಕೀಯದಲ್ಲಿ ಸ್ವಾಭಾವಿಕ. Ultimately it is a decision of the leader. Too many people cannot take a decision. It is ultimately one person who has to take decision ಎಲ್ಲಾ ಕಡೆಗಳಲ್ಲಿಯೂ ಇದು ಹೀಗೆ ಆಗುವುದು. ಆದ್ದರಿಂದ ಅವರು ಕೇವಲ ೧೧ ತಿಂಗಳು ನಮ್ಮ ಜೊತೆಯಲ್ಲಿ ಮಂತ್ರಿಗಳಾ ಗಿದ್ದರು, ನಮಗೂ ಅವರಿಗೂ ಭಿನ್ನಾಭಿಪ್ರಾಯ ಬಂತು ಅವರು ಮಂತ್ರಿಮಂಡಲ ಬಿಟ್ಟು ಹೋದರು. ಅವರು ಎಲ್ಲಿಯವರೆಗೆ ಇಂಧಿರಾಗಾಂಧಿಯವರಲ್ಲಿ ವಿಶ್ವಾಸವಿಟ್ಟಿದ್ದರು ಅಲ್ಲಿಯವರೆಗೆ ನಮ್ಮ ಜೊತೆಯಲ್ಲಿ

ದ್ವರು In his own statement he said we are bothered about the State Leadership. We are directly loyal to Mrs. Gandhi. We are directly loyal to the High Command, He accepted the Leadership of Mrs. Gandhi till 6th June. Afterwards he left stating that he does not like the policies and programmes of the party. It is left to him. But, at the same time his share is there in what all happended in those days when he was a Member in the party, whether he likes it or not is a different question. ಅದನ್ನು ಅವರು ಒಪ್ಪಿಕೊಳ್ಳಲೇಬೇಕು. ತಾವು ಇದ್ದ ಕಾಲದಲ್ಲಿ ಏನು ನಡೆಯಿತು ಎಂದು ನಾವು ಹೇಳಬಹುದೇ ಹೊರತು ಬೇರೇನೂ ಹೇಳುವುದಕ್ಕಾಗುವುದಿಲ್ಲ, ಅದನ್ನು ಯಾರು ಕೇಳುವುದಿಲ್ಲ.

ಮಾನ್ಯ ವಿರೋಧಪಕ್ಷದ ಸದಸ್ಯರಿಂದ ನಾನು ಬಹಳ ನಿರೀಕ್ಷಣೆ ಮಾಡಿದ್ದೆ. ಆದರೆ ನನಗೆ ಬಹಳ ನಿರಾಸೆಯಾಯಿತು. ಏಕೆಂದರೆ, ೧೯೮೦ರಲ್ಲಿ ನಾವು ಯಾವರೀತಿಯ ಚರ್ಚೆಯನ್ನು ಮಾಡಿದ್ದೆವೋ ಅದೇ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಚರ್ಚೆ ಮಾಡಿದರು ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಕೆಲವು ಸ್ಟಾಟಿಸ್ಟಿಕ್ಸಗಳನ್ನು ಕೊಟ್ಟರು. ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ಮಾನ್ಯ ದೇವೇಗೌಡರು, ೧೯೬೭ ನೇ ಇಸವಿಯಿಂದ ಹೇಳುವುದಾದರೆ, ಇವರು ಕಾವೇರಿಯ ಬಗ್ಗೆ ಮಾತನಾಡಿದರು. ೭೨ ರಲ್ಲಿಯೂ ಇದನ್ನೇ ಮಾತನಾಡಿದರು, ೭೮ರ ರಲ್ಲಿಯೂ ಇದನ್ನೇ ಮಾತನಾಡಿದರು. ೮೦–೮೨ ರಲ್ಲಿಯೂ ಇವರು ಕಾವೇರಿಯ ಬಗ್ಗೆಯೇ ಮಾತನಾಡಿದ್ದಾರೆ. ನಾನು ಬಹಳ ಯೋಚನೆ ಮಾಡಿದ್ದೆ ಇವರು ಹೊಸ ಸಲಹೆಗಳನ್ನು ಏನಾದರೂ ಕೊಡುತ್ತಾರೆಯೋ ಎಂದು. ಅಲ್ಲಿ ಗುಂಡು ಹೊಡೆದರು, ನರಗುಂದದಲ್ಲಿ ಗುಂಡು ಹೊಡೆದರು, ಕೆ. ಜಿ. ಎಫ್‌ನಲ್ಲಿ ಹೊಡೆದರು ಎಂದು ಹೇಳಿದರು. ಇವರ ಬಗ್ಗೆ ಮಾನ್ಯ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು ಅದಕ್ಕೂ ಉತ್ತರ ಕೊಟ್ಟಿದ್ದೂ ಆಯಿತು. You have to give clear picture of both sides.

ಇನ್ನು ಚಾರ್ಜಸ್ Corruption is there. What is the yardstick for all these things ? When corruption was not there, was there a year in which the assembly never discussed about this corruption right from 1956 ? I have got the Assembly proceedings about what Sri S. Sivappa said when he was the leader of the opposition.

ಶ್ರೀ ಎಸ್. ಆರ್. ಬೊಮ್ಮಾಯಿ. —ನಾನು ನಿಜಲಿಂಗಪ್ಪನವರ ಕಾಲದಲ್ಲಿಯೂ ಹೇಳಿದ್ದೇನೆ.

ಶ್ರೀ ಆರ್. ಗುಂಡೂರಾವ್ —ಯಾವುದೇ ಸರ್ಕಾರ ಬರಲಿ, ವಿರೋಧಪಕ್ಷದವರು ಬರೀ ಚಾರ್ಜಸ್ ಮಾಡುವುದೇ ಕೆಲಸವಾಗಿದೆ. ಯಾರು ತಪ್ಪುಮಾಡುತ್ತಿದ್ದಾರೆಂದು ಹುಡುಕುವುದು ಆಗಿದೆ. ಮಾನ್ಯ ಸದಸ್ಯರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಬೇಕು, ಯಾರ ಮೇಲೆ ಚಾರ್ಜಸ್ ಆಗಿಲ್ಲ ? ಮಾನ್ಯ ಶಿವಪ್ಪನವರು ವಿರೋಧಪಕ್ಷದಲ್ಲಿದ್ದಾಗ ೮೪ ಚಾರ್ಜಸ್ ಮಾಡಿದ್ದರು, ಶರಾವತಿ ಪ್ರಕರಣ, ರಾಮಯ್ಯ' ತಳಕಳಲೆ ಪ್ರಕರಣ, ಎಂ. ಐ. ಸಿ. ಬಿ ಕಂಟ್ರಾಕ್ಟರ್ಸ್ ಪ್ರಕರಣ. ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಜಾಗ ಕೊಟ್ಟ ಪ್ರಕರಣ, ಈ ರೀತಿಯಾಗಿ ಎಲ್ಲಾ ಚಾರ್ಜಸ್‌ಗಳನ್ನು ಮಾಡಿ ಅವರು ಹೊರಟು ಹೋದರು.

Is it the way we should adopt in the party system of Democracy? The moment one becomes the Chief Minister the only job of the Opposition is to level charges against him. All of a sudden Sri Jatti and Sri Nijalingappa became very good men for them. They forgot whatever happended in the past. Late Sri D Devaraj Urs appointed Iqbal Hussain Commission. There was Bhomma Reddy's case in which the supreme Court has given its judgement, All these things are there. Now suddenly they became one. ಈ ಸಿಸ್ಟಂನ್ನು

ಅನುಸರಿಸಿ ಹೋಗೋಣ ಎಂದರೆ ಹೋಗೋಣ. That is my point. There is nothing. ವಿರೋಧಪಕ್ಷಕ್ಕೆ ನಾವು ಬಂದಿರುವುದೇ ಟೀಕೆ ಮಾಡುವುದಕ್ಕೆ, ಆಡಳಿತ ಪಕ್ಷದಲ್ಲಿ ನೀವು ಇರುವುದೇ ನಾವು ಟೀಕೆ ಮಾಡಿದ್ದನ್ನೆಲ್ಲಾ ತಳ್ಳಿ ಹಾಕುವುದಕ್ಕೆ ಎಂದರೆ—ಆಗಲಿ ; ಅದರಿಂದ ಜನತೆಗೆ ಒಳ್ಳೆಯದು ಆಗುತ್ತದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಲ ಮಾತನಾಡಿದವರೆಲ್ಲಾ ಬರೀ ಭ್ರಷ್ಟಾಚಾರದ ಬಗ್ಗೆ ಅಲ್ಲ ಉಳಿದ ಅನೇಕ ವಿಚಾರಗಳನ್ನೂ ನಾವು ಹೇಳಿದ್ದೇವೆ.

ಶ್ರೀ ಆರ್. ಗುಂಡೂರಾವ್.—ನಾನು ಹೇಳುವುದೇನೆಂದರೆ, It is not the job of Opposition.

SRI S. R. BOMMAI.—We have to judge on performance.

ಶ್ರೀ ಆರ್. ಗುಂಡೂರಾವ್.—ಹಾಗೆ ನೋಡಿದರೆ ನಾವು ಬೇರೆ ಬೇರೆ ಚಾರ್ಜಸ್ಸನ್ನು ಯಾರ ಮೇಲೆ ಮಾಡುವುದಕ್ಕಾಗುವುದಿಲ್ಲ. ಯಾರೋ ಒಬ್ಬರು ಹೇಳುತ್ತಾ ಇದ್ದರು—೨ ಕೋಟಿ ರೂಪಾಯಿಗಳನ್ನು ಬಿ.ಡಿ.ಎ.ಯವರು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು. ಶ್ರೀ ಬಂಗಾರಪ್ಪನವರು ೨ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದರು. Where is the substance ? What is the Charge ? It is not correct ಜನತಾ ಪಾರ್ಟಿಯವರು ಅರಮನೆಯಲ್ಲಿ ಕನ್‌ವೆನ್‌ಷನ್ ಮೀಟಿಂಗ್ ಮಾಡಿದರು ; ಎಲ್ಲಾ ಕಡೆ ಪ್ಲೇಟ್ ಹಾಕಿದ್ದರು, ಸಾವಿರಾರು ಜನಕ್ಕೆ ಊಟ ಹಾಕಿದರು, ಲಂಚ ಹೊಡೆದುಬಿಟ್ಟರು ಎಂದರೆ is it a word to be said ? Whether Sri S. R. Bommai or Sri Devegowda are capable of feeding 25,000 people per day from out of their own income ? I would ask ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರ ಹತ್ತಿರ ಅದನ್ನು ಕಲೆಕ್ಟ್ ಮಾಡಿಕೊಳ್ಳುತ್ತೇವೆ.

ಶ್ರೀ ಆರ್. ಗುಂಡೂರಾವ್.—ನೀವು ಜನರ ಹತ್ತಿರ ಕಲೆಕ್ಟ್ ಮಾಡಿಕೊಳ್ಳುತ್ತೀರಿ. ಅಟ್‌ಲೀಸ್ಟ್ ಪೊಲಿಟಿಕಲ್ ಫೀಲ್ಡನಲ್ಲಿರುವವರು ನಾವು now, we should come to understand. ನೀವು ಪೊಲಿಟಿಕಲ್ ಕನ್‌ವೆನಷನ್ ಮಾಡಬೇಕಾದರೆ ೧ ರೂ. ತೆಗೆದುಕೊಳ್ಳಿರಿ ೫ ರೂ. ತೆಗೆದುಕೊಳ್ಳಿರಿ, ೧೦ ರೂಪಾಯಿಗಳನ್ನು ತೆಗೆದುಕೊಳ್ಳಿರಿ. ೧೦೦ ರೂಪಾಯಿಗಳನ್ನು ತೆಗೆದುಕೊಳ್ಳಿರಿ ; ನೀವು ಹಾಗೆ ಮಾಡಬೇಕು ; ನಾನು ಅಧಿಕಾರದ ಪಕ್ಷದಲ್ಲಿರತಕ್ಕಂಥವನು, ನೀವು ೧೦೦ ರೂಪಾಯಿಗಳನ್ನು ತೆಗೆದುಕೊಂಡರೆ ನಮ್ಮ ಪಕ್ಷಕ್ಕೆ ೧೦೦೦೦ ರೂಪಾಯಿಗಳನ್ನು ಕೊಡಿ ಎಂದು ಕೇಳಬಹುದು. ನಮಗೆ ಅವರು ಜಾಸ್ತಿ ಕೊಡಬಹುದು. ನಿಮಗೆ ಕೊಡತಕ್ಕಂಥವರು ಹೇಗೆ ಕೊಡುತ್ತಾರೆ ಗೊತ್ತೇ ; ಅದರ ಅನುಭವ ಕೂಡ ನಮಗೆ ಆಗಿದೆ. ಮುಂದೆ ಬೈ–ಎಲೆಕ್ಷನ್‌ನಲ್ಲಿ ಯಾರು ಗೆಲ್ಲಬಹುದು, ಜನರ ಮನಸ್ಸು ಯಾವ ತರಹ ಇದೆ, ಇದರಲ್ಲಿ ಹೇಗೆ ಆಗುತ್ತದೆ ಎಂಬುದನ್ನು ಯೋಚನೆ ಮಾಡುತ್ತಾರೆ. ಒಂದು ವೇಳೆ ಶ್ರೀ ಬೊಮ್ಮಾಯಿಯವರೇ ಅಧಿಕಾರಕ್ಕೆ ಬರಬಹುದು ಎಂದರೆ ೧೦೦ ರೂ. ಏತಕ್ಕೆ ಬೊಮ್ಮಾಯಿಯವರೇ ೫೦೦ ರೂ. ತೆಗೆದುಕೊಳ್ಳಿ ಇರಲಿ ಪರವಾಗಿಲ್ಲ' ಎಂದು ಹೇಳುತ್ತಾರೆ. ಶ್ರೀ ಕಕ್ಕಿಲಾಯರವರು ಬರುವುದೇ ಇಲ್ಲ ಅಂತ ಎಲ್ಲರಿಗೂ ಗೊತ್ತು. ಅವರಿಗೆ ಎಷ್ಟು ಕಷ್ಟ ಇದೆ ಅಂತ ಗೊತ್ತು. ಬೀಡಿ ಕಾರ್ಮಿಕರಿಗೆ ಅವರೇ ಕೊಡಬೇಕು. ಇನ್ನು ಶ್ರೀ ಮೈಕಲ್ ಫರ್ನಾಂಡಿಸ್‌ರವರಿಗಾದರೆ ಸ್ವಲ್ಪವಾದರೂ ಉಂಟು ; He has got Force.

ಶ್ರೀ ಮೈಕಲ್ ಬಿ. ಫರ್ನಾಂಡಿಸ್.—ಅವರು ಕೊಟ್ಟರು ನಾನು ತೆಗೆದುಕೊಳ್ಳುವುದಿಲ್ಲ.

SRI R. GUNDU RAO.—Sri Fernandez has got organised labour force behind him. I must congratulate him, I dealt with them. I talked to them. There is organised force. One rupee for one person means you will get Rs. one lakh. But that is not your case and our case. ಕಮ್ಯುನಿಸ್ಟ್ ಪೀಪಲ್ ಇದ್ದಾರೆ. ಅವರನ್ನು ಕನ್‌ವೆನ್‌ಷನ್ ಮಾಡಬೇಕು ಎಂದರೆ ಅದರ ಕಷ್ಟ ದೇವರಿಗೇ ಗೊತ್ತು. ಅವರ ಪಾಲಿಸಿ ಏನೆಂದರೆ, ಆಂಟಿ–ಇಂಪೀರಿಯಲಿಸಂ ಮತ್ತು ಆಂಟಿ–ಕ್ಯಾಪಿಟಲಿಸ್ಟ್ ಅವರ ಹತ್ತಿರ ಹೋಗಿ ಕೇಳುವಹಾಗೆ ಇಲ್ಲ. ಇನ್ನು ಶ್ರೀ ಪಂಪಾಪತಿಯವರು

ಮತ್ತು ಇತರರು ಕಷ್ಟಪಟ್ಟು ಕೆಲಸ ಮಾಡುತ್ತಾರೆ ; ಆದರೆ ಅವರಿಗೆ ಕಮಿಟ್‌ಮೆಂಟ್ ಇದೆ. I must compliment the communist cadre of workers because they have got such a commitment to their party. ನಾವು ನೀವು ಇಲ್ಲಿ ಇದ್ದೀವಲ್ಲ ; ನೀವು ನನಗಿಂತ ಅಚ್ಚ ಕಾಂಗ್ರೆಸ್ಸಿಗರು, ಏಕೆಂದರೆ ನೀವು ಖಾದಿ ಬಿಟ್ಟು ಬೇರೆ ಬಟ್ಟೆ ಹಾಕುವುದಿಲ್ಲ. ನಾನೂ ಏನೂ ಅಚ್ಚ ಕಾಂಗ್ರೆಸಿಗ ಅಲ್ಲ ; ನಾನು ೧೯೬೭ರ Model Congress. ನೀವು ಪ್ರಿ-ಇಂಡಿಪೆಂಡೆನ್ಸ್ ನಿಂದ 'ಜಿಂದಾಬಾದ್' ಎಂದು ಹೇಳಿದವರು. ಆದ್ದರಿಂದ ನಾವು ನೀವು ಕಾಂಗ್ರೆಸ್ಸಿಗೆ ಬಂದು ೧೩ ವರ್ಷ ಆಯಿತು. ನಮ್ಮದು ನಿಮ್ಮದು ಏನಪ್ಪ ಎಂದರೆ you are hoping that you will come to power. Our politics is to come to power. ನಮ್ಮದು ಪಾರ್ಟಿ ಗೇಂಜ್ ಪಾಲಿಸಿ ; ಹೇಗಾದರೂ ಮಂತ್ರಿಮಂಡಲ ಮಾಡಬೇಕು ; ಯಾರಾದರೂ ಬರಲಿ, ಯಾರಾದರೂ ಹೋಗಲಿ, ಏನಾದರೂ ಆಗಲೀ, ಏನೇ ಹೋಗಲಿ, ಪ್ರಿನ್ಸಿಪಲ್ ಇರಲಿ ಬಿಡಲಿ. ಮೆಜಾರಿಟಿ ಬರಬೇಕು, ಮಂತ್ರಿಮಂಡಲ ಮಾಡಬೇಕು ; ನಾವೂ ಆ ರೀತಿ ಮಾಡಿದ್ದೇವೆ, ನೀವೂ ಮಾಡಿದ್ದೀರಿ ; ಎಲ್ಲಾ ಅದೇ ರೀತಿ ಮಾಡಿದ್ದಾರೆ. ಆದರೆ ಕಮ್ಯೂನಿಸ್ಟ್‌ನವರದು ಹಾಗಲ್ಲ. ಅವರು ೧೯೮೮ಕ್ಕೆ ಲೆಕ್ಕ ಹಾಕುತ್ತಾ ಇಲ್ಲ ; ೨೦೦೩ನೇ ಇಸವಿಗೆ ಈ ರಾಜ್ಯದಲ್ಲಿ ಏನಾಗಬಹುದು, ೨೦೧೦ನೇ ಇಸವಿಗೆ ಈ ರಾಜ್ಯದಲ್ಲಿ ಏನಾಗಬಹುದು ಎಂದು ಅಂತಹ ಒಂದು ಪ್ಲಾನನ್ನು ಇಟ್ಟುಕೊಂಡಿರುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮ ರಾಜ್ಯದಮಟ್ಟಿಗೆ ಹೇಳಿ.

SRI R. GUNDU RAO.—It may be for our State. ವೆಸ್ಟ್‌ಬೆಂಗಾಲ್‌ನಲ್ಲಿ ಮಾರ್ಕ್ಸಿಸ್ಟ್ ಮಂತ್ರಿಮಂಡಲ ಇದೆ. ಅದು ಬೇರೆ ಪ್ರಶ್ನೆ. ಆದರೆ ಕರಪ್ಷನ್ ಚಾರ್ಜಸ್ ಮಾಡುವಾಗ ವೇಗ್ ಆಗಿ ಮಾಡಬಾರದು. ನಮ್ಮ ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ, ನಮ್ಮ ರಾಜ್ಯದ ಇತಿಹಾಸದಲ್ಲಿ ೧೯೫೭ರಿಂದ ನಮ್ಮ ಕಾಂಗ್ರೆಸೇ ರಾಜ್ಯ ಆಳಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಲ್ಲಿ ಅಪೋಜಿಷನ್ ಲೀಡರ್ ಆಗಿದ್ದಾಗ ಮತ್ತು ಮಾನ್ಯ ದೇವೇಗೌಡರು ಇಲ್ಲಿ ಅಪೋಜಿಷನ್ ಲೀಡರ್ ಆಗಿದ್ದಾಗ ವೇಗ್ ಆಗಿ ಯಾವುದೇ ಕರಪ್ಷನ್ ಚಾರ್ಜಸ್ ಮಾಡಿಲ್ಲ ; ವಿತ್ ರೆಕಾರ್ಡ್ಸ್ ಅಂಡ್ ಡಾಕ್ಯುಮೆಂಟ್ಸ್ ನಾವು ಕರಪ್ಷನ್ ಚಾರ್ಜಸ್ ಮಾಡಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಹಿಂದೆಯೂ ಮಾಡಿದ್ದೀರಿ, ಈಗಲೂ ಮಾಡುತ್ತಿದ್ದೀರಿ. That's allright. ನಿಮ್ಮ ದೃಷ್ಟಿಯಲ್ಲಿ ನೀವು ಹೇಳುತ್ತೀರಿ ; ನಮ್ಮ ದೃಷ್ಟಿಯಲ್ಲಿ ಅಲ್ಲ ಎಂದು ಹೇಳುತ್ತೇವೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ಅದನ್ನೆಲ್ಲಾ ಸ್ವಲ್ಪ ಬದಿಗಿಟ್ಟು, ನಾವು ಈ ರಾಜ್ಯದಲ್ಲಿ ಮೆಜಾರಿಟಿಯಿಂದ ಅಧಿಕಾರಕ್ಕೆ ಬಂದಿದ್ದೇವೆ. ನೀವು ಹಿಂದೆ ಅಧಿಕಾರಕ್ಕೆ ಬಂದಿದ್ದೀರಿ, ಆದ್ದರಿಂದ ನಾವು ನಮ್ಮ ರಾಜ್ಯದ ಡೆವಲಪ್‌ಮೆಂಟ್‌ಗೋಸ್ಕರ ಕೆಲಸ ಮಾಡುವುದಕ್ಕೆ ಏನೇನು ಮಾರ್ಗವನ್ನು ಅನುಸರಿಸಬೇಕೋ ಅದನ್ನು ಅನುಸರಿಸಬೇಕು. ಪೋಲೀಸರು ಎಲ್ಲೋ ಒಂದು ಕಡೆ ಗೋಲೀಬಾರ್ ಮಾಡಿದರು, ಅವರು ಗೋಲೀಬಾರ್ ಮಾಡಿದತಕ್ಷಣ ಟೀಕೆ ಮಾಡುವುದಕ್ಕೆ ಅವಕಾಶ ಸಿಕ್ಕಿತು ಎಂದು ಹೇಳಿ ಟೀಕೆ ಮಾಡುವುದಲ್ಲ ; ನಾನು ಚೀಫ್ ಮಿನಿಸ್ಟರ್ ಆಗಿದ್ದರೆ, ಇಂತಹ ಒಂದು ಘಟನೆ ನಡೆದಿದ್ದರೆ ನಾನು ಏನು ಮಾಡುತ್ತಾ ಇದ್ದೆ ಎಂಬುದನ್ನು ನಾವು ಯೋಚನೆ ಮಾಡಬೇಕು. What is the treatment of the past Governments? What is Jyothi Basu doing in West Bengal? Today what is Tamilnadu Government doing ? What is National Conference party Government doing in Kashmir ? It is not the individual who is important ; It is the party that is important It is the system that is important. ಈ ಮಧುಗಿರಿ ಪ್ರಕರಣದಲ್ಲಿ ಗೋಲೀಬಾರ್ ಆಯಿತು. ಶ್ರೀಮತಿ ಇಂದಿರಾಗಾಂಧಿಯವರ ಅರೆಸ್ಟ್ ಆದಾಗ ಗೋಲೀಬಾರ್ ಆಯಿತು. ಇನ್ನೊಂದು ಪ್ರಕರಣದಲ್ಲಿ ಗೋಲೀಬಾರ್ ಆಯಿತು Is it an argument to say that during our time may golibars have taken place and five persons died and during the tenure of the previous Chief Mintster only five persons died ? Is it an argument ? The Principle and practice of the adminis-

trative system should be followed here. That is most important thing. ಹಿಂದೆ ಎಕ್ಸ್‌ಪ್ರೋ ಚಳವಳಿ ಆಯಿತು. ಅದರಲ್ಲಿ ನಾವೆಲ್ಲಾ ಇದ್ದೆವು. ನಮ್ಮನ್ನು ಅರೆಸ್ಟ್ ಮಾಡಲಿಲ್ಲವೆ ? ನಮಗೆ ಲಾಠಿ ಚಾರ್ಜ್ ಮಾಡಲಿಲ್ಲವೇ ? ಅದರಲ್ಲೂ ನಾನು ಏನಾದರೂ ಚಳುವಳಿಯಲ್ಲಿ ಭಾಗವಹಿಸುವಾಗ ಲಾಠಿ ಏಟು ಮೊದಲು ಬೀಳುವುದು ನನಗೇ : ಏಕೆಂದರೆ ನಾನು ಉದ್ದ ಇದ್ದೇನೆ ನೋಡಿ, ಸಣ್ಣಗಿರುವವರು, ಕುಳ್ಳಗಿರುವವರು ಕೆಲವರು ತಪ್ಪಿಸಿಕೊಂಡು ಹೋಗಿಬಿಡುತ್ತಾರೆ. ಅಂತಹ ಅವಕಾಶ ನಮಗೆ ಸಿಕ್ಕುವುದಿಲ್ಲ. So that is not the argument. ಪೀಪಲ್ ರ್‍ಯಾನ್‌ಸ್ಯಾಕ್ ಮಾಡುತ್ತಾರೆ, ರೈಲ್ವೆ ಸ್ಟೇಷನ್ ಸುಟ್ಟು ಹಾಕುತ್ತಾರೆ, ಪೋಸ್ಟ್‌ಆಫೀಸ್ ಸುಟ್ಟು ಹಾಕುತ್ತಾರೆ, ತಹಶೀಲ್ದಾರ್ ಆಫೀಸ್ ಸುಟ್ಟು ಹಾಕುತ್ತಾರೆ. ಆಗ ಏನು ಮಾಡುವುದಕ್ಕಾಗುತ್ತದೆ ? Inevitably there is no other go in the present system. ನಮ್ಮಲ್ಲಿ ಯಾರೋ ಒಬ್ಬ ಸದಸ್ಯರು ಸಲಹೆ ಕೊಡುತ್ತಿದ್ದರು. Hon'ble Member Sri Morley gave a suggestion as to why there should be a intermediate agency between the police and the public. He has put a very good suggestion. But the co-operation of the people is most important. ಯಾವ ಒಂದು ಅಜಿಟೇಷನ್ ಆಗಲಿ did any leader take the responsibility of maintaining diicipline in the protest meetings ? Several times something beyond our limit will happen. ಅದನ್ನು ಯಾರೂ ಯೋಚನೆ ಮಾಡುವುದಕ್ಕಾಗುವುದಿಲ್ಲ. What is the yardstick now ? what is the yardstick to measure as to whether my Government is corrupt or not corrupt, popular or un-popular ? What is the yardstick we have to day ? In a democratic system, election is the yardstick to come to a decision. ಈಗ ನಾವೂ ನೀವೂ ಚರ್ಚೆ ಮಾಡುತ್ತೇವೆ, ಮುಂದೆ ನೋಡಿಕೊಳ್ಳೋಣ, ಮುಂದೆ ನಿಮಗೆ ಕಾಣುತ್ತದೆ ಎಂದು ನೀವೂ ಹೇಳುತ್ತೀರಿ, ನಾವೂ ಹೇಳುತ್ತೇವೆ. ಹೀಗೆ ಇಬ್ಬರೂ ಏತಕ್ಕೆ ಆರ್ಗ್ಯುಮೆಂಟ್ ಮಾಡುತ್ತಿದ್ದೇವೆ ? ಅದೆಲ್ಲಾ ಎಲೆಕ್ಷನ್ ಸಲುವಾಗಿ. ಹಾಗಾದರೆ ನಾಳೆದಿವಸ ನಾನೇ ಪುನಃ ಎಲೆಕ್ಟ್ ಆಗಿ ಬಂದೆ ಎಂದು ಇಟ್ಟುಕೊಳ್ಳೋಣ, Even though I am unpopular I can become a Member ಅದು ಹೇಗೆ ಆಗುತ್ತದೆ ? What is the yardstick you have in the democratic system ? ಹೈಕೋರ್ಟಿನಲ್ಲಿ ಇಷ್ಟು ವರ್ಷ ಎಂದು ಪ್ರಾಕ್ಟೀಸ್ ಮಾಡಿದರೆ he can become Judge. ಮುನ್ಸಿಫ್ ಕೋರ್ಟ್‌ನಲ್ಲಿ ಇಷ್ಟು ವರ್ಷ ಎಂದು ಪ್ರಾಕ್ಟೀಸ್ ಮಾಡಿದರೆ he can come District judge. ಪೋಲೀಸ್ ಇಲಾಖೆಯಲ್ಲಿ ಇಷ್ಟು ವರ್ಷ ಎಂದು ಕೆಲಸ ಮಾಡಿದರೆ Dy. S.P. can become S.P. ಇಂಜಿನಿಯರ್ಸ್‌ಗೆ ಇಷ್ಟು ವರ್ಷ ಅಂತ ಹೇಳಿ ಮತ್ತು ಡಾಕ್ಟರ್‌ಗಳಿಗೆ ಇಷ್ಟು ವರ್ಷ ಅಂತ ಹೇಳಿ ಅವರಿಗೆಲ್ಲಾ ನಾರ್ಮ್ಸ್ ಇದೆ, ನಮಗೂ ನಿಮಗೂ ಏನು ನಾರ್ಮ್ಸ್ ಏನಿದೆ ? ನಾಳೆ ದಿವಸ ಹರಿಯಾಣದಲ್ಲಿ ಶ್ರೀ ದೇವೀಲಾಲ್ ಮಂತ್ರಿಯಾದರೆ ಯಾರೂ ಆಶ್ಚರ್ಯಪಡಬೇಕಿಲ್ಲ. What is the yardstick ? The only yardstick in the democratic system is the election.

5-00 P.M

The only yard-stick is elections. ಇದರ ಬಗ್ಗೆ ಆರ್ಗ್ಯುಮೆಂಟ್ ಮಾಡಿದ್ದಾರೆ. An adjournment motion was moved by the hon. Members of the Opposition. We defended. Under those circumstances there was no alternative except to take an un-popular decision. I went there We defended our action. You all said then including late Sri Devaraj Urs that ryots were against Gundu Rao's Government, they were allergic to the Congress-I. And fortunately or unfortunately there was a by-election in the same District and the same rural area

where 80% voters are ryots. You campaigned elaborately. I asked my friend Sri Bangarappa not to go there because he was not a Minister then. By the time the by-election came, he was not in the Cabinet. I went there and canvassed for my Party candidate My party-man canvassed. All the Ministers went and canvassed. And we won that seat with a comfortable majority. The whole election propoganda was with reference to Nargund and Navalgund incidents ನರಗುಂದ ಮತ್ತು ನವಲಗುಂದದಲ್ಲಿ ಇರುವಂತಹ ರೈತರಿಗೆ ನಮ್ಮ ವಿರೊಧಪಕ್ಷದ ನಾಯಕರು ಅಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದಾಗ ಹೇಳಿದ್ದಾರೆ, ಇವರು ನಮ್ಮನ್ನು ಜೈಲಿಗೆ ಕಳುಹಿಸಿದಂತಹವರು. ಅಂತಹವರಿಗೆ ತಾವು ಮತ ಕೊಡಬೇಡಿ. ಎಂದು ಹೇಳಿದರೂ ಕೂಡ ಅವರು ನಮ್ಮ ಪಕ್ಷಕ್ಕೆ ಮತ ಕೊಟ್ಟು ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. These are all the speeches made by my very very good friend Sri Bommai. His leaders Gurupada swamy and so on made speeches. What is the yard-stick before you? ನೀವು ಮತ್ತು ನಿಮ್ಮ ಪಕ್ಷದವರು ಎಷ್ಟೇ ಪ್ರಚಾರ ಭಾಷಣ ಮಾಡಿದರೂ ಕೂಡ ಅವರು ನಮ್ಮ ಪಕ್ಷದ ಮೇಲೆ ಒಂದು ನಂಬಿಕೆ ಇಟ್ಟುಕೊಂಡಿದ್ದಾರೆ, ಅವರಿಗೆ ಗೊತ್ತು ವಿರೋಧಪಕ್ಷದವರು ಎಲ್ಲರೂ ಡಿಪೆಕ್ಟರ್ಸ್ ಎಂದು. ಆದ್ದರಿಂದಲೇ ಜನತೆ ನಮ್ಮ ಪಕ್ಷಕ್ಕೆ ಮತ ಕೊಟ್ಟಿದ್ದಾರೆ.

I expected from Sri Bangarappa that the moment he left the Party he would follow the example of Sri Bahuguna. If I were in his place, I would not have remained an M.LA, for a single minute. I have been elected on Congress-I ticket under the leadership of Smt. Indra Gandhi I have not contested the election independently. I have come to power today because of Party and my Leader at the Centre.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಪಕ್ಷದಲ್ಲಿ ಒಂದು ಸಿಸ್ಟಂ ನಾವು ಇಟ್ಟುಕೊಂಡಿದ್ದೇವೆ ಮತ್ತು ಒಂದು ತತ್ವದ ಆಧಾರದ ಮೇಲೆ ವಿರೋಧಪಕ್ಷದವರು ವರ್ತನೆ ಮಾಡುತ್ತಾರೆ.

ಶ್ರೀ ಆರ್. ಗುಂಡೂರಾವ್.— ಈಗ ನಾವು ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. Do not forget for a moment that all the Members were elected by the people on the 'hand' symbol and under the leadership of Smt. Indira Gandhi Sri Bahuguna won with a thumping majority.

ಶ್ರೀ ಪಿ. ರಾಮದೇವ್.—ನಮ್ಮ ಪಕ್ಷದಲ್ಲಿ ಯಾರೂ ಅಧಿಕಾರಕ್ಕೆ ಆಸೆಪಡುವುದಿಲ್ಲ. ಆದರೆ ಒಂದು ತತ್ವವನ್ನು ನಾವು ಪಾಲನೆ ಮಾಡುತ್ತೇವೆ. ಆದ್ದರಿಂದ

ಶ್ರೀ ಆರ್. ಗುಂಡೂರಾವ್.—ತಾವು ಇನ್ನು ಕಾರ್ಪೊರೇಷನ್ ಬಿಟ್ಟು ಮುಂದೆ ಹೋಗಿಲ್ಲ ತಾವು ಆ ಕಾರ್ಪೊರೇಷನ್ ಬಿಟ್ಟು ಸ್ವಲ್ಪ ಮುಂದೆ ಹೋದರೆ ಒಳ್ಳೆಯದು. He won on the Congress-I ticket with a thumping majority in the same constituency. The moment he diferred from Smt. Indira Gandhi, he resigned. And now Bahuguna has sent congratulations to Sri Bangarappa. It has appeared in the press. But I would have appreciated if Bangarappa had resigned. He could have then spoken with more authority. I got elected on Congress-I ticket. And if I have to differ because of principles, I will tender my resignation first and get re-elected. ನಾವು ನಮ್ಮ ಪಕ್ಷದ ನಾರಂಸ್ ಏನು ಇದೆ ಅದನ್ನು ಅಚ್ಚುಕಟ್ಟಾಗಿ ಪಾಲನೆ ಮಾಡಂತ್ತೇವೆ, ತಮ್ಮಹಾಗೆ ನಾವು ಜನತೆಯಿಂದ

ಅಧಿಕಾರಕ್ಕೆ ಬಂದಂತಹ ಸಂಧರ್ಭದಲ್ಲಿ ಒಳ ಜಗಳ ಮಾಡುವುದಿಲ್ಲ. What right you have got? You can make any adjustment in this House. But it is not sanctioned by the people. You go back to the people and look. You say to them. "I have taken this dicision. I have got elected on Janata Party ticket. I do not like the leadership of Sri Chandrasekhar and that is way I have come again to seek your mandate." If you do this people will appreciate you. The whole country will appreciate you. ಎಲ್ಲಿ ಕೈ ಹಾಕಿದರೂ ಸಹ ಮಿಾನು ಬುಟ್ಟಿಗೆ ಕೈ ಹಾಕುವುದು ಬೇಡ ಎಂದು ಹೇಳಿದ ಹಾಗೆ ನಾವು ಯಾರೂ ಕೈ ಹಾಕುವುದು ಬೇಡ. ನಾವು ಮಂತ್ರಿಮಂಡಲದಲ್ಲಿ ಇರುವುದಕ್ಕೆ ಹಕ್ಕಿಲ್ಲ, ಸರ್ಕಾರ ನಡೆಸುವುದು ಹಕ್ಕಿಲ್ಲವೆಂದು ಹೇಳುವುದು ಸರಿಯಲ್ಲ. ನಾವು ಇಬ್ಬರು ಒಂದು ಒಮ್ಮತ ಮಾಡಿಕೊಂಡು ಖಾಯಂ ಆಗಿ ಇರುವುದಕ್ಕೆ ಒಪ್ಪಿಕೊಳ್ಳೋಣ, ನಾವು ಇಬ್ಬರು ಮತ್ತೆ ಜನತೆಯ ಮುಂದೆ ಒಟು ಕೇಳುವುದಕ್ಕೆ ಹೋಗಬೇಕು. I am telling you this with all responsibility. If on any occasion I change the Party and leave the Leadership, I do not stand there for a moment. As long as you are a representative of a particular party you have to remain there. You have not asked votes of the people as an individual. You have asked the votes on your Party's symbol. On the wall-posters you have put photographs of your Leaders. Your Leaders' photographs are bigger ones and yours are smaller ones. On that assurance people have voted you. But what is happening today? It is very unfortunate. But yet it is happening That is why my simple argument here is let us not argue on that count. There should be an alternative party. There should be an alternative leadership. The people should have confidence in them. But what is happening today? Everything is against Smt. Indira Gandhi. Do you think, if Lohia was alive today would have joined with all these groups? He would have joined Nehru's Cabinet. But he declined saying that he was fighting for principles and his aim was not to go collectively to grab power. He never tried to grab power without principles. You show me anywhere that Karl Marx forsake principles.

All this is Aaya Ram and Gaya Ram. If Bhajanlal becomes the Congress (I) Chief Minister he is a defector. If Bhajan Lal becomes the Janatha Party Chief Minister he is a real peoples representative. What sort of talk this is ? So, let us not argue about that. We are not born here to live permanently in this plaec. Eight Chief Ministers have ruled here and I am the ninth man. I also go one day. But let us touch our hearts and say what I am doing and what I am thinking. ಇದರ ಮೇಲೆ ನಾವು ನಡೆದುಕೊಂಡು ಹೋಗೋಣ. ಯಾವ ಪಾರ್ಟಿಯಲ್ಲಿ ಯಾರು ತಪ್ಪು ಮಾಡುತ್ತಾರೆ, "ಅಲ್ಲಿ ಸಲ್ಲದವನು ಇಲ್ಲಿಯೂ ಸಲ್ಲ" ಎಂದು ಹೇಳುವ ಹಾಗೆ ಇಲ್ಲಿಂದ ಹೋಗುವವರನ್ನು ನೀವು ತೆಗೆದುಕೊಳ್ಳಬಾರದು. Put a bar. Put him a disqualification that no one should join your party as an M.L.A. That is a good thing If anybody wants to come from Congress (I) Party to your party you

put a norm that as long as he is the Congress elected member he will not be admitted. That is what N. T. Rama Rao said.........

ಶ್ರೀ ಹೆಚ್, ಎಲ್. ತಿಮ್ಮೇಗೌಡ.— ನಮ್ಮ ಪಾರ್ಟಿಯಲ್ಲಿ ಯಾರನ್ನೂ ತೆಗೆದುಕೊಂಡಿಲ್ಲ,

ಶ್ರೀ ಆರ್ ಗುಂಡೂರಾವ್.— ಈಗ ತೆಗೆದುಕೊಂಡಿರುವವರು ಯಾರು ? ಯಾರನ್ನು ತೆಗೆದು ಕೊಂಡಿದ್ದೀರಿ ? ಸೇರಿಸಿಕೊಳ್ಳುವುದಕ್ಕೆ ಏನು ಕಾರಣ ? ಈಗ ಕರೆಯುತ್ತಿರುವವರು ಯಾರು ? ನಿಮ್ಮ ಪ್ರೆಸಿಡೆಂಟರೇ ಕರೆಯುತ್ತಿದ್ದಾರಲ್ಲ "ಬನ್ನಿ ಸ್ವಾಮಿ' ಎಂದು. ಬರುವುದು ಬಿಡುವುದು ಅವರವರ ಇಷ್ಟ. It is an individual right. I cannot question. But what is happening ? ಜೆ. ಹೆಚ್. ಪಟೇಲರು, ಬಂಗಾರಪ್ಪನವರೇ ನಮ್ಮ ಕಡೆಗೆ ಬನ್ನಿ ಎಂದು ಕರೆಯುತ್ತಿದ್ದಾರೆ. ಹಾಗೆಯೇ ಬೊಮ್ಮಾಯಿಯವರೂ, ನಿಜಲಿಂಗಪ್ಪನವರೂ ತಮ್ಮ ತಮ್ಮ ಕಡೆಗೆ ಬನ್ನಿ ಎಂದು ಕರೆಯುತ್ತಿದ್ದಾರೆ. ಅದೇ ರೀತಿ ಎ.ಕೆ. ಸುಬ್ಬಯ್ಯನವರು, ಗಂಗಾಧರನ್‌ರವರು ಬಂಗಾರಪ್ಪನವರೇ ನಮ್ಮ ಕಡೆಗೆ ಬನ್ನಿ ಎಂದು ಕರೆಯುತ್ತಿದ್ದಾರೆ. ಹಾಗಾದರೆ ನಿನ್ನೆಯವರೆಗೂ ಬಂಗಾರಪ್ಪನವರು ಇದ್ದಂತಹ ಪಾರ್ಟಿ ನಿಮಗೆ ಬೇಡವಾಗಿತ್ತು ಕಾಂಗ್ರೆಸ್ ಪಾರ್ಟಿ ದೇಶದ ಆರ್ಥಿಕ ಪರಿಸ್ಥಿತಿಯನ್ನೇ ಹಾಳುಮಾಡಿಬಿಟ್ಟಿದೆ. ಕಾಂಗ್ರೆಸ್ ಪಾರ್ಟಿ ಇರುವವರೆಗೆ ದೇಶದಲ್ಲಿ ಒಳ್ಳೆಯದಾಗುವುದಿಲ್ಲ ಎಂದು ತಿಳಿದುಕೊಂಡಿದ್ದವರು, ಇವತ್ತು ಬಂಗಾರಪ್ಪನವರು ಕಾಂಗ್ರೆಸ್ ಪಾರ್ಟಿಯನ್ನು ಬಿಟ್ಟು ಬಂದ ತಕ್ಷಣ ನಮ್ಮ ಕಡೆ ಬನ್ನಿ, ನಮ್ಮ ಕಡೆ ಬನ್ನಿ ಎಂದು ಕರೆಯುತ್ತಿದ್ದೀರಲ್ಲ ಯಾಕೆ ಸ್ವಾಮಿ ಇದು ? ನಿಜಲಿಂಗಪ್ಪನವರಿಗೆ ಏಕೆ ಈ ವಯಸ್ಸಿನಲ್ಲಿ ಈ ಮಾತು ? I can,t understand. ಇದರಿಂದ ಜನಗಳಿಗೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಂಬಿಕೆ ವಿಶ್ವಾಸ ಹೊರಟು ಹೋಗುವುದಕ್ಕೆ ಅವಕಾಶ ಆಗುತ್ತದೆ, ನಾವು ನೀವು ಜಗಳ ಆಡೋಣ ಆಮೇಲೆ. ಆದರೆ ಪ್ರಜಾಪ್ರಭುತ್ವ ಉಳಿಯದೇ ಹೋದರೆ ನಾವು ಮುಳುಗಿದ ಹಾಗೆಯೇ. ಒಂದು ಕತೆ ಇದೆಯಲ್ಲ ಹಾಗಾಗುತ್ತದೆ. ನಮ್ಮಲ್ಲಿ ಗಂಡ ಸತ್ತರೆ ಹೆಂಗಸು ತಲೆ ಬೋಳಿಸಿಕೊಳ್ಳುತ್ತಾರೆ. ನೋಡಿದ್ದೀರಾ ತಿಮ್ಮೇಗೌಡರೆ, ಆಕೆ ಮದುವೆ ಮನೆಗೆ ಹೋದಾಗ ನೋಡುತ್ತಾಳೆ, ಅಲ್ಲಿ ಮುತ್ತೈದೆಯರು ಎಲ್ಲರೂ ರೇಷ್ಮೆ ಸೀರೆ ಉಟ್ಟುಕೊಂಡು ಹಣೆಗೆ ಕುಂಕುಮ ಇಟ್ಟುಕೊಂಡು, ಕೈಬಳೆ ಹಾಕಿಕೊಂಡು ತಿರುಗಾಡುತ್ತಿರುತ್ತಾರೆ. ಆದರೆ, ತಲೆ ಬೋಳಿಸಿಕೊಂಡ ಹೆಂಗಸು ಯಾರ ಜೊತೆಯಲ್ಲೂ ಮಾತನಾಡದೆ ಸುಮ್ಮನೆ ಒಂದು ಕಡೆ ಕುಳಿತುಕೊಂಡಿರುತ್ತಾಳೆ. ಯಾರ ಜೊತೆಯಲ್ಲೂ ಆಕೆ ಮಾತನಾಡುವುದಿಲ್ಲ. ಇನ್ನೊಬ್ಬಳು ಇದೇ ತರಹ ತಲೆಬೋಳಿಸಿಕೊಂಡು ಬಂದ ಹೆಂಗಸು ಬಂದ ಮೇಲೆ ಇವಳಿಗೆ ಒಂದು ಜೊತೆ ಸಿಕ್ಕಂತಾಗುತ್ತದೆ. ಆಮೇಲೆ ನೋಡಬೇಕು ಅವರಿಬ್ಬರ ಚರ್ಚೆ. ಅವಳ ಬಟ್ಟೆ ನೋಡು, ಅವಳ ಸರ ನೋಡು, ಅದು ಇದು ಅಂತ ಆರಾಮವಾಗಿ ಕುಳಿತುಕೊಂಡು ಮಾತನಾಡುತ್ತಾರೆ. ಇಂಥಾ ಕೆಲಸ ಬೇಡ. Let us have that clear cut policy from today onwards. ನಾವು ನೀವು ಸೇರಿ ತೀರ್ಮಾನ ಮಾಡೋಣ. ಇವತ್ತು ಬೇರೆ ಪಾರ್ಟಿ ಒಪ್ಪಲಿ ಬಿಡಲಿ, ಇನ್ನು ಮುಂದಿನ ಚುನಾವಣೆಯಲ್ಲಿ ಒಂದು collective declaration ಕೊಡೋಣ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ನಮ್ಮ ಪಕ್ಷದಿಂದ ಆರಿಸಿ ಬಂದವರು ಯಾರೇ ಆಗಲಿ, ಬೇರೆ ಪಕ್ಷಕ್ಕೆ ಬರುವುದಾದರೆ ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಪುನಃ ಜನತೆಯ ಅಭಿಪ್ರಾಯ ಪಡೆದು ಪುನಃ ಆರಿಸಿಬರಬೇಕು. ಅಲ್ಲಿಯವರೆಗೆ ನಿಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂಬ ತೀರ್ಮಾನ ಮಾಡೋಣ. ಅದೇ ಪ್ರಕಾರ ನಾವು ತೀರ್ಮಾನ ಮಾಡುತ್ತೇವೆ. ನೀವು ಕೂಡ ಹಾಗೆಯೇ ಮಾಡಿ. Atleast ಇದನ್ನು ನಮ್ಮಲ್ಲಿ ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡೋಣ, ಅದನ್ನು ಬಿಟ್ಟು ಇಲ್ಲಿಂದ ಯಾರಾದರೂ ನಿಮ್ಮ ಕಡೆಗೆ ಬಂದರೆ ಮಾತ್ರ ರಾಮ್‌ದೇವರು ಡಿಫಾಲ್ಟರ್ಸ್‌ನ್ನು ಕರೆದುಕೊಂಡು ರಾಜಕೀಯ ಮಾಡುತ್ತಾರೆ ಏಕೆ ಸ್ವಾಮಿ ?

ಶ್ರೀ ಪಿ. ರಾಮದೇವ್.—ಈ ಬಗ್ಗೆ ಕಾಶ್ಮೀರದಲ್ಲಿ ಇರುವ ಹಾಗೆ ಒಂದು ಲೆಜಿಸ್ಲೇಷನ್ ತರೋಣ.

ಶ್ರೀ ಆರ್. ಗುಂಡೂರಾವ್.— ಕಾಶ್ಮೀರದಲ್ಲಿ ಕಾನ್ಸ್ಟಿಟ್ಯೂಶನ್ ಅಮೆಂಡ್‌ಮೆಂಟ್ ಆಗಿಲ್ಲ. It is only by dictating terms, because it is one mans party ಇದನ್ನು ಇಲ್ಲೂ ತರಬಹುದು. ತಪ್ಪೇನಿಲ್ಲ. ನಮ್ಮಲ್ಲಿ ನಾವು ನೀವು ಇದನ್ನು ಮಾಡೋಣ. Nothing wrong.

SRI A. LAKSHMI SAGAR.-- It is permissible so far as Jammu & Kashmir is concerned. It is not possible here. Why don,t you bring a legislation to the election laws. That is, representation

of People s Act can be amended as suggested by the Election Commission. All this peroration will be of no use if you are not prepared to bring amendment to the Representative of Peoples Act.

SRI R. GUNDU RAO.— My dear Leader of the Opposition, I know you are a good lawyer. But I don,t know whether we are competent to do that ... ಅದಕ್ಕೆ ಮೊದಲು ಪಾರ್ಲಿಮೆಂಟಿನಲ್ಲಿ ಬರುತ್ತದೋ ಇಲ್ಲವೋ, ಪಾರ್ಲಿಮೆಂಟಿನ ವರೆಗೆ ನಾವು ಹೋಗುವುದಕ್ಕೆ ಆಗುತ್ತದೋ ಬಿಡುತ್ತದೋ, ಅದು ಬೇರೆ ಪ್ರಶ್ನೆ...

SRI A. LAKSHMI SAGAR.—Sir, Let this House make a recommendation or a request to the Central Government that such a piece of legislation is imperative and essential.

SRI R. GUNDU RAO.—The question is, whether we are competent to do that.

SRI A. LAKSHMI SAGAR,—Sir, we can make a request and other State Legislatures may follow the same.

ಶ್ರೀ ಆರ್. ಗುಂಡೂರಾವ್.—ಅಲ್ಲಿಯುವರೆಗೆ ನಾವು ಏನು ಮಾಡಬೇಕು ಎಂದರೆ ಯಾರೂ ಮಾತನಾಡಬಾರದು. ಮಂತ್ರಿಮಂಡಲದಲ್ಲಿ ಯಾರೇ ಇರಲಿ, ಅವರ ಮಂತ್ರಿಮಂಡಲ ಹೇಗೇ ಇರಲಿ ಅದನ್ನು ನೋಡಿಕೊಂಡು ಹೋಗೋಣ. ಅದನ್ನು ಬಿಟ್ಟು ನನ್ನ ಮೂಲಭೂತವಾದ ಪ್ರಶ್ನೆ ಎಂದರೆ ಶ್ರೀಮಾನ್ ರಾಮೇಗೌಡರು ದೊಡ್ಡಬಳ್ಳಾಪುರದಲ್ಲಿ ಚುನಾವಣೆಯಲ್ಲಿ ನಿಂತು ಕೊಂಡಾಗ ಯಾರ ಹೆಸರಿನಲ್ಲಿ ಜನರಿಂದ ಮತ ಪಡೆದು ಗೆದ್ದು ಬಂದರು ? ಯಾವ ಪಕ್ಷದ ಹೆಸರಿನಲ್ಲಿ ಮತ ಪಡೆದರು ? ಯಾರ ವಾಲ್‌ಪೋಸ್ಟರ್ ಹಾಕಿಕೊಂಡು ಮತ ಪಡೆದರು ? ಆದ್ದರಿಂದ ಇದೇ ಪ್ರಯತ್ನವನ್ನು ಅವರು ಪುನಃ ಮಾಡಬೇಕು......

ಶ್ರೀ ಜಿ. ರಾಮೇಗೌಡ.—ನಾನು ಸೈಕಲ್ ಗುರುತು ಇಟ್ಟುಕೊಂಡು ಹನ್ನೆರಡು ವರ್ಷ ಆರಿಸಿ ಬಂದಿದ್ದೆ.

ಶ್ರೀ ಆರ್. ಗುಂಡೂರಾವ್.—ಅದು ಬೇರೆ ಪ್ರಶ್ನೆ. ಇದನ್ನು ಅನೇಕರು ಮಾಡುತ್ತಾರೆ. ನಾನು ಸೈಕಲ್ ಗುರುತಂ ಇಟ್ಟುಕೊಂಡು ಇಪ್ಪತು ವರ್ಷ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು. ಆ ಪ್ರಶ್ನೆ ಅಲ್ಲ. Let us talk on facts and the present circumstances.

ಶ್ರೀ ರಾಮೇಗೌಡ.—ನಾನು ೧೯೬೯ರಲ್ಲಿ ನೀವು ಇದ್ದೀರಾ ಅಂತ ಪಾರ್ಟಿ ಬಿಟ್ಟು ಬಂದೆ......

(ನಗು),

ಶ್ರೀ ಆರ್. ಗುಂಡೂರಾವ್,—ಶ್ರೀ ಎಂ. ವಿ. ಕೃಷ್ಣಪ್ಪನವರು ಚಿಕ್ಕಬಳ್ಳಾಪುರದಲ್ಲಿ ಭಾಷಣ ಮಾಡಿದ್ದರು. ಪಾಪ, ಇವತ್ತು ಅವರು ಇಲ್ಲ. ಈ ರಾಜ್ಯದಲ್ಲಿ ಹಳೇ ಮೈಸೂರಿನಿಂದ ಚುನಾವಣೆಯಲ್ಲ ನನ್ನನ್ನು ಸೋಲಿಸುವವರೇ ಇಲ್ಲ. ಎಂದು ಹೇಳಿದ್ದರು ಅವರು M. V. Krishnappa-known for over three decades, But what happened ? He lost his deposit. **Mr. Ramegowda**, if you had not contested from Congress (I) ticket **definitely** you would not have been here. Let us accept the facts. Sri T.A Pai alsoboasted himself. He said that he had done everything for his area and no one can defeat him. He also said that he is know all over the country, all over the world and he is popular as best economist and as such he cannot be defeated. But, all these things could not save him.

ಶ್ರೀ ಜಿ, ರಾಮೇಗೌಡ.—ರಾಮದೇವ್ ಮತ್ತೆ ಬೇರೆಯುವರು ಹೇಗೆ ಆರಿಸಿ ಬಂದರು ?

ಶ್ರೀ ಆರ್. ಗುಂಡೂರಾವ್.—ಇದು ಅವರ ಪ್ರಶ್ನೆ ಅಲ್ಲ. I appreciate ದೇವೇಗೌಡ, ಜೆ. ಹೆಚ್. ಪಟೇಲ್. ಲಕ್ಷ್ಮೀಸಾಗರ್, ಡಾಕ್ಟರ್ ತಿಮ್ಮೇಗೌಡ, ರಾಮದೇವ್, ಮೈಕಲ್ ಫರ್ನಾಂಡೀಸ್, ಗಂಗಾಧರನ್, ಆಮ್ಮುಗಂ ಆದರೆ ಶ್ರೀಮಾನ್ ರಾಮೇಗೌಡರನ್ನು ಅಭಿನಂದಿಸುವುದಕ್ಕೆ ನಾನು ತಯಾರಾಗಿಲ್ಲ. Because You have not asked vote for Ramegowda, but you have asked for Mrs. Gandhi and Congress (I) Party. You have no moral right to be the representative of Doddaballapur.

ಶ್ರೀ ಪಿ. ರಾಮದೇವ್.—ರಾಮೇಗೌಡರನ್ನು ಆ ಕಡೆಗೆ ಕಳಿಸುತ್ತೇವೆ. ನಮ್ಮವರನ್ನು ಈ ಕಡೆಗೆ ಕಳಿಸುತ್ತೀರಾ ಸ್ವಾಮಿ ?

(ನಗು)

ಶ್ರೀ ಸಿ. ಎಂ. ಇಬ್ರಾಹಿಂ.—೧೩ ಜನ ನೀವು ಇದ್ದೀರಿ. ಎಲ್ಲರನ್ನೂ ನಮ್ಮ ಕಡೆ ಕಳಿಸಿಬಿಡಿ, ನಮ್ಮ ಕಡೆಯಿಂದ ಯಾರಾದರೂ ಬಂದರೆ ಕಳಿಸಿ ಕೊಡುತ್ತೇವೆ. ಯಾರು ಇರುತ್ತಾರೆ. ನೋಡೋಣ.

ಶ್ರೀ ಆರ್. ಗುಂಡೂರಾವ್.—ನೀವು ಮೊದಲು ಎಷ್ಟು ಜನ ಇದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—೫೯ ಜನ.

ಶ್ರೀ ಆರ್. ಗುಂಡೂರಾವ್.—ಎಷ್ಟು ಜನ ನಮ್ಮ ಕಡೆಗೆ ಬಂದಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—೧೩ ಜನರನ್ನು ಬಿಟ್ಟು. ಉಳಿದ ೪೬ ಜನ ನಿಮ್ಮ ಕಡೆಗೆ ಬಂದಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಆ ರೀತಿ ಅವರು ಬರುವುದಕ್ಕೆ ಒಂದು ಕಾರಣವಾಯಿತು ?......

ಶ್ರೀ ಎ. ಲಕ್ಷ್ಮೀಸಾಗರ್.—ಇದರಿಂದ ಈಗೇನೂ ಆಗುವುದಿಲ್ಲ. ಈಗ ನೋಡಿ ಸ್ವಾಮಿ, ಈಗ ಆಗಿರುವುದನ್ನು ವ್ಯಾಖ್ಯಾನ ಮಾಡುವುದರಿಂದ ಯಾವ ಒಂದು ಪರಿಣಾಮ ಆಗುವಂತಹ ಪರಿಸ್ಥಿತಿ ನಮ್ಮಲ್ಲಿ ಉದ್ಭವ ಆಗುವುದಿಲ್ಲ. ನೀವು ಕಳಿಸುವುದಾದರೆ ಮೊದಲೇ ಕಳಿಸಬೇಕಾಗಿತ್ತು. ಈಗ ಏನೂ ಪ್ರಯೋಜನ ಇಲ್ಲ. ಕೇಂದ್ರದಲ್ಲಿ ಅಧಿಕಾರ ಇದೆ.

ನಿಮಗೆ ಅಧಿಕಾರವಿದೆ, ಕೇಂದ್ರದಲ್ಲಿ ನಿಮ್ಮ ಪಕ್ಷದವರೇ ಅಧಿಕಾರದಲ್ಲಿದ್ದಾರೆ. ಆದುದರಿಂದ ಎಲೆಕ್ಷನ್ ಕಮೀಷನರು ಸೂಚನೆ ಕೊಟ್ಟಿದ್ದಾರೆ. ಮುಂದಿನ ಚುನಾವಣೆ ನಂತರ ಈ ಪ್ರಶ್ನೆಯೇ ಬರುವುದಿಲ್ಲ. ಆದುದರಿಂದ ಇದರ ಮೇಲೆ ವಾದ ಬೇಡ, ಬೇಕಾದಷ್ಟು ವಾದ ನಡೆದಿದೆ. ಪ್ರಪ್ರಥಮವಾಗಿ ಇದರ ಬಗ್ಗೆ ದೊಡ್ಡ ವಿಶ್ಲೇಷಣೆ, ವ್ಯಾಖ್ಯಾನ ನಡೆಯುತ್ತಾ ಇದೆ ಎಂದು ನಾನು ಭಾವಿಸುವುದಿಲ್ಲ. ತಾವೂ ಭಾವಿಸುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಅಧಿಕಾರ ನಿಮ್ಮ ಕೈಯಲ್ಲಿದೆ, ಇಲ್ಲೂ ಇದೆ. ಅಲ್ಲೂ ಇದೆ. ಆದುದರಿಂದ ಇದರ ಬಗ್ಗೆ ಒಂದು ಸಣ್ಣ ಕಾನೂನನ್ನು ಜಾರಿಗೆ ತನ್ನಿ. ಆಗ ಇದರ ಬಗ್ಗೆ ವ್ಯಾಖ್ಯಾನವೇ ಇರುವುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ತಿಮ್ಮೇಗೌಡರು ಹೇಳಿದ್ದಕ್ಕೆ ನನ್ನ ಆಕ್ಷೇಪಣೆ ಇದೆ. ಮಾನ್ಯ ಸದಸ್ಯರು ಅಷ್ಟು ಮಾರಾಟಮಾಡತಕ್ಕ ವಸ್ತುವಲ್ಲ. ಇಷ್ಟಬಂದವರು ಸೇರಿಕೊಂಡರು, ಇಷ್ಟವಿಲ್ಲದೇ ಇದ್ದವರು ಆ ಕಡೆ ಸೇರಿಕೊಂಡರು. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರಾಗಲಿ, ಮತ್ತೊಬ್ಬರಾಗಲಿ ಆ ಕಡೆಯಿಂದ ಈ ಕಡೆಗೆ ಕಳಿಸಿದಾಕ್ಷಣ ಹೋಗುವವರೂ ಇಲ್ಲ, ಬರುವವರು ಯಾರೂ ಇಲ್ಲ. ಇಲ್ಲಿರತಕ್ಕ ಸದಸ್ಯರು ಅಂಥಾ ಮಾರಾಟದ ವಸ್ತುಗಳಲ್ಲ. ಯಾರಾದರೂ ಕೂಡ ಗೌರವಕ್ಕೆ ಹಾನಿ ಬರುವ ರೀತಿಯಲ್ಲಿ ಮಾತನಾಡಿದರೆ ಅದಕ್ಕೆ ನಮ್ಮ ವಿರೋಧವಿದೆ.

ಡಾಕ್ಟರ್ ಹೆಚ್. ಎಲ್. ತಿಮ್ಮೇಗೌಡ.—ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ,

ಶ್ರೀ ಎಂ. ಶ್ರೀನಿವಾಸ್.—ನಾನೂ ಸಹ ೧೯೭೮ನೇ ಇಸವಿಯಲ್ಲಿ ಜನತಾ ಪಕ್ಷದಿಂದ ಆಯ್ಕೆಯಾಗಿ ಈಗ ಆಡಳಿತಪಕ್ಷದಲ್ಲಿರತಕ್ಕವನು. ಅಂದು ನಾವು ನಮ್ಮ ಪೋಸ್ಟರುಗಳಲ್ಲಿ ಜಗಜೀವನರಾಂ, ವಾಜಪೇಯಿ, ಮೊರಾರ್ಜಿ ದೇಸಾಯಿ, ಬಹುಗುಣ - ಇವರೆಲ್ಲರ ಫೋಟೋಗಳನ್ನು ಹಾಕಿ ನಾವು ಆರಿಸಿಬಂದವರು. ಆದರೆ ಇವತ್ತು ಯಾರ ಹಿಂದೆ ಹೋಗಬೇಕೋ ನಮಗಂತೂ ಅರ್ಥವಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ಲೀಡರ್‌ಶಿಪ್‌ನಲ್ಲಿದ್ದಾರೆ. ಕಳೆದ ಸಾರಿ ಇದನ್ನೆಲ್ಲಾ ಹೇಳಿದಂತಹವರು ಇದ್ದರು. ಕಳೆದ ಸಾರಿ ಇಂದಿರಾ ಕಾಂಗ್ರೆಸ್‌ನಿಂದ ಆಯ್ಕೆಯಾದಂಥ ಸರೋಜಿನಿ ಮಹಿಷಿ, ಕೊಂಡಜ್ಜಿ ಬಸಪ್ಪ ಮುಂತಾದವರೆಲ್ಲರೂ ಜನತಾ ಪಕ್ಷದ ಪಾರ್ಲಿಮೆಂಟರಿ ಪಕ್ಷಕ್ಕೆ ಸೇರಿಕೊಂಡರು.

ಶ್ರೀ ಆರ್. ಗುಂಡೂರಾವ್.—ಆದುದರಿಂದ ಮಾನ್ಯ ರಾಮೇಗೌಡರೇ, ಈ ವಿಷಯ ಪ್ರಾಸಂಗಿಕವಾಗಿ ಬಂತು. ಅದು ತಪ್ಪು ಸರಿ ಎಂದು ನಾನು ವಿಶ್ಲೇಷಣೆ ಮಾಡುತ್ತಾ ಇಲ್ಲ. ಅದು ಪ್ರಾಸಂಗಿಕವಾಗಿ ಬಂದ ಮಾತು ಅಷ್ಟೆ.

ಶ್ರೀ ಜಿ. ರಾಮೇಗೌಡ.—ನೀವು ಹೇಳಿದ ಮಾತನ್ನು ಗಮನದಲ್ಲಿಟ್ಟುಕೊಂಡು ಹಸ್ತವನ್ನೇ ಯಾರು ಕೇಳಿದರೋ ಅವರನ್ನು ನಿಲ್ಲಿಸದೆ ಬೇರೆಯವರನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅದು ಮಾಡೋಣ. ಆ ಪ್ರಶ್ನೆ ಇರಲಿ. ಮಾನ್ಯ ರಾಮೇಗೌಡರೆ, ನಾನು ತಮಗೆ ಏನು ಹೇಳುತ್ತಿದ್ದೆ ಅಂದರೆ, ನಾನು ಮಾತನಾಡುವಾಗ ನೀವು ಮಧ್ಯದಲ್ಲಿ ಮಾತನಾಡಿ ಬಿಟ್ಟರೆ ವಿಷಯ ಹೊರಟು ಹೋಗುತ್ತದೆ. ಪುನಃ ಒಂದಕ್ಕೆ ಬರಬೇಕಾದರೆ ಕಾಲು ಗಂಟೆ ಅವಕ್ಕೆ ಉದಾಹರಣೆ ಕೊಡಬೇಕು. ಅದಕ್ಕೇ ನಾನು ಶ್ರೀಮಾನ್ ಬಂಗಾರಪ್ಪನವರಿಂದ ಎಕ್ಸ್‌ಪೆಕ್ಟ್ ಮಾಡಿದ್ದೆ. ಅದನ್ನು ಅವರ ತೀರ್ಮಾನಕ್ಕೆ ಬಿಡಿ. ಇಪತ್ತಿನದಿವಸ ಪುನಃ ಅಲ್ಲಿಗೆ ಬರಬೇಕಾಗುತ್ತದೆ. ಈ ರೀತಿ ಇಲ್ಲಿ ರಾಜಕೀಯ ಬೆಳೆಸುವುದರಿಂದ ಯಾವುದೇ ತರಹದ ಸಾಧನೆ ಬಾಧನೆಯಾಗಿವೆಯೋ, ಈ ರೀತಿ ಮಾಡುವುದರಿಂದ ಜನರಿಗೆ ಉಪಕಾರ ಮಾಡಿದಹಾಗೆ ಆಗಲಿಲ್ಲ. ವ್ಯಕ್ತಿ ಬದಲಾವಣೆಯಿಂದ ಸಮಾಜವಾದ ಆಗುವುದಿಲ್ಲ. ಧಾರವಾಡದ ಚುನಾವಣೆಯಲ್ಲಿ ನನ್ನ ಮೇಲೆ ಬೇಕಾದಷ್ಟು ಚಾರ್ಜ್‌ಶೀಟ್ಸ್‌ನ್ನು ಡೆಲ್ಲಿಗೆ ಕಳಿಸಿದರು. ಎಲ್ಲಾ ಪತ್ರಿಕೆಗಳಲ್ಲೂ ಪ್ರಚಾರವಾಯಿತು, ಪ್ರತಿಯೊಂದು ಕಡೆಯೂ ನಡೆಯಿತು. ಏನೆಂದರೆ, ಈ ದೇಶದಲ್ಲಿ ಗುಂಡೂರಾಯರು ಮುಖ್ಯಮಂತ್ರಿ ಆದಮೇಲೆ ಜನ ಬೇಸತ್ತು ಹೋಗಿದ್ದಾರೆ, ಈ ದೇಶದಲ್ಲಿ ಗುಂಡೂರಾಯರು ಮುಖ್ಯಮಂತ್ರಿ ಆದಮೇಲೆ ಜನ ಶ್ರೀಮತಿ ಇಂದಿರಾಗಾಂಧಿಯವರನ್ನು ಬಿಡುತ್ತಿದ್ದಾರೆ, ಈ ದೇಶದಲ್ಲಿ ಗುಂಡೂರಾಯರು ಮುಖ್ಯಮಂತ್ರಿಯಾದ ಮೇಲೆ ವೀಕರ್ ಸೆಕ್ಷನ್, ಬ್ಯಾಕ್‌ವರ್ಡ್ ಕ್ಲಾಸಸ್ ಅತೃಪ್ತರಾಗಿದ್ದಾರೆ ಎಂದು ಪ್ರಚಾರ ಮಾಡಿದರು. ಆದರೆ ನಡೆದಂಥ ಯಾವ ಚುನಾವಣೆಯಲ್ಲೂ ಸಹ ಜನ ಅತೃಪ್ತಿಯನ್ನು ತೋರಿಸಿಲ್ಲ. ಅತೃಪ್ತಿಯನ್ನು ಮತ್ತೊಬ್ಬರು ತೋರಿಸಿದ್ದಾರೆ. ಸೋಲು ಗೆಲುವು ಜನಗಳ ಅಭಿಪ್ರಾಯ ; ಅದರ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. I will charge that the second largest party in Karnataka i.e., Janatha Party has lost their deposit in the election held recently. That shows it is not Indira Government which is unpopular it is the Janatha Party which is unpopular. I can say this.

ಶ್ರೀ ಪಿ. ರಾಮದೇವ್.—ಇನ್ನೊಂದು ಕಡೆ ಬಹಳ ಅತ್ಯುತ್ತಮವಾದ ಪರ್‌ಫಾರ್ಮೆನ್ಸ್ ಕೊಟ್ಟಿದ್ದೇವಲ್ಲಾ, ಅದನ್ನು ಹೇಳಿ.

ಶ್ರೀ ಆರ್. ಗುಂಡೂರಾವ್.—ನಾನು ಮಾಡಿದ ಒಳ್ಳೆಯ ಕೆಲಸಗಳನ್ನೆಲ್ಲಾ ಬಿಟ್ಟು ಬಿಟ್ಟು ಎಲ್ಲೋ ಒಂದನ್ನು ಸೇರಿಸಿಕೊಂಡು ಯಾವುದು ತಮಗೆ ಅನುಕೂಲವಾಗುತ್ತದೆ ಅದನ್ನು ಇಲ್ಲಿ ಹೇಳುತ್ತಿದ್ದೀರಲ್ಲ, ಹಾಗೇ ನಾನೂ ಹೇಳುತ್ತೇನೆ ಸ್ವಾಮಿ ; ನನಗೂ ಹಾಗೇ ರೈಟ್ ಇದೆ. What is the yard-stick. Your corruption charges and other things are baseless: It is only a politically motivated charge. I can say many things for this. ಎಷ್ಟೋ ಸಾರಿ ಸಬ್-ಇನ್ಸ್‌ಪೆಕ್ಟರ್ಸ್ ಇಂಟರ್‌ವ್ಯೂ ನಡೆಯುತ್ತಾ ಇತ್ತು. ಈ ಅಸೆಂಬ್ಲಿಯೊಳಗಡೆ ಬೇಕಾದಷ್ಟು ಡಿಬೇಟ್ ಆಯಿತು. ಮಾನ್ಯ ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದರು. ಮೇಲ್ಮನೆಯಲ್ಲಿ ಶ್ರೀಮಾನ್ ಬೊಮ್ಮಾಯಿಯವರು ಇದ್ದರು, ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರೂ ಇದ್ದರು. ಶ್ರೀಮಾನ್ ದೇವರಾಜ ಅರಸ್ ಅವರ ಸರ್ಕಾರದ ಮೇಲೆ ಮಾಡಬಾರದ ಚಾರ್ಜಸ್ಸನ್ನು ಮಾಡಿದರು. Overnight, he had become honest man, forgetting all their charges on him. ಇಕ್ಬಾಲ್ ಹುಸೇನ್ ಕಮಿಷನ್ ರಿಜೆಕ್ಟ್ ಮಾಡಿದಾಗ, ಗ್ರೋವರ್ ಕಮಿಷನ್ ಮಾಡಿದಾಗ, What was happened when Mr. Devaraj Urs and myself were in the cabinet ? Mr. Bangarappa was also in the cabinet as PWD Minister.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಮುಖ್ಯಮಂತ್ರಿ ಆದಮೇಲೆ ಮೂರನೇ ಸಲ ಅದೇ ಮಾತನ್ನು ಕೇಳುತ್ತಾ ಇದ್ದೇವೆ.

ಶ್ರೀ ಆರ್. ಗುಂಡೂರಾವ್.—ನೀವೂ ಅದೇ ಹೇಳುತ್ತಾ ಇದ್ದೀರಿ, ನಾನೂ ಅದನ್ನೇ ಹೇಳುತ್ತಾ ಇದ್ದೇನೆ. ನೀವು ಹೊಸ ಬೆಳಕು ಚೆಲ್ಲಿದ್ದರೆ ನಾನು ಹೊಸ ವಿಚಾರ ಇಡುತ್ತಿದ್ದೆ. ನಿಮ್ಮದೂ ಅದೇ ಗ್ರಾಮಾಫೋನ್, ಈ ಕಡೆ ಹಾಕಿದಾಗ ನಿಮ್ಮ ಸಂಗೀತ, ಉಲ್ಟ ಹಾಕಿದಾಗ ನನ್ನ ಸಂಗೀತ, ನಾನೇನು ಮಾಡಲಿ. ನೀವು ಹೊಸ ಬೆಳಕನ್ನು ತೋರಿಸಿಕೊಟ್ಟರೆ ನಾನು ಹೊಸದನ್ನು ಹೇಳುತ್ತಿದ್ದೆ. ಪುನಃ ಅದೇ ಕರಪ್ಷನ್, ಅದೇ ಚಾರ್ಜ್ "Here is a concrete case". ಅದು ಏನಿಲ್ಲ. ಆ ಇಂಜನಿಯರ್ ತಿಂದ ಎಂದು ಹೇಳುವುದು. ರೈಡ್ ಮಾಡುವ ವಿಚಾರ. ೧೯೫೬ನೇ ಇಸವಿಯಿಂದ ೧೯೮೦ನೇ ಇಸವಿಯುವರೆಗೆ ಎಷ್ಟು ಆಫೀಸರ್ಸ್ ಮನೆಗಳನ್ನು ವಿಜಿಲೆನ್ಸ್ ಕಮಿಷನ್‌ನವರು ರೈಡ್ ಮಾಡಿದ್ದಾರು ? I am going to answer that. ೫ ಜನರು, ೧೦ ಜನರು, ೩ ಲಕ್ಷವೋ, ೫ ಲಕ್ಷವೋ ಏನೋ ಆ ಪ್ರಯತ್ನವನ್ನು ಯಾರು ಮಾಡಿದರು. I want to ask to-day....... ಅದರ ಫಲಿತಾಂಶ ಒಳ್ಳೆಯದು ಕೊಟ್ಟಿತ್ತೋ. ಅದರ ಬಗ್ಗೆ ಇವತ್ತಿನವರೆಗೆ ಪ್ರಯೋಗ ಮಾಡಿದವರು ಯಾರು. At least we have taken that venture. Is there any instance in the country that such senior officers were trapped and punished and kept under suspension ? Is it not an appreciable thing ? ಅದರಲ್ಲಿ ಪುನಃ ಅವರನ್ನು ಬಿಟ್ಟರು, ಅವರ ಜಾತಿಯುವರನ್ನು ಬಿಟ್ಟರು ಅಂದರೆ. If you go on giving for everything caste, regional or language colour, where will be the democracy under which we can argu healthily and under which we can deliver the goods...i.e. accept that there are loopholes. ನಿನ್ನೆ ಮಾನ್ಯ ಬೊಮ್ಮಾಯಿಯುವರು ಒಂದು ಪಟ್ಟಿಯನ್ನು ಓದಿದರು. ಬ್ರಾಹ್ಮಿನ್ಸ್ ಆಫೀಸರ್ಸ್ ಇಷ್ಟು ಜನ ಇದ್ದಾರೆ, ಲಿಂಗಾಯಿತರು ಇಷ್ಟು ಜನ ಇದ್ದಾರೆ. ಒಕ್ಕಲಿಗರು ಇಷ್ಟು ಜನ ಇದ್ದಾರೆ ಎಂದು. ಅದಕ್ಕೆ ನಾನೇನು ಮಾಡಲಿ. ನಮ್ಮ ಸಿಸ್ಟಂ ಹಾಗೆ ಇದೆ. ಐ ಎ.ಎಸ್ ; ಐ.ಪಿ ಎಸ್ ; ಐ.ಎಫ್.ಎಸ್. ಎಂದು ಹೇಳುವಂಥಾದ್ದು ಸೆಂಟ್ರಲ್ ಗವರ್ನಮೆಂಟ್‌ಗೆ ಸೇರಿರುವಂಥಾದ್ದು. ಶ್ರೀಮಾನ್ ನಿಜಲಿಂಗಪ್ಪನವರು ಚೀಫ್ ಮಿನಿಸ್ಟರ್ ಇದ್ದಾಗಲೂ ಸಹ ಶ್ರೀಮಾನ್ ಜತ್ತಿಯುವರು ಚೀಫ್ ಮಿನಿಸ್ಟರ್ ಇದ್ದಾಗಲೂ ಸಹ ಇದು ಇತ್ತು. ನೀವು ಕೇಳಿದ್ದಕ್ಕೆಲ್ಲಾ ನಾನು ಉತ್ತರ ಇಟ್ಟಿದ್ದೇನೆ. ಐ.ಎ.ಎಸ್ ; ಐ.ಪಿ.ಎಸ್ ; ಐ.ಎಫ್.ಎಸ್. ಎಂದು ಹೇಳುವಂಥಾದ್ದು ಕೇಂದ್ರದಿಂದ ಬರುವಂಥ, ಯು.ಪಿ.ಎಸ್.ಸಿ. ಯಿಂದ ಬರುವಂಥ ಜಾಬು, ದುರಾದೃಷ್ಟಕ್ಕೆ ಲಿಂಗಾಯಿತರು, ಒಕ್ಕಲಿಗರು ಇಂಡಿಯಾ ದೇಶದಲ್ಲಿ ಬೇರೆ ಎಲ್ಲೂ ಇಲ್ಲ, ನನಗೆ ಬಂದಿರುವ ಕಷ್ಟ ಅದು. ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಇಡೀ ಇಂಡಿಯಾ ದೇಶದಲ್ಲಿದ್ದಾರೆ, ಬ್ರಾಹ್ಮಣರು ಇಂಡಿಯಾ ದೇಶದಲ್ಲಿದ್ದಾರೆ, ಮುಸಲ್ಮಾನರು ಇಡೀ ಇಂಡಿಯಾ ದೇಶದಲ್ಲಿದ್ದಾರೆ, ಕುರುಬರು ಇಂಡಿಯಾ ದೇಶದಲ್ಲಿದ್ದಾರೆ, ಕ್ರಿಶ್ಚಿಯನ್ನರು ಇಂಡಿಯಾ ದೇಶದಲ್ಲಿದ್ದಾರೆ, ಲಿಂಗಾಯಿತ ಮತ್ತು ಒಕ್ಕಲಿಗರು ಇಲ್ಲೇ ಸೇರಿಕೊಂಡು ಬಿಟ್ಟಿದ್ದಾರೆ. ಈಗ ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ ನೋಡುತ್ತಾ ಇದ್ದಾರೆ, ಸಂತೋಷ, ಅದು ಒಂದು ಜಾಯಿಂಟ್ ಮೀಟಿಂಗ್ ಆಗಲಿ.

ಶ್ರೀ ಜೆ. ಹೆಚ್. ಪಟೇಲ್.—ದುರಾದೃಷ್ಟಕ್ಕೆ ಅಲ್ಲ ಅದೃಷ್ಟಕ್ಕೆ ಇಲ್ಲೇ ಇದ್ದಾರೆ. ದುರಾದೃಷ್ಟಕ್ಕೆ ಇಲ್ಲೂ ಅವರಿಗೆ ಸಿಕ್ಕುತ್ತಾ ಇಲ್ಲವಲ್ಲ.

ಶ್ರೀ ಆರ್. ಗುಂಡೂರಾವ್,—ಏನ್ರಿ ಬಂಗಾರಪ್ಪನವರೇ, ಸರಿ ತಾನೆ.

ಶ್ರೀ ಎಸ್. ಬಂಗಾರಪ್ಪ.—ಉದಾಹರಣೆಗೆ ಹೇಳುವುದಾದರೆ, ಹರಿಜನರು, ಷೆಡ್ಯೂಲ್ಡ್ ಕ್ಯಾಸ್ಟ್ ಜನರನ್ನು ಅಖಿಲ ಭಾರತ ಮಟ್ಟದಲ್ಲಿ ಲೆಕ್ಕ ಹಾಕಿದರೆ, ಅವರ ಪಾಪುಲೇಷನ್ ಪ್ರಕಾರ, ತಮ್ಮ ಅಂಕಿ ಅಂಶಗಳ ಪ್ರಕಾರ ಅಷ್ಟು ಜನ ಇದ್ದಾರೆಂದು ತಮಗೆ ಅನ್ನಿಸುತ್ತದೆಯೇ ?

ಶ್ರೀ ಆರ್. ಗುಂಡೂರಾವ್.—ಅದರ ಮೆರಿಟ್, ಡೀಮೆರಿಟ್ ಬಗ್ಗೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪಟೇಲರು ಹೇಳುವಂಥಾದ್ದು ಅದೇ.

ಶ್ರೀ ಆರ್. ಗುಂಡೂರಾವ್.—ನಾನು ನಿಮ್ಮನ್ನು I just asked you. ನೀವು ಒಪ್ಪುತ್ತೀರಾ ಅಂದೆ.

ನಮಗೆ ಸ್ವಾತಂತ್ರ್ಯ ಬಂದು ೩೫ ವರ್ಷಗಳಾಗಿರತಕ್ಕ ಕಾಲದಲ್ಲಿ ಕೇಂದ್ರ ಸರ್ಕಾರದಲ್ಲಿ ಏನಾಗಿದೆ, ಉತ್ತರ ಇಂಡಿಯಾದಲ್ಲಿ ಏನಾಗಿದೆ ಎಂಬುದಕ್ಕಿಂತ ನಮ್ಮ ರಾಜ್ಯದಲ್ಲಿ ಏನಾಗಿದೆ ಎಂಬುದನ್ನು

ನೋಡೋಣ. ನಮ್ಮ ರಾಜ್ಯದಲ್ಲಿ ೧೯೫೬ರವರೆಗೆ ಒಕ್ಕಲಿಗರು ಮುಖ್ಯಮಂತ್ರಿಗಳಾಗಿದ್ದರು (ಆದರೆ ಐ.ಎ.ಎಸ್. ಅಧಿಕಾರಿಗಳು ಯಾರು ಇರಲಿಲ್ಲ) ಎಲ್ಲೋ ೨-೩ ಮಂದಿ ಐ.ಎ.ಎಸ್. ಅಧಿಕಾರಿಗಳು ಇದ್ದರು. ಇದನ್ನು ನೋಡಿದ ಮೇಲೆ ಸುಮ್ಮನೆ ಎಲ್ಲದರಲ್ಲೂ ರಾಜಕೀಯ ಮಾಡುವುದಕ್ಕೆ ಹೋಗುವುದು ಸರಿಯಲ್ಲ. ನಾನು ಹೇಳಿದ ಹಾಗೆ, ಮುಖ್ಯ ಮಂತ್ರಿಗಿರಿ ಯಾರ ಸೊತ್ತೂ ಅಲ್ಲ, ಗುತ್ತಿಗೆಯೂ ಅಲ್ಲ. ಗುಂಡೂರಾಯರು – ಬ್ರಾಹ್ಮಣರು ಮುಖ್ಯಮಂತ್ರಿಗಳಾಗಿರುವುದರಿಂದ ಬ್ರಾಹ್ಮಣರನ್ನೇ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆಂದರೆ ತಮ್ಮ ಮಾತಿನ ವೈಖರಿ ನೋಡಿ ಜನರು ನಿಜವಿರಬಹುದೆಂದು ಲೆಕ್ಕ ಹಾಕುತ್ತಾರೆ. ಆದರೆ ಆ ತರಹ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪಟೇಲರು ಹೇಳಿದ ಹಾಗೆ, ಲಿಂಗಾಯಿತರು, ಒಕ್ಕಲಿಗರು ಕರ್ನಾಟಕ ರಾಜ್ಯವನ್ನು ಬಿಟ್ಟರೆ ಅಖಿಲ ಭಾರತ ಮಟ್ಟದಲ್ಲಿ ಹೆಚ್ಚಾಗಿ ಇಲ್ಲ ; ಅವರು ಇಲ್ಲಿ ಮಾತ್ರ ಸೀಮಿತಗೊಂಡಿದ್ದಾರೆ. ಐ.ಎ.ಎಸ್. ಪಾಸ್ ಆಗಿ ಬರತಕ್ಕವರು ಅಖಿಲ ಭಾರತ ಮಟ್ಟದಲ್ಲಿ ಜಾಸ್ತಿ. ತಮಗೆ ಗೊತ್ತಿರುವ ಹಾಗೆ. ನಾವು ಕೆಲವು ಅಧಿಕಾರಿಗಳಿಗೆ ಅಂದರೆ ರಾಜ್ಯ ಸರ್ಕಾರ ಕೂಡ ಕೆಲವು ಐ.ಎ.ಎಸ್. ಅಧಿಕಾರಿಗಳಿಗೆ ಅವಕಾಶ ಕೊಡಲು ಮಂತ್ರಿಮಂಡಲ ತೀರ್ಮಾನ ಮಾಡುವುದಕ್ಕೆ ಸಾಧ್ಯತೆ ಇದೆ. ಆ ದಿಸೆಯಲ್ಲಿ, ಯಾರು ಆ ದರ್ಜೆಯ ಅಧಿಕಾರಿಗಳಿದ್ದಾರೆ ಅವರಿಗೆ ಅವಕಾಶ ನೀಡತಕ್ಕ ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಬಹುದು. ಪಟೇಲರ ಮಾತನ್ನು ಒಪ್ಪುವುದಾದರೆ, ಆ ದಿಸೆಯಲ್ಲಿ ರಾಜ್ಯ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದ್ದೇ ಆದರೆ ಈ ರಾಜ್ಯದಲ್ಲಿ ಸೀಮಿತಗೊಂಡಿರತಕ್ಕ ಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯತೆ ಇತ್ತು.

ಶ್ರೀ ಆರ್ ಗುಂಡೂರಾವ್.—ಅದಕ್ಕೆ ನಾನು ಹೇಳುವುದೇನೆಂದರೆ ಐ.ಎ. ಎಸ್., ಐ.ಪಿ ಎಸ್. ಹುದ್ದೆಗಳಿಗೆ ನೇಮಕಾತಿ ಮಾಡತಕ್ಕದ್ದು ಕೇಂದ್ರ ಮಟ್ಟದಿಂದ ಆಗಬೇಕಾಗಿದೆ. ಮೊದಲು ಕೂಡ ಆ ದಿಕ್ಕಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚಿನ ಅನುಕೂಲತೆ ಇತ್ತು ; ಯಾರು ಹೆಚ್ಚಿಗೆ ಅನುಭವ ಪಡೆದಿದ್ದಾರೋ ಅಂಥವರು ಆ ಕೇಡರ್‌ನಲ್ಲಿ ಬಂದಿದ್ದಾರೆ. ಅರ್ಹತೆ, ಅನುಭವ ಇದ್ದವರು ಯಾರು ಬೇಕಾದರೂ ಬರಬಹುದು. ಈ ಬಗ್ಗೆ ಅಂಕಿ ಅಂಶಗಳನ್ನು ನೋಡುವುದಾದರೆ, ೧೯೭೬ರಲ್ಲಿ ಐ.ಎ.ಎಸ್. ಕೇಡರಿನ ಸೆಕ್ರೆಟರಿ ಮತ್ತು ಸ್ಪೆಷಲ್ ಸೆಕ್ರೆಟರಿಗಳು ೧೯ ಜನ ಬ್ರಾಹ್ಮಣರಿದ್ದರು ; ೩ ಜನ ಒಕ್ಕಲಿಗರು, ಒಬ್ಬರು ಲಿಂಗಾಯತರು, ಒಬ್ಬರು ಹರಿಜನರು, ಇತರೆ ಜಾತಿಯವರು ಇಬ್ಬರು ; ಹೀಗೆ ಒಟ್ಟು ೧೭ ಜನ ಇದ್ದರು. ೧೯೭೭ರಲ್ಲಿ ೧೧ ಜನ ಬ್ರಾಹ್ಮಣರು, ೩ ಜನ ಒಕ್ಕಲಿಗರು, ಒಬ್ಬರು ಲಿಂಗಾಯತರು, ಒಬ್ಬರು ಹರಿಜನರು ಇತರೆ ಜಾತಿಯವರು ; ಹೀಗೆ ಒಟ್ಟು ೧೮ ಜನರಿದ್ದರು. ೧೯೭೮ರಲ್ಲಿ ೧೧ ಜನ ಬ್ರಾಹ್ಮಣರು, ಇಬ್ಬರು ಒಕ್ಕಲಿಗರು, ಇಬ್ಬರು ಲಿಂಗಾಯತರು, ೪ ಜನ ಬೇರೆ ಜಾತಿಯವರು, ಹೀಗೆ ಒಟ್ಟು ೧೯ ಜನರಿದ್ದರು, ೧೯೭೯ರಲ್ಲಿ ೭ ಜನ ಬ್ರಾಹ್ಮಣರು ಇಬ್ಬರು ಒಕ್ಕಲಿಗರು ಇಬ್ಬರು ಲಿಂಗಾಯತರು, ಒಬ್ಬರು ಹರಿಜನರು, ೭ ಮಂದಿ ಬೇರೆ ಜಾತಿಯವರು ಇದ್ದರು. ೧೯೮೦ರಲ್ಲಿ ೮ ಜನ ಬ್ರಾಹ್ಮಣರು ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯತರು, ೧೦ ಮಂದಿ ಇತರೆಯವರಿದ್ದರು. ೧೯೮೧ರಲ್ಲಿ ೧೧ ಜನ ಬ್ರಾಹ್ಮಣರು, ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯತರು. ಒಬ್ಬರು ಹರಿಜನರು, ೧೦ ಜನ ಬೇರೆಯವರಿದ್ದರು. ೧೯೮೨ರಲ್ಲಿ ೧೨ ಜನ ಬ್ರಾಹ್ಮಣರು, ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯತರು, ೩ ಜನ ಹರಿಜನ-ಗಿರಿಜನರು, ೭ ಮಂದಿ ಬೇರೆ ಜಾತಿಯವರು ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೫೯ರಿಂದ ೧೯೭೯ರವರೆಗೆ ಎಷ್ಟೆಷ್ಟು ಮಂದಿ ಇದ್ದರು ಹೇಳಿ.

ಶ್ರೀ ಆರ್. ಗುಂಡೂರಾವ್.—೧೯೫೭ರಲ್ಲಿ ೨೮ ಜನ ಬ್ರಾಹ್ಮಣರು, ೯ ಜನ ಲಿಂಗಾಯತರು. ೫ ಜನ ಒಕ್ಕಲಿಗರು, ೪ ಜನ ಹರಿಜನ-ಗಿರಿಜನರು, ಬೇರೆಯವರು ೩೩ ಜನರಿದ್ದರು. ೧೯೮೨ರಲ್ಲಿ ಐ.ಎ.ಎಸ್. ಲಿಸ್ಟ್‌ನಲ್ಲಿ ಒಟ್ಟು......

ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಡುವುದಾದರೆ ಫುಲ್ ಪಿಕ್ಚರ್ ಕೊಡಿರಿ.

ಶ್ರೀ ಆರ್. ಗುಂಡೂರಾವ್.—೧೯೫೭ರಲ್ಲಿ ಎಷ್ಟು ಮಂದಿ ಇದ್ದರು ಎಂಬುದನ್ನು ಹೇಳಿದೆ. ೧೯೫೭ ರಿಂದ ೧೯೭೨ರವರೆಗೆ ಒಂದೇ ಜಾತಿಯ ಸರ್ಕಾರ ಇತ್ತು. ಆದರೂ ಸಹ ನೀವು ಭಾಷಣ ಮಾಡಿದ ಹಾಗೆ ಲಿಂಗಾಯತ ಐ.ಎ.ಎಸ್. ಅಥವಾ ಐ.ಪಿ.ಎಸ್. ಅಧಿಕಾರಿಗಳನ್ನು ಜಾಸ್ತಿ ಮಾಡುವುದಕ್ಕೆ ಆಗಿಲ್ಲ. ಯಾವ ಮುಖ್ಯಮಂತ್ರಿಗಳು ಬಂದರೂ ಸಾಧ್ಯವಾಗಿಲ್ಲ. ಇನ್ನು ೧೦ ವರ್ಷ ಕಾಲಕ್ಕೆ

ಬ್ರಾಹ್ಮಣರು ಲಿಂಗಾಯತರು, ಒಕ್ಕಲಿಗರು ಇಲ್ಲದೆ ಹೋಗಬಹುದು, ಇಲ್ಲಿ ಆ ಪ್ರಶ್ನೆ ಅಲ್ಲ. ಏತಕ್ಕೆ ಹೇಳುತ್ತಿದ್ದೆನೆಂದರೆ, ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್. ಅಧಿಕಾರಿಗಳಿರತಕ್ಕದು ಅಖಿಲ ಭಾರತ ಮಟ್ಟದಲ್ಲಿ. ಬೇರೆಯವರು ಏತಕ್ಕೆ ಜಾಸ್ತಿ ಬರುತ್ತಾರೆಂದು ಲಿಂಗಾಯತರಿಗೆ. ಒಕ್ಕಲಿಗರಿಗೆ ಅಸಮಾಧಾನ ಇರಬಹುದು. ಇಲ್ಲಿ ನಾವು ಜಾತಿ ಪದ್ಧತಿಗೆ ಉತ್ತೇಜನ ನೀಡುವುದಿಲ್ಲ. ಆದರೆ ಅದು ಒಂದು ರೀತಿಯ ರೂಢಿಯ ಮಾತಾಗಿದೆ. ಹಳ್ಳಿಗೆ ಹೋಗಲಿ, ಊರಿಗೆ ಹೋಗಲಿ, ಮದುವೆ ಮಾಡುವುದಾಗಲಿ (ಅಂತರ್ಜಾತಿಯ ವಿವಾಹ ಬಿಟ್ಟು) ನಿಮ್ಮ ಮನೆ ಮದುವೆ ಆದರೆ ಸುತ್ತೂರು ಮಠದ ಗುರುಗಳು, ನಮ್ಮ ಮನೆ ಮದುವೆಯಾದರೆ ಶೃಂಗೇರಿ ಮಠದ ಗುರುಗಳು, ದೇವೇಗೌಡರ ಮಗಳ ಮದುವೆಯಾದರೆ ಆದಿಚುಂಚನಗಿರಿ ಮಠದ ಗುರುಗಳು ಇರುತ್ತಾರೆ. ಲಕ್ಷ್ಮೀಸಾಗರ್ ಮತ್ತು ರಾಮದೇವ್‌ರವರಿಗೆ......ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಜಾತಿ ಗುರುಗಳು ಇಲ್ಲ, ವಿದ್ಯಾಗುರುಗಳಿದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವಾಗ ಒಂದೇ ಜಾತಿಯವರು ಇದ್ದರು ಎಂದು ಹೇಳಲಿಲ್ಲ. ಮುಖ್ಯ ಮಂತ್ರಿಗಳು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಸೆಲೆಕ್ಷನ್ ಸಿಸ್ಟಂ ಬದಲಾಗಬೇಕೆಂಬ ದೃಷ್ಟಿಯಿಂದ ಹೇಳಿದ್ದೇನೆಯೇ ಹೊರತು ಅದು ಇರಕೂಡದು ಎಂದು ಅಲ್ಲ, ಲಿಂಗಾಯತರೇ ಬಂದರೆ ಒಳ್ಳೆಯದಾಗುತ್ತದೆಂದು ಅಲ್ಲ. ಆ ಸಿಸ್ಟಂನಲ್ಲಿ ಎಲ್ಲರಿಗೂ ಅವಕಾಶ ಇರಬೇಕೆಂಬ ಬದಲಾವಣೆ ಆಗಬೇಕು. ನಿಮ್ಮ ಕಾಲದಲ್ಲಿ ಇದು ಆಗಬೇಕೆಂದು ನಿಮಗೆ ವೈಯಕ್ತಿಕವಾಗಿ ಹೇಳಿದ್ದೇನೆ. There are people who are available to become Deputy Commissioners. In all other communities there are people who are eligible for Secretaryship and Deputy Secretaryship. They are kept somewhere. ಅಂಥವರು ಕೋರ್ಟಿಗೆ ಹೋಗಬೇಕಾಗುತ್ತದೆ. ಕೆಲವೊಂದು ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ೩ ವರ್ಷವಾದರೂ ಪೋಸ್ಟಿಂಗ್ಸ್ ಕೊಟ್ಟಿರುವುದಿಲ್ಲ. I can give you number of instances. I do not want to go on that line.

SRI R. GUNDU RAO.—I will tell you. It is O.K. Let me tell General principle. ಆದುದರಿಂದ, ಇಲ್ಲಿ ಏನಾಗಿದೆ ಎಂದರೆ ಲಿಂಗಾಯತರು, ಒಕ್ಕಲಿಗರು ಜಾಸ್ತಿ ಸಂಖ್ಯೆಯಲ್ಲಿ ಬರುವುದಿಲ್ಲವೆಂದರೆ ಈ ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಕೋರ್ಸನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ ಡಾಕ್ಟರು, ಇಂಜಿನಿಯರ್ ಆಗಬೇಕೆಂದು ಹೋಗುವವರೇ ಜಾಸ್ತಿ. ಆದರೆ ಬೇರೆ ರಾಜ್ಯಗಳಲ್ಲಿ ಈ ರೀತಿ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಸೆಲೆಕ್ಷನ್ ಸಿಸ್ಟಂನಲ್ಲಿರುವ ದೋಷವನ್ನು ಹೇಳಿದೆ. ಇನ್ನು ಎರಡು ವರ್ಷವಾದರೆ ಬ್ರಾಹ್ಮಣರು ಮನೆಗೆ ಹೋಗುತ್ತಾರೆ ಐ ಪಿ.ಎಸ್. ಸೆಲೆಕ್ಷನ್‌ನಲ್ಲಿ ಕರ್ನಾಟಕ ರಾಜ್ಯದವರು ಎಷ್ಟು ಜನ ಆಯ್ಕೆಯಾಗಿದ್ದಾರೆಂಬುದನ್ನು ನೋಡಿದರೆ ಹರಿಜನರು ಕೂಡ ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿಲ್ಲ.

ಶ್ರೀ ಎಸ್. ಆರ್, ಬೊಮ್ಮಾಯಿ.—ಕರ್ನಾಟಕದಿಂದ ಬ್ರಾಹ್ಮಣರು ಆಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ,—ಲಿಖಿತ ಪರೀಕ್ಷೆಯಲ್ಲಿ ನೂರಕ್ಕೆ ೭೦–೮೦ ಅಂಕಗಳನ್ನು ತೆಗೆದುಕೊಂಡವರಿಗೆ (ಕರ್ನಾಟಕದವರಿಗೆ) ಮೌಖಿಕ ಪರೀಕ್ಷೆಯಲ್ಲಿ ೧೦-೧೫ ಅಂಕಗಳನ್ನು ಕೊಡುತ್ತಾರೆ. ಲಿಖಿತ ಪರೀಕ್ಷೆಯಲ್ಲಿ ೮೬೫ ಅಂಕಗಳನ್ನು ಪಡೆದಿರುವವರಿಗೆ ಮೌಖಿಕ ಪರೀಕ್ಷೆಯಲ್ಲಿ ೧೩ ಅಂಕಗಳನ್ನು ಕೊಟ್ಟಿರತಕ್ಕ ನಿದರ್ಶನಗಳು ಇವೆ.

This is the organised way of eliminating Karnataka people at all India level. Whether ultimate responsibility has to be fixed on the Government of India system itself. ಥಿಯರಿಯಲ್ಲಿ ೮೩೫ ಅಂಕಗಳು ಪಡೆದಂಥ ಹುಡುಗನಿಗೆ ಓರಲ್ ಎಗ್ಸಾಮಿನೇಷನ್‌ನಲ್ಲಿ ಕೇವಲ ೧೩ ಅಂಕಗಳನ್ನು ಕೊಡುತ್ತಾರೆಂದರೆ ಇದೆಂಥ ಅನ್ಯಾಯ? ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳಿದ್ದೇನೆ.

SRI R. GUNDU RAO.—I also appreciate your point my dear friend. You also said right from 1975 till to-day there is no representation from Karnataka in the U.P.S.C. That is a very healthy point made by the Hon. Member Sri Deve Gowda. ನಿನ್ನೆ ದಿವಸ ಅವರು ಲಿಸ್ಟ್ ಕೊಟ್ಟರಲ್ಲಾ ಆದ್ದರಿಂದ ನಾನು ಕೆಲವು ವಿವರಗಳನ್ನು ಇವತ್ತು ಕೊಡಬೇಕಾಗಿದೆ. ಗುಂಡೂರಾಯರು ಮುಖ್ಯ ಮಂತ್ರಿಯಾಗಿರುವುದರಿಂದ ಮುಖ್ಯ ಕಾರ್ಯದರ್ಶಿಯವರು ಬ್ರಾಹ್ಮಣರಾಗಿದ್ದಾರೆ. ಅಡಿಷನಲ್ ಮುಖ್ಯ ಕಾರ್ಯದರ್ಶಿಯವರು ಬ್ರಾಹ್ಮಣರಾಗಿದ್ದಾರೆ. ಪ್ಲಾನಿಂಗ್ ಸೆಕ್ರೆಟರಿಯವರು ಬ್ರಾಹ್ಮಣರಾಗಿದ್ದಾರೆ ಎಂದು ಕೆಲವರು ಭಾಷಣ ಮಾಡಿದ್ದಾರೆ. ನಾನೇ ಅಲ್ಲ, ಬೊಮ್ಮಾಯಿಯವರು ಮುಖ್ಯ ಮಂತ್ರಿಯಾಗಿರಲಿ, ದೇವೇಗೌಡರು, ಬಂಗಾರಪ್ಪ, ಆರ್ಮುಗಂ ಯಾರೇ ಆಗಿದ್ದರೂ you cannot make other than these two people as Chief Secretaries. We have no right. If you appoint anybody they will go to Court and they will continue as Chief Secretaries. ಐ. ಜಿ. ಪಿ. ಜಿ. ವಿ. ರಾವ್ ಇದ್ದಾರೆ. ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆದಮೇಲೆ ಅವರನ್ನು ನೋಡಿದ್ದು. ಅದಕ್ಕೆ ಮೊದಲು ಅವರು ನನಗೆ ಗೊತ್ತೇ ಇರಲಿಲ್ಲ. This wrong opinion should be taken out from the mind of everybody in the State, if at all anybody is having. ೧೯೪೯ ರಿಂದ ೧೯೫೬ರ ವರೆಗೆ ಹಳೇ ಮೈಸೂರಿದ್ದಾಗ ಆಗಲೂ ಸಹ ಎಷ್ಟು ಐ.ಎ.ಎಸ್. ಮತ್ತು ಐ.ಪಿ.ಎಸ್, ಅಧಿಕಾರಿಗಳಿದ್ದರೆಂದರೆ ೮ ಜನ ಇದ್ದರು, ಆಗ ಒಕ್ಕಲಿಗರು ಒಬ್ಬರೂ ಇರಲಿಲ್ಲ. ಶ್ರೀಮಾನ್ ಕೆ. ಸಿ. ರೆಡ್ಡಿಯವರು, ಕೆಂಗಲ್ ಹನುಮಂತಯ್ಯನವರು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ not even a Vokkaliga was an IPS Officer. not even a Lingayat was an IPS Officer, not even a SC/ST was an IPS Officer, except other communities, Chiristians or somebody totally there were only 8.

ಶ್ರೀ ಎಚ್. ಡಿ. ದೇವೇಗೌಡ.—ಐ.ಪಿ.ಎಸ್. ಕ್ರಿಯೇಟ್ ಆಗಿದ್ದು ೧೯೫೧ರಲ್ಲಿ. ಶ್ರೀ ಗೋವಿಂದ ವಲ್ಲಭಪಂತ್ ಅವರು ಅದನ್ನು ತಂದರು.

SRI R. GUNDU RAO.—It is no use unless you go to the root of the matter. There is no point in asking about the caste system. There is no point. It is not our principle, It is not our party principle that because of one particular caste Chief Minister is there, he will be there.

ಶ್ರೀ ಎಸ್. ಆರ್, ಬೊಮ್ಮಾಯಿ.—ತಮ್ಮನ್ನು ನಾನು ನೇರವಾಗಿ ಒಂದು ಪ್ರಶ್ನೆ ಕೇಳುತ್ತೇನೆ, ಡೆಪ್ಯುಟಿ ಕಮಿಷನರ್ ಆಗುವುದಕ್ಕೆ ಅರ್ಹರಾಗಿರುವವರೂ ಇನ್ನೂ ಏತಕ್ಕಾಗಿಲ್ಲ? ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಇದೆಲ್ಲಾ ನಡೆಯುತ್ತದೆ.

SRI R. GUNDU RAO.—That is why I am telling you a Deputy Commissioner may be fit as a Secretary than as a Deputy Commissioner. It must be judicious. In your point he is an unfit man. But, in my point he is a fit man. Nobody can question that choice. You can question me in selection, you can question me in promotion, and you can question me in recruitment. But, once he joined the Government service, it is my pleasure and my choice. ೧೯೭೨ನೇ ಇಸವಿಯಲ್ಲಿ ಒಟ್ಟು ಚೀಫ್ ಇಂಜಿನಿಯರ್‌ಗಳು ನಾಲ್ಕು ಜನರಿದ್ದರು. ಬ್ರಾಹ್ಮಣರು ಒಬ್ಬರಿದ್ದರು. ಲಿಂಗಾಯಿತರು, ಒಕ್ಕಲಿಗರು ಒಬ್ಬರೂ ಇಲ್ಲ, ಬೇರೆಯವರು ಮೂರು ಜನರಿದ್ದರು. I do not know whether it is a correct figure that I have taken. ನಾಲ್ಕು ಜನರಲ್ಲಿ

ಬ್ರಾಹ್ಮಣರು ಒಬ್ಬರೇ ಒಬ್ಬರು. ಆಗಲೂ ಕೂಡ ಲಿಂಗಾಯಿತರು, ಒಕ್ಕಲಿಗರು ಯಾರೂ ಚೀಫ್ ಇಂಜಿನಿಯರ್ ಆಗಿ ಇರಲಿಲ್ಲ. Just for information I am giving you.

In 1963 again one Brahmin, no lingayat, no vokkaligas, no SCs/STs and others three.

In 1964, 2 Brahmins, 3 Lingayaths. ೧೯೬೪ರಲ್ಲಿ ಲಿಂಗಾಯಿತರು ಬ್ರಾಹ್ಮಣರನ್ನು ಓವರ್‌ಟೇಕ್ ಮಾಡಿದರು. ಹಿಂದೆ Brahmins were one step forward and Lingayaths have taken one step forward in 1964.

In 1965 one Brahmin, 3 lingayaths, no vokkaligas, no SCs/STs and others 2.

In 1967, one Brahmin, 3 lingayaths, no SCs, others—no.

In 1969 again 6 Chief Engineers were there. Out of them no Brahmin was there. Not even one of them was a Brahmin. 4 Lingayaths, no vokkaligas, no SCs/STs and others two were there.

In 1970 out of 6 Chief Engineers no Brahmin, 4 Lingayaths, no vokkaligas, no SCs/STs and others two were there.

In 1971 out of 6 Chief Engineers, no Brahmin, 4 lingayaths and others two were there. ೧೯೭೨ರಲ್ಲಿ ೧೨ ಜನ ಚೀಫ್ ಇಂಜಿನಿಯರ್‌ಗಳಿದ್ದರು. ನಾವು ನೀವು ಎಲ್ಲಾ ಬಂದೆವಲ್ಲಾ ರಾಮೇಗೌಡರೇ, ಆಗ. ೧೨ ಜನರಲ್ಲಿ ೩ ಜನ ಬ್ರಾಹ್ಮಣರು, ೬ ಜನ ಲಿಂಗಾಯಿತರು, ಒಕ್ಕಲಿಗರು ಮತ್ತು ಹರಿಜನರು ಒಬ್ಬರೂ ಇಲ್ಲ. ಮೂರು ಜನ ಬೇರೆಯುವರಿದ್ದರು. ೧೯೭೩ರಲ್ಲಿ ೧೨ ಜನ ಚೀಫ್ ಇಂಜಿನಿಯರುಗಳ ಪೈಕಿ ಮೂರು ಜನ ಬ್ರಾಹ್ಮಣರು, ೬ ಜನ ಲಿಂಗಾಯಿತರು, ಬೇರೆಯುವರು ಮೂರು ಜನ, ೧೯೭೪ರಲ್ಲಿ ೧೦ ಜನ ಚೀಫ್ ಇಂಜಿನಿಯರುಗಳ ಪೈಕಿ ಮೂರು ಜನ ಬ್ರಾಹ್ಮಣರು. ೬ ಜನ ಲಿಂಗಾಯಿತರು, ಬೇರೆಯುವರೊಬ್ಬರು ಇದ್ದರು. ೧೯೭೫ರಲ್ಲಿ ೧೩ ಜನರ ಪೈಕಿ ಬ್ರಾಹ್ಮಣರು ೪ ಜನ, ಲಿಂಗಾಯಿತರು ೬ ಜನ, ಒಕ್ಕಲಿಗರು ಇಬ್ಬರು. ಒಕ್ಕಲಿಗರು ಮೊದಲನೇ ಸಾರಿ ಇಲ್ಲಿ ಪ್ರದೇಶ ಮಾಡಿದ್ದಾರೆ ಶ್ರೀಕಂಠಯ್ಯನವರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೬೧-೬೨ರಲ್ಲಿ ಒಕ್ಕಲಿಗರು......

ಶ್ರೀ ಆರ್. ಗುಂಡೂರಾವ್.—ನಾನು ಉದಾಹರಣೆ ಕೊಡುತ್ತಿದ್ದೇನೆ ಅಷ್ಟೆ. ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಕಂದಾಯ ಇಲಾಖೆ ಕಾರ್ಯದರ್ಶಿಯಾಗಿ ಆನಂದಕೃಷ್ಣ ಅವರಿದ್ದರು. Can I say I am a Brahmin Minister, I must have a Brahmin Secretary or can I say I am a Brahmin I do not want a Vokkaliga Secretsry? I have no right ೧೯೭೭ರಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಚೀಫ್ ಇಂಜಿನಿಯರುಗಳು ಬಂದರು. ಆಗ ೨೪ ಚೀಫ್ ಇಂಜಿನಿಯರುಗಳು ಬಂದರು. ಅದರಲ್ಲಿ ೧೨ ಜನ ಬ್ರಾಹ್ಮಣರು, ೬ ಜನ ಲಿಂಗಾಯಿತರು. ಇಬ್ಬರು ಒಕ್ಕಲಿಗರು, ಹರಿಜನ ಗಿರಿಜನರು ಇಬ್ಬರು, ಇತರರು ಇಬ್ಬರು. ೧೯೭೮ರಲ್ಲಿ ೨೮ ಜನ ಚೀಫ್ ಇಂಜಿನಿಯರುಗಳಿದ್ದು ಅವರ ಪೈಕಿ ೧೩ ಜನ ಬ್ರಾಹ್ಮಣರು, ಮಾನ್ಯ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ. ಅವರೇನೂ ಬ್ರಾಹ್ಮಣರಲ್ಲವಲ್ಲ? ೧೯೮೦ರಲ್ಲಿ ೨೯ ಜನರ ಪೈಕಿ ೧೫ ಜನ ಬ್ರಾಹ್ಮಣರು, ೪ ಜನ ಲಿಂಗಾಯಿತರು, ೫ ಜನ ಒಕ್ಕಲಿಗರು, ಹರಿಜನ ಗಿರಿಜನರು ಒಬ್ಬರು ಇದ್ದರು. ೧೯೮೧ರಲ್ಲಿ ೩೨ ಜನ ಚೀಫ್ ಇಂಜಿನಿಯರುಗಳ ಪೈಕಿ ೧೧ ಜನ ಬ್ರಾಹ್ಮಣರು, ೭ ಜನ ಲಿಂಗಾಯಿತರು, ೪ ಜನ ಒಕ್ಕಲಿಗರು, ಹರಿಜನ ಗಿರಿಜನರು ಮೂವರು, ಬೇರೆಯುವರು ೭ ಜನರಿದ್ದರು, ೧೯೮೨ರಲ್ಲಿ ೩೧ ಜನ ಚೀಫ್ ಇಂಜಿನಿಯರುಗಳಲ್ಲಿ ೭ ಜನ ಬ್ರಾಹ್ಮಣರು. ೧೯೮೦-೮೧ರಲ್ಲಿ ಜಾಸ್ತಿ ಇತ್ತು. ಈಗ ಈ ಸಂಖ್ಯೆ ಕಡಿಮೆಯಾಗಿದೆ. ಲಿಂಗಾಯಿತರು ೮ ಜನರು, ಒಕ್ಕಲಿಗರು ೪ ಜನರು (ಅದರಲ್ಲಿ ಒಬ್ಬರು ನಿವೃತ್ತರಾಗಿದ್ದು ಈಗ ಮೂರು

ಜನರಿದ್ದಾರೆ), ಹರಿಜನ ಗಿರಿಜನರು ೫, ಇತರರು ೭ ಇದ್ದಾರೆ. ಇದನ್ನೆಲ್ಲಾ ಏತಕ್ಕೆ ಹೇಳಬೇಕಾಯಿತೆಂದರೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಸಿಸ್ಟಂ ಬದಲಾವಣೆಯಾಗಬೇಕೆಂದು ಹೇಳುತ್ತಿದ್ದೇನೆ. ೧೯೬೭ರಲ್ಲಿ ವಿಧಾನಸೌಧದಲ್ಲಿ ಎಲ್ಲಾ ಜಾತಿಯವರೂ ಇದ್ದರು. ಡಿವಿಷನಲ್ ಕಮಿಷನರ್ ಮುಸಲ್ಮಾನರು, ಲಿಂಗಾಯಿತರು ಎಲ್ಲಾರೂ ಇದ್ದರು. ನಾನು ಹೇಳುವುದೇನೆಂದರೆ ಈ ಪದ್ಧತಿ ಬದಲಾಗಬೇಕು.

SRI R. GUNDU RAO.—I agree. Thare is not even a single Secretary belonging to Muslim cemmunity in the Secretariat. I am telling you this because only one Secretary Sri Jaffer Saifulla was there. He has been taken by the Central Government to the Trade Fair Authority. When he was wanted by the Central Government I refused to send him. But, there was preessure and the Government of India said that he was a very competent man and they have no choice. So, we have given him. Now, not a single Muslim Secretary is there. ಹಿಂದೆ ಇಬ್ಬರು ಚೀಫ್ ಇಂಜಿನಿಯರುಗಳಿದ್ದರು. ಈಗ ಅವರಿಲ್ಲ. ಮಾನ್ಯ ದೇವೇಗೌಡರು ಮಾತನಾಡುತ್ತಾ ಒಕ್ಕಲಿಗರಾದ ಚೀಫ್ ಇಂಜಿನಿಯರುಗಳ ಬಗ್ಗೆ ಹೇಳಿದ್ದಾರೆ. ಹನುಮಂತಯ್ಯನವರ ಕಾಲದಲ್ಲೂ ಒಬ್ಬರೂ ಇರಲಿಲ್ಲ. ಕೆ. ಸಿ. ರೆಡ್ಡಿಯವರ ಕಾಲದಲ್ಲೂ ಒಬ್ಬರೂ ಒಕ್ಕಲಿಗರು ಇರಲಿಲ್ಲ ಎಂದು ಹೇಳಿದಾರೆ. ಆದರೆ ಕಳೆದ ಎರಡು ಮೂರು ವರ್ಷಗಳಿಂದ ನಾಲ್ಕು ಜನ ಚೀಫ್ ಇಂಜಿನಿಯರುಗಳು ಇದ್ದಾರೆ. ಅದು ನನ್ನ ಕಾಲದಲ್ಲಿ.

Now I come to police department. There are 411 posts of Police Inspectors, out of them 174 are in Executive side and 237 are non-executives. In all there are 31 police inspectors belonging to Scheduled Caste. Then there are about 874 posts of Police sub-Inspectors. I am giving you the total figures we have to-day. SC-85, ST-6, Muslim-71, Christians-19, Vokkaligas-81, Lingayats-156, Kodavas-39, Brahamins-77. Kurbas-34, Ediga-6, other communities- 268, There are 153 By. SPs, out of this 72 are in executive side and 81 are in non-executive. I will give you the caste-wise break-up Lingayaths-16, Brahamins-9, Vokkaliga-10, SC-8, ST-1, Muslim-11, Kodavas-3, Marathas-4, Kurbas-4. other communities-7.

ಶ್ರೀ ಎಸ್.ಆರ್. ಬೊಮ್ಮಾಯಿ.—ಪಿಕ್ಚರ್ ಕೊಡುವುದಾದರೆ, ಫುಲ್ ಪಿಕ್ಚರ್ ಕೊಡಿ ಐ.ಜಿ.ಪಿ. ಯವರದ್ದು ಹೇಳಿ.

ಶ್ರೀ ಆರ್. ಗುಂಡೂರಾವ್.—ಡಿ.ಐ.ಜಿ. ಒಬ್ಬರು ಬ್ರಾಹ್ಮಣರು ಇದ್ದಾರೆ. ಹಿಂದೆ ಡಿ.ಐ.ಜಿ. ಲಿಂಗಾಯಿತರು ಇದ್ದರು. ಅಡಿಷನಲ್ ಐ.ಜಿ. ಬ್ರಾಹ್ಮಣರು ಮತ್ತು ಮುಸ್ಲೀಮರು ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು, ನಮ್ಮ ಸ್ಪಿರಿಟ್ ಅರ್ಥ ಮಾಡಿಕೊಳ್ಳಲಿಲ್ಲ. ತಾವು ಬರೀ ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ಹೇಳುತ್ತಿದ್ದೀರಿ.

SRI R. GUNDU RAO.—I don't like this sort of narrow outlook. Have I said that I am not going to give you the details ?

SRI S. R. BOMMAI,—I never said that you have refused to divulge the details.

SRI R. GUNDU RAO.—I am not all intersted in giving preference to communuties. Whtever may be the a contest my point is

there is no need for propaganda. I don't care for communities. ಗುಂಡೂರಾಯರು ಬಂದ ಮೇಲೆ ಮಾಡಿದ್ದಾರೆಂದು ಹೇಳಿಕೊಳ್ಳಲಿ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಇಲ್ಲಿ ಜಾತಿಗಳ ಬಗ್ಗೆ ಪ್ರಸ್ತಾಪ ನಡೆಯುತ್ತದೆ ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ದೇಶದಲ್ಲಿರತಕ್ಕ ಕೆಲವು ವ್ಯವಸ್ಥೆ ಮತ್ತು ಲಕ್ಷಣಗಳ ಬಗ್ಗೆ ಡಾ. ಲೋಹಿಯಾರವರು ಒಂದು ಸಾರಿ ಹೇಳಿದ್ದಾರೆ. ಪಂಡಿತ್ ಜವಾಹರಲಾಲ ರವರು ಪ್ರಧಾನ ಮಂತ್ರಿಗಳಾಗಿದ್ದಾಗ, ಮಾನ್ಯ ಶ್ರೀ ಸಿ. ರಾಜಗೋಪಾಲ ಚಾರಿ ಕಮ್ಯೂನಿಸ್ಟ್ ಸಿದ್ಧಾಂತದ ಡಾಂಗೆ, ಸೋಷಿಲಿಸ್ಟ್ ಪಕ್ಷದ ಎನ್. ಎಂ. ಜೋಷಿ, ಪಿ.ಎಸ್.ಪಿ. ಪಕ್ಷದ ಗೋರೆಯವರು ಪ್ರಯತ್ನ ಪಟ್ಟರೂ ಇದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಮೂಲ ಭೂತ ವ್ಯವಸ್ಥೆಯಲ್ಲಿ ಇದು ಬದಲಾವಣೆಯಾಗಬೇಕು. ಅಧಿಕಾರಿಗಳ ಮತ್ತು ಪೋಲೀಸ್ ಅಧಿಕಾರಿಗಳ ನೇಮಕ ಮಾಡುವುದರ ಬಗ್ಗೆ, ತಮಿಳುನಾಡಿನಲ್ಲಿರತಕ್ಕ ಒಂದು ವ್ಯವಸ್ಥೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಗಂಗಾಧರನ್.—೧೯೫೬ರಲ್ಲಿ ನಮ್ಮ ರಾಜ್ಯ ಪುನರ್ವಿಂಗಡನೆಯಾದಾಗ ಮುಂಬಯಿ ಸರ್ಕಾರದಿಂದ ಮತ್ತು ಹೈದರಾಬಾದ್ ಸರ್ಕಾರದಿಂದ ಬಂದಂಥ ಅಧಿಕಾರಿಗಳು ಸೀನಿಯಾರಿಟಿಯಲ್ಲಿ ಮುಂದೆ ಬಂದಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಿನ್ನೆ ಮಾನ್ಯ ಸದಸ್ಯರಾದ ಬೊಮ್ಮಾಯಿ ಯವರು ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದರು, ಅವುಗಳ ಬಗ್ಗೆ ವಿವರವಾಗಿ ಹೇಳಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಸ್ಲೀಂ ಮತ್ತು ಹರಿಜನರ ಬಗ್ಗೆ ಹೇಳಿದ್ದೀರಿ.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಜಾತಿ ಬಿಟ್ಟು ಏನು ಮಾಡುವುದಕ್ಕಾಗುವುದಿಲ್ಲ. ಬಾಯಲ್ಲಿ ಬಿಟ್ಟುಬಿಡಿ ಅಂದರೆ ಪ್ರಯೋಜನ ಇಲ್ಲ. ಪ್ರತಿಯೊಂದು ವಿಚಾರದಲ್ಲಿಯೂ ಜಾತಿಯನ್ನು ಬಿಟ್ಟು ನಿಲ್ಲಬೇಕಾದರೆ ಬಹಳ ಕಷ್ಟ ಇದೆ. ಇವತ್ತು ನಮ್ಮ ರಾಜಕೀಯ ಪದ್ಧತಿ ಆ ರೀತಿ ಇಲ್ಲ. ಚುನಾವಣೆಗೆ ಟಿಕೆಟ್ ಕೊಡಬೇಕಾದರೆ ಜಾತಿ ನೋಡಿ ಕೊಡಬೇಕಾಗುತ್ತದೆ. ಮಂಡ್ಯದಲ್ಲಿ ಚೌಡಯ್ಯ ಮತ್ತು ಆತ್ಮಾನಂದರಿಗೆ ಟಿಕೆಟ್ ಕೊಟ್ಟರೆ ಗೆಲ್ಲುತ್ತಾರೆ, ಅಲ್ಲಿ ಬೊಮ್ಮಾಯಿಯವರು ಗೆಲ್ಲುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ದೊಡ್ಡ ಬಳ್ಳಾಪುರದಲ್ಲಿ ಎಂ. ವಿ. ಕೃಷ್ಣಪ್ಪನವರು ನಿಂತಿದ್ದರೂ, ಪ್ರಸನ್ ಕುಮಾರ್ ಆರಿಸಿ ಬಂದರು. ಟಿ.ಎ. ಪೈ ಅವರ ಡಿಪಾಸಿಟ್ ಹೋಯಿತು.

ಶ್ರೀ ಆರ್. ಗುಂಡೂರಾವ್.—ಒಂದು ಜಾತೀಯವರ ಮುಖ್ಯಮಂತ್ರಿಗಳಾದರೆ, ಆ ಜಾತಿಯವರ ಜನರಿಗೆ ಬೆಂಬಲ ಕೊಡುತ್ತಾರೆ ಎಂದು ಹೇಳುವುದು ಸರಿಯಲ್ಲ.

೬-೦೦ ಪಿ. ಎಂ.

ಶ್ರೀ ಕೆ. ಭಾಸ್ಕರನಾಯ್ಡು.—ನಾವೂ ಕೂಡ ಮಾತನಾಡುತ್ತಾ ಕೂತುಕೊಳ್ಳುತ್ತೇವೆ. ದೇವೇಗೌಡರು ಒಕ್ಕಲಿಗರು ಅಂತ ಹೇಳುವುದು, ಇನ್ನೊಬ್ಬರು ಲಿಂಗಾಯಿತರು ಅಂತ ಹೇಳುವುದು, ಈರೀತಿ ನಾವೂ ಶುರುಮಾಡುತ್ತೇವೆ.

ಶ್ರೀ ಆರ್. ಗುಂಡೂರಾವ್.—ಯಾವುದೇ ಜಾತಿಯವನು ಮುಖ್ಯಮಂತ್ರಿಯಾದ ಮಾತ್ರಕ್ಕೇ ಅವರ ಜಾತಿಯವರು ಬರುತ್ತಾರೆಂದು ಅಥವಾ ಆ ಜಾತಿಯವರಿಗೆ ಬೆಂಬಲ ಕೊಡುತ್ತಾರೆಂದು ಹೇಳುವುದು ಕೇವಲ ಪ್ರಚಾರವಾಗುತ್ತದೆಯೇ ಹೊರತು ತಾಂತ್ರಿಕ ವಿಚಾರವಾಗುವುದಿಲ್ಲ..

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭಾಸ್ಕರ ನಾಯ್ಡು ರವರು ಬಹಳ ಉದ್ರೇಕವಾಗಿ ಮಾತನಾಡಿದರು. ತಮ್ಮ ಜೊತೆಯಲ್ಲಿ ನಾನೂ ಕೂಡ ಸುಮಾರು ೨೦ ವರ್ಷಗಳಿಂದ ಕೆಲಸಮಾಡಿಕೊಂಡು ಬಂದಿದ್ದೇನೆ. ಈ ದೇಶದಲ್ಲಿ ಒಕ್ಕಲಿಗರು ಮುಖ್ಯ ಮಂತ್ರಿಗಳಾಗಿ, ಲಿಂಗಾಯ್ತರು ಮುಖ್ಯಮಂತ್ರಿಗಳಾಗಿ ಬಂದು ದೇಶದ ಎಲ್ಲ ಸೌಲತ್ತುಗಳನ್ನೂ ಕಬಳಿಸಿದರು ಎನ್ನುವ ವಾದವನ್ನು ಮಂಡನೆ ಮಾಡಿದರು. ಮಾನ್ಯ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಯಾರೋ ಒಬ್ಬ ಒಕ್ಕಲಿಗರವನು ಚೀಫ್ ಇಂಜಿನಿಯರ್ ಆಗಿದ್ದ ಎಂದು ವರದಿಯನ್ನು ಈ ಸಭೆಗೆ ಕೊಟ್ಟಿದ್ದಾರೆ, ಸ್ವಾಮಿ, ನಾನಾದರೂ ಕೇಳುತ್ತೇನೆ, ಪ್ರತಿಯೊಂದು ಹಂತದಲ್ಲೂ ಏನೇನು ಆಗಿದೆ

ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಬೇಕು. ಈ ರಾಜ್ಯದ ರಾಜ್ಯಭಾರವನ್ನು ಯಾರಾದರೂ ಮಾಡಿಕೊಳ್ಳಲಿ ಅದು ನನಗೆ ಬೇಕಾಗಿಲ್ಲ. ಆದರೆ ವಾಸ್ತವಾಂಶವನ್ನು ಮರೆಮಾಚಿ ಕೇವಲ ಈ ೨ ಕೋಮಿನವರೇ ಎಲ್ಲ ಸೌಲತ್ತುಗಳನ್ನೂ ತಿಂದುತೇಗಿದ್ದಾರೆ ಎಂಬ ಮಾತನ್ನು ನಾನು ಕೇಳಿ, ಕೇಳಿ ಸಾಕಾಗಿ ಇಲ್ಲಿ ಕೂತಿದ್ದೇನೆ, ಆದ್ದರಿಂದಲೇ ಇದರ ಬಗ್ಗೆ ನಾನು ಅಂಕಿಅಂಶಗಳನ್ನು ಸಭೆಯ ಮುಂದಿಡಬೇಕೆಂದು ಕೇಳಿದ್ದು. ಕೇವಲ ಒಂದು ಜಾತಿಯನ್ನು ರಕ್ಷಣೆ ಮಾಡುವುದಕ್ಕಾಗಿ ಅಲ್ಲ ಎಂಬುದನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.--ಈ ವಾದವನ್ನು ಮಂಡನೆ ಮಾಡಿದವರು ಯಾರು? It is unfortunate that today's discussion is going on on caste and creed basis.

SRI K. BASKAR NAIDU.—Yesterday, Sri Bangarappa spoke about the downtrodden because he has gone to that side.

SRI S. BANGARAPPA.--Sir,..

MR. SPEAKER.—Let us leave it at that. Please resume your seat.

SRI R. GUNDU RAO.—Sir, Now I will come to the demands of forest department which was very much debated inthis House. Today, Sri Nanaiah is unfortunately not here. Of course, I was also not present in this House on that day when Sri Nanaiah spoke on the Forest Departments. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನಾಣಯ್ಯನವರು ಯಾವ ಜಿಲ್ಲೆಯಿಂದ ಬಂದಿದ್ದಾರೋ, ಅದೇ ಜಿಲ್ಲೆಯಲ್ಲಿ ಹುಟ್ಟಿ ಬೆಳೆದು ಅದಕ್ಕಿಂತಲೂ ಹೆಚ್ಚಿನ ದಟ್ಟವಾದ ಅರಣ್ಯದ ಮಧ್ಯದಲ್ಲಿ ವಾಸಮಾಡಿ ಬಂದಿರುವವನು ನಾನು. ಕರ್ನಾಟಕದ ಅರಣ್ಯದಲ್ಲಿ ೩ ಸಾವಿರ ಎಕರೆಯನ್ನು ಕಾಂಗ್ರೆಸ್ (ಐ) ಕಾರ್ಯದರ್ಶಿಯೊಬ್ಬರಿಗೆ ಕೊಟ್ಟು ಈ ರಾಜ್ಯದಲ್ಲಿ ಅರಣ್ಯಗಳ ಲೂಟಿ ನಡೆಸಿದ್ದಾರೆ, ಅರಣ್ಯವನ್ನು ಕಾಪಾಡುವವರು ಇವತ್ತು ಯಾರೂ ಕೂಡ ಇಲ್ಲ ಎನ್ನುವ ವಾದವನ್ನು ತೆಗೆದುಕೊಂಡು ಕಾವೇರಿ ಜಲಾನಯನ, ಶರಾವತಿ ಜಲಾನಯನಗಳ ಮೇಲೆ ಮಾನ್ಯ ಸದಸ್ಯರುಗಳು ಏನೇನೋ ಮಾತನಾಡಿದರು. ಮಾನ್ಯ ಅಧ್ಯಕ್ಷರೆ, ನಾನಾದರೂ ಹೇಳುತ್ತೇನೆ, ಅರಣ್ಯಕ್ಕೆ ಏನಾದರೂ ರಕ್ಷಣೆ ದೊರಕಿದ್ದರೆ ಅದು ನಾನು ಮುಖ್ಯಮಂತ್ರಿಆಗಿ ಬಂದಮೇಲೆ. ಕೇವಲ ಥೀರಟಿಕಲ್ ಆಗಿ ನಾನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ದಾಖಲಾತಿಗಳ ಮೂಲಕ. ಈ ಅರಣ್ಯ ಸಂಪತ್ತು ಯಾವ ರೀತಿ ಲೂಟಿಯಾಗಿದೆ ಎನ್ನುವ ಬಗ್ಗೆ ನಾನು ಮುಖ್ಯಮಂತ್ರಿಯಾಗಿ ಬಂದಮೇಲೆ ಮಾತನಾಡುತ್ತಿಲ್ಲ. ೧೯೬೨ನೇ ಇಸವಿಯಲ್ಲಿ ನಾನು ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದಾಗಿನಿಂದಲೂ ಇದರ ಬಗ್ಗೆ ಮಾತನಾಡುತ್ತಿದ್ದೇನೆ. ಅರಣ್ಯಗಳ ಬಗ್ಗೆ ಮಾತನಾಡುವುದಕ್ಕೆ ನನಗೆ ಯಾವ ಪುಸ್ತಕಗಳೂ ಕೂಡ ಬೇಕಾಗಿಲ್ಲ. ಉದಾಹರಣೆಗೆ ಹೇಳುವುದಾದರೆ ೧೯೫೨ನೇ ಇಸವಿಯಲ್ಲಿ ಅಂದರೆ ಕೊಡಗು ಪ್ರತ್ಯೇಕವಾದಾಗ ಹುಣಸೂರಿನಲ್ಲಿ ಒಂದು ಪ್ಲೈವುಡ್ ಫ್ಯಾಕ್ಟರಿ ಪ್ರಾರಂಭವಾಯಿತು. ತಮಗೆ ಬೇಕಾದರೆ ರೇಟು, ತಾರೀಖು, ಮುಂತಾದ ಎಲ್ಲ ಅಂಕಿಅಂಶಗಳನ್ನೂ ಕೊಡುತ್ತೇನೆ. ಈ ಅರಣ್ಯದಲ್ಲಿ ಲೂಟಿ ಅವತ್ತು ಪ್ರಾರಂಭವಾಯಿತು. ಆದರೆ ಇದನ್ನು ಲೂಟಿ ಎಂದು ಕರೆಯುವುದಕ್ಕಾಗುವುದಿಲ್ಲ, ಏಕೆಂದರೆ ಸರ್ಕಾರದ ಅನುಮತಿ ಇತ್ತು. ಇವತ್ತುಬೇಕಾದರೂ ಈ ಸದನದ ಎಲ್ಲ ಮಾನ್ಯ ಸದಸ್ಯರನ್ನೂ ಕರೆದುಕೊಂಡು ಹೋಗಿ ಆ ಕಾಡು ಇದ್ದ ಜಾಗವನ್ನು ತೋರಿಸುತ್ತೇನೆ. ಆ ಕಾಡಿನ ಜಾಗವನ್ನು ಅವರಿಗೆ ಸುಮಾರು ಆ ೩ ಸಾವಿರ ಎಕರೆಯಷ್ಟು ಕೊಟ್ಟಿದ್ದಾರೆಂದು ಕೇಳಿದಕೂಡಲೇ ನಾನು ಉಪವಾಸ ಸತ್ಯಾಗ್ರಹವನ್ನು ಮಾಡಿದ್ದೇನೆ. ಅವತ್ತಿನ ದಿವಸ ಏನು ನಡೆಯಿತು ಎಂಬುದು ಇವತ್ತೂ ನನಗೆ ನೆನಪಿದೆ, ಇವರು ಎಷ್ಟು ಕಂಪೆನಿಗಳಿಗೆ ಕೊಟ್ಟಿದ್ದಾರೆಂಬುದನ್ನು ಹೇಳುತ್ತೇನೆ ೧೯೫೮-೬೦ ನೇ ಇಸವಿಯಲ್ಲಿ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಏನುಮಾಡಿದರು ಎಂಬುದನ್ನು ಹೇಳುತ್ತೇನೆ. ಕಾವೇರಿ ನದಿಯ ದಡದಲ್ಲಿ ನಮ್ಮ ಊರು ಇದೆ. ಆ ಕಡೆ ದಡದಲ್ಲಿ ಕಾಡು ಇದೆ. ಮಳೆಗಾಲದಲ್ಲಿ ನಾವು ಮನೆಯಲ್ಲಿ ಊಟ ಮಾಡಿದರೆ ನಾವು ಕೈತೊಳೆಯಲು ಕಾವೇರಿ ಹೊಳೆಗೆ ಹೊಗುತ್ತಿದ್ದೆವು ಅಂದರೆ.

ಅಷ್ಟು ಹತ್ತಿರದಲ್ಲಿ ಕಾವೇರಿ ನೀರು ಹರಿಯುತ್ತಿತ್ತು. ನಾವು ಬೇಟೆಯಾಡುವುದಕ್ಕೆ ಹೊಳೆಯನ್ನು ದಾಟಿ ಹೋದರೆ ಸಾವಿರಾರು ಸಾರಂಗಗಳು, ಸಾವಿರಾರು ಹಂದಿಗಳು, ಸಾವಿರಾರು ಮೊಲಗಳು ಸಿಕ್ಕುತ್ತಿದ್ದುವು ಆ ಕಾಡಿನಲ್ಲಿದ್ದ ಒಂದೊಂದು ಮರಗಳೂ ಸುಮಾರು ೧೦–೧೨ ಲಕ್ಷ ರೂ. ಬೆಲೆ ಬಾಳುತ್ತಿದ್ದುವು. ಇಟಲಿ ದೇಶದವರು ಜಪಾನ್‌ದೇಶದವರು ಬಂದು ನೋಡಿ ಇಂಥ ಮರಗಳು ಬೇರೆ ಎಲ್ಲಾ ಕೂಡ ಇಲ್ಲವೆಂದು ಹೇಳುತ್ತಿದ್ದರು. ೧೯೬೨ ನೇ ಇಸವಿಯಲ್ಲಿ ಕೇಶವಲಾಲ್ ಬೂದಾನಿ, ಓರಿಯಂಟಲ್ ಆ್ಯರೋಮ್ಯಾಟಿಕ್ಸ್ ಏಜೆನ್ಸಿಯವರು ಯಾರ ಮೂಲಕ ಸ್ನೇಹವನ್ನು ಬೆಳೆಸಿದರೊ, ಯಾರ ಮೂಲಕ ಬಂದರೋ ನನಗೆ ಗೊತ್ತಿಲ್ಲ. ಅವರು ಒಂದೇ ಒಂದುಸಾರಿ ಕುಶಾಲನಗರದ ಟಿ ಬಿ. ಗೆ ಬಂದರು. ಆಗ ನಾನು ಮುನಿಸಿಪಲ್ ಪ್ರಸಿಡೆಂಟ್ ಆಗಿದ್ದೆ. ಅವರು ಬಂದಾಗ ಇಡೀ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗವೇ ಅಲ್ಲಿಗೆ ಬಂತು, ಜಿಲ್ಲಾಧಿಕಾರಿಗಳೂ ಬಂದರು. ಅವರನ್ನೆಲ್ಲಾ ನೋಡಿ ನಮಗೆ ಬಹಳ ಆಶ್ಚರ್ಯ ವಾಯಿತು. ಕಾರಣ ನಮ್ಮದು ಸಣ್ಣ ಊರು. ಅಂಥ ಊರಿಗೆ ಇಷ್ಟೊಂದು ಜನರು ಏತಕ್ಕೆ ಬಂದರು ಎಂಬುದಾಗಿ ನಮಗೆ ಕುತೂಹಲ. ಕೇಶವಲಾಲ್ ಬೂದಾನಿಯವರಿಗೆ ೩ ಸಾವಿರ ಎಕರೆ ಜಾಗವನ್ನು ಕೊಡುವುದಕ್ಕಾಗಿ ಇವರೆಲ್ಲಾ ಬಂದಿದ್ದರು. ಆಗ ನಮಗೆ ಏನು ಅನಿಸಿತು ಎಂದರೆ, ೩ ಸಾವಿರ ಎಕರೆ ಜಾಗವನ್ನು ಒಬ್ಬ ವ್ಯಕ್ತಿಗೆ ಕೊಡುವುದೇ ? ಯಾವ ಷರತ್ತಿನಮೇಲೆ ಇಷ್ಟೊಂದು ದಟ್ಟವಾದ, ಇಷ್ಟೊಂದು ಹೆಸರುವಾಸಿಯಾದ ಅರಣ್ಯವನ್ನು ಕೊಡುತ್ತಿದ್ದಾರೆ ? ಎಂಬುದಾಗಿ. ಇದಕ್ಕೆ ಮೊದಲೇ ಆ ಅರಣ್ಯದ ಸ್ವಲ್ಪ ಭಾಗವನ್ನು ಬಿರ್ಲಾ ಕಂಪೆನಿಯವರಿಗೆ ಕೊಟ್ಟಿದ್ದಾರೆ, ಅಲ್ಲದೆ ಜೈ ಶ್ರೀ ಟೆಕ್ಸ್‌ಟೈಲ್ಸ್ ನವರಿಗೂ ಕೊಟ್ಟಿದ್ದಾರೆ. ಸ್ವಾಮಿ, ನಮ್ಮ ದನಗಳು ಹೋಗಿ ಮೇಯಬೇಕಾದರೆ ಅಲ್ಲಿಗೆ ಹೋಗ ಬೇಕು, ನಮಗೆ ಸೌದೆ ಬೇಕಾದರೆ ಅಲ್ಲಿಂದ ತರಬೇಕು. ಅಂಥ ರಮ್ಯವಾದ ಕಾಡನ್ನು ತೆಗೆದುಕೊಳ್ಳಲು ಅವನು ಬಂದಾಗ ನಾವು ಆಪೋಸ್ ಮಾಡಿದೆವು. ಆತನಿಗೆ ಆ ಜಾಗವನ್ನು ಕೊಡಕೂಡದೆಂದು ಪಾಂಪ್ಲೆಟ್ಸ್ ಅಂಟಿಸಿದೆವು. ಅಷ್ಟಾದರೂ ಕೇವಲ ಒಂದು ವಾರದಲ್ಲೇ ಆ ಕಾಡನ್ನು ಕಡಿಯುವುದಕ್ಕೆ ಪ್ರಾರಂಭ ಮಾಡಿದರು. ಅವನ್ನು ಕಡಿಯುವುದಕ್ಕೆ ಪರವಾನಗಿ ಇಲ್ಲ, ಆ ಜಾಗ ಅವರಿಗೆ ಮಂಜೂರಾಗಿಲ್ಲ, ಅವರ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ, ಆದರೂ ಆ ಕಾಡಿನಲ್ಲಿ ದೊಡ್ಡ ದೊಡ್ಡ ಬೀಟೆ ಮರಗಳು, ದೊಡ್ಡ ದೊಡ್ಡ ತೇಗದ ಮರಗಳನ್ನು ಕಡಿದ ಉರುಳಿಸುತ್ತಿದ್ದಾರೆ. I still remember that day. The Chief Conservator of Forests wanted to see and enter that area, but he has been stopped. Atleast, now there will be contracts and the logs will be auctioned, But, at that time, the forest was burnt. In other words, all logs were burnt because they wanted to grow some plants which are used to manfacture perfumes. They did all these things in collaboration with some french company.

Then, the Head of that French Company was to come and see the area. By that time, within a month, the entire forest was cleared I think, Sri Kaikini was the Chief Conservator of Forest. The then Deputy Commissioner or anybody else could stop from burning this forest. We all protested but in vain. Sri K. Prabhakar was the then Deputy Minister. Late Sri K. Mallappa was the Minister for Industries and the Chief Minister was Sri S. Nijalingappa. Sri K. Puttaswamy and lateSri D. Devraj Urs and all others came to a function of laying the foundation stone of that Oriental Aromatic Industry. Then, we said, we are going to stage a black-flag demonstration However, it did not materialised and the foundation stone was laid, unauthorisedly. To-day, the cost of that timber would run into several crores. Now, nobody can prove it because only a barren land is left there. Can anybody justify that in my period, we are losing the forest. Then, all the trees were burnt to build a

colony. The French man came and by sitting at Bombay drew the money. The litimation was started. Sir, two thousand nine hundred acres and thirty four gunthas of land from out of the above area in Doddarve forest was granted to Messrs. Ori ntal Aromatic Company. Now, let me quote the coditions of the lease agreement. The conditions were.—

1)	Lease period	...	36 years,
2)	Rent	...	Rs. 80 per acre per annum, &
3)	Area	...	2900.34 acres,

This happened in the year 1966. Now, let me go back to the year 1950 when I was a fourth form student. Sir, it is the year in which about 18,250 acres of reserved forest was released and granted to Messrs. Jayashri Textile Company. Do you mean to say that 18,250 acres of reserved forest is looted in my period ? The forest wealth was not looted, but it was burnt and eaten away in the earlier period. Unfortunately, the hon. Member Sri M. C. Nanaiah is not here today The mill which I quoted belongs to Sri Birla I will also mention as to how much land was given by Sri M.C. N naiah also. In the year 1972 I was first elected to the Legislative Assembly. SriHutchamasti Gowda was the Minister for Revenue andShriK.H. Patil was the Minister for Forest. A programme was arranged by Sri Keshavlal Buthani and luncheon party for about 2000 people was also arranged. The then Hon. Minister for Revenue was also to take lunch there. Since I belong to that area, Sri Hutchamasti Gowda asked me to accompany him. I told him that he should not take even a cup of water from that man. He (Sri Keshavlal Buthani) has finished Sri Nijalingappa. He has finished all Ministers and Foresters. Now because the new Government has come, he is trying to book you (Sri Hutchamasti Gowda). Then, I went alongwith Sri Hutchamasti Gowda. Sri Keshavalal Buthani showed us his luxurious way of life. He financed against me during the election. He knew that if I am elected, I will raise this issue in the house and there will be serious discussion over the matter in the Assembly. Then, he sawand inspected the land. It was partly a revenue land. Afterwards, we did not take lunch. I took Sri Hutchamasti Gowda to Kushalnagara Travellers Bungalow and got him food from a Hotel. Further, I prevailed upon the Government to assume back the land to Government. When I strongly pleaded in the matter, late Sri D. Devarj Urs succeded in getting back the land to the Government. But, by that time, nearly 350 to 400 acres of Forest was burnt Sri Keshavalal Buthani is a very wealth but arrogant man. He hails from Bombay

and Sindhi by caste. He was such a powerful person whom I opposed throughout. Sri Keshavalal Buthani is no more. His sons are there He had the audacity to say that he was not prepared to pay a lease rent of Rs. 80 per acre per annum. He asked the Government to reduce the lease rent, Sir, on 26-10-1967 the annual lease rent was revised at the Company's request to Rs. 5 per acre per annum.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—೨೮ ಸಾವಿರ ಎಕರೆ ಅರಣ್ಯ ಭೂಮಿಯನ್ನು ಪಡೆದುಕೊಂಡ ಬಿರ್ಲಾರವರೇ ಎಮರ್‌ಜೆನ್ಸಿಯಲ್ಲಿ ಹೂಮಾಲಿ ಹಾಕಿದ್ದು–Were there any political connections

SRI R. GUNDU RAO.—I do not know. Why should we talk about it now.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ದೆಹಲಿಯ ಒತ್ತಾಯ ಬಾರದೆ ಇದು ಆಗಿಲ್ಲ. ಇದಕ್ಕೆಲ್ಲಾ ಅವರೇ ಕಾರಣರು ಎಂದು ಕೇಳಿದ್ದೇನೆ.

MR. SPEAKER.—Hon. Member Fernades, what is this The hon. Chief Minister is informing the House of a contract that was entered into in the year 1967. There has been a lot of changes between then and now.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ತಮ್ಮ ಅವಧಿ ಬಿಟ್ಟು ಬೇರೆಯುವರ ಕಾಲದಲ್ಲಿ ಈ ಒಂದು ಕುಟುಂಬಕ್ಕೋಸ್ಕರ ಇಷ್ಟೊಂದು ಅನುಕೂಲಗಳು ಸಿಕ್ಕಿದೆ.

ಶ್ರೀ ಆರ್. ಗುಂಡೂರಾವ್.—ಇದು ನಿಮ್ಮ ಹಣೇಬರ, ನಾವೇನು ಮಾಡಬೇಕು.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಆ ಕುಟುಂಬದ ಜೊತೆಯಲ್ಲಿ ವೈವಾಹಿಕ ಸಂಬಂಧವನ್ನು ಏನು ನಾನು ಬೆಳೆಸಲಿಲ್ಲ. ಆ ರೀತಿ ಬೆಳೆಸುವ ಪ್ರಶ್ನೆಯೂ ಬರುವುದಿಲ್ಲ.

ಶ್ರೀ ಆರ್. ಗುಂಡೂರಾವ್,—ನಿಮಗೆ ಇನ್ನೂ ಮದುವೆಯಾಗಿಲ್ಲ. ನಿಮಗೆ ಹುಡುಗಿ ಬೇಕಾದರೆ ಕೊಡಗಿಗೆ ಹೋಗೋಣ ಬನ್ನಿ, ಕೊಡಿಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನಾಳೆಯೇ ಹೋಗೋಣ. ರಂಜಾನ್ ಹಬ್ಬದ ರಜಾ ಇದೆ.

ಶ್ರೀ ಸಿ.ಎಂ. ಇಬ್ರಾಹಿಂ.—ಮುದುಕರಿಗೆ ಯಾರು ಹೆಣ್ಣು ಕೊಡುತ್ತಾರೆ ಕೊಟ್ಟರೆ ಹಣ ಬಡಿದು ಕೊಳ್ಳಬೇಕಾಗುತ್ತದೆ.

SRI R. GUNDU RAO.—The annual lease rent was revised by the Government at the request of that Company to Rs 5 per acre for the first 10 years His argument was; 'I have to cut the trees, I have to burn them, I have to make the Plan and invest the amount. What is the investment you are making here I am making crores of rupees investment. So you cannot charge more. So you must give at the rate of Rs. 5 per acre.' And so the Government gave.

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾವ ಕಾರಣಕ್ಕಾಗಿ ಅವರಿಗೆ ಆ ಭೂಮಿಯನ್ನು ಕೊಟ್ಟಿದ್ದು

ಶ್ರೀ ಆರ್, ಗುಂಡೂರಾವ್.—ಸೆಂಟ್ ಗಿಡಗಳನ್ನು ಬೆಳೆಯುವುದಕ್ಕಾಗಿ;

ಶ್ರೀ ಎಸ್. ಬಂಗಾರಪ್ಪ.—ಆ ಜಾಗ ಮೈಸೂರು ಜಿಲ್ಲೆಗೆ ಸೇರಿದ್ದಲ್ಲವೇ?

ಶ್ರೀ ಸಿ.ಎಂ. ಇಬ್ರಾಹಿಂ.—ಅವರು ಅಲ್ಲಿಂದ ಹೋದ ಮೇಲೆ ಎಲ್ಲವನ್ನೂ ಮರೆತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಭೂಮಿ ಮೈಸೂರು ಜಿಲ್ಲೆಗೆ ಸೇರಿದಂತೆ ಬರುತ್ತದೆಂದು ಕಾಣುತ್ತದೆ. ಏತಕ್ಕೆಂದರೆ, ನಾನು ಒಂದು ಸಲ ಮೈಸೂರು ಡಿ.ಸಿ. ಅವರನ್ನು ಕರೆಸಿ ಈ ರೀತಿ ಸೆಂಟ್ ಗಿಡಗಳನ್ನು ಬೆಳೆಸಲು ಕೊಟ್ಟ ಭೂಮಿಯ ಬಗ್ಗೆ ಅವರು ನಿಯಮಗಳನ್ನು ಪಾಲಿಸದೆ ಅದನ್ನು ವಯಲೇಟ್ ಮಾಡಿರುವ ಕಾರಣದಿಂದ ಅವರಿಗೆ ಕೊಟ್ಟ ಪೂರ್ತಾ ಜಮೀನನ್ನು ಪುನಃ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಆರ್ಡರ್ ಮಾಡಿರುವುದು ಫೈಲ್‌ನಲ್ಲಿದೆ,

SRI R. GUNDU RAO.—And then at the rate of Rs. 50 per acre the lease was given for a second term for another ten years. ಮಾನ್ಯ ದೇವೇಗೌಡರು ಇಲ್ಲಿ ಹೇಮಾವತಿ ಮತ್ತು ಹಾರಂಗಿ ಬಗ್ಗೆ ಹೇಳುತ್ತಾರೆಯೋ ಹೊರತು ಇದನ್ನೆಲ್ಲಾ ಹೇಳುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ನಾನು ಪ್ರೊಸೀಡಿಂಗ್ಸ್ ಪುಸ್ತಕಗಳನ್ನು ತೆಗೆದು ಕೊಡುತ್ತೇನೆ. ತಾವು ನೋಡಬೇಕು. ಮಾನ್ಯ ನಿಜಲಿಂಗಪ್ಪನವರ ಮೇಲೆ ಶ್ರೀ ದೇವರಾಜ ಅರಸ್ ಅವರು ಇದೇ ರೀತಿ ಹೇಳಿದ್ದಾರೆ. ಅದನ್ನು ನಾವು ಕೇಳಿದ್ದೇವೆ. ಆದ್ದರಿಂದ ತಾವು ಇದನ್ನು ಹೊಸಬರಿಗೆ ಹೇಳಿ

ಶ್ರೀ ಎಸ್.ಆರ್. ಬೊಮ್ಮಾಯಿ.—ಇಂತಹ ಒಪ್ಪಂದಗಳು ಏನಾಗಿವೇ ಅವನ್ನೆಲ್ಲಾ ನಾವು ಅನೇಕ ಸಲ ಇಲ್ಲಿ ವಿರೋಧ ಮಾಡಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಆದರೆ ಇದೆಲ್ಲಾ ಪತ್ರಿಕೆಗಳಲ್ಲಿ ಸರಿಯಾಗಿ ವರದಿಯಾಗದ ಕಾರಣ ಜನರ ಗಮನಕ್ಕೆ ಇದೆಲ್ಲಾ ಬಂದಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ.—ಆಗಿನ ಮುಖ್ಯಮಂತ್ರಿಗಳಿಗೂ ಮತ್ತು ಇವರಿಗೂ ಒಂದು ರೀತಿಯ ಅಡ್ಜಸ್ಟ್‌ಮೆಂಟ್ ಆಗಿತ್ತು. ಅದಕ್ಕಾಗಿ ಇದೆಲ್ಲಾ ಹೆಚ್ಚು ಪ್ರಚಾರವಾಗಲಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಇಷ್ಟೆಲ್ಲಾ ನಡೆದಿದ್ದರೂ ಸಹ ಜನರು ನಿಮಗೇ ಓಟು ಕೊಟ್ಟಿದ್ದಾರೆ. ಇದು ನಮ್ಮ ದುರ್ದೈವ.

ಶ್ರೀ ಆರ್. ಗುಂಡೂರಾವ್.—ರಾಜಕೀಯ ಬೇಕಾದರೆ ಆಮೇಲೆ ಮಾಡೋಣ. ಈಗ ಈ ಅಂಕಿ ಅಂಶಗಳನ್ನು ತಾವೂ ಸಹ ತಿಳಿದುಕೊಳ್ಳಿ. So it was given at Rs. 50-for second ten years. And then again it was given at Rs. 40 for another ten years, That Company did not execute the Lease Bond even then, but went on submitting representation for modification of these conditions also. In 1979 a show-cause notice was issued to this Company asking them why they had not paid the money. By that time they had cut several crores of rupees worth trees and burnt them. Then in 1979 a notice was given to them asking them to pay the amount. ಆಮೇಲೆ ಯಾವಾಗ ತೆಗೆದುಕೊಂಡಿದ್ದು ನಾನು ೧೯೭೭ರಲ್ಲಿ ಶಾಸಕನಾಗಿ ಬಂದ ಮೇಲೆ ಇದನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ನಂತರ ನಾನು ಮಂತ್ರಿಯಾದ ಮೇಲೂ ಸಹ ಆಗಲಿಲ್ಲ. ಇದು ಪುನಃ ನಡೆಯುತ್ತಾ ಬಂತು, After we assumed charge in January 1980, the Government issued an order resuming the land to Government free from all encumbrances. ಆ ಕ್ರಮ ಈ ಕ್ರಮ ಎಲ್ಲ ಜರುಗಿಸಿ ನಾವು ವಾಪಸ್ ತೆಗೆದುಕೊಂಡಿದ್ದು ತಾ. ೩-೩-೧೯೮೧ರಲ್ಲಿ On 18-3-81 Stay order was issued by the Karnataka High Court and now it is pending in the High Court. But he is not doing anything now. The stay order was issued. ಆದರೆ ಇಲ್ಲಿಯವರೆಗಾಗಲೇ ಅವರು ೫೦೦-೬೦೦ ಎಕರೆವರೆಗೆ ಬೆಂಕಿ ಹಾಕಿ ಮುಗಿಸಿದ್ದರು. Why I am stating all this is because this is the continuous fight we made. It is not that forest land should not be given to anybody and nobody should cut timber. They should give forest

land and they should also grow forest and auction it or give on lease. ಈ ಒಂದು ವಿಷಯದಲ್ಲಿ ೧೯೫೦ನೇ ಇಸವಿಯಲ್ಲಿದ್ದಂಥ ಸರ್ಕಾರ ೧೮ ಸಾವಿರ ಎಕರೆ ಜಮೀನನ್ನು ಜಯಶ್ರೀ ಟೆಕ್ಸ್‌ಟೈಲ್ಸ್‌ಗೆ ಕೊಟ್ಟರೆ ೧೯೭೭ರಲ್ಲಿ ಇದ್ದಂಥ ಸರ್ಕಾರ ೩ ಸಾವಿರ ಎಕರೆ ಜಮೀನನ್ನು ಕೊಟ್ಟಿದೆ. ಇವರಿಗೆ ಮರಗಳು ಎಂದರೆ ತರಕಾರಿ ಎಂದು ಕಾಣುತ್ತದೆ. ಈ ರೀತಿ ಕೊಟ್ಟವರೆಲ್ಲಾ ಸತ್ಯವಂತರು. ನಾವು ಇವತ್ತು ಅರಣ್ಯವನ್ನು ಲೂಟಿ ಮಾಡುವ ಪ್ರಯತ್ನದಲ್ಲಿದ್ದೇವೆ ಇವರು ಯಾರು ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂಬುದಕ್ಕೆ ಪುನಃ ಬರುತ್ತೇನೆ. ನಾನು ಮೊದಲೇ ಹೇಳಿದಂತೆ ೮೦ ರೂ.ಗಳ ದರವನ್ನು ೫ ರೂಪಾಯಿಗಳಿಗೆ ಇಳಿಸಿದರು. ಇದು ಏನು ತೋರಿಸುತ್ತದೆ.

ಶ್ರೀ ಎಸ್,ಆರ್. ಬೊಮ್ಮಾಯಿ.—ಮಾನ್ಯ ನಾನಯ್ಯನವರು ನಿಮ್ಮ ಮೇಲೆ ಹೇಳಲಿಲ್ಲ. ಮೊದಲಿನಿಂದಲೂ ನಡೆದುಕೊಂಡು ಬಂದಿದ್ದನ್ನು ಹೇಳಿದರು.

ಶ್ರೀ ಆರ್ ಗುಂಡೂರಾವ್.—ಮಾತನಾಡುವುದು ಮುಖ್ಯವಲ್ಲ, ಅದೇ ರೀತಿ ನಡೆದುಕೊಳ್ಳಬೇಕು. ಕೊಡಗಿನಲ್ಲಿ ಒಂದು ಪ್ಲೈವುಡ್ ಇಂಡಸ್ಟ್ರಿ ಸ್ಥಾಪನೆ ಮಾಡಲು ಮತ್ತು ಅಲ್ಲಿಯೇ ಇರುವಂತಹ ಅರಣ್ಯವನ್ನು ಉಪಯೋಗಿಸಿಕೊಳ್ಳಲು ಅಲ್ಲಿನವರಿಗೆ ೧೯೫೭ರಿಂದ ೧೯೮೦ರವರೆಗೆ ಅವಕಾಶ ಕೊಡಲಿಲ್ಲ, ಕೂರ್ಗಿನಲ್ಲಿ ಬೆಳೆಯುವ ಮರವನ್ನು ಮತ್ತು ಶಿವಮೊಗ್ಗದಲ್ಲಿ ಬೆಳೆಯುವ ಮರವನ್ನು ಬೇರೆಯವರಿಗೆ ಕೊಡುತ್ತಾ ಬಂದರೆ ಹೊರತು ಕೊಡಗಿನವರೇ ಒಂದು ಅರ್ಜಿ ಕೊಟ್ಟರೆ ಅನುಮತಿ ಕೊಡಬೇಡಿ ಎಂದು ಹೇಳಿದರು. ಏತಕ್ಕೆ ಕೊಡಬಾರದು. ಮುಂಬೈನ ಕೇಶವಲಾಲ್ ಭೂದಾನಿ ಅವರಿಗೆ ಕೊಡುವುದಕ್ಕೆ ಹಕ್ಕಿದೆ,ಜೈಶ್ರೀ ಟೆಕ್ಸ್‌ಟೈಲ್‌ನವರಿಗೆ ಕೊಡುವುದಕ್ಕೆ ಹಕ್ಕಿದೆ. ಆದರೆ ಕೂರ್ಗಿನವರಿಗೆ ಏತಕ್ಕೆ ಕೊಡಬಾರದು ಮಾನ್ಯ ರಾಮೇಗೌಡರು ಅರಣ್ಯ ಮಂತ್ರಿಗಳಾಗಿದ್ದಾಗಲೂ ಸಹ ಒಂದು ಅರ್ಜಿ ಕೊಟ್ಟರು. ಆಗ ನಾನು ಸಾರಿಗೆ ಮಂತ್ರಿಯಾಗಿದ್ದೆ. ೧ ಲಕ್ಷದ ೫೦ ಸಾವಿರ ಕ್ಯೂಬಿಕ್ ಫೀಟ್ ಸಾಫ್ಟ್ ವುಡ್‌ನ್ನು ಪ್ಲೈವುಡ್ ಫ್ಯಾಕ್ಟರಿ ಸಲುವಾಗಿ ಕೊಡಬೇಕೆಂದು ಅರ್ಜಿ ಕೊಟ್ಟರು. Has he no right to apply for the land? Has he no right to ask the Government? He has asked the Government as his right. Then I was a Cabinet Minister, Sri Bangarappa was a Cabinet Minister, Sri Ramegowda was a Cabinet Minister. And again on 13-5-79 the firm renewed its request. You must please note this date. I had a talk with Sri Ramegowda also. ಕೊಡಗಿನ ಕಾಡನ್ನು ಹುಣಸೂರು ಫ್ಯಾಕ್ಟರಿಯವರು, ಮಂಗಳೂರು ಫ್ಯಾಕ್ಟರಿಯವರು, ಧಾರವಾಡ ಫ್ಯಾಕ್ಟರಿಯವರು, ಕೇರಳ ಫ್ಯಾಕ್ಟರಿಯವರು, ತಮಿಳುನಾಡು ಫ್ಯಾಕ್ಟರಿಯವರು ಉಪಯೋಗಿಸುತ್ತಿರುವಾಗ ಕೊಡಗಿನಲ್ಲಿಯೇ ಹುಟ್ಟಿ ಬೆಳೆದವರು ಬಂದು ಕೇಳಿದರೆ ಏತಕ್ಕೆ ಕೊಡಬಾರದು. ಬೇರೆಯವರಿಗೆ ಯಾವ ಯಾವ ಕಂಡೀಷನ್‌ಗಳ ಮೇಲೆ ಕೊಡುತ್ತೀರೋ ಅದೇ ಕಂಡಿಷನ್‌ಗಳ ಮೇಲೆ ಕೊಡಿ, ಅದಕ್ಕೆ ನಮ್ಮ ವಿರೋಧವಿಲ್ಲವೆಂದು ಹೇಳಿದೆ.

6-30 ಪಿ. ಎಂ.

ನೀವು ಏನು ಬೇಕಾದರೂ ಕಂಡೀಷನ್ ಹಾಕಿ, (ಎ) ಅಂತಲಾದರೂ ಕಂಡೀಷನ್ ಹಾಕಿ, (ಬಿ) ಅಂತಲಾದರೂ ಕಂಡೀಷನ್ ಹಾಕಿ (ಸಿ) ಅಂತಲಾದರೂ ಕಂಡೀಷನ್ ಹಾಕಿ, ಹಾಗೆ ಅವರು ಕೇಳಿರುವಾಗ ಏತಕ್ಕೆ ಕೊಡಬಾರದು? The C.C.F. also sent a proposal to the Government indicating the availability of the area and the availability of the forest wood. He also said that along with this application in nine cases it can be given. ಸಬ್‌ಮಾರ್ಜಿನ್ ಏರಿಯಾದಲ್ಲಿ ಅದು ಇದ್ದರೂ ಕೂಡ ಅದಕ್ಕೆ ಸೇರಿದ ಹಾಗೆ ಇರುವ ಫಾರೆಸ್ಟ್‌ನಲ್ಲಿ ಬೇಕಾದಂಥಾ ರಾ ಮೆಟೀರಿಯಲ್ಸ್ ಸಿಕ್ಕುತ್ತದೆ ಎಂದು ಸಿಸಿಎಫ್‌ನವರು ರೆಕೆಮೆಂಡೇಷನ್ ಮಾಡಿ ಕಳುಹಿಸಿದರೆ ಅದನ್ನು ಒಪ್ಪಿಕೊಳ್ಳುವುದು ಬಿಡುವುದು ಅದು ಬೇರೆ ವಿಷಯವಾಗುತ್ತದೆ. The C C.F. did send a recommendation saying that wood is available. That was on 26-5-79 on which day the Report was sent by the C.C.F. Till 13-8-79 i.e., when myself and Sri Bangarappa left the Ministry, no decision was taken. It was due to the administrativ

delay. I don't say that Sri Rama Gowda did it intentionally. It was not his intention also. I did recommend this case. I have a right to recommend this case, I requested him to look into the matter because there was a young man coming from Coorg interested in establishing an industry. So I said why not issue a licence and give the land by putting conditions and norms and by making whatever recovery as per the rules. His case should be considered on top priority because he belongs to that District and who was a local man and also an unemployed graduate. The then great overnment, on 13-8-79 rejected the request of that man for allotment in view of the acute shortage of raw materials for the existing ply-wood industries. That was the reason given. ಅವರು ಈ ಒಂದು ಇಂಡಸ್ಟ್ರಿಸ್‌ಗೆ ಅಪ್ಲಿಕೇಷನ್ ಹಾಕಿದಾಗ ಈಗ ಹಾಲಿ ಇರುವ ಕಡೆ ಇನ್ನೊಂದು ಇಂಡಸ್ಟ್ರೀಸ್‌ನ್ನು ಹಾಕಿದರೆ ಈಗಾಗಲೇ ಇರತಕ್ಕಂಥಾ ಇಂಡಸ್ಟ್ರೀಸ್‌ಗೆ ರಾಮೆಟೀರಿಯಲ್ಸ್ ಇಲ್ಲದೇ ಇರುವ ದೃಷ್ಟಿಯಿಂದ ನಿಮ್ಮ ಅಪ್ಲಿಕೇಷನ್ ಅನ್ನು ಕನ್ಸಿಡರ್ ಮಾಡಲಿಕ್ಕೆ ಸಾಧ್ಯ ಇಲ್ಲ ಎಂದು ಶ್ರೀ ರಾಮೇಗೌಡರು ಇಲಾಖೆಗೆ ತಿಳಿಸಿದ್ದಾರೆ. ಅಂದರೆ ಆ ಅಪ್ಲಿಕೇಷನ್ ಅನ್ನು ರಿಜೆಕ್ಟ್ ಮಾಡಿ ಎಂದು ೧೩-೮-೭೯ ರಲ್ಲಿ ತಿಳಿಸಿದರು ಅಂತ ಇದೆ. ಮತ್ತೆ ಅವನನ್ನು ಕರೆಸಿ ಹೇಳಿದರಂತೆ ಲೋಕಲ್ ಆಗಿ ಮಾತನಾಡಿದರಂತೆ ನೀನು ಗುಂಡೂರಾಯರ ಪಾರ್ಟಿಗೆ ಬೆಂಬಲ ಕೊಡದೇ ಹೋದರೆ ನಾವು ಲೈಸನ್ಸ್ ಕೊಡುತ್ತೇವೆ ಎಂದು ಹೇಳಿದರಂತೆ. ಅದಕ್ಕೆ ಅವನು ನೀವು ಲೈಸೆನ್ಸ್ ಕೊಡದೇ ಇದ್ದರೂ ಪರವಾಯಿಲ್ಲಾ ನಾನು ಅವರಿಗೆ ಬೆಂಬಲ ಕೊಟ್ಟೇ ಕೊಡುತ್ತೇನೆ ಎಂದನಂತೆ. ಆದರೆ ಆ ವಿಚಾರವನ್ನು ನಾನು ಇಲ್ಲಿ ಹೇಳಲಿಲ್ಲಾ ಅಷ್ಟೆ, ಹಾಗೆ ಇಲ್ಲಿ ಫೈಟ್ ಮಾಡುವುದು ಇಲ್ಲಿ ಬೇಡ ಅಂತ ಹೇಳಲಿಲ್ಲಾ. On 17-7-1980 the firm repeated its request at least for allotment of 5,000 cubic metres of wood for a period of 30 years. On 21-8-1980 the C.C.F. reported that an extent of 3,172 acres could be considered. On 9-9-1980 when the file was submitted to the then Minister for Forests, the Minister wrote as follows:

> "Coorg District is an industrially backward area, Though Coor District produces considerable quantity of plywood and timber, no industry based on wood material has been established in Coorg District. The industries established outside the District have been allotted timber all these days. No one from Coorg has come forward to start an industry. At least now one person has comeforward. Why should we not encourage him?"

SRI S. R. BOMMAI.—What is the note of the Secretary?

SRI R. GUNDU RAO.—When the C.C.F. has recommended, what is the Secretary?

ಶ್ರೀ ಎಸ್. ಬಂಗಾರಪ್ಪ.—ಸಿ ಸಿ ಎಫ್ ನವರು ರೆಕಮೆಂಡೇಷನ್ ಮಾಡಿರಬಹುದು But the Secretary concerned of the Department may differ from the C.C.F.

ಶ್ರೀ ಆರ್. ಗುಂಡುರಾವ್. ಒಂದು ಪಕ್ಷ ಸೆಕ್ರೆಟರಿಯವರು ಕೊಡುವುದಕ್ಕಾಗುವುದಿಲ್ಲ ನಾವು ಕೊಡುವುದಕ್ಕಾಗುವುದಿಲ್ಲವೆ? ಇಲ್ಲಿಯವರೆಗೂ ಕೊಡಗಿನಲ್ಲಿ ಒಂದು ಇಂಡಸ್ಟ್ರಿಯೂ ಇಲ್ಲದೇ ಇರುವಾಗ ಈ ಒಂದು ಇಂಡಸ್ಟ್ರಿಯನ್ನು ಕೊಡಗಿನಲ್ಲಿ ಏತಕ್ಕೆ ಕೊಡಬಾರದು ಸಿಸಿಎಫ್ ನವರಾಗಲಿ ಸೆಕ್ರಟರಿಯು

ವರಾಗಲಿ ಏತಕ್ಕೆ ಅಡ್ಡ ಬರುತ್ತಾರೆ? ಹಾಗೆ ಬರುವುದಿಲ್ಲ. The ultimate decision is of the Government.

SRI S. BANGARAPPA.—When you are reading it, let us know what the Secretary has written.

SRI R. GUNDU RAO.—With a view to encourage a local man we have given. Look at him in a judicious way. 3000 cubic metre of ply-wood timber is allotted for a period of 30 years in favour of Messrs. Coorg Ply-wood Instries. What is wrong in it.

ಶ್ರೀ ಎಸ್. ಬಂಗಾರಪ್ಪ.—ಸಿಸಿಎಫ್‌ನವರು ರೆಕಮೆಂಡ್ ಮಾಡಿದ ಮೇಲೆ ಅದನ್ನು ಸೆಕ್ರೆಟರಿಗೆ ಏತಕ್ಕೆ ಕಳುಹಿಸಬಾರದು?

SRI R. GUNDU RAO.—I am not yielding.

ಅಧ್ಯಕ್ಷರು.—ಅವರು ಯೀಲ್ಡ್ ಆಗಿಲ್ಲಾ. ಏನಿದ್ದರೂ ಆ ಮೇಲೆ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ನಾನು ಅವರ ಉತ್ತರ ಮುಗಿದ ನಂತರವೇ ಕ್ಲಾರಿಫಿಕೇಷನ್ ಕೇಳುತ್ತೇನೆ.

SRI R. GUNDU RAO.—I am telling you that the Government has sanctioned it.

SRI S. BANGARAPPA.—That is why we are asking you why you have sanctioned to him.

SRI R. GUNDU RAO.—You ask afterwards.

SRI S. BANGARAPPA.—When you are saying that you are going to preserve forests, you have no right to sanction that if you want really to safeguard the forests.

MR. SPEAKER.—The hon. Chief Minister is not running away You can ask later on.

SRI R. GUNDU RAO.—You can ask any clarification afterwards I am prepared to sit even up to 12 0' Clock. I am giving the correct figures.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ಮಾದೇಗೌಡರು ಆ ಎಲ್ಲ ವಿಷಯಗಳನ್ನೂ ಹೇಳಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಅವರು ಹೇಳಿದ್ದ ಮೇಲೆ ಮತ್ತೇಕೆ ಈ ಪ್ರಶ್ನೆ ಬಂತು? ಬಂಗಾರಪ್ಪನವರು ಈ ವಿಷಯದಲ್ಲಿ ಜಾಸ್ತಿ ಮಾತನಾಡಿದ್ದಾರೆ. ಆವೊತ್ತೇ ಶ್ರೀ ಮಾದೇಗೌಡರು ಇದನ್ನೆಲ್ಲಾ ಹೇಳಿದ್ದ ಮೇಲೆ ಆ ವಿಷಯವನ್ನು ಅಲ್ಲಿಗೇನೇ ಬಿಟ್ಟುಬಿಡಬೇಕಾಗಿತ್ತು. ಅಲ್ಲದೆ ಈ ಪೋರ್ಟ್ ಫೋಲಿಯೋ ನನಗೂ ಸೇರಿದ್ದಲ್ಲಾ. ಆದರೆ ಇದರ ಮೇಲೆ ಮತ್ತೆ ಚರ್ಚೆ ಆದ್ದರಿಂದ ನಾನು ಹೇಳಬೇಕಾಗಿದೆ, ಈ ಕೊಡಗು ಜಿಲ್ಲೆಯಲ್ಲಿ ಅವರಿಗೆ ೧೭೨೧ ಎಕರೆಯನ್ನು ಕೊಟ್ಟಿದ್ದೇವೆ. ವಿಷಯ ಆ ಮೇಲೆ ಹೇಳುತ್ತೇನೆ. ಮೊದಲು ಕೊಡಗಿನಿಂದ ಹೊರಗೆ ಯಾರ್ಯಾರಿಗೆ ಕೊಟ್ಟಿದ್ದಾರೆ ಅನ್ನುವುದನ್ನು ಹೇಳುತ್ತೇನೆ, ಹುಣಸೂರು ಪ್ಲೈವುಡ್ ವರ್ಕ್ಸ್‌ಗೆ ೧೯೬೩ನೇ ಇಸವಿಯಲ್ಲಿ ೩೦ ವರ್ಷದ ಪೀರಿಯಡ್‌ಗೆ ೨೧೦೦ ಎಕರೆ ಕೊಟ್ಟಿದ್ದಾರೆ. ಇನ್ನೊಂದು ಹುಣಸೂರು ಪ್ಲೈವುಡ್‌ಗೆ ವಿನ್ನರ್ ಮಿಲ್‌ಗೆ ೧೯೬೪ನೇ ಇಸವಿಯಲ್ಲಿ ೨೫೦೦ ಎಕರೆಯನ್ನು ಕೊಟ್ಟಿದ್ದಾರೆ.

ಮೈಸೂರು ಪ್ಲೈವುಡ್ ಫ್ಯಾಕ್ಟರಿಯವರಿಗೆ ೧೯೬೬ನೇ ಇಸವಿಯಲ್ಲಿ ೨೦ ವರ್ಷಗಳವರೆಗೆ ಎರಡು ಲಕ್ಷ ಎಕರೆಗಳಿಗಿಂತಲೂ ಹೆಚ್ಚು ಅರಣ್ಯ ಭೂಮಿಯನ್ನು ಕೊಟ್ಟಿದ್ದಾರೆ. ನಾನು ಇದನ್ನು ಆಧಾರಿ

ಟೇಟೀವ್ ಆಗಿ ಹೇಳುತ್ತಿದ್ದೇನೆ. ಈ ಭೂಮಿಯನ್ನು ಕೊಟ್ಟ ಮಾತ್ರಕ್ಕೆ ಎಲ್ಲಾ ಮರಗಳನ್ನು ಕಡಿದು ಕೊಳ್ಳುವುದಕ್ಕೆ ಅವರಿಗೆ ನಾವು ಅಧಿಕಾರವನ್ನು ಕೊಟ್ಟಿಲ್ಲ. ಪುನಃ ಇದೇ ವರ್ಷದಲ್ಲಿ ಶ್ರೀನಿವಾಸ್ ಇಂಡಸ್ಟ್ರೀಸ್ ಅವರಿಗೆ ೧೭೦೦ ಎಕರೆ, ಆಮೇಲೆ ವೆಸ್ಟರ್ನ್ ಇಂಡಿಯನ್ ಪ್ಲೈವುಡ್ ವರ್ಕ್ಸ್‌ಗೆ ೨೦ ವರ್ಷ ಗಳಿಗೆ ೪೯೦೦ ಎಕರೆಯನ್ನು ಕೊಟ್ಟಿದ್ದಾರೆ. ಭಾರತ್ ಪ್ಲೈವುಡ್ ವರ್ಕ್ಸ್‌ಗೆ ೨೦ ವರ್ಷಗಳಿಗೆ ೧೯೬೭ರಲ್ಲಿ ೧೬೦೦ ಎಕರೆಯನ್ನು ಕೊಟ್ಟಿದ್ದಾರೆ. ಬಿ.ಬಿ. ಪ್ಲೈವುಡ್ಸ್‌ಗೆ ೨೨ ವರ್ಷಕ್ಕೆ ೧೯೭೦ನೇ ಇಸವಿಯಲ್ಲಿ ೨೧೫೫ ಎಕರೆಯನ್ನು ಕೊಡಲಾಗಿದೆ. ೧೯೭೫ರಲ್ಲಿ ಕೆ.ಎಸ್.ವಿ. ಕೌನ್ಸಿಲ್ ಅವರಿಗೆ ೩೦ ವರ್ಷಕ್ಕೆ ೩,೬೦,೦೦೦ ಎಕರೆಯನ್ನು ಕೊಡಲಾಗಿದೆ. ಈ ಮನೆಯ ಸದಸ್ಯರುಗಳು ಗುಂಡೂರಾವ್ ಅವರು ಬಂದು ಅರಣ್ಯವನ್ನು ಲೂಟಿ ಮಾಡಿದರು ಎಂದು ಹೇಳುತ್ತಿದ್ದಾರೆ, ಇದು ಯಾರ ಕಾಲದಲ್ಲಿ ಲೂಟಿಯಾ ಗಿದೆ ಎನ್ನುವುದನ್ನು ನೀವೇ ಯೋಚನೆ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದೆಲ್ಲಾ ನಮಗೆ ಗೊತ್ತಿದೆ.

ಶ್ರೀ ಆರ್. ಗುಂಡೂರಾವ್.—ಸಂತೋಷ, ಯಾವ ರೀತಿಯಾಗಿ ಇವರು ಕೊಡಗು ಪ್ಲೈವುಡ್ ವರ್ಕ್ಸ್‌ಗೆ ಮೆಟೀರಿಯಲ್ಸ್ ಎಂದು ಹೇಳಿದರು. ಎಕ್ಸಿಸ್ಟಿಂಗ್ ಪ್ಲೈವುಡ್ ಫ್ಯಾಕ್ಟರೀಸ್‌ಗಳಿಗೆ ಕೊಡಲಿಕ್ಕೆ ಮರವಿಲ್ಲ ಆದ್ದರಿಂದ ಹೊಸದಾಗಿ ಕೊಡಗು ಫ್ಯಾಕ್ಟರಿಗೆ ಹೇಗೆ ಕೊಡುವುದು ಎನ್ನುವ ವಾದವನ್ನು ಇಟ್ಟರು. ಆಮೇಲೆ ಪುನಃ ಇವರ ಅರ್ಜಿ ಸರ್ಕಾರಕ್ಕೆ ಬಂದಿತು. ರಿಜೆಕ್ಟ್ ಮಾಡಿದರು, ರಿಜೆಕ್ಟ್ ಮಾಡಿದ ಮೇಲೆ ಸದರನ್ ಇಂಡಿಯಾ ಪ್ಲೈವುಡ್ ಪೆಡಿಯಾಲ ಇವರಿಗೆ ೪೦೦೦ ಸಿ.ಎಂ.ಟಿ. ಐದು ವರ್ಷಕ್ಕೆ ಸ್ಯಾಂಕ್ಷನ್ ಮಾಡಿದ್ದಾರೆ. ೧೬–೮–೭೯ರಲ್ಲಿ. ರಾ ಮೆಟೀರಿಯಲ್ಸ್ ಕೊಡಲಿಕ್ಕೆ ಮರ ಇಲ್ಲ ಎಂದು ಹೇಳಿದ ಮೇಲೆ ಇವರಿಗೆ ಕೊಟ್ಟಿದ್ದಾರೆ. ೧೩–೮–೭೯ರಲ್ಲಿ ನಮ್ಮ ಜಿಲ್ಲೆಯಿಂದ ಬಂದ ಅರ್ಜಿ ಯನ್ನು ರಿಜೆಕ್ಟ್ ಮಾಡಿದ್ದಾರೆ.

ಶ್ರೀ ಜಿ. ರಾಮೇಗೌಡ.—ಕೂರ್ಗ ಪ್ಲೈವುಡ್ ಇಂಡಸ್ಟ್ರೀಸ್ ಇನ್ನೂ ಎಸ್ಟಾಬ್ಲಿಷ್ ಆಗಿರಲಿಲ್ಲ.

ಶ್ರೀ ಆರ್. ಗುಂಡೂರಾವ್.—ಎಸ್ಟಾಬ್ಲಿಷ್ ಮಾಡಿದ ಮೇಲೆ ಬೇರೆಯವರಿಗೆ ಕೊಟ್ಟಿದ್ದಾರೆ. ಇವರಿಗೆ ಮಾತ್ರ ಮರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಅರ್ಜಿಯನ್ನು ರಿಜೆಕ್ಟ್ ಮಾಡಿದ್ದಾರೆ.

ಶ್ರೀ ಎಚ್. ಗಂಗಾಧರನ್.—ಇವರಿಗೆ ಕೊಟ್ಟಂಥ ಏರಿಯಾ ಯಾವುದು ?

ಶ್ರೀ ಆರ್. ಗುಂಡೂರಾವ್.—ನಮ್ಮ ಕ್ಷೇತ್ರದಲ್ಲಿಯೇ ಮಂಜರಾಬಾದ್ ಬಾರ್ಡರ್. ಹಾಸನ ಡಿಸ್ಟ್ರಿಕ್ಟ್ ಹತ್ತಿರ. ಆಮೇಲೆ ಪುರುಷೋತ್ತಮ ಗೋಕುಲದಾಸ್ ಇವರಿಗೆ ೨೦೦೦ ಟಿ.ಎಂ.ಸಿ. ಎಂಟು ವರ್ಷಕ್ಕೆ ೨೦–೮–೭೯ರಲ್ಲಿ ಕೊಟ್ಟಿದ್ದಾರೆ.

ಶ್ರೀ ಜಿ. ರಾಮೇಗೌಡ.—ಇವರಿಗೆ ಎಕ್ಸಿಸ್ಟಿಂಗ್ ರೇಟಿಗಿಂತ ೩೦ ಪರ್ಸೆಂಟ್ ಹೆಚ್ಚಿನ ರೇಟ್‌ನಲ್ಲಿ ಕೊಡಲಾಗಿತ್ತು.

ಶ್ರೀ ಆರ್. ಗುಂಡೂರಾವ್.—ಕೊಡಗಿನವರೂ ಸಹ ನಿಮ್ಮ ಹತ್ತಿರ ಫ್ರೀ ಆಗಿ ಮರವನ್ನು ಕೊಡಿ ಎಂದು ಕೇಳಲಿಲ್ಲ. ಆಮೇಲೆ ಮೆಂಕಾನ್ ಇಂಡಸ್ಟ್ರೀಸ್ ಬೆಂಗಳೂರು ಇವರಿಗೆ ೩,೦೦೦ ಸಿ.ಎಂ.ಟಿ ಮರವನ್ನು ವರಾಹಿ ಸರ್ಕಲ್‌ನಲ್ಲಿ ಮೂರು ವರ್ಷಕ್ಕೆ ಕೊಟ್ಟಿದ್ದಾರೆ. ವಿಪ್ರೋ ಲಿಮಿಟೆಡ್, ಬಾಂಬೆ ಇವರಿಗೆ ೧೨,೦೦೦ ಸಿ.ಎಂ.ಟಿ. ನಾರ್ತ್ ಶಿವಮೊಗ್ಗ ಸರ್ಕಲ್‌ನಲ್ಲಿ ಕೊಟ್ಟಿದ್ದಾರೆ. ಆಮೇಲೆ ವಿಪ್ರೋ ಲಿಮಿಟೆಡ್ ಮೈಸೂರು ಇವರಿಗೆ ೮೨೦೦ ಸಿ.ಎಂ.ಟಿ. ಮೂರು ವರ್ಷಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಕೊಟ್ಟಿದ್ದಾರೆ. There was no wood based industry in the district of Coorg. This was the first plywood factory to be set up in Coorg District. ಅಲ್ಲಿಂದ ಅಧ್ಯಕ್ಷರೇ ಪುರುಷೋತ್ತಮ ಗೋಕುಲದಾಸ್ ಇವರಿಗೆ ಯಾವಾಗ ಮರ ಕೊಟ್ಟಿದ್ದಾರೆಂದು ಹೇಳಿದ್ದೇನೆ. ಇದು ನಡೆದಂಥ ವಿಚಾರ. ಇಷ್ಟು ಮರಗಳನ್ನು ಇಷ್ಟು ವರ್ಷ ಗಳಿಂದ ಕೊಡುತ್ತಾ ಬಂದಿದ್ದಾರೆ. ನಮ್ಮ ಜಿಲ್ಲೆಯವರೊಬ್ಬರು ಪ್ಲೈವುಡ್ ಕಾರ್ಖಾನೆಯನ್ನು ಮಾಡುತ್ತೇನೆಂದು ಮುಂದೆ ಬಂದರೆ ಅವರಿಗೆ ನೀವು ಫ್ಯಾಕ್ಟರಿ ಮಾಡಿ ಮರ ಕೊಡುತ್ತೇವೆಂದು ಹೇಳ ತಕ್ಕ ಸಹನೆಯೂ ಬೇಕಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—ಕೂರ್ಗ ಫ್ಯಾಕ್ಟರಿಯವರು ಕೇಳಿದಾಗ ಅರಣ್ಯ ಮಂತ್ರಿಗಳು ಯಾರಿದ್ದರು ?

ಶ್ರೀ ಆರ್. ಗುಂಡೂರಾವ್.—ಗೌಡೇಗೌಡರು ಕೊಟ್ಟಿದ್ದಾರೆ. ಇಷ್ಟೊಂದು ಮರವನ್ನು ಹಿಂದಿನ ಸರ್ಕಾರದವರು ಕೊಟ್ಟಿದ್ದಾರೆಂದು ಹೇಳಿದ ಮೇಲೆ ಯಾರ ಯಾರ ಪೀರಿಯಡ್‌ನಲ್ಲಿ ಎಷ್ಟೆಷ್ಟು ಮರವನ್ನು ಕೊಟ್ಟಿದ್ದಾರೆನ್ನುವುದನ್ನೂ ಸಹ ನಾನು ಇಲ್ಲಿ ಹೇಳಬೇಕಾಗಿದೆ. ೧೯೫೮-೬೧ರಲ್ಲಿ ಮಾನ್ಯ ಬಿ.ಡಿ. ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದು ಒಂದೇ ಒಂದು ಕಾರ್ಖಾನೆಗೆ ಮಾತ್ರ ಮರವನ್ನು ಕೊಟ್ಟಿದ್ದಾರೆ. ಅದು ೧೫೦೦೦ ಸಿ.ಎಂ.ಟಿ.ಆರ್. ೧೯೬೩-೬೭ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ೧೩ ಕಾರ್ಖಾನೆಗಳಿಗೆ ೩೪,೬೮೫ ಸಿ.ಎಂ.ಟಿ.ಆರ್. ಮರವನ್ನು ಕೊಟ್ಟಿದ್ದಾರೆ. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ೧೯೭೦ರಲ್ಲಿ ಒಂದು ಕಾರ್ಖಾನೆಗೆ ೨೧೪೩ ಸಿ.ಎಂ.ಟಿ.ಆರ್. ಮರವನ್ನು ಕೊಟ್ಟಿದ್ದಾರೆ. ಗವರ್ನರ್ ಧರ್ಮವೀರ ಅವರ ಕಾಲದಲ್ಲಿ ಎರಡು ಕಾರ್ಖಾನೆಗಳಿಗೆ ೫೯೯೦ ಸಿ.ಎಂ.ಟಿ.ಆರ್. ಮರವನ್ನು ಕೊಡಲಾಗಿದೆ. ಇನ್ನು ಮಾನ್ಯ ದೇವರಾಜ ಅರಸ್ ಅವರ ಕಾಲದಲ್ಲಿ ೭೯ರಲ್ಲಿ ಜೂನ್ ತಿಂಗಳಿಂದ ಆರು ತಿಂಗಳು ಬಿಟ್ಟರೆ, ನಾವೆಲ್ಲರೂ ಮಂತ್ರಿಗಳಾಗಿದ್ದವರು. ನಾನು ನಿಮಗೆ ಹೇಳುವುದು ಏನೆಂದರೆ, ಶ್ರೀ ದೇವರಾಜ ಅರಸುರವರ ಮಿನಿಸ್ಟ್ರಿಯಲ್ಲಿ ನಾವೆಲ್ಲಾ ಇದ್ದೆವು ಎಂದು ಮಾನ್ಯ ಬಂಗಾರಪ್ಪನವರೇ ನೀವು ೧೯೭೭ರಲ್ಲಿ ಬಂದಿರಲ್ಲ. You were holding Home portfolio. ಅವರ ಪೀರಿಯಡ್‌ನಲ್ಲಿ ಹೈಯೆಸ್ಟ್ ಅಂದರೆ ೨೮ ಸಂದರ್ಭಗಳಲ್ಲಿ ಮರ ಕಡಿಯುವುದಕ್ಕೆ ಕೊಟ್ಟಿದ್ದಾರೆ. I am not speaking about the genuineness. I am giving the period. He has got every right to sanction. As the Minister for Forests, he has done it. Nothing to be bothered. I just wanted to say this. ಯಾರ್ಯಾರ ಪೀರಿಯಡ್‌ನಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತಿದ್ದೇನೆ ಅಷ್ಟೆ. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲಿ ೨೮ ಕೊಟ್ಟಿದ್ದಾರೆ. ಒಟ್ಟು ೭೯,೮೩೭ ಕ್ಯುಬಿಕ್ ಮೀಟರ್‌ನಷ್ಟು ಅವರ ಕಾಲದಲ್ಲಿ ಕೊಟ್ಟಿದ್ದಾರೆ. ಶ್ರೀ ಆರ್. ಗುಂಡೂರಾವ್ ಕಾಲದಲ್ಲಿ ಒಂದು ಕೊಟ್ಟಿದ್ದೇವೆ. ೩,೦೦೦ ಕ್ಯುಬಿಕ್ ಮೀಟರ್‌ಗಳು ಮಾತ್ರ. ಹೀಗಿರಬೇಕಾದರೆ I will just give Madikeri Division. ನಾನು ಅಧಿಕಾರಕ್ಕೆ ಬಂದಮೇಲೆ ಶ್ರೀ ನಾಣಯ್ಯನವರು ಕೊಡಗಿನಲ್ಲಿ ಏನೋ ಅನಾಹುತ ಆಗಿ ಅದರ ಪರಿಣಾಮವಾಗುತ್ತಿದೆ ಎಂದು ಏನು ಹೇಳಿದರು ಆ ಪರಿಣಾಮವನ್ನೇ ಹೇಳುತ್ತೇನೆ. ಶ್ರೀಮಾನ್ ಬಿ.ಡಿ. ಜತ್ತಿಯವರು ಕೊಡಗಿನಿಂದ ಮರ ಕಡಿಯುವುದಕ್ಕೆ ಒಂದು ಘಟ್ ಸಹ ಕೊಡಲಿಲ್ಲ. ಆದರೆ ಅವರು ಬೇರೆ ಕಡೆಯಲ್ಲಿ ಕೊಟ್ಟರು. ಶಿವಮೊಗ್ಗ, ನಾರ್ತ್ ಕೆನರಾ ಈ ಕಡೆಗಳಲ್ಲಿ ಕೊಟ್ಟರು. ಶ್ರೀಮಾನ್ ನಿಜಲಿಂಗಪ್ಪನವರು ಕೊಡಗು ಜಿಲ್ಲೆಯಿಂದ ೧೧ ಮರ ಕಡಿಯುವುದಕ್ಕೆ ಕೊಟ್ಟರು. ಇದು ೨೧,೪೨೮ ಕ್ಯುಬಿಕ್ ಮೀಟರ್‌ಗಳು. ಶ್ರೀ ವೀರೇಂದ್ರ ಪಾಟೀಲರು ಕೊಡಗು ಜಿಲ್ಲೆಯಿಂದ ಒಂದನ್ನು ಕೊಟ್ಟರು, ಅದು ೨.೧೪೩ ಕ್ಯುಬಿಕ್ ಮೀಟರ್‌ಗಳು. ಎಕ್ಸ್ ಗೌರ್ನರ್ ಶ್ರೀ ಧರ್ಮವೀರ ಅವರು ಕೊಡಗು ಜಿಲ್ಲೆಯಿಂದ ಒಂದನ್ನು ಕೊಟ್ಟರು, ಅದು ೧೫೦೦ ಕ್ಯು. ಮೀಟರ್‌ಗಳು. ಶ್ರೀ ದೇವರಾಜ ಅರಸ್‌ರವರು ಕೊಡಗು ಜಿಲ್ಲೆಯಿಂದ ೨೧ನ್ನು ಕೊಟ್ಟರು, ಅದು ೫೯.೨೧೦ ಕ್ಯು. ಮೀಟರ್‌ಗಳು. ಶ್ರೀ ಗುಂಡೂರಾವ್ ಕೊಡಗಿನಿಂದ ಒಂದನ್ನು ಕೊಟ್ಟರು, ಅದು ೩೦೦೦ ಕ್ಯು. ಮೀಟರ್‌ಗಳು. ಇಷ್ಟನ್ನು ಕೊಟ್ಟಾದ ಮೇಲೆ ಶ್ರೀಮಾನ್ ನಾಣಯ್ಯನವರು ಸ್ವಲ್ಪ ದಿನಗಳ ಕಾಲ ಫಾರೆಸ್ಟ್ ಮಿನಿಸ್ಟರ್ ಆಗಿದ್ದರು. ಅವರು ಸುಮಾರು ೩೦ ದಿನಗಳು ಮಿನಿಸ್ಟರ್ ಆಗಿದ್ದರು. ಅವರು ಕೊಡಗಿನಿಂದ ಬಂದವರು, ಫಾರೆಸ್ಟ್ ಬಗ್ಗೆ ಅನುಭವ ಇದೆ. ಅವರಿಗೆ ಎಷ್ಟು ಅನುಭವ ಇದೆಯೋ ಅಷ್ಟೇ ಅನುಭವ ನನಗೂ ಇದೆ. ಶ್ರೀ ಗುಂಡೂರಾವ್‌ರವರನ್ನು ಮಿನಿಸ್ಟ್ರಿಯಿಂದ ವಜಾ ಮಾಡಿದರು. ಕೊಡಗಿನವರೊಬ್ಬರನ್ನು ಅಲ್ಲಿಗೆ ಹಾಕಿ ಅರಣ್ಯ ರೋಧನ ಮಾಡಿಸುತ್ತೇನೆ ಎಂದು ಹೇಳಿ ಈ ಅರಣ್ಯರೋಧನ ಮಾಡುವಂತವರನ್ನು ಏನೋ ಮಾಡುತ್ತಾರೆ ಅಂತ ಹೇಳಿ ಮಂತ್ರಿ ಮಾಡಿ ಕಳಿಸಿಕೊಟ್ಟರು ಅವರು ಮಾಡಿದ್ದು ಇದೆ, ನಿಜ ಇವತ್ತು ಅಧಿಕೃತವಾಗಿ ನಮ್ಮ ಸರ್ಕಾರ ಅಧಿಕಾರದಲ್ಲಿದೆ. ಬಹುಮತ ಪಡೆದಂತಹ ನಮ್ಮ ಸರ್ಕಾರ ಇದೆ. ಇಲ್ಲಿ ಶಾಸನ ಸಭೆ ನಡೆಯುತ್ತಾ ಇದೆ. ನಮ್ಮ ಸರ್ಕಾರ ೩೦೦೦ ಎಕರೆಯಷ್ಟು ಕೊಟ್ಟಿದೆ ಎಂದು ನಾನು ಇವತ್ತು ಧೈರ್ಯವಾಗಿ ಇಲ್ಲಿ ಹೇಳುತ್ತಿದ್ದೇನೆ. We are not apologetic. ಆದರೆ ಹಿಂದೆ ಇದ್ದವರು ಅದೇ ತರಹ ಕೊಟ್ಟಿದ್ದಾರೆ. ಆಗಲೂ ಅಧಿಕೃತವಾದ ಸರ್ಕಾರ ಇತ್ತು. ಅಧಿಕೃತವಾದ ಮುಖ್ಯಮಂತ್ರಿಗಳಿದ್ದರು, ಮಂತ್ರಿಗಳು ಇದ್ದರು, ಸರ್ಕಾರ ಇತ್ತು ಕೊಟ್ಟಿದ್ದಾರೆ. ಆದರೆ ಶ್ರೀ ನಾಣಯ್ಯನವರು ಯಾವಾಗ ೧೭೨೧ ಎಕರೆಯನ್ನು ಕೊಟ್ಟಿದ್ದಾರೆ ಗೊತ್ತೇ, ೭ನೇ ತಾರೀಖಿನ ದಿವಸ ಶ್ರೀ ದೇವರಾಜ ಅರಸ್‌ರವರ ಪಕ್ಷ ಪೂರ್ತಿಯಾಗಿ ಉರುಳಿಹೋಯಿತು ಎಂದು ಪಾರ್ಲಿಮೆಂಟ್ ರಿಸಲ್ಟ್ ಬಂತು. ೭ನೇ ತಾರೀಖಿನ ದಿವಸ

ಶ್ರೀ ದೇವರಾಜ ಅರಸರು ರಾಜೀನಾಮೆಯನ್ನು ಕೊಟ್ಟರು. On 7th results were announced and the future of the politics of this State were decided by the people of the State and the people of the country in general. Going on the verdict of the people, Sri Devaraj Urs, the then Chief Minister tendered his resignation. The Governor asked him to continue till other alternative arrangements were made. It was just a care-taker Government... On 9th I was elected as the Leader of the Party. Mr. Nanaiah who was holding Forest portfolio, had sanctioned 1,721 acres in Kodagu on 10-1-1980.

MEMBERS.—Shame, shame.

SRI R. GUNDU RAO.—I am sorry. he is not present to-day. These are the people talking as saviours of Forest in the State and District. Let us talk truth whether powers comes or power goes. Damn it. What is this? It is an uttar lie and a blatant lie. Can anybody sanction this on 10-1-1980 when the previous Government has just resigned and when I had to take the swearing-in-ceremony on 12-1-1980? ಆಮೇಲೆ ಪತ್ರಿಕೆಯಲ್ಲಿ ನಾಣಯ್ಯನವರಿಂದ ಅರಣ್ಯ ಲೂಟಿಯ ಕತೆ ಎಂದು ಬಂತು. I was sorry that I was not here when my Forest Minister spoke on that day. Why did you apologise? You have got every right to sanction it. If looting is the analogy of the Forests and when lakhs and crores of rupees worth forest wealth were looted, I don't mind, let this few lakhs of rupees wealth are looted. This is sanctioned for a particular industrial use. Yes, how Sri Jatti had, in his right sanctioned, how Sri Nijalingappa has sanctioned, how Governor Dharma Vira had sanctioned, how Sri Devaraj Urs, when he was in power has sanctioned, likewise Gundu Rao has also sanctioned this as the Chief Minister of Karnataka. But Gundu Rao Government has sanctioned when it was in full majority and when the Government's term was there for another six months. Here is the former Minister, who speaks about the Forest and who had sanctioned this when he had no powers.

SRI S. BANGARAPPA.—For what purpose he had sanctioned?

ಶ್ರೀ ಆರ್. ಗುಂಡೂರಾವ್.—ಯಾವ ಪರ್ಪಸ್ ಎಂಬುದನ್ನು ನಾನು ಆಮೇಲೆ ಹೇಳುತ್ತೇನೆ. ಮೊದಲು ಸ್ಯಾಂಕ್ಷನ್ ಕೊಟ್ಟಿದ್ದರ ಬಗ್ಗೆ ಹೇಳುತ್ತೇನೆ. ಯಾವುದೋ ಇಂಡಸ್ಟ್ರೀಸ್ ಪರ್ಪಸ್, The same plywood purpose only. This was sanctioned for plywood purpose to Purushothamadas Gokuldas company. He is the pure Coorgi. He says that he is protecting forests of Coorg. Non-sense. Nobody would do this in a democracy. When the new Government was to be Swary in, overnight on 10-1-1980, he had sanctioned. These are the people talking as saviours of forest. The next day in the papers and in magazines, I saw that Sri Made Gowda was apologetic. Sri Made Gowda, in his good spirit said so. I asked him

as to what he had said. ಅವರಿಗೆಲ್ಲಾ ಕೊಟ್ಟದ್ದು ತಪ್ಪು ಇರಬಹುದು. ಆದರೆ ನಮ್ಮದೂ ಏನು ಅಂತ ಅವರು ಕೇಳಿರಬೇಕಾದರೆ, ಅವರು ಕೊಟ್ಟಿರುವುದು ತಪ್ಪು, ನಮ್ಮದೂ ತಪ್ಪು ಎಂದು ಹೇಳಿರುತ್ತಾರೆ.

SRI G. MADE GOWDA.—I want to clarify.

SRI R. GUNDU RAO.—Please clarify.

೨-೦೦ ಪಿ. ಎಂ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮುಖ್ಯ ಮಂತ್ರಿಗಳು ಏನೇನು ಅಂಕಿ ಅಂಶಗಳನ್ನು ಕೊಟ್ಟಿದ್ದಾರೋ ಆ ಎಲ್ಲಾ ಅಂಕಿ ಅಂಶಗಳನ್ನು ಸಹ ಈ ಸದನದಲ್ಲಿ ಒ ಿದ್ದೇನೆ. ಆದರೂ ಮಾನ್ಯ ಸದಸ್ಯರು ಕೆಲವು ಅಂಕಿ ಅಂಶಗಳನ್ನು ಕೊಟ್ಟು ಪ್ರಸ್ತಾಪ ಮಾಡಿದರು. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ನಾವು ಹೆಚ್ಚು ಅರಣ್ಯವನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎನ್ನುವ ಮಾತನ್ನು ಸಹ ಹೇಳಿದ್ದೇನೆ. ಹಿಂದಿನ ಸರ್ಕಾರದವರು ಕೊಟ್ಟಿರುವ ಪ್ರಕಾರ ನಾವು ಕೊಟ್ಟಿರುವುದು ಬಹಳ ಕಡಿಮೆ. ಆ ರೀತಿಯಲ್ಲಿ ನಾವು ಕೊಟ್ಟಿರುವುದು ಸರಿಯಾಗಿಲ್ಲವೆಂದು ಮಾನ್ಯ ಸದಸ್ಯರಿಗೆ ಗೊತ್ತಾದರೆ ಕ್ಷಮಿಸಲಿ ಎಂದು ನಾನು ಹೇಳಿದ್ದೇನೆ. ಅದಕ್ಕೆ ಮೂರನೇ ದಿವಸ ಪತ್ರಿಕೆಯಲ್ಲಿ ಮಾನ್ಯ ಅರಣ್ಯ ಮಂತ್ರಿಗಳು ಕ್ಷಮಾಪಣೆ ಕೇಳಿದರು ಎಂದು ಬಂದಿದೆ.

SRI R. GUNDU RAO.—It is not the question of ruling party or the opposition party. The forest belongs to the State and everybody has got a right. That is not my question But I tell the way how it has been sanctioned. On 1-1-1980 the Minister for Forest has sanctioned knowing that I am being sworn in on 12th morning. ಮಾನ್ಯ ಅರಣ್ಯ ಸಚಿವರಾದಂತಹ ಶ್ರೀಮಾನ್ ಮಾದೇಗೌಡರ ಕಾಲದಲ್ಲಿ ಕೊಟ್ಟಿರುವುದು ಅಲ್ಲ. ಮತ್ತೆ ಮಾನ್ಯ ಮುಖ್ಯ ಮಂತ್ರಿಗಳಾದಂತಹ ಗುಂಡೂರಾಯರ ಕಾಲದಲ್ಲಿ ಕೊಟ್ಟಿರುವುದು ಅಲ್ಲ. ಮತ್ತೆ ವಿರೇಂದ್ರಪಾಟೀಲ್‌ರವರ ಕಾಲದಲ್ಲಿ ಕೊಟ್ಟಿರುವುದು ಅಲ್ಲ. ಆದರೆ ಕೇರ್ ಟೇಕರ್ ಗೌರ್ನಮೆಂಟ್ ಇರುವಂತಹ ಕಾಲದಲ್ಲಿ ಪುರುಷೊತ್ತಮ್ ದಾಸ್ ಗೋಕುಲ್ ದಾಸ್ ಎನ್ನುವವರಿಗೆ ಸ್ಯಾಂಕ್ಷನ್ ಮಾಡಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ. I don't attribute any motive for this. I am only attributing how Mr. Nanaiah, probably in the whole ministry if at all any such order is there. It is passed by the then Devaraj Urs' ministry which tendered resignation, it was only in this file this wonderful minister has signed then. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಕೊಡಗಿನವರಿಗೆ ಧೈರ್ಯ ಜಾಸ್ತಿ. ಅರಣ್ಯದ ಲೂಟಿ, ಅರಣ್ಯದ ಬಗ್ಗೆ ಚರ್ಚೆ, ಅರಣ್ಯವನ್ನು ಉಳಿಸುವುದು, ಇವೆಲ್ಲಾ ಎಲ್ಲಿ ಹೋದವು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅರಣ್ಯವನ್ನು ಒಂದು ಕಂಡೀಷನ್ ಮೇಲೆ ಕೊಟ್ಟಿದ್ದೇವೆ. ನಾವು ಅರಣ್ಯವನ್ನು ಯಾವ ರೀತಿಯಲ್ಲಿ ಕೊಟ್ಟಿದ್ದೇವೆ ಮತ್ತು ಯಾವ ಯಾವ ಕಂಡೀಷನ್‌ಗಳ ಮೇಲೆ ಕೊಟ್ಟಿದ್ದೇವೆ ಎನ್ನುವುದು ಪ್ರಿಂಟ್ ಮಾಡಿ ಬೇಕಾದರೆ ಎಲ್ಲಾ ಮಾನ್ಯ ಸದಸ್ಯರಿಗೂ ಹಂಚುವುದಕ್ಕೆ ನಾನು ತಯಾರಾಗಿದ್ದೇನೆ. Let the people of Karnataka decide who looted, how looted and how it has been done. ಒಂದು ಎಕರೆ ಅರಣ್ಯ ಪ್ರದೇಶದಲ್ಲಿ ೪ ಮರಗಳನ್ನು ಮಾತ್ರ ಕಡಿಯಬೇಕು. ಅದೂ ಒಂದು ವರ್ಷದಲ್ಲಿ. ಅದು ೪೦ ವರ್ಷಗಳಲ್ಲಿ ಎಂದು ಸುಮಾರು ೭೫ ಎಕರೆಗಳಲ್ಲಿ ೧ ಎಕರೆಗೆ ೪ ಮರಗಳಂತೆ ಕಡಿದರೆ ಒಟ್ಟು ೭೫ ಎಕರೆಗಳಿಗೆ ೪೦ ವರ್ಷದಲ್ಲಿ ಮರಗಳನ್ನು ಕಡಿದುಕೊಳ್ಳಬೇಕು ಎನ್ನುವಂತಹ ಒಂದು ಕಂಡೀಷನ್ಸ್ ಮಾತ್ರ ನಾವು ಹಾಕಿ ಕೊಟ್ಟಿದ್ದೇವೆ, ಅಂದರೆ ಒಂದು ವರ್ಷಕ್ಕೆ ಸುಮಾರು ೩೦೦ ಮರಗಳನ್ನು ಮಾತ್ರ ಕಡಿಯಬೇಕು. This is the condition. It is a general condition laid down in the forest manual and norms that have been done. ಈ ರೀತಿಯಾಗಿ ಸ್ಪಷ್ಟವಾದ ಕಂಡೀಷನ್ಸ್ ಹಾಕಿ ಕೊಟ್ಟಿದ್ದೇವೆ. ಕೆಲವರಿಗೆ ಏನೂ ಇಲ್ಲ.

ಪ್ಲೈವುಡ್‌ನವರಿಗೆ ಒಟ್ಟಿಗೆ ಸುಮಾರು ೧೮ ಸಾವಿರ. ಜಯಶ್ರೀ ಟೆಕ್ಸ್‌ಟೈಲ್ಸ್‌ನವರು ಮರಗಳನ್ನು ಕೊಂಡುಕೊಳ್ಳಬೇಕಾದರೆ ಮಾರ್ಕೆಟ್ ರೇಟ್‌ಗೆ ಕೊಡಬೇಕೆಂದು ಹೇಳಿದ್ದೇವೆ.

ಶ್ರೀ ಡಿ.ಟಿ. ರಾಮು.—ಈ ಮೂರು ಸಾವಿರ ಎಕರೆಯಲ್ಲಿ......

ಶ್ರೀ ಆರ್. ಗುಂಡೂರಾವ್.—ರಾಮುರವರೇ ನಿಮಗೆ ಗೊತ್ತಿಲ್ಲ, ಆದರೆ Today I am the Chief Minister. I was a bachelor then. When this happened, I wa a Minister. I entered the politics in 1962, and with full vigour and spirit I protested against it. I am telling you in the name of Goddess Cauvery, with my own eyes I saw that beautiful rose and teak wood being, burnt to ashes. Not a single protest was made by this wonderful Advocate and MLA Mr. Nanaiah.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ರೇಟ್ಸ್ ಬಗ್ಗೆ ಹೇಳಿದರು. ಯಾವ ರೇಟಿನಲ್ಲಿ ಕೊಟ್ಟಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಬೇರೆಯವರಿಗೆ ಯಾವ ರೇಟಿನಲ್ಲಿ ಕೊಟ್ಟಿದ್ದೇವೆಯೋ ಅದೇ ರೇಟಿನಲ್ಲಿ ಕೊಟ್ಟಿದ್ದೇವೆ, ಇದರಲ್ಲಿ ಯಾವುದೇ ವಿಧವಾದ ಅನ್ಯಾಯ ನಡೆದಿಲ್ಲ.

SRI G. RAME GOWDA.—Seigniorage rate or different varieties different rate.

ಶ್ರೀ ಮೈಕೇಲ್ ಫರ್ನಾಂಡೀಸ್.—ನಿಮ್ಮ ಆಳುವ ಪಕ್ಷದಲ್ಲಿದ್ದರೆ ಆ ರೀತಿ ಮಾಡುತ್ತಾರೆ. ಆದ್ದ ರಿಂದ ನೀವು ವಿರೋಧ ಪಕ್ಷಕ್ಕೆ ಬನ್ನಿ.

ಶ್ರೀ ಆರ್. ಗುಂಡೂರಾವ್.—ಈಗ ವಿರೋಧ ಪಕ್ಷದಲ್ಲಿದ್ದಾರೆ. ಅವರ ಜೊತೆಗೆ ಈಗ ನಿಮ್ಮ ಜನತಾ ಪಕ್ಷದ ರಾಂದೇವ್‌ರವರು ಸಹ ಸೇರಿಕೊಂಡಿದ್ದಾರೆ. ಆದರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ರಾಂದೇವ್‌ರವರು ಒಂದೇ ಜಿಲ್ಲೆಯವರು.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ ಇಬ್ಬರು ಸದಸ್ಯರು ಒಂದೇ ಜಿಲ್ಲೆಯವರಾದರೂ ಸಹ ಮಾನ್ಯ ಸದಸ್ಯರಾದಂತಹ ರಾಂದೇವ್‌ರವರು ಮಾಂಸ ತಿನ್ನುವುದಿಲ್ಲ. ಆದರೆ ತಾವು ಮಾಂಸ ತಿನ್ನುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ನಾವು ಒಂದು ಕಡೆ ಸೇರಿ ಊಟ ಮಾಡಿದ್ದೇವೆ, ಆದರೆ ಅದರ ವಿವರವನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಸುಮಾರು ೧೫ ವರ್ಷಗಳ ಕಾಲ ಮುನಿಸಿಪಲ್ ಕಾರ್ಪೋರೇಷನ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. But it is only Mr. Nanaiah who misled the whole house including the opposition and misled everybody. He is an advocate He is my very very good friend.

ಶ್ರೀ ರಾಮದೇವ್.—ನಾನೇನೋ ಕಾರ್ಪೋರೇಷನ್‌ನಿಂದ ಬಂದಿರುವುದು ನಿಜ. ಆದರೆ ನೀವು ಹನ್ನೆರಡು ವರ್ಷ ಮುನಿಸಿಪಾಲಿಟಿಯಲ್ಲಿದ್ದೀರಲ್ಲ ? ನಾನು ಬದಲಾಯಿಸಿಕೊಂಡಿದ್ದೀನಿ. ನೀವು ಮಾತ್ರ ಅಲ್ಲೇ ಇದ್ದೀರಲ್ಲ ?

ಶ್ರೀ ಆರ್. ಗುಂಡೂರಾವ್.—ನಾನು ಕೂಡ ಬದಲಾಯಿಸಿದ್ದೀನಿ. ನೀವು ಮಾತ್ರ ಇನ್ನೂ ಕಾರ್ಪೋರೇಷನ್‌ನಲ್ಲಿದ್ದ ರೀತಿಯಲ್ಲೇ ವರ್ತಿಸುತ್ತಿದ್ದೀರಿ. ಈಗ ರಾಮೇಗೌಡರು ಒಂದು ಮಾತನ್ನು ಹೇಳಿ ಜೋಕ್ ಕಟ್ ಮಾಡಿದರು. ಕಕ್ಕಿಲಾಯ್ ಅವರು ಜೋಕ್ ಕಟ್ ಮಾಡಿದರು. ಜೋಕ್ ಕಟ್ ಮಾಡಿದರೂ ಸ್ವಾರಸ್ಯ ಇರಬೇಕು.

ಶ್ರೀ ಜಿ. ರಾಮೇಗೌಡ.—ಬಹುಶಃ ಗಟ್ಟಿಯವರು ಇವರಿಂದ orphanage ತೆಗೆದು ಕೊಂಡಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ವಾಪಸ್ಸು ತೆಗೆದುಕೊಂಡುಬಿಟ್ಟಿದ್ದೀನಿ.

ಶ್ರೀ ಗಟ್ಟಿ ಚಂದ್ರಶೇಖರ್.—ರಾಮೇಗೌಡರು ಇಷ್ಟು ಶಿಫಾರಸ್ಸು ಮಾಡಬೇಕಾದರೆ ಇಂತಹ ಮುದುಕರೇ ಆ ತಬ್ಬಲಿ ಮಕ್ಕಳಿಗೆ ಕಾರಣ.

ಶ್ರೀ ರಾಮೇಗೌಡ.—ನಮಗೆ ಕಲೆ ಇಲ್ಲ ಸಾರ್. ಖಯಲಿ ಇದೆ.

ಶ್ರೀ ಆರ್, ಗುಂಡೂರಾವ್.—ಆ ಮೇಲೆ ಅಧ್ಯಕ್ಷರೇ, ರಾಮೇಗೌಡರು ನನಗೆ ಬಹಳ ಸ್ನೇಹಿತರು. ಅವರು ಹೇಳಿದರು ರಾಮದೇವರಿಗೆ ಏನೋ ಕಲಿಸಬೇಕೆಂದಿದ್ದೆ, ಆದರೆ ಆಗಲಿಲ್ಲ ಎಂದು. ನನಗೆ ಅವರು ಬಹಳ ಸ್ನೇಹಿತರು. ಒಂದು ವಿಷಯ ನಾನವರಿಗೆ ಕಲಿಸಿಕೊಟ್ಟೆ.

ಶ್ರೀ ರಾಮ್‌ದೇವ್.—ನೀವು ಒಂದು ದಿನವೂ ನಮ್ಮ ಮನೆಗೆ ಬಂದಿಲ್ಲ ?

ಶ್ರೀ ಜಿ. ರಾಮೇಗೌಡ.—ನಾನು ಏನು ಅಂದರೆ Jacfi of all; master of none.

ಶ್ರೀ ಆರ್. ಗುಂಡೂರಾವ್.— ನಾನು ಏನು ಅಂದರೆ Cabinet ನಲ್ಲಿ ಗುರುಗಳೇ ಎಂದು ಕರೆಯುತ್ತಿದ್ದೆ. ಅಷ್ಟರಮಟ್ಟಿಗೆ ನನಗೆ ಅವರ ಬಗ್ಗೆ ಪ್ರೀತಿ ವಿಶ್ವಾಸ. ಹದಿನೈದು ದಿವಸ, ಇಪ್ಪತ್ತು ದಿವಸಗಳಿಗೊಂದು ಸಾರಿ ಊಟಕ್ಕೆ, ತಿಂಡಿಗೆ ಕರೆಯುತ್ತಿದ್ದರು ಏತಕ್ಕೆ ಒತ್ತಾಯ ಮಾಡುತ್ತಿದ್ದರು ? ನಾನು ಹೇಳುತ್ತಿದ್ದೆ, ಮುಂದೆ ನೀವು ನಿಜವಾಗಿಯೂ Forest Minister ಆಗಬೇಕು ಕಲಿತುಕೊಳ್ಳಿ ಎಂದೆ. ಅವರು ಕಲಿತುಕೊಂಡರು. ಅದೇನೆಂದು ನಾನು ಹೇಳುವುದಿಲ್ಲ. ಅದು ನನಗೆ ಮತ್ತು ರಾಮೇಗೌಡರಿಗೆ ಮಾತ್ರ ಇರಲಿ. I think I have made it abundantly clear that Government is within its rights and within its full powers to give all these things like what has been done in the last 2½ decades and it is nothing to compare with what they did I don't asy anything against also. ಆದ್ದರಿಂದ ನಾನು ಹೇಳುವುದೇನೆಂದರೆ ಅವರು ತಿಳಿದ ಹಾಗೆ ಅವರು ಕೊಟ್ಟಿದ್ದಾರೇ ನಮಗೆ ತಿಳಿದಹಾಗೆ ನಾವು ಕೊಟ್ಟಿದ್ದೇವೆ. ಆದ್ದರಿಂದ ಕರ್ನಾಟಕದಲ್ಲಿ, ಸರ್ಕಾರದಲ್ಲಿ ಏನೋ ಆಗಿಹೋಗಿ ಬಿಟ್ಟಿದೆ ಎನ್ನುವ ಅಭಿಪ್ರಾಯ ಸರಿಯಲ್ಲ. ಎಂದು ಈ ಸದನಕ್ಕೆ ತಿಳಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಇವತ್ತು ನಮ್ಮ ನಿಮ್ಮ ಜಿಲ್ಲೆಯಲ್ಲಿ ಸ್ನೇಹಿತರು ಇರುತ್ತಾರೆ, ಶಿವಮೊಗ್ಗ ಜಿಲ್ಲೆಯಲ್ಲಿ, ಸೊರಬದಲ್ಲಿ tribunal member ಇನ್ನೊಬ್ಬರು ಬಂಗಾರಪ್ಪನವರಿಗೆ ಸ್ನೇಹಿತರು ಇರುವುದಿಲ್ಲವೆ ? ಹುಬ್ಬಳ್ಳಿ, ಧಾರವಾಡದಲ್ಲಿ ಬೊಮ್ಮಾಯಿಯವರಿಗೆ ಸ್ನೇಹಿತರು ಇರುವುದಿಲ್ಲವೆ ? ಸಾರ್ವಜನಿಕವಾಗಿ ಇರಬೇಕಾದರೆ ಎಲೆಕ್ಷನ್‌ನಲ್ಲಿ ಗೆಲ್ಲಬೇಕಾದರೆ, ಎಲ್ಲರಿಗೂ ಸ್ನೇಹಿತರು ಇರುತ್ತಾರೆ. ಒಬ್ಬರೇ ಇರಲಿಕ್ಕೆ ಇದೇನು ರಾಜರ ದರ್ಬಾರಲ್ಲ, ಚಕ್ರವರ್ತಿ ದರ್ಬಾರಲ್ಲ. I will nominate ಅಂತ ಹೇಳಲಿಕ್ಕೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಮಂತ್ರಿಗಳು, ಸ್ನೇಹಿತರು ಇಲ್ಲದವರು ಭಿಕ್ಷೆ ಬೇಡಬೇಕೆಂದ್ದೇನೂ ಕಾನೂನಿಲ್ಲ. ಬೇಕಾದ ವ್ಯವಹಾರಮಾಡುತ್ತಾರೆ. ವ್ಯವಸಾಯ ಮಾಡುತ್ತಾರೆ. Industry trade ಗಳನ್ನು ಮಾಡುತ್ತಾರೆ. ಅವರವರ ಟ್ರೇಡ್‌ನಲ್ಲಿ ಬಹಳ ವರ್ಷಗಳಿಂದ ಬಂದಿದ್ದಾರೆ. ಲಾರಿಗಳನ್ನು ಇಟ್ಟಿದ್ದಾರೆ. ವ್ಯಾಪಾರ ಮಾಡಿದ್ದಾರೆ. ಇವುಗಳನ್ನು ಮಾಡತಕ್ಕಂತಾದ್ದರಲ್ಲಿ ತಪ್ಪೇನಾದರೂ ಇದ್ದರೆ action ತೆಗೆದುಕೊಳ್ಳಿ. After all it is not today's business. It is hundreds of years course. ೩,೦೦೦ ಕ್ಯೂಬಿಕ್ ಫೀಟ್‌ನ್ನು ಒಂದು ಎಕರೆಗೆ ನಾಲ್ಕು ಮರದ ಹಾಗೆ ತೆಗೆದುಕೊಳ್ಳಬೇಕಾದರೆ ಇದು ನೂರು ಮುನ್ನೂರು ವರ್ಷ ಆಗುತ್ತದೆ. ಇದನ್ನು ಅವರು ತೆಗೆದುಕೊಳ್ಳುತ್ತಾರೋ, ಅವರ ಮಗ ತೆಗೆದುಕೊಳ್ಳುತ್ತಾರೋ ಅಲ್ಲಿಯವರೆಗೆ ಈ ಇಂಡಸ್ಟ್ರೀ ಇರುತ್ತದೆಯೋ ಗೊತ್ತಿಲ್ಲ. ಕಾನೂನು ತಪ್ಪಾಗಿದ್ದರೆ ಇಲಾಖೆಯವರು ಕ್ರಮ ತೆಗೆದುಕೊಳ್ಳುತ್ತಾರೆ. ಯಾರಿಗಾದರೂ ಅನ್ಯಾಯ ಆಗಿದ್ದರೆ ಕೋರ್ಟಿಗೆ ಹೋಗುತ್ತಾರೆ. ಅದು ಬಿಟ್ಟು ಸರ್ಕಾರದವರು ಏನೂ ಕೊಡಕೂಡದು. ಏನೂ ಮಾಡಬಾರದು ಅಂತ ಹೇಳಿದರೆ My Government is not that type of Coward Government. What I did what my Government did and what my mlnister did are absolutely within the powers. Most systematically, legally, constitutionally and authoritatively he has done it.

ಅರಣ್ಯ ಇಲಾಖೆಯ ರೋಧನವನ್ನು ಬಿಟ್ಟು ಇನ್ನು Major Irrigationಗೆ ಬರೋಣ. Major Irrigation ವಿಷಯದಲ್ಲಿ ಶ್ರೀಮಾನ್ ದೇವೇಗೌಡರು, ಶ್ರೀಮಾನ್ ಬೊಮ್ಮಾಯಿಯವರು ಇನ್ನೂ ಅನೇಕ ಜನರು ಗಂಗಾಧರ್ ಅವರು ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. They have really gvien some concrete suggestions. ಯಾವ ವಿಧದಲ್ಲೂ ಈ ಭಾರೀ ನೀರಾವರಿ ಯೋಜನೆಗಳ ಕಾರ್ಯಗಳು ನಿಧಾನವಾಗಬಾರದು. ವರ್ಲ್ಡ್ ಬ್ಯಾಂಕ್ ನೆರವು ಪಡೆದಂಥ ಕೃಷ್ಣ ಮೇಲ್ದಂಡೆ, ಹಾರಂಗಿ ಮೊದಲಾದ ಯೋಜನೆಗಳು ನಿಧಾನವಾಗಬಾರದು, ಎಲ್ಲಕ್ಕಿಂತಲ್ಲೂ ಮುಖ್ಯವಾಗಿ ಕಾವೇರಿ ನದಿ ನೀರಿನ ಬಗ್ಗೆ ಮಾತನಾಡಿದ್ದಾರೆ. ಇದು ಬಹಳ ಸೂಕ್ಷ್ಮವಾದಂತಹ ವಿಷಯ. ಈ ಕಾವೇರಿ ನೀರಿನ ಸಮಸ್ಯೆ ಬಹಳ ಸೂಕ್ಷ್ಮವಾದ ವಿಷಯ. ದೇವೇಗೌಡರು ಒಂದು ವಿಷಯವನ್ನು ಹೇಳಿದ್ದಾರೆ ಅದೇನೆಂದರೆ Central Government ನಿಂದ ಒಂದು Act ಬರುತ್ತದೆ ಎಂದು. ಇದನ್ನು ಹಿಂದಿನ ಮುಖ್ಯಮಂತ್ರಿಗಳ ಸಭೆಯಲ್ಲಿ ವಿರೋಧ ಮಾಡಿದ್ದೆನು. National Develp-ment Council ನಲ್ಲಿ ಬಂದಿತ್ತು. ಬಹುಶಃ ನನ್ನ ಭಾಷಣ ಎಲ್ಲದರಲ್ಲೂ ಬಂದಿತ್ತು. ಆ ಸಭೆಯಲ್ಲಿ ನಾನು ವಾದ ಮಾಡಿದ್ದೇನೆ. ನದಿ ನೀರು ಇರತಕ್ಕಂಥಾದ್ದು ಅದು ರಾಜ್ಯ ರಾಜ್ಯಕ್ಕೆ ಸೇರಿದಂಥ ಸಮಸ್ಯೆ. ಅದನ್ನು ನಾವೆ ಬಗೆಹರಿಸಿಕೊಳ್ಳುತ್ತೇವೆ. ಇದನ್ನು ಬಗೆಹರಿಸಲು ಕೇಂದ್ರದಿಂದ ಹೊಸ ಕಾನೂನೇನಾದರೂ ತಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಯಾರೂ ತಯಾರಾಗಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಇದು ನನ್ನ ಅಭಿಪ್ರಾಯ ಮಾತ್ರ ಅಲ್ಲ. ಕೇರಳದ ಮುಖ್ಯಮಂತ್ರಿ ಶ್ರೀ ನಾಯನಾರ್ ಅವರು ಅದೇ ಮಾತನ್ನು ಆಡಿದ್ದಾರೆ. ತಮಿಳುನಾಡಿನ ಮುಖ್ಯಮಂತ್ರಿಗಳು ಕೂಡ ಅದೇ ಮಾತನ್ನು ಆಡಿದ್ದಾರೆ. ಪಾಂಡಿಚೇರಿಯ ಮುಖ್ಯಮಂತ್ರಿಗಳು ಕೂಡ ಅದೇ ಮಾತನ್ನು ಆಡಿದ್ದಾರೆ ಇವತ್ತು ಅನೇಕ ಕಡೆ ನೀರಿನ ಸಮಸ್ಯೆಗಳು ಬಗೆಹರಿದಿವೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ, ಪಂಜಾಬ್ ಮತ್ತು ಹರಿಯಾಣ ಸಹ ತಮ್ಮ ಒಂದು disputಅನ್ನು ಪರಸ್ಪರ ತೀರ್ಮಾನಕ್ಕೆ ಬಂದು ಬಗೆಹರಿಸಿದ್ದಾರೆ ಎಂಬ ವಿಷಯವನ್ನು ಈ ಸದನದ ಗಮನಕ್ಕೆ ತರಲುಬಯಸುತ್ತೇನೆ. ಈಗ ಬಹುಶಃ ದೀರ್ಘಕಾಲದಿಂದ ಬಗೆಹರಿಯದೇ ಉಳಿದಿರುವ ಸಮಸ್ಯೆ ಎಂದರೆ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ. ನಮಗೆ ನ್ಯಾಯವಾಗಿ ಸಿಗಬೇಕಾದಂತಹ ಹಕ್ಕಿಗೆ ಚ್ಯುತಿ ಬರುವಂತೆ ನಮ್ಮ ಮೇಲೆ ಬಲವಂತವಾಗಿ ತರುವ ಯಾವುದೇ ಕಾನೂನನ್ನು ಒಪ್ಪುವುದಕ್ಕೆ ನಾವು ತಯಾರಾಗಿಲ್ಲವೆಂದು ಪದೆಪದೇ ಸ್ಪಷ್ಟವಾಗಿ ಹೇಳಿದ್ದೇನೆ ಮತ್ತೆ ನಡೆದಂತಹ ನಮ್ಮ ಮುಖ್ಯಮಂತ್ರಿಗಳ ಸಭೆಯಲ್ಲಿ ಸಹ ನಮ್ಮ......ಏನಿದೆ ಅದನ್ನು ಬಿಟ್ಟುಕೊಡುವುದಕ್ಕೆ ನಾವು ತಯಾರಾಗಿಲ್ಲ. ನಮಗೆ ಕಾವೇರಿ ಜಲಾಯನದಲ್ಲಿ ನೀರು ಜಾಸ್ತಿ ಬೇಕಾಗಿಲ್ಲವೆಂದು ಹೇಳಿದ್ದೇನೆ. ಕಾವೇರಿ, ಹಾರಂಗಿ, ಹೇಮಾವತಿ, ಕಬಿನಿ, ವರುಣ ಇವುಗಳಲ್ಲಿ ನಮಗೆ ಎಷ್ಟು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಅಷ್ಟನ್ನು ನಾವು ಉಪಯೋಗಿಸಿಕೊಂಡು ಜಾಸ್ತಿ ನೀರನ್ನು ನಿಮಗೆ ಬಿಟ್ಟುಕೊಡುತ್ತೇವೆ. ನಮ್ಮ ಪಾಲಿನ ನೀರನ್ನು ಬಿಟ್ಟುಕೊಟ್ಟು ನಮ್ಮ ಏರಿಯ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ವಾದವನ್ನು ನಾವು ಮಂಡಿಸಿದಾಗ ಅವರು ಅವರ ವಾದವನ್ನು ಇಟ್ಟರು. ''೨೮ ಲಕ್ಷ ಎಕರೆ ವ್ಯವಸಾಯ ಮಾಡಬೇಕಾದದ್ದು ಆಗಿಲ್ಲ. ಆದ್ದರಿಂದ ಈ ಒಂದು ಜನರಿಗೆ ನೀರು ಇಲ್ಲದಹಾಗೆ ಆಗುತ್ತವೆ. ನೀವು ಇನ್ನು ಮುಂದಕ್ಕೆ ವ್ಯವಸಾಯ ಮಾಡುವವರಿದ್ದೀರಿ. ಈ ದೃಷ್ಟಿಯಿಂದ ನೀವು ನಮಗೆ ಸ್ವಲ್ಪ ಜಾಸ್ತಿ ನೀರು ಕೊಡಬೇಕು. ಇದು ಅವರ ವಾದ. ನಾನು ಆಗ ಹೇಳಿದ 'ನೀವು ಹಕ್ಕು ಇಲ್ಲದೇ ಅದೇನೋ ಪ್ರಜಾಹುಕುಂ ತರಹ ವ್ಯವಸಾಯ ಮಾಡಿಬಿಟ್ಟಿದ್ದೀರಿ. ಈಗ ನೀವು ನಮಗೆ ಕೊಡಿ ಎಂದು ಹೇಳಿದರೆ ಕೊಡುವುದಕ್ಕೆ ಸಾಧ್ಯವಿಲ್ಲ. ನಮಗೆ ಜಾಸ್ತಿ ನೀರು ಇಟ್ಟುಕೊಂಡು ನಿಮಗೆ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ನಮ್ಮ ರೈತರಿಗೆ ನಮ್ಮ ಅಚ್ಚುಕಟ್ಟು ಪ್ರದೇಶಕ್ಕೆ ಬರುವವರೆಗೆ ನೀರನ್ನು ಉಪಯೋಗಿಸಿಕೊಂಡು ಉಳಿದ ನೀರನ್ನು ನಿಮಗೆ ಕೊಡುತ್ತೇವೆ, ಇದರಿಂದ ನಿಮಗೇನೂ ನಷ್ಟವಾಗುವುದಿಲ್ಲ ಎಂದು ಅವರಿಗೆ ಸ್ಪಷ್ಟಪಡಿಸಿದ್ದೇನೆ. I don't want to go into details. But we have made it very clear.

ಆ ಮೇಲೆ ಎರಡು–ಮೂರು ಮೀಟಿಂಗ್‌ಗಳನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರು ತಾರೀಕನ್ನು ಕೇಳಿದರು. ಅದು ನಿಜ. ಆದರೆ ನಮಗೆ ಒಪ್ಪಿಗೆಯದ ತಾರೀಖು ತಮಿಳುನಾಡಿನ ಮುಖ್ಯಮಂತ್ರಿಯವರಿಗೆ ಒಪ್ಪಿಗೆಯಾಗಲಿಲ್ಲ. ತಮಿಳುನಾಡು ಮುಖ್ಯಮಂತ್ರಿಯವರಿಗೆ ಒಪ್ಪಿಗೆಯಾದ ತಾರೀಖು ಕೇರಳದ ಮುಖ್ಯಮಂತಿಯರಿಗೆ ಒಪ್ಪಿಗೆಯಾಗಲಿಲ್ಲ. ಇಷ್ಟರಲ್ಲೇ ಕೇರಳದಲ್ಲಿ ಸರ್ಕಾರ ಬದಲಾವಣೆಯಾಗಿ, ರಾಷ್ಟ್ರಪತಿ ಆಡಳಿತ ಬಂತು. ಅಲ್ಲಿ ರಾಷ್ಟ್ರಪತಿಯವರ ಆಡಳಿತ ಬಂದಾಗ ಒಂದು

ಮೀಟಿಂಗ್‌ನ್ನು ಕೇಂದ್ರದ ನೀರಾವರಿ ಮಂತ್ರಿಗಳು ಡೆಲ್ಲಿಯಲ್ಲಿ ಒಂದು ಸಭೆಯನ್ನು ಕರೆದಿದ್ದರು, ಆಗ ನಾನು ಒಂದು ಲೆಟರ್ ಬರೆದೆ. ಈಗ ಕೇರಳದಲ್ಲಿ ರಾಷ್ಟ್ರಪತಿ ಆಡಳಿತ ಇರುವುದರಿಂದ ಯಾವುದೇ ತರಹದಲ್ಲಿ ಅಧಿಕೃತವಾಗಿ ಅವರಿಗೆ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ ಎಂದು.

ಆ ತೀರ್ಮಾನ ಕೈಗೊಳ್ಳುವುದಕ್ಕೂ ಸಾಧ್ಯತೆ ಇಲ್ಲ. ಆದುದರಿಂದ ಅಲ್ಲಿ ಜನತಂತ್ರ ಸರ್ಕಾರ ಬಂದಮೇಲೆ ನೀವು ಪುನಃ ಒಂದು ಸಭೆ ಕರೆಯಿರಿ ಎನ್ನುವ ಮಾತನ್ನು ನಾನು ಕಾಗದದ ಮೂಲಕ ತಿಳಿಸಿದೆ. ಬಹುಶಃ ಅವರು ಅದನ್ನು ಒಪ್ಪಿ ಅಲ್ಲಿಗೆ ಕೈಬಿಟ್ಟರು. ಈಗ ಪುನಃ ಒಂದು ತಿಂಗಳಲ್ಲಿ ಸಭೆ ಕರೆಯಬೇಕು ಎಂದು ಇದ್ದರು. ಈ ತಿಂಗಳಲ್ಲಿ ಅಸೆಂಬ್ಲಿ ಇದೆ ಬರಲಿಕ್ಕೆ ಕಷ್ಟವಾಗುತ್ತದೆ, ಮುಂದಿನ ತಿಂಗಳು ಕರೆಯಿರಿ ಎಂದು ಹೇಳಿದೆ. ಮುಂದಿನ ತಿಂಗಳು ಬೆಂಗಳೂರಿನಲ್ಲೇ ಸಭೆ ಕರೆಯಬೇಕು ಎಂಬ ಆಲೋಚನೆ ಇದೆ. ಅವರು ಬೆಂಗಳೂರಿನಲ್ಲಾದರೂ ಕರೆಯಲಿ, ಮದ್ರಾಸಿನಲ್ಲಾದರೂ ಕರೆಯಲಿ. ಟ್ರಿವೆಂಡ್ರಂನಲ್ಲಾದರೂ ಕರೆಯಲಿ ಅಥವಾ ಡೆಲ್ಲಿನಲ್ಲಾದರೂ ಕರೆಯಲಿ ನಾವು ಹೋಗಲೇಬೇಕಾಗುತ್ತದೆ. ಆದರೆ ತಮಗೆ ಒಂದು ಮಾತನ್ನು, ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ನಮ್ಮ ಹಕ್ಕನ್ನು, ಒಂದೇ ಒಂದು ಚೂರನ್ನು ಬಿಟ್ಟುಕೊಟ್ಟು ಒಪ್ಪಂದ ಮಾಡಿಕೊಳ್ಳುವ ಪ್ರಶ್ನೆಯಂತೂ ನಮ್ಮ ಕಾಲದಲ್ಲಿ ಬರುವುದೇ ಇಲ್ಲ. Let me make it very very clear on this issue. There is no compromise. If there is a compromise it should be on a correct and justifiable proposition. At the same time I say that we will help them if we could but not at the cost of our people and people of achkat area. So; what I wish to say is that we will co-operate with the Central Government, we will co-operative with all the neighbouring States subject to whatever our right is there it must be honoured, it must be considered and it must be recognised. Further we are prepared to agree to whatever formula which is going to be evolved by the Centre with regard to release of water either to Tamil Nadu. Kerala or Pondichery provided it satisfies our claim and request. If it is a satisfactory formula certainly we will try to co-operate and held them but in this process we will not allow our people to suffer and our stand is that at the cost of our State other States should not be benefitted. Let me make it very clear We will never allow water to the States if our people were to suffer by the decision. Here the question of pressure from any quarters does not arise. It can never be also. This is because as somebody rightly put it is the State Government's interest, it concerns the interest of the people of Karnataka and it is my duty to safeguard their interest. As rightly pointed by hon. Members no Government, no Chief Minister would agree to give away the legitimate rights of the State and its People. Even my predecessors have also taken the same stand so far as sharing of Cauvery Water is concerned. In the same way I am doing my best to protect the interest of our people. Let it be 1976 agreement or 1924 agreement, we will see that Karnataka gets its share without any hindrance and justice will be done to our people. As long as I am here, as long as this Government is in office I will assure all the hon. Members of this August House that the interest of our State and the People will be completely safe-

guarded to the maximum extent and we will never allow injustice to be done to Karnataka State.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಆ ವಿಚಾರದಲ್ಲಿ ತಮ್ಮ ಹ್ಯಾಂಡ್ಸನ್ನು ಸ್ಟ್ರೆಂತನ್ ಮಾಡುವುದಕ್ಕೆ ಯುನಾನಿಮಸ್ ಆಗಿ ಹೌಸ್‌ನ ಒಂದು ರೆಸಲ್ಯೂಷನ್ ಬೇಕಾದರೆ ಮಾಡಿ.

SRI R. GUNDU RAO.—As regards other things I have already stated the stand taken by the State Government with regard to 1924 agreement. In fact in a meeting held in our State recently we took firm stand about the Cauvery Water Dispute. I will just read out the views for the information of the House

(a) No All India common formula would meet the requirement of equity and justice in respect of every water dispute.

(b) The answer for the speedy solution of water dispute would not be for the Central Government to assume more powers. We made our stand clear and

(c) The correct approach would be that the matter has to be settled among individual States themselves by discussions. I think this will satisfy you.

(d) We urge upon the Government of India to lay down broad principles and guidelines keeping in view the views expressed by concerned parties and the Tribunals so that mutually satisfactory arrangement could be arrived at for sharing of water.

These are four things we pointed out at the NDC meeting and we have given these things in writing to the Government of India. So, there is no question of agreeing to formula which is not in the best nterest of our Karnataka State and our people. This is as for as Cauvery Water is concerned.

Then, some of the hon. Members raised some general points. The urged upon the Government for setting up of a National Water Commission. To this I woufd like to inform the House that th proposal for establishing a National Water Commission came up for discussion in the Natoinal Development Council. When it was discussed our Government took a stand to the effect that no All India Common Formula on water dispute this was our stand. In fact no final decision has been taken by the Government of India so far.

Then, hon. Member Sri K. Bhaskar Neidu said about abolition of T. B Board and further said that T, B Board should continue till the constitution of Krishna Valley Authority. I would like to inform the hon. Member that the Krishna Valley Authority will have to be established with the concurrence of three States by an Act of Parliment. However, the matter will be taken up with the Govern-

ment of India because we have no independent power to abolish T.B. Board. It is only the Government of India that can do, and not we. Our Parliament Members can take up this matter with the Government of India.

Then, hon. Member Sri Bangarappa said about the enquiry of Gopinatham tank It is true that an incident has happened. While speaking on this hon. Member has said many things. ಅಲ್ಲಿ ಕಮ್ಯೂನಿಕೇಷನ್ ಕಟ್ ಆಗಿಬಿಟ್ಟು ಯಾರೂ ಸಹ ಆ ವಿಲೇಜಿಗೆ ಹೋಗಲಿಕ್ಕೆ ಆಗದೆ, ಯಾರೂ ಕಮ್ಯೂನಿಕೇಟ್ ಮಾಡಲಿಕ್ಕೆ ಆಗದೆ, ಎಲ್ಲಾ ಕಡೆ ನೀರು ಬಂದಿದ್ದ ದೆಸೆಯಿಂದ, ಅಲ್ಲಿ ಬ್ರಿಡ್ಜ್ ಸಮೇತ ಹೋದ ದೆಸೆಯಿಂದ ಕಮ್ಯೂನಿಕೇಷನ್ ಮಾಡಲಿಕ್ಕೆ ಆಗಲಿಲ್ಲ. ನಂತರ ನನಗೆ ಕಮ್ಯೂನಿಕೇಷನ್ ಬಂದ ಎರಡು ಗಂಟೆಯೊಳಗೆ, The moment I got the information I went there. When I got down it was still raining. Inspite of that I had a long talk with all the people of that place and consoled them. I told that Government would take all relief works without any delay. Accordingly; Government took all possible steps to give relief to the people of that area, I was there for sometime to see the arrangements made. I must compliment all the Officers who were on duty and for their solid work. Just yesterday hon. Member Sri Devegowda mentioned that 20 years back one Deputy Commissioner walked about 20 miles to see the repair work of a canal area. Likewise now the Special Deputy Comissioner and many other officers and other people they walked several miles and crossed a small streem to reach the place. So also the Homeguards. and Police have done worthwhile job during that period. They were all engaged in the relief works without any rest. In fact I went to Gopinatham three times to inspect the rehabilitation and reconstruction of dam works. I was satisified with the work that was going on. In fact everyone who went there to the spot appreciated the relief works that was going on. Even many of the Opposition friends who went there appreciated the work that was going on. After the spot inspection I made a statement on the floor of the House.

ಶ್ರೀ ಎಸ್. ಬಂಗಾರಪ್ಪ.—ಎನ್‌ಕ್ವೈರಿ ಕಮಿಟಿ ಬಹಳ ಲೇಟಾಗಿ ಮಾಡಿದಿರಿ ಎಂದು ಹೇಳಿದ್ದು.

ಶ್ರೀ ಆರ್. ಗುಂಡೂರಾವ್.—ಏಕೆ ಎನ್ನುವುದನ್ನು ನಾನು ಹೇಳುತ್ತೇನೆ. ನಾನು ಅದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಎನ್‌ಕ್ವೈರಿ ಕಮಿಟಿ ಮಾಡುತ್ತೇವೆಂದು ಹೇಳಿದೆವು. ನಂತರ ಬೇರೆ ರಾಜ್ಯದವರನ್ನು ಅದರಲ್ಲಿ ಹಾಕಬೇಕು ಎಂದು ಸಲಹೆ ಬಂದಿತ್ತು. ಬೇರೆ ರಾಜ್ಯದವರ ಹತ್ತಿರ ಕರೆಸ್ಪಾಂಡೆನ್ಸ್ ಮಾಡಿದೆವು ನಿಮಗೆ ಗೊತ್ತಿದೆ, ಒಂದು ಸಾರಿ ಒಬ್ಬರನ್ನು ಕರೆದು ಅವರಿಂದ ಒಪ್ಪಿಗೆ ಬಂದು, ಕೊನೆಗೆ ಒಬ್ಬರು ಒಪ್ಪಿಕೊಂಡರು, ಒಪ್ಪಿಕೊಂಡ ಸ್ವಲ್ಪ ಸಮಯದಲ್ಲಿ ಅವರು ನನಗೆ ಆಗುವುದಿಲ್ಲ ಎಂದು ಬರೆದರು.

೭–೩೦ ಪಿ. ಎಂ.

ಆಮೇಲೆ ಇನ್ನೊಬ್ಬರನ್ನು ಹುಡುಕಬೇಕಾಯಿತು. ಹೀಗೆ ತಕ್ಷಣದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಮಾಡುವುದು ಸರ್ಕಾರದ ಕರ್ತವ್ಯ. ಎರಡನೆಯದಾಗಿ ಯಾವ ಯಾವ

ಜನಗಳನ್ನು ಹಾಕಬೇಕೆಂದು ಯೋಚನೆ ಮಾಡಿದಾಗ ಬೇರೆ ರಾಜ್ಯದವರು ಆಗುವುದಿಲ್ಲವೆಂದಾಗ ಇನ್ನೊಬ್ಬರನ್ನು ಹುಡುಕಬೇಕಾಯಿತು. ಆಮೇಲೆ ಅವರಿಗೆ ಬರೆದು ಅವರ ಒಪ್ಪಿಗೆ ಪಡೆಯಬೇಕಾಯಿತು. ಎನ್‌ಕ್ವೈರಿ ಮಾಡಬೇಕೆಂಬುದನ್ನು ಸರ್ಕಾರ ತತ್ವಶಃ ಒಪ್ಪಿತ್ತು ಮತ್ತು ನಿಷ್ಪಕ್ಷಪಾತವಾದ ಜನರನ್ನು ಅದಕ್ಕೆ ಹಾಕಬೇಕೆಂಬುದನ್ನು ಒಪ್ಪಿತ್ತು. ಆದರೆ ತಜ್ಞರು ಇದ್ದರೆ ಒಳ್ಳೆಯದಾಗುತ್ತದೆಂದು ಸರ್ಕಾರ ಅಭಿಪ್ರಾಯಪಟ್ಟಿದ್ದರಿಂದ ನಿಧಾನವಾಯಿತು. ನಿಧಾನವಾದ್ದರಿಂದ ತೊಂದರೆ ಏನು ಆಗಿಲ್ಲ. ಈಗಾಗಲೇ ಆಗುವಂಥ ಅನಾಹುತ ಆಗಿದೆ, ಮುಂದೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು ಮತ್ತು ಈಗ ಆಗಿರುವುದಕ್ಕೆ ಕಾರಣವೇನು ಎಂಬುದನ್ನು ವಿಚಾರಣೆ ಮಾಡಬೇಕಾಗುತ್ತದೆ. ಅದಕ್ಕೆ ಮೊದಲೇ ಚೀಫ್ ಇಂಜಿನಿಯರ್, ಪಿ.ಡಬ್ಲ್ಯೂ.ಡಿ. ಸೆಕ್ರೆಟರಿ, ರೆವಿನ್ಯೂ ಸೆಕ್ರೆಟರಿ, ಡೆಪ್ಯೂಟಿ ಕಮೀಷನರು, ಡಿವಿಜನಲ್ ಕಮೀಷನರು ಎಲ್ಲರೂ ಹೋಗಿ ಅಲ್ಲಿ ಸಾಕಷ್ಟು ವ್ಯವಸ್ಥೆ ಮಾಡಿದ್ದಾರೆ ಮತ್ತು ಚೀಫ್ ಇಂಜಿನಿಯರ್‌ರವರು ತಾಂತ್ರಿಕ ಲೋಪ ದೋಷ ಏನಾದರೂ ಇರಬಹುದೇ ಎಂಬ ಬಗ್ಗೆ ಪ್ರಿಲಿಮಿನರಿ ವರದಿ ತಯಾರು ಮಾಡಿದ್ದಾರೆ. ವಿಚಾರಣೆ ಮಾಡುವುದಕ್ಕೆ ಅದೇ ಇಲಾಖೆಯವರು ಇರುವುದು ಬೇಡ, ಬೇರೆಯವರು ಇರಲಿ ಎಂದು ಮಾಡಿದೆ. ಈಗ ಕಮಿಟಿ ಸೆಟ್‌ಅಪ್ ಆಗಿದೆ. ಎನ್‌ಕ್ವೈರಿ ರಿಪೋರ್ಟ್ ಬಂದತಕ್ಷಣ, ಅದರಲ್ಲಿ ಏನು ಸಲಹೆಗಳನ್ನು ಕೊಟ್ಟಿರುತ್ತಾರೆ ಅದನ್ನು ನೋಡಿ ಪರಿಶೀಲನೆ ಮಾಡಿ ಮುಂದಕ್ಕೆ ಹೋಗುತ್ತೇವೆ. ಇಷ್ಟನ್ನು ಮಾತ್ರ ಈ ಬಗ್ಗೆ ಹೇಳಬಯಸುತ್ತೇನೆ. ಇನ್ನು ಎಂ.ಐ.ಸಿ.ಸಿ. ಬೋರ್ಡ್ ಬಗ್ಗೆ ದೇವೇಗೌಡರು ಅಪ್ರಿಷಿಯೇಟ್ ಮಾಡಿದರು. ಇನ್ನೂ ಅನೇಕರು ಆ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಾರೆಂದು ತಿಳಿದುಕೊಂಡಿದ್ದೆ. ಆ ಬೋರ್ಡಿನಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಅನೇಕ ವೇಳೆ ಕಂಟ್ರಾಕ್ಟರುಗಳಿಗೆ ಕೆಲಸದ ಬಾಬ್ತು ಸುಮಾರು ೫೦-೬೦ ಲಕ್ಷ ರೂಪಾಯಿಗಳನ್ನು ಕೊಡಬೇಕಾದ ವಿಚಾರ ಬೋರ್ಡ್ ಮುಂದೆ ಬರುತ್ತದೆ. ಆಗ ನಿಷ್ಪಕ್ಷಪಾತವಾಗಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಕೆಲವು ಸಾರಿ ಅವರಿಗೆ ತೊಂದರೆಯಾದಾಗ ಹಣ ಕೊಡಬೇಕಾಗುತ್ತದೆ. ಕೆಲವು ಕಾಲದಲ್ಲಿ ನಾನಾ ಕಾರಣಗಳಿಂದ ಜಾಸ್ತಿ ಹಣವನ್ನು ಕ್ಲೈಂ ಮಾಡುವವರು ಇರಬಹುದು. ಹಿಂದೆ ಯಾವಾಗಲೂ ಮುಖ್ಯ ಮಂತ್ರಿಗಳೇ ಈ ಬೋರ್ಡಿನ ಅಧ್ಯಕ್ಷರಾಗಿರುತ್ತಿದ್ದರು. ನಾನು ಮುಖ್ಯ ಮಂತ್ರಿಯಾದ ಮೇಲೆ ಯೋಚನೆ ಮಾಡಿದೆ, ಇದರ ಬಗ್ಗೆ ನಮಗೆ ಹೆಚ್ಚಾಗಿ ಗೊತ್ತಾಗುವುದಿಲ್ಲ, ಅಲ್ಲದೆ ಮುಖ್ಯ ಮಂತ್ರಿಗಳಾದವರಿಗೆ ಬೇಕಾದಷ್ಟು ಕೆಲಸಕಾರ್ಯಗಳು ಇರುತ್ತವೆ, ಜೊತೆಗೆ ಅವರ ಜೊತೆ ಕುಳಿತು ವಿವರವಾಗಿ ಚರ್ಚೆ ಮಾಡಿ ಅಭಿಪ್ರಾಯ ಪಡೆಯಬೇಕಾದರೆ ಸಮಯ ಬೇಕಾಗುತ್ತದೆ. ಯಾರಾದರೂ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿ ಅನುಭವ ಪಡೆದಿರುವ ವ್ಯಕ್ತಿಗಳನ್ನು ನೇಮಿಸಬೇಕೆಂದು ಆಲೋಚಿಸಿ ಮೊದಲನೇ ಒಂದು ಮೀಟಿಂಗ್‌ಗೆ ಅಟೆಂಡ್ ಮಾಡಿ ಪ್ರಿಸೈಡ್ ಮಾಡಿದ್ದೆ. ಇದು ಬಹಳ ಆಳವಾಗಿ ಯೋಚನೆ ಮಾಡತಕ್ಕ ವಿಚಾರ, ಯಾವ ಮುಖ್ಯ ಮಂತ್ರಿಯೂ ೬ ಗಂಟೆಗಳ ಕಾಲ ಮೀಟಿಂಗ್‌ನಲ್ಲಿ ಕುಳಿತುಕೊಂಡು ಹೇಳತಕ್ಕ ವಿಚಾರ ಅಲ್ಲ. ತಾಂತ್ರಿಕ ತಜ್ಞರು ಇದರಲ್ಲಿ ಇದ್ದರೆ ಒಳ್ಳೆಯದು. ಅವರಲ್ಲಿ ಜನರಿಗೆ ವಿಶ್ವಾಸ ಇರಬೇಕು. ಆ ದೃಷ್ಟಿಯಿಂದ ಸಾಮಾನ್ಯ ಜನರ ಮೆಚ್ಚಿಗೆಗೆ ಪಾತ್ರರಾದಂತಹ ಶ್ರೀ ಬಾಳೆಕುಂದರಗಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಒಳ್ಳೆಯದಾಗಬಹುದೆಂದು ಹೇಳಿ ಮಾಡಿದೆವು. ಕಳೆದ ೧೦ ವರ್ಷಗಳಿಂದ ಏನೇನು ಕ್ಲೈಮ್ಸ್ ಮಾಡಿದ್ದಾರೆಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಬೇಕಾದರೆ ಮಾಹಿತಿ ಒದಗಿಸಿಕೊಡುತ್ತೇನೆ. ಈ ಒಂದು ಕೆಲಸವನ್ನು ನಾನು ಅವರಿಗೆ ವಹಿಸಿಕೊಟ್ಟ ಮೇಲೆ ಸರ್ಕಾರ ಬಾಯಿ ಮಾತಿನಲ್ಲಾಗಲಿ ಅಥವಾ ಕೈಯಿಂದಲ್ಲಾಗಲಿ ಇವತ್ತಿನವರಿಗೆ ಒಂದೇ ಒಂದು ಆದೇಶವನ್ನು ಕೊಟ್ಟಿಲ್ಲ. ಶ್ರೀ ಬಾಳೆಕುಂದರಗಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ ಮೇಲೆ ಎರಡೇ ಎರಡು ಸಾರಿ ಅವರನ್ನು ಭೇಟಿ ಮಾಡಿರುವುದು ಬೆಳಗಾಂನಲ್ಲಿ ಮಲಪ್ರಭಾ ವಾಟರನ್ನು ರಿಲೀಸ್ ಮಾಡಬೇಕಾದರೆ ಅದಕ್ಕೆ ರೇಣುಕಸಾಗರ ಎಂದು ದೇವರ ಹೆಸರಿಡಬೇಕೆಂದು ತೀರ್ಮಾನಿಸಿದ್ದರೂ ಕೂಡ ಅದಕ್ಕೆ ಬಾಳೆಕುಂದರಗಿಯವರ ಹೆಸರನ್ನೇ ಇಡಬೇಕೆಂಬ ಬೇಡಿಕೆ ಸಾರ್ವಜನಿಕರಿಂದ ಬಂತು. ಅವರು ಇಲ್ಲದಿದ್ದರೆ, ಈ ಭಾಗದ ಜನರಿಗೆ ನೀರಿನ ಆಸರೆಯೇ ಇರುತ್ತಿರಲಿಲ್ಲವೆಂದು ಒತ್ತಾಯ ಮಾಡಿದ ಮೇಲೆ ಅವರ ಹೆಸರನ್ನೇ ಇಡಲಾಯಿತು. ಅವರು ತುಂಬ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರ ಕೆಲಸವನ್ನು ಪ್ರತಿಯೊಬ್ಬರೂ ಮೆಚ್ಚುತ್ತಾರೆಂದು ಕಾಣುತ್ತದೆ. ಅವರಿಗೆ ಆ ಕೆಲಸವನ್ನು ವಹಿಸಿದ ಮೇಲೆ ನಾವು ಅವರಿಗೆ ಏನೂ ಹೇಳಬೇಕಾಗಿಲ್ಲ. ಜನರಿಗೆ ಅನುಕೂಲಕರವಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಬಹಳ ಜನರಿಗೆ ಅದು ಗೊತ್ತೇ ಇಲ್ಲ.

ಶ್ರೀ ಆರ್. ಗುಂಡೂರಾವ್.—ಆಗಲೇ ಎರಡು ವರ್ಷ ಆಯಿತಲ್ಲ, ನಿಮಗೆ ಗೊತ್ತಿಲ್ಲದಿದ್ದರೆ ಏನು ಮಾಡಲಿ. From the year 1961 to 1981 the M.I.P.C. Board met 72 times. In respect of most of the decisions orders of the Government have been communicated from time to time. During the year 1981, the Board met once i.e., on 20 and 21st August 1981. Excepting In three cases, in respect of all other cases Government Orders have been issued. Among three cases, Bennihall acqueduct and Mudkavi Tunnel are under the active consideration of the Govt. ಅದರಲ್ಲಿ ಏನಾಗಿದೆ ಎಂದರೆ, ಮಧ್ಯದಲ್ಲಿ ಡಿಸ್‌ಪ್ಯೂಟ್ ಬಂದು ಸ್ವಲ್ಪ ಕೆಲಸ ನಿಧಾನವಾಗಿತ್ತು. ಅದನ್ನು ಈಗ ಚುರುಕುಗೊಳಿಸಿದ್ದೇವೆ. ಇದರಲ್ಲಿ ಅನೇಕ ತೊಂದರೆಗಳು ಬರುತ್ತವೆ. ಅಕ್ವಿಷಿಷನ್ ಪ್ರಶ್ನೆ ಬರುತ್ತದೆ, ಮೊದಲು ಯಾವುದೋ ಒಂದೆರಡಕ್ಕೆ ಟೆಂಡರ್ ಹಾಕಿರುತ್ತಾರೆ, ಕೆಲಸವನ್ನು ಪೂರ್ತಿ ಮಾಡುವುದಕ್ಕಾಗಿರುವುದಿಲ್ಲ. ಅಷ್ಟರಲ್ಲಿ ರೇಟ್ ಜಾಸ್ತಿಯಾಗಿರುತ್ತದೆ. ಆಮೇಲೆ ರಿವೈಸ್ಡ್ ರೇಟ್ ಕೊಡಬೇಕೆಂದು ಹೇಳುತ್ತಾರೆ. ಕೆಲವು ಕಡೆ ಕಂಟ್ರಾಕ್ಟರುಗಳೇ ಓಡಿ ಹೋಗಿರುತ್ತಾರೆ. ಮತ್ತೆ ಹೊಸ ಟೆಂಡರ್ ಕರೆಯಬೇಕಾಗುತ್ತದೆ. ಟೆಂಡರ್ ಕರೆಯದೆ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಆಡಿಟ್ ಅಬ್‌ಜಕ್ಷನ್ ಬರುತ್ತದೆ. ಹೀಗೆ ನಾನಾ ತೊಂದರೆಗಳು ಇರುತ್ತವೆ. ಒಟ್ಟಿನಲ್ಲಿ, ಈಗ ಅದರ ಕೆಲಸ ಬೇಗ ಆಗುತ್ತದೆ. The decision taken by the Board is final and will be followed by the Government Order. Suggestions given by the Members in this regard will be definitely examined.

I have said, four major and five medium irrigation schemes under non-plan in Cauvery basin area. ಯಾವ ಜಲಾಶಯಗಳಿಗೂ ಸಹ ಕೇಂದ್ರ ಸರ್ಕಾರ ಸಹಾಯ ಮಾಡಿಲ್ಲವೆಂದು ಮಾನ್ಯ ಗಂಗಾಧರನ್‌ರವರು ಹೇಳಿದರು.

ಶ್ರೀ ಹೆಚ್. ಗಂಗಾಧರನ್.—ಕಾವೇರಿ ಬೇಸಿನ್ನಿಗೆ ಮಾತ್ರ.

ಶ್ರೀ ಆರ್. ಗುಂಡೂರಾವ್.—ಕಾವೇರಿ ಬೇಸಿನ್‌ನಲ್ಲಿರುವ ಹೇಮಾವತಿ, ಕಬಿನಿ, ಹಾರಂಗಿ ಯೋಜನೆಗಳಿಗೆ ಇರತಕ್ಕ ತೊಂದರೆ ಏನೆಂದರೆ ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್. ಎರಡನೆಯದು, ನಾನ್ ಪ್ಲಾನ್. ಎಲ್ಲಿಯವರೆಗೆ ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ತೀರ್ಮಾನವಾಗುವುದಿಲ್ಲ ಅಲ್ಲಿಯವರೆಗೆ ಪ್ಲಾನಿಂಗ್ ಕಮೀಷನ್‌ನವರು ಅಪ್ರೂವಲ್ ಕೊಡುವುದಿಲ್ಲ, ಆದರೂ ಸಹ ಕರ್ನಾಟಕದಲ್ಲಿ ಪ್ರಾರಂಭ ಮಾಡಿದರು. I must compliment them. People who were in power have taken a bold decision. ಅವರು ಅವತ್ತು ಆ ತೀರ್ಮಾನ ಕೈಗೊಳ್ಳದಿದ್ದರೆ ಇಷ್ಟಾದರೂ ಕೆಲಸ ಆಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಡಿಸ್‌ಪ್ಯೂಟ್ ತೀರ್ಮಾನ ಆಗಿಲ್ಲ, ಅದು ಆಗದೆ ನೀರು ಬರುತ್ತಿರಲಿಲ್ಲ. ದೇವೇಗೌಡರು ಹೋದರೂ ಅದು ಆಗುತ್ತಿರಲಿಲ್ಲ. ಈಗ ನಾವು ಬರುವ ಆಗಸ್ಟ್ ವೇಳೆಗೆ ರೆಡಿ ಮಾಡಿ ನೀರು ಬಿಡುತ್ತಿದ್ದೇವೆ. ಆದ್ದರಿಂದ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸುಮಾರು ೮ ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ. ಅಷ್ಟಾದರೂ ಅವಕಾಶವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಯಾವುದೇ ಹಂತದಲ್ಲೂ ಇದಕ್ಕೆ ಹಣ ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿರಬಹುದು, ಹಿಂದೆ ಮುರಾರ್ಜಿ ದೇಸಾಯಿ ಅವರು ಆಗಿದ್ದಾಗ ಇರಬಹುದು, ಚರಣಸಿಂಗ್ ಅವರು ಪ್ರಧಾನಿಯಾಗಿದ್ದಾಗಿರಬಹುದು, ಯಾರಿದ್ದಾಗಲೂ ಇಂಥ ಪ್ರಾಜೆಕ್ಟ್‌ಗಳಿಗೆ ಅಡ್‌ಹಾಕ್ ಗ್ರ್ಯಾಂಟ್ ಕೊಡುವುದಕ್ಕಾಗುವುದಿಲ್ಲ. ಬೇರೆ ಕಾರಣಕ್ಕೆ ಬೇಕಾದರೆ ನಾವು ಪಡೆಯಬಹುದು ಮೊನ್ನೆ ಉಡುಪಿಯಲ್ಲಿ ಹೆಚ್ಚು ಮಳೆಯಾಗಿ ಅನಾಹುತ ವಾಯಿತು. ಆಗ ಮೂರು ಲಕ್ಷ ರೂಪಾಯಿ ಜಾಸ್ತಿ ಗ್ರ್ಯಾಂಟ್ ಕೊಡಿ ಎಂದು ಕೇಳಿದರೆ ಕೊಡುತ್ತಾರೆ. ಅಂಥ ಸಂದರ್ಭದಲ್ಲಿ ನಮ್ಮ ಪ್ರಭಾವವನ್ನು ಬೀರಿ ಕೇಳಿಕೊಳ್ಳೋಣ. ಅಂಥ ಅನಾಹುತಕ್ಕೆ ಜಾಸ್ತಿ ಕೊಡಿ ಎಂದರೆ ಕೊಡುತ್ತಾರೆ. ಮೊದಲು ೧ ಲಕ್ಷ ರೂಪಾಯಿ ಕೊಟ್ಟಿದ್ದರು, ನಂತರ ಕೇಳಿ ಕೊಟ್ಟಾಗ ಮೂರು ಲಕ್ಷ ರೂಪಾಯಿಗಳನ್ನು ಪರಿಹಾರ ನಿಧಿಯಿಂದ ಕೊಟ್ಟರು. ಆದರೆ ಪ್ಲಾನ್‌ಗೆ ಸೇರದೇ ಇರುವಂಥ ಪ್ರಾಜೆಕ್ಟ್‌ಗಳಿಗೆ ಹಣ ಕೊಡಿ ಎಂದರೆ ಕೊಡುವುದಿಲ್ಲ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು, ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಒಪ್ಪುವುದಿಲ್ಲ. It is just impossible.

No Prime Minister can give and no Chief Minister can take. The only way is, we have to come to some understanding at some level and see that the dispute is settled once for all. ಆದಾದಮೇಲೆ ಪ್ಲಾನಿಂಗ್ ಕಮಿಷನ್‌ನವರು ಅಪ್ರೂವ್ ಮಾಡುತ್ತಾರೆ. ಆಗ ಇಷ್ಟೇ ನೀರಿನ ಹಕ್ಕು ಎಂಬುದು ತೀರ್ಮಾನ ವಾಗುತ್ತದೆ. ಅಣೆಕಟ್ಟೆಗೆ ಎಷ್ಟು ನೀರು ಬೇಕಾಗುತ್ತದೆ, ಎಷ್ಟು ಕೆನಾಲ್ ಏರಿಯಾ ಇದೆ ಇದನ್ನೆಲ್ಲಾ ನೋಡಿ ಕೊಡುತ್ತಾರೆ. ತುಮಕೂರಿನ ಕುಡಿಯುವ ನೀರಿನ ಯೋಜನೆಗೆ ಕಾವೇರಿ ಬೇಸಿನ್‌ನಿಂದ ನೀರನ್ನು ತರಬೇಕೆಂಬ ಆಲೋಚನೆ ಇದೆ. ಮಾನ್ಯ ಎಚ್. ಟಿ ಕೃಷ್ಣಪ್ಪನವರು ನಾಗಮಂಗಲ ಬಹಳ ಬರಗಾಲದಿಂದ ಕೂಡಿದೆ, ಅಲ್ಲಿಗೆ ಸಹಾಯ ಮಾಡಬೇಕು ಎಂದು ಕೇಳುತ್ತಿದ್ದಾರೆ. ಕೇಂದ್ರ ಸರ್ಕಾರ ಹಣ ಕೊಡಲಿಲ್ಲ ಎಂದು ನಾವು ನಿಷ್ಠೂರ ಮಾಡಕೂಡದು. ಒಂದು ಮಾತ್ರ ನಾವು ಮೆಚ್ಚ ಬೇಕು, ಅವರು ನಮಗೆ ತಡೆಯಾಜ್ಞೆ ಕೊಡಲಿಲ್ಲ. ಅದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕು. ೧೯೬೭ರಲ್ಲಿ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ನಮ್ಮ ಊರಿನಲ್ಲಿ ಬಂದು ಹಾರಂಗಿ ಯೋಜನೆ ಶಂಕುಸ್ಥಾಪನೆ ಮಾಡಿದರು. ನಾನು ಆಗ ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದೆ. ಅದಕ್ಕೆ ತಡೆಯಾಜ್ಞೆ ತರಬೇಕೆಂದು ತಮಿಳುನಾಡು ಸರ್ಕಾರ, ಕೇರಳ ಸರ್ಕಾರ ಸರ್ವ ಪ್ರಯತ್ನ ಮಾಡಿತು. ಆದರೂ ಆಗ ಸ್ಟೇ ಕೊಡಲಿಲ್ಲ. ಪ್ಲಾನಿಂಗ್ ಕಮಿಷನ್‌ನವರು ಕೊಡಬಹುದಾಗಿತ್ತು. Till the water dispute is over, you should consider about any dam ಎಂದು ಹೇಳಿದ್ದರೆ ನಾವು ಏನೂ ಮಾಡುವುದಕ್ಕಾಗುತ್ತಿರಲಿಲ್ಲ. ಆ ರೀತಿ ತಡೆಯಾಜ್ಞೆ ಕೊಡದೆ ಕರ್ನಾಟಕಕ್ಕೂ ಹಕ್ಕಿದೆ ಎಂಬುದನ್ನು ಪರೋಕ್ಷವಾಗಿ ತೋರಿಸಿಕೊಟ್ಟಿದ್ದಾರೆ. ಇಲ್ಲದೇ ಹೋಗಿದ್ದರೆ financial sqveeze-ಮಾಡಬಹುದು. ೧೯೬೭ ರಿಂದ ಇಲ್ಲಿಯವರೆಗೆ ಖರ್ಚು ಮಾಡಿದರಲ್ಲಾ ಅದೆಲ್ಲಾ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್. ಎಷ್ಟು ಹಣವನ್ನು ಯೋಜನೇತರ ವೆಚ್ಚಗಳಿಗೆ ಖರ್ಚು ಮಾಡಬೇಕೆಂದು ಹೇಳುತ್ತಿದ್ದಾರೆ ಅದೇ ಹಣವನ್ನು ಬೇರೆ ಕೆಲಸಗಳಿಗೆ ಮಾಡಬಹುದಿತ್ತು. ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದರು. ಅದರ ಬಗ್ಗೆ ಬಹಳ ಜನ ಬಹಳ ರೀತಿಯಲ್ಲಿ ವ್ಯಾಖ್ಯಾನ ಮಾಡಿದರು. ನಾನು ಆ ರೀತಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಒಂದು ಒಳ್ಳೆಯ ದೃಷ್ಟಿಯನ್ನಿಟ್ಟುಕೊಂಡು ಅದನ್ನು ಮಾಡಿದ್ದರು. ವಿಶ್ವಬ್ಯಾಂಕಿನಿಂದ ಸಾಲ ತರುತ್ತೇನೆ ಎಂದೋ, ಎಲ್.ಐ.ಸಿ.ಯಿಂದ ಸಾಲ ತರುತ್ತೇನೆ ಎಂದೋ ಏನೋ ಅವರ ಭಾಷಣದಲ್ಲಿ ಹೇಳಿದ್ದರು. ಅಥವಾ ಗಲ್ಫ್ ಕಂಟ್ರಿಯಿಂದಲೋ ಹಣ ತಂದು ಮಾಡು ತ್ತೇನೆಂದು ಹೇಳಿದ್ದರು. The intention is not bad. We have to onalyse the things. Just because the Hon. Member Sri S. Bangarappa is on the otherside to-day, it is not correct to say that whatever he did is wrong. I am not a person to say like this. The intention is good. Every road should be linked, every link road should be conneceted ಎಂದು ಮಾಡಿದ್ದರು. ನಮಗೆ ಬ್ಲಾಕ್ ಟ್ಯಾಪ್ ಮಾಡಬೇಕು ರಸ್ತೆ ಮಾಡಬೇಕು, ಬಸ್ ಬರುತ್ತಿಲ್ಲ, ಗಾಡಿ ಹೋಗುವುದಕ್ಕಾಗುತ್ತಿಲ್ಲ ಎಂದು ಇರಬೇಕಾದರೆ in his wisdom he might have thought to have a beautiful master plan ೯೨೦ ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್ ಮಾಡಿ ಉದ್ದೇಶವನ್ನು ಹೇಳಿದ್ದರು. ಹಾರಂಗಿ ಮತ್ತು ಹೇಮಾವತಿ ಯೋಜನೆ ಯನ್ನು ಮಾಡಿದಾಗಲೂ ಆಗಿನ ಮುಖ್ಯ ಮಂತ್ರಿಗಳು ಪೂರ್ತಿ ಮಾಡೇ ಮಾಡುತ್ತೇವೆ, ಕೇಂದ್ರ ಸರ್ಕಾರ ಹಣ ಕೊಡಲಿ ಕೊಡದಿರಲಿ, ಮುಗಿಸುವುದು ನಮ್ಮ ಕರ್ತವ್ಯ ಎಂದು ಹೇಳಿದ್ದಾರೆ. ಅದೇರೀತಿ ಯೋಜನೆ ಹಾಕಿದ್ದರು. ಆದಾಯಿತೋ, ಇಲ್ಲವೋ ಅದು ಬೇರೆ ವಿಚಾರ. ಮೊದಲು ಅವರು ಲೋಕೋಪಯೋಗಿ ಮಂತ್ರಿಗಳಾಗಿದ್ದರು, ಈಗ ಬೇಳೆಯುವರು ಅದೇ ಇಲಾಖೆ ಮಂತ್ರಿಗಳಾಗಿದ್ದಾರೆ. ಪುಣ್ಯಕ್ಕೆ ಆ ಇಲಾಖೆ ಮಂತ್ರಿಗಳಾಗಿರುವ ಇಬ್ಬರೂ ಒಂದೇ ಜಿಲ್ಲೆಗೆ ಸೇರಿದವರಾಗಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹೇಮಾವತಿ, ಕಾವೇರಿ ಜಲಾನಯನ ಭೂಮಿಯಲ್ಲಿರತಕ್ಕ ಎಲ್ಲಾ ನೀರಾವರಿ ಯೋಜನೆಗೂ ಯಥೇಚ್ಛವಾಗಿ ಹಣ ಕೊಟ್ಟಿದ್ದಾರೆ. ಆಡಳಿತಾತ್ಮಕ ಹುಕ್ಕು ಸಿಗಬೇಕೆಂಬ ದೃಷ್ಟಿಯಿಂದ ಹೇಳಿದ್ದೇನೆ. ಕೊರತೆಯಿರುವುದು ಹಣಕ್ಕಲ್ಲ, ಸಿಬ್ಬಂದಿ ಇಲ್ಲ. ದಯಮಾಡಿ ಸಿಬ್ಬಂದಿ ಯನ್ನು ಕೊಡಿ.

ಶ್ರೀ ಆರ್. ಗುಂಡೂರಾವ್.—ಸಿಬ್ಬಂದಿ ಕೊಡೋಣ. ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್, ಎಗ್ಸಿಕ್ಯುಟೀವ್ ಇಂಜಿನಿಯರ್ ಇಲ್ಲ ಎಂದು ಹೇಳಿದರೆ ಅದು ಅಡ್ಮಿನಿಸ್ಟ್ರೇಟೀವ್ ಸೆಟಪ್, ಅದನ್ನು ಮಾಡೋಣ ನಾನು ಜನರಲ್ ಪ್ರಿನ್ಸಿಪಲ್ ಬಗ್ಗೆ ಹೇಳುತ್ತಿದ್ದೇನೆ. ಒಳ್ಳೆಯ ಕೆಲಸವನ್ನು ಯಾರೇ ಮಾಡಿರಲಿ ಅದನ್ನು ನಾವು ಮೆಚ್ಚೋಣ. ಕರ್ನಾಟಕ ಆಗಬೇಕು ಎಂದು ಮಾಡಿದ್ದನ್ನು ತಾವು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಹನುಮಂತಯ್ಯನವರು ವಿಧಾನ ಸೌಧವನ್ನು ಕಟ್ಟಿದರು. ಅವರು ಅದನ್ನು ಕಟ್ಟುವಾಗ ಬೇಕಾದಷ್ಟು ಟೀಕೆಗಳು ಬಂದವು. ಯಾರ ಮೇಲೂ ಬರದಷ್ಟು ಟೀಕೆ ಟಿಪ್ಪಣಿಗಳು ಅವರಮೇಲೆ ಆಯಿತು. ಅದರ ಬಗ್ಗೆ ತನಿಖೆ ನಡೆಸಲು ಗೋರವಾಲ ಸಮಿತಿಯನ್ನೂ ನೇಮಕ ಮಾಡಿದ್ದರು. ಆದರೆ ಇವತ್ತು ಕರ್ನಾಟಕ ರಾಜ್ಯದ ಜನ ಏನು ಹೇಳುತ್ತಾರೆ ? ''ಪುಣ್ಯಾತ್ಮ ಎಂಥ ಕಟ್ಟಡ ಕಟ್ಟಿಸಿ ಹೋದನಲ್ಲ'' ಎಂದು ರಾಜ್ಯದ ಜನತೆ ಹೇಳುತ್ತಿದೆ. ಆದರೆ ವಿಧಾನ ಸೌಧವನ್ನು ಕಟ್ಟಿದಂಥ ಹನುಮಂತಯ್ಯನವರಿಗೆ ಮುಖ್ಯ ಮಂತ್ರಿಯಾಗಿ ವಿಧಾನ ಸೌಧದಲ್ಲಿ ಕೂರುವುದಕ್ಕಾಗಲಿಲ್ಲ. ಅದು ನಮ್ಮ ಕೈಯಲ್ಲಿ ನಿಮ್ಮ ಕೈಯಲ್ಲಿ ಇಲ್ಲ. ಅದನ್ನು ಗಂಗಾಧರ್ ಅವರು ಮತ್ತು ಗಟ್ಟಿ ಚಂದ್ರಶೇಖರ್ ಅವರಿಗೆ ಬಿಡುತ್ತೇನೆ ಅವರು ಬಸವೇಶ್ವರರ ತತ್ವವನ್ನು ಹೇಳುತ್ತಾರೆ. ಏನು ಗಟ್ಟಿ ಚಂದ್ರಶೇಖರ್ ಅವರೇ, ಏನೋ ಹೇಳುತ್ತೀರಲ್ಲ ?

ಶ್ರೀ ಗಟ್ಟಿ ಚಂದ್ರಶೇಖರ್.--

"Asmaan mein jitne tare hai utane shatru rahakebhi ;
Rahim ka raham rahane taq ek bal bhi ukhad nahi sakata."

(Meaning : Even if enemies are equalling to the number of stars existing in a galaxy ;

So long as His blessings are there, nobody can pull down him.

ಶ್ರೀ ಜೆ. ಎಚ್. ಪಟೇಲ್.—ಬಸವೇಶ್ವರ ಹೇಳಿದ್ದಾ ಇದು ?

ಶ್ರೀ ಗಟ್ಟಿ ಚಂದ್ರಶೇಖರ್.—ಇಪ್ಪತ್ತೊಂದು ಕಾರ್ಯಗಳನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಅನಿವಾರ್ಯ ಐದು ವರ್ಷ ಇರಲೇಬೇಕಾದುದು, ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.— ಯಾರಿಗೆ ಎಷ್ಟು ದಿವಸ ಅದೃಷ್ಟ ಇರುತ್ತದೋ ಅಷ್ಟು ದಿವಸ ಅಲ್ಲಿರುತ್ತಾರೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಹನುಮಂತಯ್ಯನವರು ಒಂದು ದಿವಸ ನನ್ನ ಛೇಂಬರ್ ಬಂದಾಗ ಎಷ್ಟೋ ವರ್ಷದ ಮೇಲೆ ನಾನು ಮುಖ್ಯಮಂತ್ರಿಗಳ ಛೇಂಬರ್‌ಗೆ ಬರುತ್ತಿದ್ದೇನೆ ಎಂಬ ಮಾತನ್ನು ಹೇಳಿದರು. ಅವರ ದೂರದೃಷ್ಟಿಯನ್ನು ನಾವು ಮೆಚ್ಚಬೇಕು. ಆವತ್ತು ಖರ್ಚು ಮಾಡಿದಕ್ಕಿಂತ ೨೫ ಪಾಲು ಹೆಚ್ಚು ಹಣವನ್ನು ಈಗ ಖರ್ಚು ಮಾಡಿದರೂ ಕೂಡ ಇಂಥ ವಿಧಾನ ಸೌಧವನ್ನು ಕಟ್ಟುವುದಕ್ಕಾಗುವುದಿಲ್ಲ. ಅಂಥ ಕಟ್ಟಡವನ್ನು ಅವರು ಕಟ್ಟಿ ನಮಗೆ ಬಿಟ್ಟುಹೋಗಿದ್ದಾರೆ. ಟೀಕೆ ಮಾಡುವವರು ಟೀಕೆ ಮಾಡುತ್ತಲೇ ಇರುತ್ತಾರೆ. ಅದಕ್ಕೆ ನಾವು ಹೆಚ್ಚು ಗಮನ ಕೊಡಬಾರದು. ಒಳ್ಳೆಯ ಕೆಲಸ ಮಾಡುತ್ತಿದ್ದೇವೆ ಎಂದು ನಮ್ಮ ಮನಸ್ಸಿಗೆ ಅನ್ನಿಸಿದರೆ ಅದನ್ನು ಮಾಡುವ ಕಡೆ ನಮ್ಮ ದೃಷ್ಟಿ ಹರಿಸಬೇಕು. ಅಧಿಕಾರದಲ್ಲಿ ಇರುವವರ ಮೇಲೆ ಟೀಕೆ ಬರುವುದು ಸ್ವಾಭಾವಿಕ. ಅದನ್ನು ನಿಲ್ಲಿಸುವುದಕ್ಕೆ ಯಾರ ಕೈಯಲ್ಲೂ ಸಾಧ್ಯವಿಲ್ಲ. ಟೀಕೆಯಲ್ಲಿ ಎಷ್ಟು ಹುರುಳಿದೆ, ಎಷ್ಟು ಸತ್ಯ ಇದೆ ಎಂಬುದನ್ನು ತಿಳಿದುಕೊಂಡು ಒಳ್ಳೆಯದನ್ನು ತೆಗೆದುಕೊಂಡು ಕೆಟ್ಟದ್ದನ್ನು ಬಿಡಬೇಕು ಕ್ಷೀರತಾಳೀಯ ನ್ಯಾಯದಂತೆ ಅದು ತಪ್ಪು. ಇದು ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಯಾರ ಕೈಯಲ್ಲೂ ಅದನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲ. ಹಿಟ್ಲರ್ ತಾನು ಮಾಡಿದ್ದು ಸರಿ ಎಂದು ಕೊನೆಯುವರೆಗೂ ವಾದ ಮಾಡುತ್ತಲೇ ಬಂದ, ಅದೇರೀತಿ ರೂಸ್‌ವೆಲ್ಟ್, ನೆಪೋಲಿಯನ್ ಬೋನಪಾರ್ಟೆ, ಜಾರ್ ಚಕ್ರವರ್ತಿ, ಇವರೆಲ್ಲಾ ತಾವು ಮಾಡಿದ್ದು ಸರಿ ಎಂತಲೇ ಕೊನೆಯುವರೆಗೆ ವಾದಿಸಿದರು. ಫ್ರಾನ್ಸಿನ ಚಕ್ರವರ್ತಿ ಲೂಯಿ-೧೬ ಇದ್ದ ಅವನ ಹೆಂಡತಿ ಏನು ಹೇಳಿದಳು. ಲೂಯಿಯ ಗೌರ್ನರೋ, ಅಥವಾ ಅವರ ಪ್ರೈವೇಟ್ ಸೆಕ್ರೆಟರಿಯೋ ಈ ತರಹ ತೊಂದರೆಯಾಗಿದೆ ಎಂದಾಗ ಲೂಯಿ ಹೆಂಡತಿ ಹೇಳುತ್ತಾಳೆ, When the people are hungry

for bread. why should we not eat Cake. In their thinking and wisdom, they have done certain things. Some people may like it and some people may not. John F. Kennedy was admired all over the world, but he was shot dead. There is no medicine for it. ಹನುಮಂತಯ್ಯನವರು ಎಷ್ಟೇ ಟೀಕೆ ಬಂದರೂ ವಿಧಾನ ಸೌಧವನ್ನು ಕಟ್ಟಿ ನಮಗೆ ಬಿಟ್ಟುಹೋಗಿದ್ದಾರೆ. ಅದು ಇಂದು ಶಾಶ್ವತವಾಗಿದೆ. ಅದೇ ಪ್ರಕಾರ ಕಾವೇರಿ ಜಲಾನಯನ ಯೋಜನೆ ಮಾಡಿದವರನ್ನೂ ಮೆಚ್ಚುತ್ತೇವೆ. ಚನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ "Appropriate action at appropriate time" – ಎಂದು ಹೇಳುತ್ತಿದ್ದರು. He is also a good administrator whose modalities, idea of implementation is totally different. But, the real zeal, the real intenrion the real will was there with everyone.

ಅದೇ ಪ್ರಕಾರ ಪ್ರತಿಯೊಬ್ಬರು ಮಾಡಿದ್ದಾರೆ. ಬಂಗಾರಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಸುಮಾರು ೯00 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದರು. ನಮ್ಮ ಹತ್ತಿರ ದುಡ್ಡು ಇಲ್ಲದೇ ಅದನ್ನು ತೆಗೆದುಕೊಂಡಿಲ್ಲ ; ಬೇರೆಯವರು ಬಂದಾಗ ಮಾಡೇ ಮಾಡುತ್ತಾರೆ. ಅದನ್ನು ನಾವು ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ. It is not our intention. After all roads are not built for a particular persons. Roads and communications are for the people particularly the village people. We must appreciate good things. If you feel like only criticising, than I have absolutely no answer. So what is the ultimate yardstick again ? Let the people decide what is wrong and what is good. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ದುಡ್ಡು ಕೊಟ್ಟಿಲ್ಲ ; ಹಣದ ಕೊರತೆಯಿದೆ ಎಂದು ಹೇಳಿದ್ದಾರೆ. ಆ ರೀತಿ ಏನೂ ಇಲ್ಲ ತೃಪ್ತಿಯಾಗಿ ದುಡ್ಡು ಕೊಟ್ಟಿದ್ದೇವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಲಪ್ರಭಾ ಮತ್ತು ಘಟಪ್ರಭಾಗೆ ೫–೫ ಕೋಟಿ ಕೊಟ್ಟಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಮ್ಮ ಪ್ರಧಾನ ಮಂತ್ರಿಯವರು ಹೇಳಿದ ಮೇಲೆ ೫ ಕೋಟಿ ಜಾಸ್ತಿ ಕೊಟ್ಟಿದ್ದೇವೆ. Again we will give five crores more. You please let me know. I was glad when you sent a letter at the time of our Cabinet Meeting which was held at Belgaum. Whether you agree with holding a Cabinet Meeting at Belgaum or not, is not our question. But as a representative of that area and as a Member of this august House, you did write a letter. We have taken care of that letter. We have provided money. Certain works are in progress. Wherever you find it is not so, you are always welcome to write to me personally and I shall see to it. Let us correct whatever lapses that are there, Afterall there is no prestige for lapeses. We will set them right. Afterall we are human beings. Nobody will say 'I am not honest'. Since he is there, he is honest. It is his choice. I cannot blame him or I cannot charge him. No. Certainly not. ನಾರಾಯಣಪುರ ಅಣೆಕಟ್ಟಿನಿಂದ ಇನ್ನು ೧೫ ದಿವಸದಲ್ಲಿ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇಲ್ಲಿ ಯಾರ ಕಾಲದಲ್ಲಿ ನೀರು ಬಿಟ್ಟರು ಎನ್ನುವುದು ಪ್ರಶ್ನೆಯಲ್ಲ. ಜನರಿಗೆ ಅನುಕೂಲವಾಗುವುದು ಮುಖ್ಯ. ಮೊನ್ನೆ ದಿವಸ ಮಾತನಾಡುತ್ತಾ ; ಗುಂಡೂರಾಯರಿಗೆ ಕತ್ತಿ, ಗುರಾಣಿ ಕೊಟ್ಟರು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರೇ ಮಂತ್ರಿಗಳಾಗಿದ್ದಾಗ, ಕರ್ತವ್ಯ ದೃಷ್ಟಿಯಿಂದ ಡಿಫೆಂಡ್ ಮಾಡಿಕೊಂಡಿದ್ದಾರೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್. —ಅವರು ಸನ್ಮಾನ ಮಾಡಿಸಿಕೊಂಡಿದ್ದಾರೆ.

ಶ್ರೀ ಆರ್. ಗುಂಡೂರಾವ್ —ಅವಕಾಶ ಬಂದಾಗ ಎಲ್ಲರೂ ಮಾಡಿಸಿಕೊಳ್ಳುತ್ತಾರೆ. ಮಾನ್ಯ ಬಂಗಾರಪ್ಪನವರು ವಿಧಾನ ಪರಿಷತ್ತಿನಲ್ಲಿ ಈ ರೀತಿ ಹೇಳಿದ್ದಾರೆ.

''ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸುಬ್ಬಯ್ಯನವರು, ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು, ಅನೇಕ ಜನ ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇತ್ತೀಚಿಗೆ ಸನ್ಮಾನ ಸಮಾರಂಭಗಳಲ್ಲಿ ಗಧೆ, ಕತ್ತಿ, ಗುರಾಣಿ ಕೊಡುತ್ತಿದ್ದಾರೆ ಎನ್ನತಕ್ಕ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಅನಾವಶ್ಯಕ, ಸನ್ಮಾನ ಸಮಾರಂಭಗಳಿಗೆ ಎಷ್ಟೋ ಜನ ಅಭಿಮಾನದಿಂದ ಬರುವುದು ಹೊಸದೇನೂ ಅಲ್ಲ. ಸ್ಪೆಷಲ್ ಕೂಡ ಅಲ್ಲ. ಕತ್ತಿ, ಗುರಾಣಿ, ಗಧೆ ಇವುಗಳನ್ನು ಕೊಡುತ್ತಿರುವುದು ನಮ್ಮ ಮುಖ್ಯ ಮಂತ್ರಿಗಳ ಸನ್ಮಾನದೊಂದಿಗೆ ಪ್ರಾರಂಭವಾಗಿಲ್ಲ ಮಾಜಿ ಮುಖ್ಯ ಮಂತ್ರಿಗಳಿಗೂ ಹಿಂದೆ ಕತ್ತಿ, ಗುರಾಣಿ, ಗಧೆಗಳನ್ನು ಸನ್ಮಾನ ಸಮಾರಂಭಗಳಲ್ಲಿ ಕೊಟ್ಟಿದ್ದಾರೆ ; ಅವರು ಸ್ವೀಕರಿಸಿದ್ದಾರೆ, ಆದರೆ, ಶ್ರೀಮಾನ್ ಗುಂಡೂರಾವ್ ಅವರದು ಪ್ರದರ್ಶನಕ್ಕೆ ಬಂದಿದೆ.

ಶ್ರೀ ಎಂ. ರಘುಪತಿ.—ಹೊಸ ಸರ್ಕಾರ ಬಂದಿದೆಯೆಂದು ವಿಜಯೋತ್ಸವಕ್ಕಾಗಿ ಸನ್ಮಾನ ಸಮಾರಂಭಗಳಲ್ಲಿ ಸಾರ್ವಜನಿಕರು ಕತ್ತಿ, ಗುರಾಣಿ, ಗಧೆಯನ್ನು ಈಗಿನ ಮುಖ್ಯ ಮಂತ್ರಿಯವರಿಗೆ ಕೊಟ್ಟಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಒಂದು ರೋಲಿಂಗ್ ಗದೆಯನ್ನು ಏತಕ್ಕೆ ಮಾಡಿಸಿಡಬಾರದು.

ಶ್ರೀ ಎಸ್. ಬಂಗಾರಪ್ಪ.—ಹೌದು ರೋಲಿಂಗ್ ಗಧೆಯನ್ನು ಮಾಡಿಸಿಬಿಟ್ಟರೆ ನಾಳೆ ಒಂದು ವೇಳೆ ಶ್ರೀಮಾನ್ ಚಂದ್ರೇಗೌಡರು ಮುಖ್ಯ ಮಂತ್ರಿಗಳಾದಾಗ ರೋಲಿಂಗ್ ಗಧೆಯನ್ನು ಸ್ವೀಕಾ ರಮಾಡಬಹುದು. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದೆ ಶ್ರೀಮಾನ್ ದೇವರಾಜ ಅರಸರಿಗೆ ಕರ್ನಾಟಕ ಎಂದು ಹೆಸರಿಟ್ಟಿದ್ದಕ್ಕಾಗಿ ಗಧೆಯನ್ನು ಕೊಟ್ಟರು ಎಂದು ಹೇಳಿದರು ಗದೆಯನ್ನು ಯಾವ ಅರ್ಥದಲ್ಲಿ ಕೊಡುತ್ತಾರೆಂಬುದನ್ನು ನಾವು ನೀವು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲ.

ಶ್ರೀ ಎನ್. ಎನ್. ಕಲ್ಲಣ್ಣನವರ್.—ಆ ತರಹ ಸನ್ಮಾನ ನಿಮಗೇಕೆ ಇಲ್ಲ ?

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ ಸಮಾರಂಭಕ್ಕೆ ನನ್ನನ್ನೂ ಕರೆದಿದ್ದರು. ಆದರೆ, ಕತ್ತಿ, ಗುರಾಣಿ, ಗಧೆಗಳನ್ನು ಕೆಲವರು ತೆಗೆದುಕೊಳ್ಳಬಹುದು. ಕೆಲವರು ಬಿಡಬಹುದು. ಅದನ್ನು ನಾನು ವೈಯುಕ್ತಿಕವಾಗಿ ಒಪ್ಪುವುದಿಲ್ಲ. ಆದರೆ, ಕತ್ತಿ, ಗುರಾಣಿ, ಗಧೆಗಳನ್ನು ಸನ್ಮಾನ ಸಮಾರಂಭಗಳಲ್ಲಿ ಸ್ವೀಕರಿಸುವುದನ್ನು ಶ್ರೀಮಾನ್ ದೇವರಾಜ ಅರಸ್ ಅವರು ಒಪ್ಪಿದ್ದರು. ಶ್ರೀಮಾನ್ ಗುಂಡೂರಾವ್ ಅವರು ಒಪ್ಪಿದ್ದಾರೆ. ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಕೊಡುವವರು ಉಂಟು, ತೆಗೆದುಕೊಳ್ಳುವವರು ಉಂಟು. ಆದ್ದರಿಂದ ಕತ್ತಿ, ಗುರಾಣಿ, ಗಧೆಯನ್ನು ಸನ್ಮಾನ ಸಮಾರಂಭಗಳಲ್ಲಿ ಮುಖ್ಯಮಂತ್ರಿಗಳು ಸ್ವೀಕಾರ ಮಾಡುವುದನ್ನು ದೊಡ್ಡ ವಿಷಯವನ್ನಾಗಿ ಮಾಡುವುದು ಅಷ್ಟು ಸಮಂಜಸವಲ್ಲ.

ಶ್ರೀ ಜೆ. ಹೆಚ್. ಪಟೇಲ್. ಮೂರು ತಿಂಗಳಿಗೆ ೩೦ ಗಧೆಗಳನ್ನು ತೆಗೆದುಕೊಂಡಿದ್ದೀರಿ.

ಶ್ರೀ ಆರ್. ಗುಂಡೂರಾವ್.—ನಾನು ವೈಯುಕ್ತಿಕವಾಗಿ ಯಾರ ಮೇಲೂ ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಮೂಲ ಸಮಸ್ಯೆಗಳನ್ನು ಬಿಡಿಸುವುದು ಕಷ್ಟದ ಕೆಲಸ ಯಾರೇ ಅಧಿಕಾರಕ್ಕೆ ಬಂದರೂ ಸನ್ಮಾನ ಸಮಾರಂಭಗಳನ್ನು ಮಾಡುವಂತ ಜನ ಇದ್ದೇ ಇರುತ್ತಾರೆ.

೫-೦೦ ಪಿ.ಎಂ.

ಮತ್ತೊಬ್ಬ ಸದಸ್ಯರಾದ ಶ್ರೀಮಾನ್ ಕಲ್ಲಣ್ಣನವರ್ ಅವರು 'ಆ ತರಹದ ಸನ್ಮಾನ ನಿಮಗೇತಕ್ಕಿಲ್ಲ' ಎಂದು ಕೇಳಿದಾಗ ನೀವು ಈ ರೀತಿ ಉತ್ತರ ಕೊಟ್ಟಿದ್ದೀರಿ. ''ಸನ್ಮಾನ ಸಮಾರಂಭಕ್ಕೆ ನನ್ನನ್ನೂ ಕರೆದಿದ್ದರು. ಆದರೆ ಕತ್ತಿ ಗುರಾಣಿ, ಗದೆ, ಇವುಗಳನ್ನು ಕೆಲವರು ತೆಗೆದುಕೊಳ್ಳಬಹುದು, ಕೆಲವರು ಬಿಡಬಹುದು, ಅದನ್ನು ನಾನು ವೈಯುಕ್ತಿಕವಾಗಿ ಒಪ್ಪುವುದಿಲ್ಲ. ಆದರೆ ಕತ್ತಿ, ಗುರಾಣಿ ಗದೆಗಳನ್ನು ಸನ್ಮಾನ ಸಮಾರಂಭಗಳಲ್ಲಿ ಸ್ವೀಕರಿಸುವುದನ್ನು ದೇವರಾಜ ಅರಸರೂ ಒಪ್ಪಿದ್ದರು, ಗುಂಡೂರಾಯರೂ

ಒಪ್ಪಿದ್ದಾರೆ, ಅದನ್ನು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಕೊಡುವವರುಂಟು, ತೆಗೆದು ಕೊಳ್ಳುವವರುಂಟು. ಆದ್ದರಿಂದ ಸನ್ಮಾನ ಸಮಾರಂಭಗಳಲ್ಲಿ ಮುಖ್ಯಮಂತ್ರಿಗಳು ಸ್ವೀಕಾರ ಮಾಡುವುದನ್ನು ದೊಡ್ಡ ವಿಷಯಂ ಎಂದು ತಿಳಿದುಕೊಂಡು ಮಾತನಾಡುವುದು ಸಮಂಜಸವಾದುದಲ್ಲ."

ಶ್ರೀ ಎಸ್. ಬಂಗಾರಪ್ಪ.—ಅದು ಮೂರನೇ ತಿಂಗಳೊಳಗೆ ಹೇಳಿರಬೇಕು.

ಶ್ರೀ ಆರ್. ಗುಂಡೂರಾವ್.—ಅದನ್ನು ತಪ್ಪು ಎಂದು ನಾನು ಹೇಳುವುದಿಲ್ಲ. ಮೂರು ತಿಂಗಳಿಗೆ ಮೂವತ್ತು ಕತ್ತಿ ಕೊಟ್ಟರೆ ೬ ತಿಂಗಳಿಗೆ ೬೦ ಕತ್ತಿ ಆಗಬಹುದು.

ಶ್ರೀ ಎಸ್. ಬಂಗಾರಪ್ಪ.—ಬರೀ ಡಜನ್‌ಗಟ್ಟಲೆ ತೆಗೆದುಕೊಳ್ಳುತ್ತಾ ಹೋದರೆ ಗತಿ ಏನು ?

ಶ್ರೀ ಆರ್. ಗುಂಡೂರಾವ್.—ಅದೇನೇ ಇರಲಿ. ಆ ಪ್ರಶ್ನೆ ಬೇರೆ. ಕೆಲವು ಮೂಲ ತತ್ವ ಏನಿದೆ ಅದನ್ನು ನಾನು ಹೇಳುತ್ತಿದ್ದೇನೆ. ದೇವರಾಜ ಅರಸು ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ನಾನು ಇವತ್ತಿನವರೆಗೂ ಅವರ ಬಗ್ಗೆ ವೈಯಕ್ತಿಕವಾಗಿ ಮಾತನಾಡಿಲ್ಲ. ಕೆಲವು ವಿಷಯದ ಬಗ್ಗೆ ಟೀಕೆ ಮಾಡಿರಬಹುದು. ಆದರೆ ಅವರು ಮಾಡಿದ ಕೆಲಸದ ಬಗ್ಗೆಯಾಗಲೀ, ವೈಯಕ್ತಿಕವಾಗಿಯಾಗಲೀ ನಾನು ಟೀಕೆ ಮಾಡಿಲ್ಲ. ಏಕೆಂದರೆ ಅದರಲ್ಲಿ ನಾವೆಲ್ಲಾ ಪಾಲುದಾರರಾಗಿದ್ದೇವೆ. We are jointly responsible for the omissions and commissions. The degre may be different. I was there in 1973. You may have joined in 1976. It is a different thing. But we are, as a council of Ministers responsible for all the omissions and commissions of our leader then. We have to accept it. ಯಾವಾಗ ಒಂದು ವಿಷಯ ನಮ್ಮ ಮನಸ್ಸಿಗೆ ಹಿಡಿಯುವುದಿಲ್ಲ ಎಂದು ಬಿಟ್ಟುಹೋಗುತ್ತೇವೆ ನನಗಿಷ್ಟವಿಲ್ಲ, ನಾನು ಜೊತೆಯಲ್ಲಿರುವುದಿಲ್ಲ ಎಂದು ಬಿಟ್ಟುಹೋಗುತ್ತೇವೆ ಆಗ ನಾವು ನಮಗೂ ಅದಕ್ಕೂ ಸಂಬಂಧ ಇಲ್ಲ ಎಂದು ತಪ್ಪಿಸಿಕೊಳ್ಳಬಹುದು. ಆದರೆ ಎಲ್ಲಿಯವರೆಗೆ ನಾವು ಜೊತೆಯಲ್ಲಿರುತ್ತೇವೆ ಆಗ ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ಅದಕ್ಕೆ ಎಲ್ಲರೂ ಜಂಟೀ ಜವಾಬ್ದಾರರು. ಅದಕ್ಕೆ ಬರೀ ಒಬ್ಬ ಮುಖ್ಯಮಂತ್ರಿ ಅಥವಾ ಒಂದು ಸರ್ಕಾರ ಮಾತ್ರ ಕಾರಣವಲ್ಲ, ಇಡೀ ಪಕ್ಷ, ಇಡೀ ಮಂತ್ರಿಮಂಡಲ ಜವಾಬ್ದಾರಿಯಾಗುತ್ತದೆ. ನೀರಾವರಿ ಬಗ್ಗೆ ಮಾನ್ಯ ಬೊಮ್ಮಾಯಿಯವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಖಂಡಿತ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಗತ ಮಾಡುತ್ತೇವೆ. ಕಾರಂಜ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ೪ ಕೋಟಿ ರೂಪಾಯಿ ಜಾಸ್ತಿ ಕೊಡುತ್ತೇವೆ.

ಶ್ರೀ ಎ. ಬಿ. ಪಾಟೀಲ್.—ಗುಲ್ಬರ್ಗ ಜಿಲ್ಲೆಯಲ್ಲಿ ಕೃಷ್ಣ ಬೇಸಿನ್ ಅಮರ್ಜ ಬಗ್ಗೆ ಹೇಳಲಿಲ್ಲ.

ಶ್ರೀ ಆರ್. ಗುಂಡೂರಾವ್.—ಅದಕ್ಕೂ ಕೊಡೋಣ. ಕಾರಂಜ ಯೋಜನೆಗೆ ಈಗ ನಾಲ್ಕು ಕೋಟಿ ರೂಪಾಯಿ ಕೊಟ್ಟಿದ್ದೇವೆ. ಕೆಲವು ಸದಸ್ಯರು ಅವರವರ ಕ್ಷೇತ್ರದ ಬಗ್ಗೆ ಮಾತನಾಡಿದ್ದಾರೆ. ವರುಣಾ ನಾಲೆ ಬಗ್ಗೆ ಕೆಲವು ಜನರು ಮಾತನಾಡಿದ್ದಾರೆ. ಮಾನ್ಯ ಚೌಡಯ್ಯನವರು ಕೆ.ಆರ್.ಎಸ್. ಮಾಡ್ರನೈಸೇಷನ್ ಕೆಲಸದ ಬಗ್ಗೆ ಹೇಳಿದರು. ವರುಣಾ ನಾಲೆ ಬಗ್ಗೆ ಸಾಕಷ್ಟು ಖರ್ಚು ಮಾಡಬೇಕೆಂದು ಈಗಾಗಲೇ ಯೋಚನೆ ಮಾಡಿದ್ದೇವೆ, ಈಗಾಗಲೇ ಆ ಬಗ್ಗೆ ಕೆಲಸ ಪ್ರಾರಂಭ ಮಾಡುತ್ತಿದ್ದಾರೆ. ವರುಣಾ ನಾಲೆಗೆ ಎಷ್ಟು ಹಣ ಕೊಡಬೇಕೋ ಅಷ್ಟು ಹಣವನ್ನೂ ಕೊಡುತ್ತೇವೆ. Let me assure you, Under no circumstances the work will be delayed or stopped. Let me make it clear to you. K.R.S. Modernisation is only beautification. ಎರಡನ್ನೂ ಜೊತೆಯಲ್ಲೇ ಮಾಡುತ್ತೇವೆ. ಮಾನ್ಯ ಚೌಡಯ್ಯನವರು ವರುಣಾ ನಾಲೆ ಜೊತೆಯಲ್ಲೇ ಕೆ.ಆರ್.ಎಸ್. ಕೆಲಸವನ್ನೂ ತೆಗೆದುಕೊಳ್ಳಬೇಕೆಂದು ಏನು ಹೇಳಿದ್ದಾರೆ ಅದೇ ರೀತಿ ಟನಲ್ ಮಾಡುವುದರಲ್ಲಿ ಕತ್ತಿ, ಗುರಾಣಿ ಜೋಡಿಸುವುದರಲ್ಲಿ ವರುಣಾ ನಾಲೆಗೆ ಎಷ್ಟು ವೇಗವಾಗಿ ಮಾಡುತ್ತೇವೋ ಅಷ್ಟೇ ವೇಗವಾಗಿ ಕೆ.ಆರ್.ಎಸ್. ಗೂ ಮಾಡುತ್ತೇವೆ. ಚಿಕ್ಕಹೊಳೆ ಮತ್ತು ಸುವರ್ಣಾವತಿ ಯೋಜನೆಯನ್ನು ೪೦ ಲಕ್ಷ ಹಣ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇವೆ. ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಹೇಳುವುದಾದರೆ ನಿಮಗೆಲ್ಲಾ ಗೊತ್ತಿರುವ ಹಾಗೆ for U.K.P. we have provided the highest amount i.e., Rs. 54 Crores.

Money will not be a problem. And let me assure you, money will not be a reason for delaying the work.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲಸ ನಿಧಾನವಾಗುತ್ತಿದೆ.

ಶ್ರೀ ಆರ್ ಗುಂಡೂರಾವ್.—ಅದಕ್ಕೆ ನಾನಾ ಕಾರಣಗಳಿವೆ. ಹಣದ ಪ್ರಶ್ನೆಯಲ್ಲ. ಹಣವನ್ನು ಪ್ರೊವೈಡ್ ಮಾಡುತ್ತಾ ಬರುತ್ತಿದ್ದೇವೆ. ಬೇರೆ ಕಾರಣಗಳಿಂದ ಕೆಲಸ ಸ್ವಲ್ಪ ನಿಧಾನವಾಗುತ್ತಿದೆ. ಅದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, To solve the problem we have taken action. First of all procurement of Steel and Cement was the problem. ಸಿಮೆಂಟ್ ಮತ್ತು ಸ್ಟೀಲಿನ ಅಭಾವ ಕೆಲವು ದಿವಸಗಳಿತ್ತು. ಕೆಲವು ಸಾರಿ ಕೆಲವು ಇಂಜಿನಿಯರುಗಳು ದುರುಪಯೋಗ ಮಾಡಿದರು. ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. Prosecution is going on. Some people are prosecuted. We have taken up all those works. And now we are in a position to see that all the delayed works will be stepped up.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಹತ್ತು ಜನ ಕಂಟ್ರಾಕ್ಟರುಗಳು ಬಸಾಪುರದಲ್ಲಿ ಮಾಡ ಬೇಕಾದ ಚಾನಲ್ ಕೆಲಸವನ್ನು ನಿಲ್ಲಿಸಿದ್ದಾರೆ. ಅಲ್ಲಿ ಅವರು ಕೆಲಸ ಮಾಡುವ ತರಹ ಮಾಡಿ.

ಶ್ರೀ ಆರ್. ಗುಂಡೂರಾವ್.—ಮಾಡಿಸೋಣ. ಬೊಮ್ಮಾಯಿಯವರು ನಾರಾಯಣಪುರ ಡ್ಯಾಂ ಬಗ್ಗೆ ಹೇಳಿದ್ದಾರೆ. Regarding change of earthen dam to masonary dam at Narayanpur. It was proposed to construct earthen dam. Priliminary works were done. Subsequently the World Bank preseribed higher discharge which necessitated extension of spill-way. The extra cost of this work is only about 38 lakhs. So the dam is more safe on account of the additional capacity to discharge flood waters. Upper Bhardra Project, we are taking up and the project investigation is being taken up. The Project is envisaged to provide irrigation to about 2,50,000 acres. Particularly in Tumkur and Chitradurga Districts ಅಧ್ಯಕ್ಷರನ್ನೂ ಸೇರಿಸಿ ಪ್ರತಿಯೊಬ್ಬ ಆ ಭಾಗದ ಜನರ ಬೇಡಿಕೆಯಾಗಿತ್ತು. Let us investigate the whole thing and let us find out. It takes some time, Let the investigation be completed.

ಶ್ರೀ ಜೆ. ಎಚ್. ಪಟೇಲ್.—ಭದ್ರಾ ಯೋಜನೆ ಬಗ್ಗೆ ನಾನು ಸಾಕಷ್ಟು ಸಾರಿ ಹೇಳಿದ್ದೇನೆ. ಶಿವಮೊಗ್ಗ ಮಂತ್ರಿಮಂಡಲದ ಸಭೆಗೆ ಬಂದಿದ್ದಾಗ, ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಮೆಮೋರ್ಯಾಂಡಮ್ ಕೂಡ ಕೊಟ್ಟಿದ್ದೆ. ಭದ್ರಾ ಪ್ರಾಜೆಕ್ಟ್‌ನಲ್ಲಿ ಕೆಳಗಿರತಕ್ಕ ಚಾನಲ್ ರಿಪೇರಿ ಮಾಡದೇ ಹೋದರೆ ೩೦–೪೦ ಸಾವಿರ ಎಕರೆಯಷ್ಟು ಟೈಲ್ ಎಂಡರ್ಸ್‌ಗೆ ನೀರು ಸಿಗದೆ ತೊಂದರೆಯಾಗುತ್ತದೆ. ಭದ್ರಾ ಅಣೆಕಟ್ಟನ್ನು ತುರ್ತು ಸ್ಥಿತಿಯಲ್ಲಿ ರಿಪೇರಿ ಮಾಡಿಸಿದ್ದೀರಿ. ಆದರೆ ಕಾಲುವೆ ರಿಪೇರಿ ಮತ್ತು ಮಾಡ್ರನೈಸೇಷನ್ ಮಾಡದೇ ಹೋದರೆ ಅಲ್ಲಿ ನಿರಂತರವಾಗಿ ಜಗಳ ಇರುತ್ತದೆ. ಈಗ ಕೊಟ್ಟಿರುವ ಹಣ ಭದ್ರಾ ಪ್ರದೇಶ ದಲ್ಲಿ ಕೊಟ್ಟಿರುವ ಎಲ್ಲಾ ಡಿವಿಷನ್‌ಗೆ ಸಾಕಾಗುವುದಿಲ್ಲ ಅದನ್ನು ರಿವೈಸ್ ಮಾಡಿಸಬೇಕು. ಸಂಬಂಧ ಪಟ್ಟ ಚೀಫ್ ಇಂಜಿನಿಯರ್ ಮತ್ತು ಸೆಕ್ರೆಟರಿಯವರನ್ನು ಕೇಳಿದರೆ ಅವರು ಆ ಬಗ್ಗೆ ಹೇಳುತ್ತಾರೆ. ಹಿಂದೆ ೫೦ ಕೋಟಿ ರೂಪಾಯಿಗಳನ್ನು ಅದಕ್ಕೆ ಖರ್ಚು ಮಾಡಿದರೆ ಕೆಲಸ ಪೂರ್ತಿ ಮಾಡುವುದಕ್ಕೆ ಸಾಧ್ಯ ಎಂಬ ಒಂದು ಸಲಹೆ ಇತ್ತು. ಆದರೆ ಅದಕ್ಕೆ ೫ ಲಕ್ಷವನ್ನೂ ಕೊಟ್ಟಿಲ್ಲ. ಆದ್ದರಿಂದ ಭದ್ರ ಬಗ್ಗೆ ನೋಡ ಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್.—ನೀವು ಹೇಳಿದಂತೆ ಅಧಿಕಾರಿಗಳನ್ನು ಕರೆಸಿ ಮಾತನಾಡಿ ಸ್ವಲ್ಪ ಜಾಸ್ತಿ ಹಣ ಕೊಟ್ಟು ಮಾಡಿಸುವ ವ್ಯವಸ್ಥೆ ಮಾಡಿಸುತ್ತೇವೆ. ಅದು ಒಳ್ಳೆಯ ಸಲಹೆ. ಮಂಜರ ಬಗ್ಗೆ ಇನ್‌ವೆಸ್ಟಿಗೇಷನ್ ಆಗುತ್ತಿದ್ದು ಅದು ಮುಗಿದ ತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಶೇರ್‌ಖಾನ್.—ಅಪ್ಪರ್ ಮಲ್ಲಾಮಾರಿ ಮತ್ತು ಲೋಯರ್ ಮಲ್ಲಾಮಾರಿ ಬಗ್ಗೆ ಸ್ವಲ್ಪ ನೋಡಬೇಕು.

ಶ್ರೀ ಎ. ಬಿ. ಪಾಟೀಲ್.—ಹೈದರಾಬಾದ್ ಕರ್ನಾಟಕದ ಬಗ್ಗೆ ಯಾರೂ ಮಾತನಾಡಿಲ್ಲ. ಅಲ್ಲಿ ಬೆಣ್ಣೆತುರ ಮತ್ತು ಮುಲ್ಲಾಮಾರಿ ಯೋಜನೆಗೆ ಕಡಿಮೆ ಹಣ ಕೊಟ್ಟಿದ್ದಾರೆ. ಅದನ್ನು ಜಾಸ್ತಿ ಮಾಡ ಬೇಕು.

ಶ್ರೀ ಆರ್. ಗುಂಡೂರಾವ್.—ಖಂಡಿತ ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ,

ಶ್ರೀ ಎ. ಬಿ. ಪಾಟೀಲ್.—ಅದಕ್ಕೆ ೧೦ ಲಕ್ಷ ಮಾತ್ರ ಕೊಟ್ಟಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಾನು ಜನರಲ್ಲಾಗೆ ನೀರಾವರಿ ನೀತಿ ಬಗ್ಗೆ ಹೇಳುತ್ತಿದ್ದೇನೆ. ಇನ್ನು ಕೆಲವು ಪ್ರಾಜೆಕ್ಟ್‌ಗಳು ಎಲ್ಲೆಲ್ಲಿ ನಿಧಾನವಾಗುತ್ತಿವೆಯೋ ಅದರ ಬಗ್ಗೆಯೂ ನೋಡುತ್ತೇವೆ, ಈಗಾಗಲೇ ಕೆಲವು ಯೋಜನೆಗಳ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರ ಪ್ರದೇಶದಲ್ಲಿ ಯಾವುದಾದರೂ ನಿಧಾನವಾಗುತ್ತಿದ್ದರೆ ಅದನ್ನು ನನ್ನ ಗಮನಕ್ಕೆ ತನ್ನಿ.

ಶ್ರೀ ಎ. ಬಿ. ಪಾಟೀಲ್.—ಬೆಣ್ಣೆತುರಾ ಮತ್ತು ಮುಲ್ಲಾಮಾರಿ ಯೋಜನೆಗೆ ಹೆಚ್ಚಿಗೆ ಹಣ ಕೊಡಬೇಕೆಂದು ಹೇಳುತ್ತಿದ್ದೇನೆ.

SRI R. GUNDURAO.—Government is aware of that thing. I would see that it is done. In order to expedite the work on Malprabha and Ghataprabha action has been taken to release additional funds to the tune of Rs. 5 crores.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಲೆಟರ್ ನ್ನೂ ಕೂಡ ಬರೆದಿದ್ದೇನೆ. ಕಡಜಫಟ್ಟು ಆಗದೆಹೋದರೆ ಮುಂದೆ ಸುಮಾರು ಒಂದೂವರೆ ಸಾವಿರ ಎಕರೆಗೆ ನೀರೇ ಹೋಗುವುದಿಲ್ಲ. ಇದರ ಬಗ್ಗೆ ಡಿಸಿಶನ್ ಕೂಡ ಆಗಿದೆ. ೧೯೮೧ ರಿಂದ ತಗೆದುಕೊಂಡಿಲ್ಲ. I have xplained the details of work to be taken up by the Government ಡಿಸಿಸನ್ ತೆಗೆದುಕೊಂಡಿದ್ದರೂ ಯಾವುದು ಮಾಡಿಲ್ಲ. ಮಲಪ್ರಭಾ ತೆಗೆದುಕೊಳ್ಳಬೇಕೆಂದು ಡಿಸಿಶನ್ ತೆಗೆದುಕೊಂಡು ಹಣವನ್ನು ಒದಗಿಸಬೇಕೆಂದು ಹೇಳಿದರು ೨೫ ೩೦ ಕೋಟಿ ಹಣವನ್ನು ಕೊಡಬೇಕೆಂದು ನಿಮ್ಮ ಲೆಕ್ಕಾಚಾರದಂತೆ ಹೇಳಿವರು ಅದರ ಬಗ್ಗೆ ಏನು ಹೇಳಲಿಲ್ಲ; ೫ ಕೋಟಿ ರೂಪಾಯಿಗಳನ್ನು ಕೊಟ್ಟರೆ ಏನೂ ಆಗುವುದಿಲ್ಲ.

SRI R. GUNDU RAO.—There were som· technical problems in Bennehore Project. There was some slow progress also. Now that the technical problems have been solved we will intensify the work. We have released additional fnnds to the tune of Rs. 5 crores and we will give top priority to see that the work is completed early. I do agree with the hon. Members that this is a very important projeet There is no second thought about it.

SRI V. V. PATTAR.—So far as Ghataprabha Left Bank Canal is concerned lining work has not been completely done.

SRI R. GUNDU RAO.—I will come to power projects. The total installed capacity in 1978-79 was 1,145 Mwitts and during the last three years the installed capacity has increased by 595 Mwtts registering an increase of more than 50%. So we are an a sound footing. Further we are taking necessary steps to see that the same tempo is

maintained. Then energy generated during 1978-79 was 5879 million units while during 1981-82 it is 7,190 million units registering an increase of 23% to enable us to reduce the rate of power cut in our State. It is a credit to our Government. Then, hon. Member Sri Devegowda said the Power Corporation and the Karnataka Electricity Board should not work as parallel organizations and they should be merged. Sir, for the information of this House I must say that many of the States in fact are asking us about the present set up of the Karnataka Power Corporation and the Karnataka State Electricity Board. They have appreciated the present system and its functions. So let us continue the present system ie, productivity on one side and the distribution on the other. Then, I agree with one suggestion made by the hon. Member Sri H. D. Devegowda that the Chairman of the Electricity Board should be on the Board of Members in the Karnataka Power Corporation and the Maneging Director of the Power Corporation should be on the Board of Members in the Karnataka Electricity Board. I agree with this principle. At present the MD and the Chairman of the KSEB are not representing the organizations only the Chief Engineers are on the Board. We will consider this, As regards present set up of the KSEB and the Power Corporation we feel that it is better to continue the same for some more time as the system is appreciated by one and all and it is also working will. Let us continue, let us not alter it

Then, I come to the finalisation of seniorty list of Officers of various departments and posting of Officers. In several departments the seniority list has not been finalised. The reason is so many writ petitions questioning the list published by the Government are pending before the High Court. You know the time taken for the disposal of these seniority list cases naturally the department is unable to finalise the list till they hear from the High Court. By the time the department finalise the list the Officers/Officials would have retired. In this process sometimes Government is unable to take positive decision in regard to posting of senior officers as Head of Departments. To quote an instance when we took decision to post an IAS Officer as the Director of Horticulture there was some opposition from the employees of the department. One group was against posting of an IAS Officer as the Director and another group was in favour of having an IAS Officer as the Head of the Department In between this if we take a decision they go to the court and obtain Stay. ನಿಮ್ಮ ಕಡೆಯುವರು ಬೇಡ ಸ್ವಾಮಿ ಎಂದರೆ ಅವರ ಕಡೆಯುವರು ಬೇಕು ಸ್ವಾಮಿ, ಹೀಗೆ ಐ.ಎ.ಎಸ್. ಐ ಪಿ.ಎಸ್. ನವರನ್ನು ಹಾಕುವಬಗ್ಗೆ ಹೈಕೋರ್ಟಿನಿಂದ ತೀರ್ಮಾನವಾಗಿ ಬರುವವರೆಗೂ ಹಾಗೆಯೇ ಇರುತ್ತದೆ. ಆ ತೀರ್ಮಾನ ಕೋರ್ಟಿನಿಂದ ಇಲ್ಲಿಯುವರೆಗೆ ಬರುವ ಹಾಗೆ ಇಲ್ಲ. ನಾವು ಇಲ್ಲಿ

ಆ ಜಾಗವನ್ನು ಭರ್ತಿಮಾಡುವಂತೆಯೂ ಇಲ್ಲ. ಈರೀತಿಯಾಗಿದೆ. ಇದು ನಮ್ಮ ಕಾಲದಲ್ಲಿ ಆದದ್ದಲ್ಲ. ಇದು ಕಂಟಿನ್ಯೂಯಸ್‌ಆಗಿ ಬರುತ್ತದೆ. ಎಕ್ಸಪ್ಟ್ ಮರಿಗೌಡರು ಆದಮೇಲೆ ಎಲ್ಲರೂ ಐ.ಎ.ಎಸ್. ಐ.ಪಿ.ಎಸ್. ನವರೇ ಬರುತ್ತಿರುವುದು. ಅವರು ಏನು ಕೆಲಸ ಮಾಡಿದರು ಅದು ಉದ್ದೇಶಕ್ಕೋಸ್ಕರ ವಲ್ಲ. ಅದಕ್ಕೂ ಕಾರಣಗಳು ಇವೆ. ಆದುದರಿಂದ.

Then, hon. Member Sri Bommai said that in the case of rural electrification its tempo has come down earlier 1,000 villages were elebtrified and now it has come down to 500 villages per year.

SRI S. R. BOMMAI.—I said from 1960 to 1971 it was 1,000 villages...

ಶ್ರೀ ಆರ್. ಗುಂಡೂರಾವ್.—ಎಲೆಕ್ಟ್ರಿಫಿಕೇಶನ್, ಕೆಲವು ಸಂದರ್ಭದಲ್ಲಿ ನಿಮಗೆ ಬೇಕಾದರೆ ೧೯೭೫-೭೬ ರಿಂದ ಕೊಡುತ್ತೇನೆ. Let us not go deep into the matter...

೧೯೭೭-೭೮ರಲ್ಲಿ ೬೦೦ ಟಾರ್ಜೆಟ್ ಇತ್ತು. ೭೩೫ ಅಚೀವ್ ಮಾಡಿದ್ದೇವೆ. ೧೮ ಸಾ ರ ಪಂಪ್‌ಸೆಟ್‌ಗಳ ಟಾರ್ಜೆಟ್ ಇತ್ತು ಒಟ್ಟು ೧೯೧೬೦ ಅಚೀವ್ ಮಾಡಿದ್ದೇವೆ. ೧೯೭೮-೭೯ರಲ್ಲಿ ೬೫೦ ಟಾರ್ಜೆಟ್ ಇದ್ದು ೮೯೭ ಅಚೀವ್ ಮಾಡಿದ್ದೇವೆ. ಅದರಲ್ಲಿ ೨೦ ಸಾವಿರ ಪಂಪ್‌ಸೆಟ್ಟುಗಳಿಗೆ ಕೊಟ್ಟಿದ್ದೇವೆ. ಒಟ್ಟು ೧೮,೨೧೦ ಅಚೀವ್ ಮಾಡಿದ್ದೇವೆ. ೧೯೭೯-೮೦ರಲ್ಲಿ ೬೫೦ ನಮ್ಮ ಟಾರ್ಜೆಟ್ ಇತ್ತು. ೭೮೩ ಅಚೀವ್ ಮಾಡಿದ್ದೇವೆ. ೨೦ ಸಾವಿರ ಪಂಪ್ ಸೆಟ್ಟು, ಒಟ್ಟು ೧೨,೮೨೬ ಅಚೀವ್ ಮಾಡಿದ್ದೇವೆ. ೧೯೮೦-೮೧ ರಲ್ಲಿ ೬೫೦ ಟಾರ್ಜೆಟ್ ಇತ್ತು ಅದರಲ್ಲಿ ೭೩೦ ಅಚೀವ್ ಮಾಡಿದ್ದೇವೆ. ೨೦ಸಾವಿರ ಪಂಪ್‌ಸೆಟ್ಟು, ಒಟ್ಟು ೧೮೬೫೫ ಅಚೀವ್ ಮಾಡಿದ್ದೇವೆ. ೧೯೮೧-೮೨ರಲ್ಲಿ ೧ ಸಾವಿರ ಟಾರ್ಜೆಟ್ ಇತ್ತು, ೧೪೧೨ ಅಚೀವ್ ಮಾಡಿದ್ದೇವೆ. ೨೦ ಸಾವಿರ ಪಂಪ್‌ಸೆಟ್ಟು ಒಟ್ಟು ೨೨,೫೫೩ ಅಚೀವ್ ಮಾಡಿದ್ದೇವೆ. We have maintained the tempo, ೧೯೮೨-೮೩ರಲ್ಲಿ ೨ಸಾವಿರ ಟಾರ್ಜೆಟ್ ಇತ್ತು ರೂರಲ್ ಎಲೆಕ್ಟ್ರಿಫಿಕೇಶನ್ ಪಂಪ್‌ಸೆಟ್ಟು ೨೫ಸಾವಿರ ಇದೆ ಸಧ್ಯದಲ್ಲಿ ಎಷ್ಟು ಮಾಡಲಿಕ್ಕೆ ಸಾಧ್ಯವಿದೆ ಎಂಬುದು ಮುಂದೆ ಗೊತ್ತಾಗುತ್ತದೆ. ೧೯೭೫ ರಿಂದ ೮೨ರವರೆಗೆ ಈ ಅಂಕಿಅಂಶಗಳನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದು ೧೯೬೦ ರಿಂದ ೧೯೭೨ರವರೆಗೆ ೬ ಸಾವಿರ ಚಿಲ್ಲರೆ ಅಚೀವ್ ಮಾಡಿದ್ದರೆ ಆದೇ ೧೯೭೨ ರಿಂದ ೧೯೭೮ರವರೆಗೆ ೫ ಸಾವಿರ ಚಿಲ್ಲರೆ ಅಚೀವ್ ಮಾಡಿದ್ದಾರೆ ೧೯೭೫ ರಿಂದ ಕೆಳಗಿಳಿಯುತ್ತಾ ಬಂದಿದೆ ಎಂದು ಹೇಳಿದ್ದೇನೆ. ಹಿಂದೆ ಒಂದು ವರ್ಷಕ್ಕೆ ೧ ಸಾವಿರ ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಶನ್ ಮಾಡಿದ್ದಾರೆ. ಮುಂದೆ ಕಡಿಮೆಯಾಗುತ್ತಿದೆ ಎಂದು ಹೇಳಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಐದುನೂರು ಜಾಸ್ತಿಯಾಗಿರಬಹುದು, ಐದುನೂರು ಕಡಿಮೆಯಾಗಿರಬಹುದು. May be the tempo is slowed down but it is completely maintained ನಿಮಗೆ ಗೊತ್ತಿರುವ ಹಾಗೆ ಕನ್ಸಿಷನ್ ಕೊಟ್ಟು ಒಂದೇ ರೇಟ್‌ನಲ್ಲಿ ಕೊಟ್ಟಿರುವುದಕ್ಕೆ ಎಲ್ಲರೂ ಸ್ವಾಗತ ಮಾಡಿದ್ದಾರೆ. Everyone has welcomed it. It has also been studied other States as to under what pattern we have given, perhaps they may also adopt it. ಆಮೇಲೆ ಭಾಗ್ಯಜ್ಯೋತಿ ಸ್ಕೀಮ್ ಏನಿದೆ ಇದರಲ್ಲಿ ನಾವು ಸಿಟ್ಟಿಂಗ್ ಪ್ರಾಜೆಕ್ಟ್‌ನಿಂದ ೨೦ ಸಾವಿರ ಮನೆಗಳಿಗೆ ಕೊಡಬೇಕೆಂದು ಯೋಜನೆ ಮಾಡಿಕೊಂಡಿದ್ದೇವೆ. Setting the target of 20,000 every year ಸ್ವಲ್ಪ ಹಣ ಜಾಸ್ತಿ ಖರ್ಚಾಗುತ್ತದೆ. ಈ ವರ್ಷ ಜಾಸ್ತಿ ಕೊಡಬೇಕೆಂದು ಯೋಜನೆ ಮಾಡಿದ್ದೇವೆ. From this, we will try to double it. We are going to give to 55,330 households. ಇನ್ನು ಕೆಲವು ಉಳಿದುಕೊಳ್ಳಬಹುದು. During 1982-83 we propose to increase the number of connections to 50,000. It is a very big jump. I think you will appreciate it. During 1982-83 we increased the number of connections to 50,000. Literally it will bring to the lives of the rural community Most of the weaker section houses will be covered in this 50,000

target. The expenditure for this will be roughly about 1.7 crores for this scheme we have taken decision. Any other suggestion is welcome.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ನಾನು ಆಗಲೇ ಹೇಳಿದ್ದೇನೆ. Most of the instances have been answered through Calling Attention including that of KGE firing and Nagasamudra firing. It is not the intention of the police to un-necessary resert to Golibar. It is only to see that anti-social elements should not take advantage of and create problems. ಮಾನ್ಯ ಜೆ.ಎಚ್. ಪಟೇಲ್‌ರವರು ಕೆ.ಜಿ.ಎಫ್. ಬಗ್ಗೆ ಹೇಳಿದರು. ನಾನು ಹೋದಮೇಲೆ ನೀವು ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದೀರಿ ಬಹಳ ಸಂತೋಷ. ಯಾವ ಸನ್ನಿವೇಶದಲ್ಲಿ ಈ ತರಹ ಆಗಲಿಕ್ಕೆ ಕಾರಣವಾಯಿತು ಎಂಬುದು ಮುಖ್ಯ. ಪಾಪದವರ ಮನೆಗಳಿಗೆ ಹೊಡೆಯಲಿಕ್ಕೆ ಕಾರಣವಿರುವುದಿಲ್ಲ. ಗಲಾಟೆ ಮಾಡತಕ್ಕವರು ರೋಡ್ ಬ್ಲಾಕ್ ಮಾಡಿ, ಪೋಲೀಸ್ ವ್ಯಾನುಗಳಿಗೆ ಕಲ್ಲು ಹೊಡೆದು, ಸ್ಕೂಲ್ ಮತ್ತು ಮುನಿಸಿಪಾಲಿಟಿ ಆಫೀಸಿಗೆ ಜಖಂ ಮಾಡಿ, ಪೆಟ್ರೋಲ್ ಬಂಕ್‌ಗೆ ಬೆಂಕಿಹಾಕಿ ಆ ಲೈನುಗಳ ಒಳಗಡೆ ಓಡಿ ಹೋಗಿದ್ದಾರೆ. When the police is in operation or when the Military is in operation, it is very difficult to say ಓಡಿ ಹೋಗುವಾಗ ಇಂತಹ ಕಡೆಗೆ ಓಡಬೇಕೆಂದು, ಇದೇ ಪ್ರಕಾರ ಮಾಡಬೇಕು ಅಂದರೆ ಅದು ಯಾರಿಗೂ ಸಾಧ್ಯವಾಗುವುದಿಲ್ಲ. It is for officer or the person who is there to judge and take decision and act. ಅಲ್ಲಿ ಏನಾಗಿದೆ ಆದರೆ ೫೦ ಜನ ರೋಡ್ ಬಂದ್ ಮಾಡಿ, ಪೆಟ್ರೋಲ್ ಬಂಕ್‌ಗೆ ಬೆಂಕಿಹಾಕಿ ವಿಧಾನಸೌಧದ ಒಳಗಡೆ ಓಡಿ ಬಂದರು ಅಂದರೆ ಅವರ ಮೇಲೆ ಲಾಟಿಚಾರ್ಜ್ ಮಾಡಲೇಬೇಕಾಗುತ್ತದೆ. ವಿಧಾನಸೌಧದ ಒಳಗಡೆ ಬಂದರು ಎಂದು ಬಿಡುವುದಕ್ಕೆ ಆಗುವುದಿಲ್ಲ. ಟೀಯರ್‌ಗ್ಯಾಸ್ ಸೆಲ್ ಲಾಟಿಚಾರ್ಜ್ ಮಾಡಲೇಬೇಕಾಗುತ್ತದೆ. ಆ ಲೈನಿನಲ್ಲಿರುವವರು ಕಲ್ಲು ಹೊಡೆದರು ಎಂದು ಹೇಳುವುದಕ್ಕಾಗುವುದಿಲ್ಲ. ಏನು ಗೊತ್ತಿಲ್ಲದ ಜನ ಎಂದು ಹೇಳಿದರು. They cannot say that he is innocent unless they know. I also say that they are innocent ಅಲ್ಲರುವವರೇ ಹೇಳಿದರು ಕಲ್ಲು ಹೊಡೆದು ಓಡಿ ಬಂದರೂ ಎಂದು. ಅವರು ಓಡಿ ಬರುವಾಗ ಗೊತ್ತಿಲ್ಲದವರು ಇರುತ್ತಾರೆ. ಯಾರು ಪೆಟ್ರೋಲ್ ಬಂಕ್‌ಗೆ ಬೆಂಕಿಹಾಕಿ ರಸ್ತೆ ಬಂದ್ ಮಾಡಿ ಬಂದಿರುತ್ತಾರೆ ಅವರಿಗೆ ಪೋಲೀಸ್‌ನವರು ಹೊಡೆದಿರುತ್ತಾರೆ. ನೀವು ಹೇಳಿದ ಹಾಗೆ ಕೆಲವು ಕಡೆ ಜಾಸ್ತಿಯಾಗಿರಬಹುದು. ಇಲ್ಲವೆಂದು ಹೇಳುವುದಿಲ್ಲ. The intention was not to trouble the household people they don't know who is injured or not. It is only on psychology, they have to act and they are acting. Since 1947 or before 1947, the police firing and lathi charging is taking place. Whether there is Congress Rule or Commuinst Rule, Probably, in West Bengal, there are maximum number of firings. It is not our business to talk on that. Even when Sri Namboodripad was the Chief Minister in Kerala, the maximum number of firings have taken place. It is not the question of who is the Chief Minister or which is the party in power but the responsibility of maintaining law and order is with the State Government and when once action has been taken there will be criticism. I do not say, there will not be criticism. To find out whether the situation has been excessively handled, we have ordered the Additional Chief Secretary to hold an enquiry. He will make an enquiry. Compensation has already been given to them. ಗುಂಡೂರಾಯರು, ಸತ್ತರೆ ಇಷ್ಟು ಎಂದು ಫಿಕ್ಸ್ ಮಾಡಿದ್ದಾರೆಂದು ಹೇಳಿದರು It is the norm. ಉಡುಪಿಯಲ್ಲಿ ಮಳೆ ಬಂದು ಜನಗಳು

ಹಾನಿಗೊಳಗಾದಾಗ ಪ್ರಧಾನಮಂತ್ರಿಗಳು ೧ ಲಕ್ಷ ರೂಪಾಯಿ ಕೊಟ್ಟರು, ಜೀವ ಹೋದವರಿಗೆ ೫ ಸಾವಿರ ಕೊಟ್ಟರೆ ಜೀವ ಬರುತ್ತದೆಯೇ ಎಂದು ಹೇಳಿದರು It is only considering the situation and just it is of some help. ಜೀವಕ್ಕೆ ಬಡವ ಶ್ರೀಮಂತ ಎಂದು ಹೇಳುವ ಪ್ರಶ್ನೆ ಇಲ್ಲ. ಬಡವರಿಗೊಂದು ಶ್ರೀಮಂತರಿಗೊಂದು ಕಾನೂನು ಇಲ್ಲ. ಜೀವ ಹೋದರೆ ಮತ್ತೆ ತರುವುದಕ್ಕೆ ಆಗುವುದಿಲ್ಲ. ಏನೂ ಕೊಟ್ಟರೂ ಅವರಿಗೆ ತೃಪ್ತಿಯಾಗುವುದಿಲ್ಲ. ಪರಿಹಾರ ಕೊಡುವುದು ಏತಕ್ಕೋಸ್ಕರ ಅಂದರೆ ತೊಂದರೆಯಲ್ಲಿರತಕ್ಕ ಬಡವರಿಗೆ ಏನೂ ಮಾಡಲಿಕ್ಕೆ ಆಗದಿರತಕ್ಕವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಮೊದಲಿನಿಂದಲೂ ಕೊಡುತ್ತಾ ಬಂದಿದ್ದಾರೆ, ನಮ್ಮ ಸರ್ಕಾರ ಹೊಸದಾಗಿ ಕೊಡುತ್ತಿಲ್ಲ. I do not want to repeat the whole thing. The time now is already 8-30 p. m. I read out a statement when Mr. Devaraj Urs reised the same question. I will touch that point. ಒಂದು ಗಲಾಟೆಯಾದರೆ ಆ ಕಡೆ ೨ ಜನ ಸತ್ತರು, ಈ ಕಡೆ ೩ ಜನ ಸಾಯಬೇಕೆಂದು ಲೆಕ್ಕ ಮಾಡಿಕೊಂಡು ಹೊಡೆಯುವುದಕ್ಕೆ ಆಗುವುದಿಲ್ಲ ಸನ್ನಿವೇಶಕ್ಕೆ ತಕ್ಕಂತೆ ಕೆಲಸ ಮಾಡಬೇಕಾಗುತ್ತದೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಅರೆಸ್ಟ್ ಮಾಡಿದಾಗ ಯಶವಂತಪುರದಲ್ಲಿ ೬ ಜನ ಸತ್ತರು. ಅವರಿಗೆ ಹೊಡೆಯಬೇಕೆಂದು ನಮಗೆ ಇಂಟರೆಸ್ಟ್ ಇತ್ತೆ ?

೮-೩೦ ಪಿ.ಎಂ.

ಜನತಾ ಸರ್ಕಾರ ಇದ್ದಾಗ ಕಾನ್ಪುರದಲ್ಲಿ ದೊಡ್ಡ ಗಲಾಟೆ ನಡೆದು ಸುಮಾರು ೧೮ ಜನರು ಸತ್ತರು. ಏನು ಮಾಡುವುದಕ್ಕಾಗುತ್ತದೆ. Can we blame that Government ? No, it is a system. Whether I am here or whether anybody is here, or if you come here, there should be some sort of intermediate agencies to see that there is good. ಆಮೇಲೆ ಕೆಲವು ಮಾನ್ಯ ಸದಸ್ಯರು ಈ ಬಗ್ಗೆ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. Mr. Morley suggested certain things. I am very glad. He said how the people cooperated with the police after independence. ಮುಖ್ಯವಾಗಿ ಪೋಲೀಸರ ವರ್ತನೆ ಜನರ ಬಗ್ಗೆ ಇರುವುದು ಮತ್ತು ಜನರ ವರ್ತನೆ ಪೋಲೀಸರ ಬಗ್ಗೆ ಇರುವುದು ಬದಲಾವಣೆಯಾಗಬೇಕಾಗುತ್ತದೆ. ನಮ್ಮ ಜನರು ಪೋಲೀಸರನ್ನು ನೋಡಿದ ಕೂಡಲೆ ಅಂಗ್ರೇಜಿ ಪೋಲೀಸರನ್ನು ನೋಡುವ ರೀತಿ ಮೊದಲು ಹೋಗಬೇಕು. ನಾವು ಇಂಗ್ಲೀಷರ ಗುಲಾಮರಾಗಿದ್ದಂತೆ ಈಗಲೂ ಪೋಲೀಸರ ಗುಲಾಮರಾಗಿದ್ದೇವೆಂದು ತಿಳಿದರೆ ಅದು ತಪ್ಪಾಗುತ್ತದೆ. ಇದು ಸರಿ ಎಂದು ನಾನು ಹೇಳುವುದಿಲ್ಲ. You englighten me. Let us have a dialogue. But it is not a question to be asked in one stage and answered in one stage. It is a very deep and detailed subject. We should all discuss about it. ಶ್ರೀ ರಾಮದೇವ್ ಅವರು ನಾಳೆ ಕಾರ್ಪೊರೇಷನ್ ಚುನಾವಣೆ ನಡೆದ ಮೇಲೆ ಮೇಯರ್ ಆಗಬಹುದು. ಆಗ ಏನಾದರೂ ಗಲಾಟೆಯಾದರೆ ಪೋಲೀಸರ ಸಹಾಯ ಪಡೆಯಬೇಕಾಗುತ್ತದೆ. ಈ ಮೊದಲು ಮಾನ್ಯ ಲಕ್ಷ್ಮೀಸಾಗರ್ ಅವರು ಸಹ ಕಾರ್ಪೊರೇಷನ್ ಸದಸ್ಯರಾಗಿದ್ದರು. ಆದ್ದರಿಂದ ಅವರಿಗೂ ಅನುಭವವಿದೆ. ಅವರ ಸಪೋರ್ಟರ್ಸ್ ಮತ್ತು ಇವರ ಸಪೋರ್ಟರ್ಸ್ ಸೇರಿಕೊಂಡು ಗಲಾಟೆ ಮಾಡಿದಾಗ ಪೋಲೀಸರನ್ನು ಕರೆಸಿದಂಥ ಉದಾಹರಣೆಗಳಿವೆ. ಆದ್ದರಿಂದ ನಾವೆಲ್ಲರೂ ಕೂತು ಒಂದು ಸಾರಮ್ಸ್ ಕಂಡುಹಿಡಿಯೋಣ. ಯಾವುದನ್ನು ಪ್ರಾಕ್ಟಿಕಲ್ ಆಗಿ ಮಾಡಲು ಸಾಧ್ಯ ಯಾವುದನ್ನು ಮಾಡಲು ಅಸಾಧ್ಯ ಈ ಎರಡನ್ನೂ ನಾವು ಆಲೋಚನೆ ಮಾಡಬೇಕಾಗುತ್ತದೆ. ನಮ್ಮಲ್ಲಿ ಕೋರ್ಟ್ ಬೇರೆ ಇದೆ. ಅನೇಕ ಸಂದರ್ಭಗಳಲ್ಲಿ ನಾವು ಏನೇ ಮಾಡಲು ಹೊರಟರು ಕೆಲವರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಲಾಯರ್‌ಗಳನ್ನು ಇಟ್ಟುಕೊಳ್ಳುತ್ತಾರೆ. ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಟ್ರಾಫಿಕ್ ಕಂಟ್ರೋಲ್ ಮಾಡಬೇಕು. ಇದನ್ನು ಮಾಡಬೇಕಾದರೆ ಕೆಲವು ಕಡೆಗಳಲ್ಲಿ ಒನ್-ವೇ ಟ್ರಾಫಿಕ್ ಮಾಡಬೇಕಾಗುತ್ತದೆ ಮತ್ತೆ ಕೆಲವು ಕಡೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕಾಗುತ್ತದೆ. ಎರಡೂ ಕಡೆ ಅಂಗಡಿಗಳಿರುವಾಗ ಯಾವುದಾದರೂ ಒಂದು ಕಡೆ ಪಾರ್ಕಿಂಗ್ ಮಾಡಲೇ ಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಮಗೆ ಸರಿಯಾಗಿ ವ್ಯಾಪಾರವಾಗುವುದಿಲ್ಲವೆಂದು

ಅಹಮದ್ ಅಂಡ್ ಕಂಪನಿಯವರೂ ಹೋಗಿ ಸ್ಟೇ ತರುತ್ತಾರೆ. ಮತ್ತೊಂದು ಕಡೆ ಮಾಡಲು ಹೊರಟರೆ ಹಾಜಿ ಅಂಡ್ ಕಂಪನಿಯವರು ಹೋಗಿ ಸ್ಟೇ ತರುತ್ತಾರೆ. ವಿದೇಶಗಳಲ್ಲಿ ಯಾವ ರೀತಿ ಪಾರ್ಕಿಂಗ್ ಮಾಡುತ್ತಾರೋ ನನಗೆ ಗೊತ್ತಿಲ್ಲ. ನಾನು ಹೋಗಿ ನೋಡಿಲ್ಲ. ಆದರೆ ನಮ್ಮಲ್ಲಿ ಈ ರೀತಿ ಆಗುತ್ತದೆ. ಸ್ಟೇ ತಂದಮೇಲೆ ಅದು ಜಾಗ್ರತೆ ವಕೇಟ್ ಆಗುವುದಿಲ್ಲ. ಕೋರ್ಟಿನಲ್ಲಿ ಯಾವ ಆಕ್ಟ್ ಪ್ರಕಾರ ಇದನ್ನು ಜಾರಿಗೆ ತಂದಿದ್ದೀರಿ ಎಂದು ಕೇಳುತ್ತಾರೆ. ಸೆಂಟ್ರಲ್ ಗೌರ್ನಮೆಂಟ್ ಟ್ರಾಫಿಕ್ ಆಕ್ಟನ್ನು ಜಾರಿಗೆ ತಂದಂಥ ಕಾಲದಲ್ಲಿ ಬೆಂಗಳೂರಿನ ಜನಸಂಖ್ಯೆ ಕೇವಲ ೪ ಲಕ್ಷ ಇತ್ತು. ಆಗ ೪೦೦ ಕಾರುಗಳಿದ್ದವು. ವಿಧಾನಸೌಧದ ಜಾಗದಲ್ಲಿ ವನಸಂಪತ್ತು ಹಾಗೂ ಬಂಡೆಗಳಿದ್ದವು. ಆದರೆ ಇವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ೩೧ ಲಕ್ಷ ಜನಸಂಖ್ಯೆ ಇದೆ ನೂರು ಸಿಟಿ ಬಸ್‌ಗಳು ಓಡಾಡುತ್ತಿದ್ದ ಜಾಗದಲ್ಲಿ ೯೦೦-೧೦೦೦ ಬಸ್‌ಗಳು ಓಡಾಡುತ್ತಿವೆ. ಸಾವಿರಾರು ಕಾರುಗಳು, ಸಾವಿರಾರು ಆಟೋ-ರಿಕ್ಷಾಗಳು, ಸಾವಿರಾರು ಸೈಕಲ್‌ಗಳು ಓಡಾಡುತ್ತಿವೆ. How can you control ? You tell me the method and procedure. I am prepared to discuss. It is not one day's business : it is a continuous process. Let us take a decision. ಇದರ ಬಗ್ಗೆಯೂ ಆಲೋಚನೆ ಮಾಡಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಕೆಲವು ಕಾರಣಗಳಿಂದ ಗಲಾಟೆಗಳಾದಾಗ ಗೋಲಿಬಾರ್ ಮಾಡುವುದು ಬೇಡ ಎಂದರೆ, is it possible ? ಆ ದಿನ ನಾನು ಕೆ.ಜಿ.ಎಫ್.ನಲ್ಲಿ ನಕ್ಸಲೈಟ್ಸ್ ಬಂದು ಗಲಾಟೆ ಮಾಡಿದ್ದಾರೆಂದು ಹೇಳಲಿಲ್ಲ. ನಾನು ಆ ದಿನ ಹೇಳಿದ್ದನ್ನು ಸ್ವಲ್ಪ ತಪ್ಪಾಗಿ ತಿಳಿದುಕೊಂಡಿದ್ದಾರೆ. ನಾನು ಹೇಳಿದ್ದೇನೆಂದರೆ ಅಲ್ಲಿ ಏನು ಒಂದು ಗಲಾಟೆ ನಡೆಯಿತು, ಅದು ಸಾಧಾರಣವಾದ ಒಂದು ಸಂಘಟನೆಯಿಂದ ನಡೆದಂತೆ ಕಂಡುಬರಲಿಲ್ಲ. ಅದು ಒಂದು ಸುಸಜ್ಜಿತವಾದ ರೀತಿಯಲ್ಲಿ ನಡೆದಂತೆ ಕಂಡುಬಂತು. ಅಲ್ಲಿರುವಂತಹ ಕೆಲವು ಟರ್ನಿಂಗ್‌ಗಳಲ್ಲಿ ಅಂದರೆ ಕಿಷ್ಕಿಂದವಾದಂಥ ಜಾಗಗಳಲ್ಲಿ ಪೋಲೀಸ್ ವ್ಯಾನ್‌ಗಳು ಹೋಗದಂತೆ ರಸ್ತೆಗಳಿಗೆ ಕಲ್ಲುಗಳನ್ನು ಅಡ್ಡವಿಟ್ಟು ಪೋಲೀಸ್ ವ್ಯಾನ್‌ಗಳು ಅಲ್ಲಿಗೆ ಹೋದಾಗ ಎರಡೂ ಕಡೆಗಳಿಂದ ಅಟ್ಯಾಕ್ ಮಾಡಿದ್ದಾರೆ. ಇಂತಹ ಒಂದು ಚಿತ್ರವನ್ನು ನಾವು ಅಲ್ಲಿ ನೋಡಬಹುದಾಗಿತ್ತು. ಈ ಕಾರಣದಿಂದ ನನ್ನ ಮನಸ್ಸಿಗೆ ಆ ಒಂದು ಅಭಿಪ್ರಾಯ ಬಂತು. ನಮ್ಮ ಬಾರ್ಡರ್‌ನ ಅತ್ತಕಡೆ ನಕ್ಸಲಿಯರು ಇದ್ದಾರೆ. ಮತ್ತು ಇಂತಹ ಕೆಲಸಗಳನ್ನು ಮಾಡಲು ಟ್ರೈನಿಂಗ್ ಪಡೆದವರು ಇದ್ದಾರೆ. ಆದ್ದರಿಂದ ಅವರುಗಳ ಪೈಕಿ ಕೆಲವರು ನಮ್ಮ ರಾಜ್ಯಕ್ಕೆ ಬಂದು ಇಂತಹ ಕೆಲಸ ಮಾಡಲು ಸಾಧ್ಯವಿದೆ. ಇಂತಹ ಸಂದರ್ಭದಲ್ಲಿ ಪೋಲೀಸರು ಏನಾದರು ಲಾಟಿಚಾರ್ಜ್ ಮಾಡಿದರೆ ಇಲ್ಲವೇ ಗೋಲಿಬಾರ್ ಮಾಡಿದರೆ ನಿರಪರಾಧಿಗಳು ಸಾಯುತಾರೆಯೋ ಹೊರತು ನಿಜವಾಗಿ ಗಲಾಟೆ ಮಾಡಿದವರು ತಪ್ಪಿಸಿಕೊಳ್ಳುತ್ತಾರೆ. ಮೂರು ವರ್ಷಗಳ ಹಿಂದೆ ಅಂದರೆ ೧೯೭೮-೭೯ರಲ್ಲಿ ಎಂದು ಕಾಣುತ್ತದೆ, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಗಲಾಟೆಯಾದಾಗ ಪೋಲೀಸರು ಗೋಲಿಬಾರ್ ಮಾಡಿದರು. ಆಗ ಗಲಾಟೆ ಮಾಡಿದವರು ಓಡಿ ಹೋದರು ಆದರೆ ನಲ್ಲಿಯಲ್ಲಿ ನೀರನ್ನು ತೆಗೆದುಕೊಳ್ಳುತ್ತಿದ್ದ ಒಬ್ಬ ಹೆಂಗಸು ಗುಂಡೇಟಿಗೆ ಬಲಿಯಾಗ ಬೇಕಾಯಿತು. ಆದ್ದರಿಂದ ಈ ಬಗ್ಗೆ ನಾವೂ ನೀವೂ ಕೂತು ಯೋಚನೆ ಮಾಡೋಣ. ಏಕೆಂದರೆ, ಈ ದೇಶದಲ್ಲಿ ನಾವೂ ನೀವೂ ಬದುಕಬೇಕಾಗಿದೆ. ಈ ಜಗತ್ತಿನಲ್ಲಿ ನಾವೆಲ್ಲರೂ ಬಾಳಬೇಕಾಗಿದೆ. ಈ ದಿನ ನಾನು ಮುಖ್ಯಮಂತ್ರಿಯಾಗಿರಬಹುದು. ನಾಳೆ ದಿವಸ ನಿಮ್ಮ ಪೈಕಿ ಯಾರಾದರೂ ಮುಖ್ಯಮಂತ್ರಿ ಯಾಗಬಹುದು. ಆಗ ನಾವು ನಿಮ್ಮ ಹತ್ತಿರ ಬರಬೇಕಾಗುತ್ತದೆ. ನಾವಾಗಲೀ ನೀವಾಗಲಿ ಬರುವುದು ವೈಯಕ್ತಿಕ ಕಾರಣಕ್ಕಾಗಿ ಅಲ್ಲ, ಸಾರ್ವಜನಿಕ ಕೆಲಸಗಳಿಗಾಗಿ ಬರಬೇಕಾಗುತ್ತದೆ. ಸ್ನೇಹತನದಿಂದ ಹೋಗಿ ಬರುವುದು ಬೇರೆ. ಆದರೆ ಸಾರ್ವಜನಿಕರ ಹಿತವನ್ನು ನೋಡತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. I cannot say I don't want to see Mr. J. H. Patel. I am a public representative. I don't want to see anything personal. I don't want to understanding individualy as Gundu Rao and Sri J. H. Patel. But when I am in the offic , when I am representing a particular constituency or area it is my bounden duty to come and call you. There is nothing wrong. I can write a letter. If time demands you can telephone. It is not a proud thing for me. ಅವೊತ್ತಿನದಿವಸ ಇವರು ಕಬ್ಬು ಬೆಳೆಗಾರರ ಡೆಲಿಗೇಷನನ್ನು ಮೀಟ್ ಮಾಡಬೇಕೆಂದು ನನ್ನನ್ನು ಕೇಳಿದರು. ನನಗೆ ಸಮಯವಿಲ್ಲವೆಂದು ಹೇಳಿದಾಗ ಅರ್ಧ ಗಂಟೆಯಲ್ಲಿ ಮಾತನಾಡಿಕೊಂಡು ಹೋಗುತ್ತೇವೆಂದು

ಹೇಳಿದರು. ನಾನೂ ಆಗಬಹುದೆಂದು ಹೇಳಿದೆ. ಇಲ್ಲಿ ಪ್ರತಿಷ್ಠೆಯ ಪ್ರಶ್ನೆ ಎಲ್ಲಿ ಬಂತು? ಕೆಲವು ಮಾನ್ಯ ಸದಸ್ಯರು ಪಬ್ಲಿಕ್ ರಿಲೇಷನ್‌ಷಿಪ್ ಯಾವ ರೀತಿ ಇರಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಗಲಾಟೆ ಆದಮೇಲೆ ಪೀಸ್-ಕಮಿಟಿಗಳನ್ನು ರಚನೆ ಮಾಡುವುದಕ್ಕೆ ಬದಲು ಮೊದಲೇ ಮಾಡುವುದು ಒಳ್ಳೆಯದೆಂದು ಸಲಹೆ ಮಾಡಿದ್ದಾರೆ. ಈ ಬಗ್ಗೆ ಎಲ್ಲರೂ ಕುಳಿತ ಚರ್ಚೆ ಮಾಡೋಣ. ಏಕೆಂದರೆ, ಇದು ಒಬ್ಬರ ಕೆಲಸವಲ್ಲ, ಒಂದು ಪಾರ್ಟಿಯ ಕೆಲಸವಲ್ಲ, ಇದು ಎಲ್ಲರ ಕೆಲಸ. ಆದ್ದರಿಂದ ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಎಲ್ಲಿ ಬಂತು, ಇದೊಂದು ಒಳ್ಳೆಯ ಸಲಹೆ ಆಗಿದೆ. Let us have some type of a system. I am not a lawyer. ಆದ್ದರಿಂದ ಮಾನ್ಯ ವೀರಪ್ಪ ಮೊಯ್ಲಿ ಅವರು, ಮಾನ್ಯ ಗಂಗಾಧರ್ ಅವರು, ಮಾನ್ಯ ರಾಮಕೃಷ್ಣ ಅವರು, ಮಾನ್ಯ ಬಂಗಾರಪ್ಪ ಅವರು, ಮಾನ್ಯ ರಾಮಭಟ್ ಅವರು ಲಾಯರ್‌ಗಳಾಗಿರುವುದರಿಂದ ಈ ಬಗ್ಗೆ ಯಾವ ರೀತಿ ಮಾಡಬೇಕೆಂಬುದನ್ನು ಕುಳಿತು ಚರ್ಚೆ ಮಾಡೋಣ. Let us see how law will come in the way ಇಡೀ ರಾಷ್ಟ್ರಕ್ಕೇ ಒಂದು ಲೀಡ್ ಕೊಡೋಣ. I am for it. Let me tell you honestly. ಇದಕ್ಕೆ ಒಂದು ಮಾರ್ಗವನ್ನು ಹುಡುಕದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ಮಾನ್ಯ ರಾಮೇಗೌಡರು ಮಾತನಾಡುವಾಗ ಪೋಲೀಸ್ ಪೇದೆಗಳ ಲೆಕ್ಕಾಚಾರ ಹೇಳುತ್ತಿದ್ದರು. ನನಗೆ ಗೊತ್ತಿರುವಂತೆ ನಾನು ನಮ್ಮ ಊರಿನಲ್ಲಿ ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲಿನಲ್ಲಿ ಓದುತ್ತಿರುವಾಗ ಒಬ್ಬರು ಹೆಡ್ ಕಾನ್‌ಸ್ಟೇಬಲ್ ಮತ್ತು ಇಬ್ಬರು ಕಾನ್‌ಸ್ಟೇಬಲ್ ಮಾತ್ರ ಇದ್ದರು. ಆ ಸಮಯದಲ್ಲಿ ಯಾವ ಅಹಿತಕರವಾದಂಥ ಘಟನೆಗಳೂ ನಡೆಯುತ್ತಿರಲಿಲ್ಲ. ಯಾವ ಗಲಾಟೆಗಳೂ ಆಗುತ್ತಿರಲಿಲ್ಲ. ನಮ್ಮ ಕೊಡಗು ಆಗ ಬೇರೆ ಇತ್ತು. ಅಲ್ಲಿ ಕಳ್ಳತನಗಳಾಗುತ್ತಿರಲಿಲ್ಲ. ೧೯೬೪-೬೫ರವರೆಗೆ ರಾತ್ರಿ ಕಾಲದಲ್ಲಿ ಮನೆಗಳಿಗೆ ಬೋಲ್ಟ್ ಸಹ ಹಾಕುತ್ತಿರಲಿಲ್ಲ. ಅಂದರೆ ಆಗ ಆ ತರಹ ಕಾಲವಿತ್ತು ಜನರೂ ಅದೇ ತರಹ ಇದ್ದರು. ಆದ್ದರಿಂದ ನಾವು ಎರಡು ತರಹ ಯೋಚನೆ ಮಾಡಬೇಕಾಗುತ್ತದೆ. ನಾವು ಸ್ವಾತಂತ್ರ್ಯ ಪಡೆಯುವುದಕ್ಕೆ ಮೊದಲು ಅಂದರೆ ನಾವು ಗುಲಾಮಗಿರಿಯಲ್ಲಿದ್ದಾಗ ನಮ್ಮ ಹಕ್ಕನ್ನು ಎಷ್ಟರಮಟ್ಟಿಗೆ ಪ್ರತಿಪಾದನೆ ಮಾಡಬೇಕು ಎಂಬುದು ಜನರಿಗೆ ಇನ್ನೂ ಗೊತ್ತಿರಲಿಲ್ಲ. ಆ ಸಮಯದಲ್ಲಿ ನಮ್ಮ ಕಡೆ ಸುಬೇದಾರ್ ಎಂದು ಇದ್ದರು. ಈ ಕಡೆಗಳಲ್ಲಿ ಅಮುಲ್‌ದಾರ್ ಎಂದು ಇದ್ದರು

೧೯೪೫-೪೬, ೧೯೪೬-೪೭, ೧೯೪೭-೪೮ನೇ ಇಸವಿಯಲ್ಲಿ ಎಲ್ಲಾದರೂ ಆಗಲಿ ಒಬ್ಬ ಅಮಲ್ದಾರ್ ಬರುತ್ತಾರೆ ಎಂದರೆ ಆವಾಗ ಅವನಿಗೆ ಎಷ್ಟು ಗೌರವ ಸಿಕ್ಕುತ್ತಿತ್ತು ಎಂದರೆ ಅದನ್ನು ವರ್ಣಿಸುವುದಕ್ಕಾಗುವುದಿಲ್ಲ. ಆವಾಗ ಅವನಿಗೆ ಇದ್ದಂಥಾ ಗೌರವ ಈವೊತ್ತಿನ ದಿವಸ ಮುಖ್ಯ ಮಂತ್ರಿಗಳಿಗೂ ಇಲ್ಲ, ಮುಖ್ಯಮಂತ್ರಿಗಳೇ ಆಗಲಿ ಯಾರೇ ಆಗಲಿ ಈವೊತ್ತಿನ ದಿವಸ ಕಾರ್‌ನಲ್ಲಿ ಪ್ರಯಾಣ ಮಾಡಿದರೆ, ಫ್ಲಾಗ್ ಹಾಕಿಕೊಂಡು ಹೋದರೂ ಕೂಡ ದಾರಿಯಲ್ಲಿ ಕೆ.ಎಸ್.ಆರ್.ಟಿ ಸಿ ಬಸ್ಸೇ ಆಗಲಿ ಯಾವುದೇ ಆಗಲಿ ಹೋಗುತ್ತಾ ಇದ್ದಾರೆ ನಾವು ೩-೪ ಸಾರಿ ಹಾರ್ನ್ ಮಾಡಿದರೂ ಕೂಡ ಒಂದು ಸೈಡ್ ಕೊಡುವುದಿಲ್ಲ. ನಮ್ಮ ಕಡೆ ಅಮಲ್ದಾರರನ್ನು ಪಾರ್‌ಪತ್ತೇಗಾರರು ಎಂದು ಹೇಳುತ್ತಿದ್ದರು. ಅವರು ಆವಾಗ ಎಂಜಾಯ್ ಮಾಡಿದಷ್ಟು ನಾವು ಮಾಡುವುದಕ್ಕಾಗುವುದಿಲ್ಲ, ಅವರೇನಾದರೂ ಟೂರ್ ಪ್ರೋಗ್ರಾಂ ಇಟ್ಟುಕೊಂಡು ನಾಳೆ ೧೧ ಗಂಟೆಗೆ ಬರುತ್ತೇನೆಂದು ತಿಳಿಸಿಬಿಟ್ಟರೆ ಈವೊತ್ತಿನಿಂದಲೇ ಅದಕ್ಕೆ ಸರಿಯಾದ ಬಂದೋಬಸ್ತು ಒಂದು ಸೈಡ್‌ನಲ್ಲಿ ಬಸ್, ಇತರೇ ವಾಹನಗಳು ತಿರುಗಾಡುವ ಹಾಗೆ ಮಾಡುತ್ತಿದ್ದರು. ಅಷ್ಟು ಹೆದರಿಕೊಂಡು ಆವಾಗ ಅವರುಗಳೆಲ್ಲಾ ಕೆಲಸ ಮಾಡುತ್ತಿದ್ದರು. ಜನಗಳೂ ಸಹ ಅಷ್ಟೇ ಗೌರವ ಕೊಡುತ್ತಿದ್ದರು. ಮಾನ್ಯ ಜಿ. ರಾಮೇಗೌಡರು ಮಾತನಾಡುವಾಗ ನಮ್ಮ ಕಡೆಗೆ ಹೆಚ್ಚು ಪೋಲೀಸ್ ಪೇದೆ ಕೊಡಿ ಅಂತ ಹೇಳಿದರು.

ಶ್ರೀ ಜಿ. ರಾಮೇಗೌಡ.—ಸ್ವಾಮಿ, ಎಷ್ಟೋ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ, ನಾನೇನು ಅಗಾಧ ಪ್ರಮಾಣದಲ್ಲಿ ಏನೂ ಕೇಳಲಿಲ್ಲಾ. ನಾನು ಕೇಳಿದ್ದು ಇಷ್ಟೆ, ನಮ್ಮ ಕಡೆ ಸ್ವಲ್ಪ ಹೆಚ್ಚು ಪೇದೆ ಕೊಡಿ ಮತ್ತು ಒಂದು ಅಗ್ನಿಶಾಮಕ ದಳ ಕೊಡಿ ಮತ್ತು ಆ ಜನಗಳಿಗೆ ಒಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಿ ಅಂತ ಕೇಳಿದ್ದು, ಅಷ್ಟು ಮಾಡಿಕೊಟ್ಟರೆ ನಮಗೆ ಬಹಳ ಉಪಕಾರವಾಗುತ್ತೆ. ಅದನ್ನಾದರೂ ಮಾಡಿಕೊಡಿ ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ಸ್ವಲ್ಪ ಹೆಚ್ಚು ಪೇದೆಗಳನ್ನು ಕೊಡೋಣ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆವಾಗ ಕಾಲವೂ ಹಾಗೆ ಇತ್ತು, ಜನಗಳೂ ಹಾಗೇ ಇದ್ದರು. ಅದಕ್ಕೆ

ಹೇಳಿದೆ. ಶ್ರೀಮಾನ್ ಗಂಗಾಧರ್‌ರವರೇ ತಾವು ಕೇಳಿರಬಹುದು. ಮೈಸೂರಿನಲ್ಲಿ ಒಬ್ಬ ಟ್ರಾಫಿಕ್ ಇನ್‌ಸ್ಪೆಕ್ಟರ್ ಕುಟ್ಟಪ್ಪ ಅನ್ನುವವರು ಇದ್ದರು.

ಶ್ರೀ ಹೆಚ್. ಗಂಗಾಧರನ್.—ಕೇಳಿದ್ದೇನೆ, ಗೊತ್ತು.

ಶ್ರೀ ಆರ್. ಗುಂಡೂರಾವ್.—ಅವನು ಲೈನ್ ಮೇಲೆ ಬರುತ್ತಾನೆ ಅಂತ ತಿಳಿದುಬಿಟ್ಟರೆ ಸಾಕು, ಎಲ್ಲರೂ ಹೆದರಿಕೊಳ್ಳುತ್ತಿದ್ದರು. ತಮಗೆ ಹೇಳಬೇಕಾದರೆ ಇಡೀ ಮೈಸೂರು ಜಿಲ್ಲೆಗೆ ಇದ್ದಂಥಾ ಪೋಲೀಸ್ ಎಂದರೆ ಒಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ಇಬ್ಬರು ಕಾನ್‌ಸ್ಟೇಬಲ್ಸ್. ಮೈಸೂರು ಪೂರ್ತಿಯೆಲ್ಲಾ ಅವನೊಬ್ಬನೇ ಟ್ರಾಫಿಕ್ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದ. ಅವನು ಏನೋ ಆರ್ಡಿನರಿ ಕಾನ್‌ಸ್ಟೇಬಲ್ ಅಥವಾ ಹೆಡ್ ಕಾನ್‌ಸ್ಟೇಬಲ್ ಏನೋ ಇರಬಹುದು ಆ ಕುಟ್ಟಪ್ಪ ಅನ್ನುವ ಹೆಸರು ಹೇಳುವುದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಅವನು ಲೈನ್‌ನಲ್ಲಿ ಹೋದರೆ ಮೊದಲೇ ಆ ಲಾರಿಯವರು ತಿಳಿದುಕೊಂಡು ಎಂಥಾ ಫಾಸ್ಟ್‌ನಲ್ಲಿ ಆ ಲಾರಿ ಡ್ರೈವ್ ಮಾಡಿಕೊಂಡು ಹೋಗಬೇಕಾಗುವ ಸಂದರ್ಭ ಬಂದರೂ ಕೂಡ ಫಾಸ್ಟ್‌ನಲ್ಲಿ ಹೋಗದೆ ನಿಧಾನವಾಗಿಯೇ ಡ್ರೈವ್ ಮಾಡಿಕೊಂಡು ಹೋಗುವರು. ಅಲ್ಲದೆ ಆವಾಗ ಆತನಿಗೆ ಜನಗಳೂ ಕೂಡ ಕೋಆಪರೇಷನ್ ಮಾಡುತ್ತಿದ್ದರು. ತಮಗೆ ಹೇಳಬೇಕಾದರೆ ಆವಾಗ ರಾಷ್ಟ್ರದ ಜನತೆಯೂ ಕೂಡ ಬಹಳ ವೇಗವಾಗಿ ದೇಶದ ಸ್ಥಿತಿಗತಿಗಳನ್ನು ಅರಿತುಕೊಳ್ಳುತ್ತಿದ್ದರು. ಆದರೆ ಈವಾಗ ನೋಡಿದರೆ ಬಹಳ ವ್ಯತ್ಯಾಸವಾಗಿದೆ ಸ್ವಲ್ಪ ಬ್ರೇಕ್ ಅಪ್ ಆಗಿದೆ ಇಲ್ಲ ಅಂತ ಹೇಳುವುದಿಲ್ಲ, ಈಪೊತ್ತು ನಮ್ಮ ರಾಜ್ಯದಲ್ಲಿ ಪೋಲೀಸ್ ಪೇದೆಗಳ ಸಂಖ್ಯೆ ನೋಡಿದರೆ ೧೪–೧೫ ಸಾವಿರ ಜನಕ್ಕೆ ಒಬ್ಬ ಇದ್ದಾನೆ. ಆದುದರಿಂದಲೇನೇ ಲಾ ಅಂಡ್ ಆರ್ಡರ್ ಅನ್ನು ಸರಿಯಾಗಿ ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಹಿಂದೆ ಇಬ್ಬರು ಕಾನ್‌ಸ್ಟೇಬಲ್ಸ್ ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬಲ್ ಇಡೀ ಮೈಸೂರು ಜಿಲ್ಲೆಯನ್ನು ಮೇಂಟೇನ್ ಮಾಡುತ್ತಿದ್ದ, ಈವಾಗ ಹಾಗಾಗುವುದಿಲ್ಲ. ಪರಿಸ್ಥಿತಿಯೇ ಬೇರೆ. ನಾವು ಥಿಯರಿ ಆಗಿ ಏನು ಬೇಕಾದರೂ ಹೇಳಬಹುದು, ನಾವು ಪ್ರಾಕ್ಟಿಕಲ್ ಆಗಿ ತೀರ್ಮಾನ ತೆಗೆದುಕೊಳ್ಳುವಾಗ ಅದರಲ್ಲಿ ಏನು ತೊಂದರೆ ಇದೆ ಅನ್ನುವುದನ್ನು ನೋಡಬೇಕಾಗುತ್ತದೆ. ನಿಮಗೆ ಒಂದು ಉದಾಹರಣೆ ಹೇಳುತ್ತೇನೆ, ನಮ್ಮ ತಂದೆಯವರು ಇದ್ದಾಗ ಹೇಳುತ್ತಿದ್ದರು. ಮೈಸೂರಿನಲ್ಲಿ ರಣಜಿತ್ ಸಿಂಗ್ ಅಂತ ಇದ್ದರು, ಬಹುಶಃ ಅವರು ಎಸ್. ಪಿ. ಆಗಿದ್ದರೋ ಏನೋ. ಆವಾಗ ಮೈಸೂರಿನಲ್ಲಿ ಜಟಕಾ ಹೊಡೆತಿದ್ದರಲ್ಲಾ ಆ ಸಾಬರುಗಳು, ಜಟಕಾ ಹೊಡೆದುಕೊಂಡು ಹೋಗಬೇಕಾದರೆ ದಾರಿಯಲ್ಲಿ ಯಾವ ದೊಡ್ಡ ಮನುಷ್ಯರೇ ಬರಲಿ, ಯಾವ ಭಿಕ್ಷಾಧಿಪತಿಯೋ ಬರಲಿ ದಾರಿಯಲ್ಲಿ ಎಂಥಾವನೆ ಬರಲಿ ಅವರು ಬೆಲ್ ಮಾಡುತ್ತಾನೇ ಇರಲಿಲ್ಲಾ. ಅವರು ಏನು ಅಂತಿದ್ದರು ಎಂದರೆ ಏ ಏ ಏ, ಬಾಜೂ ಬಾಜೂ ಅಂತ ಕೂಗಿಕೊಂಡು ಹೋಗುತ್ತಿದ್ದರು. ಹಾರನ್ ಮಾಡುತ್ತಿರಲಿಲ್ಲಾ. ಹೀಗೆಲ್ಲಾ ಮಾಡಿದರೆ ಇದನ್ನೆಲ್ಲಾ ಕಾನೂನು ಪ್ರಕಾರ ನಿಲ್ಲಿಸುವುದಕ್ಕಾಗುತ್ತದೆಯೋ? ಆತನೂ ಸಹ ಹೇಳಿ ಹೇಳಿ ಸಾಕಾಯಿತು, ಏನು ಮಾಡಿದರೂ ಏನು ಹೇಳಿದರೂ ಕೇಳುತ್ತಿರಲಿಲ್ಲ, ಏನಾದರೂ ಹೇಳುವುದಕ್ಕೆ ಹೋದರೆ ಕೇಸು ಹಾಕಿಕೊಳ್ಳಿ, ಕೋರ್ಟಿಗೆ ಹೋಗುತ್ತೇವೆ ಅಂತ ಹೇಳಿ, ಆ ಕೋರ್ಟ್‌ಗೆ ಕಳುಹಿಸಿದರೆ ಅಲ್ಲಿ ಎರಡು ರೂಪಾಯಿ ಫೈನ್ ಹಾಕುವರು, ಕೊಟ್ಟುಬಿಟ್ಟು ಬಂದು ಬಿಡುವರು. ಭಯವೇ ಇರುತ್ತಿರಲಿಲ್ಲ. ಅವನೂ ಸಹ ನೋಡಿ ನೋಡಿ ಸಾಕಾಯಿತು. ಕೊನೇಗೆ ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಅಲ್ಲಿ ನಾಲ್ಕು ಒದ್ದನು, ಏನು ಮಾಡಬೇಕೋ ಮಾಡಿದನು, ಆಮೇಲೆ ಒಂದು ತಹಬಂದಿಗೆ ಬಂತು, ಅವರು ಏ ಏ, ಬಾಜೂ ಬಾಜೂ ಅನ್ನು ಹೇಳುವುದನ್ನು ಸ್ಟಾಪ್ ಮಾಡಿಬಿಟ್ಟರು, ಬೆಲ್ ಮಾಡುವುದಕ್ಕೆ ಶುರುಮಾಡಿದರು. ಇವನ್ನೆಲ್ಲಾ ಕಾನೂನು ಮಾಡಿ ನಿಲ್ಲಿಸುವುದಕ್ಕಾಗುತ್ತದೆಯೇ ಹೇಳಿ. ಈಪೊತ್ತಿನ ದಿವಸ ಯಾರಾದರೂ ಕೂಡ ಪೋಲೀಸಿನವರಾಗಲಿ, ಒಬ್ಬ ಎಸ್. ಪಿ. ಆಗಲಿ ಏನಾದರೂ ಅಂತಹ ಕೆಲಸ ಮಾಡಿದರೆ ಅಸೆಂಬ್ಲಿಯಲ್ಲಿ ಮಾರನೇ ದಿವಸವೇ ಒಂದು ಕಾಲಿಂಗ್ ಅಟೆನ್‌ಷನ್ನೋ ಅಥವಾ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನೋ ತಂದುಬಿಡುತ್ತಾರೆ, saying what right the SP has got to kick the cart-driver, it is his right, how can you question and he should have been produced before a Magistrate, and all sorts of things. So, what I am saying is, you cannot have both things. You cannot run with the hare and hunt with the hound. Either you must run with hare or you must hunt with the hound.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಕಾನ್ಸ್ಟಿಟ್ಯೂಷನಲ್ ರೈಟ್ಸ್ ಇರಬೇಕು ಅಂತ ಹೇಳುತ್ತೀರಾ, ಬೇಡ ಅಂತ ಹೇಳುತ್ತೀರಾ?

ಶ್ರೀ ಆರ್. ಗುಂಡೂರಾವ್.—ನೀವು ಮಂತ್ರಿಗಳಾಗಿದ್ದರಲ್ಲಾ ಅದರಿಂದ ನಾನೇನು ಬೇರೆ ಹೇಳಬೇಕಾಗಿಲ್ಲಾ. ಒಟ್ಟಿನಲ್ಲಿ ಇದು ಯಾರಿಗೂ ಕೂಡ ಸಂತಸ ತರುವಂಥಾ ವಿಷಯವಲ್ಲ ಅಂತ ಹೇಳುತ್ತೇನೆ. ಇದರಿಂದ ತೊಂದರೆಯಾಗುವುದು ಇನ್ನೋಸೆಂಟ್ ಪೀಪಲ್‌ಗೆ ವಿನಾ ಮತ್ತಾರಿಗೂ ಅಲ್ಲ. ಅವರು ಸಫರ್ ಮಾಡಬೇಕಾಗುತ್ತದೆ. Then how to solve the practical difficulties. You help me and guide me. You will not forget about the present demand. You charged me. It is alright. It is nothing. It will not have any effect on the society. If society wants something radical let us give some solution. Let us for a moment forget that I am here and you are there and think we are all one. Only for technical sake we are here. It is a system. For other things, I am genuinely and honestly telling you let us discuss separately, individually hundred times and let us evolve certain things. We also call for the police officers meeting. Let some experts and you give your opinion, so that we shall evolve certain things. In places like Channagiri and Soraba let us find out what system to be followed th re. Every month the S. P. and the D. C. shall have a meeting. On whatever disturbances that are taking place we will hold meetings and evolve certain things. But it is not correct to always blame the Police or the Deputy Commsssioner. We will also give some responsibility to the people. Let some important people of the locality take the responsibility Today afternoon Mr. Morley was telling very nicely. He was telling one lady after stealing something was running and a servant caught her on the Brigade road, but suddenly few people joined there and asked the servant to leave her. If such things happen, how do you expect justice? How do you expect safety? ೧೫೦ ವರ್ಷದಿಂದ ಬ್ರಿಟಿಷರು ನಮ್ಮ ದೇಶವನ್ನು ಹೇಗೆ ಆಳಿದರು, ಮಹಾರಾಜರು ಹೇಗೆ ಆಳಿದರು ಈ ಬಗ್ಗೆ ಗಟ್ಟಿ ಚಂದ್ರಶೇಖರ್‌ರವರು ಚೆನ್ನಾಗಿ ಹೇಳಿದ್ದಾರೆ. ಶ್ರೀ ಕೆ. ಹನುಮಂತಯ್ಯನವರು ಇನ್ನು ಇತರರೂ ಕೂಡ ನಮ್ಮ ರಾಜ್ಯದಲ್ಲಿ ಹೇಗೆ ದರ್ಬಾರು ಮಾಡಿದರು ಅನ್ನುವುದನ್ನೂ ಸಹ ಹೇಳಿದ್ದಾರೆ. ಮಹಾರಾಜರಿಗೆ ಅರಮನೆಯೇ ವಸತಿ ಗೃಹ ಆಗಿತ್ತು, ಇದಲ್ಲದೆ ಲಲಿತ ಮಹಲ್ ಪ್ಯಾಲೇಸ್ ಬೆಂಗಳೂರು ಪ್ಯಾಲೇಸ್ ಇವೆಲ್ಲಾ ವಿಶ್ರಾಂತಿ ಗೃಹಗಳಾಗಿತ್ತು. ತಮಗೆ ಹೇಳಬೇಕಾದರೆ ಅವರ ಕಾಲದಲ್ಲಿ ಏನು ಖರ್ಚಾಗುತ್ತಿತ್ತೋ ಅದರ ಡಬ್ಬಲ್ ಈಗ ನಮಗೆ ಖರ್ಚಾಗುತ್ತಾ ಇದೆ. ಆದರೆ ಪ್ರಜಾಪ್ರಭುತ್ವದಲ್ಲಿ ನಾವೆಲ್ಲಾ ಕೆಲಸ ಮಾಡುವಾಗ ಅನಿವಾರ್ಯವಾಗಿ ಈ ಖರ್ಚು ಮಾಡಲೇಬೇಕು, ನಾವು ಮಂತ್ರಿಗಳಾಗಿದ್ದೇವೆ, ಮುಖ್ಯ ಮಂತ್ರಿಗಳಾಗಿದ್ದೇವೆ, ನೀವೆಲ್ಲಾ ಶಾಸಕರಾಗಿದ್ದೀರಿ, ಅನಿವಾರ್ಯವಾಗಿ ಏನೇನು ಖರ್ಚುಗಳು ಆಗಬೇಕೋ ಅದು ಆಗಲೇಬೇಕು. ನಾವೊಬ್ಬರೇ ಹೀಗೆ ಖರ್ಚು ಮಾಡುತ್ತಿದ್ದೇವೆಂದು ತಾವು ಹೇಳುವ ಹಾಗಿಲ್ಲ. ಈ ಹಿಂದೆ ಜಿ. ರಾಮೇಗೌಡರು ಮಂತ್ರಿಗಳಾಗಿರಲಿಲ್ಲ, ಇನ್ನು ಇತರರು ಮಂತ್ರಿಗಳಾಗಿರಲಿಲ್ಲವೇ, ಹಿಂದಿನವರು ಮುಖ್ಯ ಮಂತ್ರಿಗಳಾಗಿರಲಿಲ್ಲವೇ, ಅವರೆಲ್ಲಾ ಖರ್ಚು ಮಾಡಲಿಲ್ಲವೇ? ಹಾಗೇನೇ ಆಡಳಿತ ನಡೆಸಿದರೇ? ಯಾರೋ ಹೇಳಿದರು ಮುಖ್ಯಮಂತ್ರಿಗಳು ಈವೊತ್ತಿನ ದಿವಸ ಅಂಡರ್‌ಗ್ರೌಂಡ್‌ನಲ್ಲಿ ಹೋಗಿ ಫೈಲ್ ನೋಡುತ್ತಾರೆ, ಯೂನಿವರ್ಸಿಟಿ ಗೆಸ್ಟ್ ಹೌಸ್‌ನಲ್ಲಿ ಹೋಗಿ ಫೈಲ್ ನೋಡುತ್ತಾರೆ, ಇನ್ನು ಎಲ್ಲೆಲ್ಲೋ ಹೋಗಿ ಫೈಲ್ ನೋಡುತ್ತಾರೆ, ಎಂದು. ವೀರಪ್ಪಮೊಯ್ಲಿರವರು ಒಂದು ಗೆಸ್ಟ್ ಹೌಸ್‌ಗೆ ಹೋಗಿ ಫೈಲ್ ನೋಡುತ್ತಾರೆ, ಇನ್ನೊಬ್ಬರು ಇನ್ನೊಂದು

ಗೆಸ್ಟ್ ಹೌಸ್‌ಗೆ ಹೋಗಿ ಫೈಲ್ ನೋಡಂತ್ತಾರೆ, ದೇವರಾಜ್ ಅರಸ್‌ರವರು ಪ್ಯಾಲೇಸ್‌ನಲ್ಲಿ ಹೋಗಿ ಫೈಲ್ ನೋಡುತ್ತಿದ್ದರು ಹೀಗೆಲ್ಲಾ ಹೇಳಿದ್ದಾರೆ. ಆದರೆ ನಾನು ಹೇಳುವುದು ಹೀಗೆಲ್ಲಾ ಹೇಳ ತಕ್ಕಂಥಾದ್ದು ಸರಿಯಲ್ಲ. ಇದನ್ನು ಟೀಕೆ ಮಾಡುವ ಉದ್ದೇಶದಿಂದ ಹೇಳಬಹುದೇ ವಿನಾ ನ್ಯಾಯವಾಗಿ ಹಾಗೆ ಹೇಳಬಾರದು. ಅದಕ್ಕೂ ಬೇಕಾದರೆ ನಾವು ಉತ್ತರ ಕೊಡಬಹುದು. ಅವರ ನೇಚರ್ ಆಫ್ ವರ್ಕ್ ಹಾಗೆ ಇರುವುದರಿಂದ ಹಾಗೇನಾದರೂ ಮಾಡಿದರೆ ತಪ್ಪೇನಿಲ್ಲವಲ್ಲಾ. ಇನ್ನು ತಾವು ಒಂದು ವಿಷಯದಲ್ಲಿ ಟೀಕೆ ಮಾಡಿದ್ದೀರಿ, ಅರಣ್ಯದಲ್ಲಿ ಯಾರಿಗೋ ಒಬ್ಬರಿಗೆ ೩ ಸಾವಿರ ಎಕರೆಯನ್ನು ಕೊಟ್ಟು ಬಿಟ್ಟರು ಅದರಿಂದ ಅರಣ್ಯವೆಲ್ಲಾ ನಾಶವಾಗಿಬಿಟ್ಟಿದೆ ಎಂದು ಬಹಳ ದೊಡ್ಡದಾಗಿ ಚರ್ಚೆ ಮಾಡಿದ್ದೀರಿ. ಈ ಬಗ್ಗೆ ವಾದ ವಿವಾದಕ್ಕೆ ಹೊರಟರೆ ನಾವು ಕೊಟ್ಟಿದ್ದು ನೀವು ತಪ್ಪು ಅಂತ ಹೇಳುತ್ತೀರಿ, ನಾನು ಹಾಗೆ ಕೊಟ್ಟಿದ್ದು ಸರಿ ಎಂದು ನಾವು ಹೇಳುತ್ತೇವೆ, ಕೊನೆಗೆ ಹೀಗೆ ತಪ್ಪು ಸರಿ ತಪ್ಪು ಸರಿ ಎಂದು ಹೇಳಿ ಹೇಳಿ ಕೊನೆಗೆ ನಾವು ಕೊಟ್ಟಿದ್ದು ಸರಿ ಎಂದು ಹೇಳಿಕೊಂಡು ಬಡ್ಜೆಟ್ ಅನ್ನು ಪಾಸು ಮಾಡಿಸಿಕೊಳ್ಳು ತ್ತೇವೆ. ಕೊನೆಗೆ ಗುಂಡೂರಾಯರು ಹೀಗೆ ಮಾಡಿದರೆ ಅಂತ ಹೇಳಿಕೊಳ್ಳುತ್ತೀರಿ. ನಾನು ನಿಮ್ಮನ್ನು ಕೇಳುತ್ತೇನೆ ಹಿಂದೆ ನಿಜಲಿಂಗಪ್ಪನವರು ಮಾಡಿದ್ದು ದೇವರಾಜ ಅರಸ್‌ರವರು ಮಾಡಿದ್ದು ಹಾಗೆಯೇ, ಆ ಕಡೆಯೂ ೪ ಜನ ಚಪ್ಪಾಳೆ ತಟ್ಟುತ್ತಾರೆ, ಈ ಕಡೆಯೂ ೪ ಜನ ಚಪ್ಪಾಳೆ ತಟ್ಟುತ್ತಾರೆ, ಎರಡೂ ಕಡೆಯೂ ಚಪ್ಪಾಳೆ ತಟ್ಟುತ್ತಾರೆ. ಕೊನೇಗೆ ಮೆಜಾರಿಟಿ ಇರುವ ಕಡೆ ಪಾಸ್ ಮಾಡಿಸಿಕೊಂಡು ಹೋಗು ತ್ತಾರೆ, ಹಿಂದೆ ನಡೆದುದೆಲ್ಲಾ ಹೇಗೆ ಅನ್ನುವುದನ್ನು ನಾನೇನು ಬೇರೆ ಹೇಳಬೇಕಾಗಿಲ್ಲಾ. ಶ್ರೀ ಭೀಮಣ್ಣ ಖಂಡ್ರೆಯವರು ಉರ್ದುವಿನಲ್ಲಿ ಒಂದು ಗಾದೆ ಹೇಳಿದರು ಬಹಳ ಚೆನ್ನಾಗಿತ್ತು.

ಶ್ರೀ ಪಿ. ರಾಂದೇವ್.—ತಾವೂ ಕೂಡ ಜಟಕಾ ಗಾಡಿ ಕಥೆ ಹೇಳಿದರಲ್ಲಾ.

ಶ್ರೀ ಆರ್. ಗುಂಡೂರಾವ್.—ಹೇಳಾಯಿತಲ್ಲಾ ಬಿಡಿ ನಮ್ಮ ಸಂಸ್ಕೃತಿ ಹೀಗೆ ಇರುವಾಗ ಉರ್ದುವಿನಲ್ಲಿ ಆ ಗಾದೆ ಹೇಳಿದರೆ ಯಾರಿಗೂ ಗೊತ್ತಾಗುವುದಿಲ್ಲ. ಆದರೂ ಕೂಡ ನಾನು ಈ ಸಂದರ್ಭ ದಲ್ಲಿ ತಮ್ಮ ಜ್ಞಾಪಕಕ್ಕೆ ಆ ಉರ್ದುವಿನ ಗಾದೆಯನ್ನು ತರಬಯಸುತ್ತೇನೆ. ಅದು ಈ ರೀತಿ ಇದೆ.—

"ಬಕರಿ ಜಹರ್ ಪೀಕರ್ ದೂದ್ ದೇತಿ ಹೈ,
ಸಾಂಪ್ ದೂದ್ ಪೀಕರ್ ಜಹರ್ ದೇತಿ ಹೈ,
ಹಮಾರೇ ನೇತಾಜಿ ಲೋಗ್ ಸಿರ್ಫ್ ಹಾತ್ ದೇತೇ ಹೈ"

ಅಂದರೆ ಇದರ ಅರ್ಥ ಆಡಿನ ಮರಿ ವಿಷ ಕುಡಿದು ಹಾಲು ಕೊಡುತ್ತದೆ, ಸರ್ಪ ಹಾಲು ಕುಡಿದು ವಿಷ ಕೊಡುತ್ತದೆ, ಆದರೆ ಪೊಲಿಟಿಕಲ್ ಲೀಡರ್ಸ್ ಇದ್ದಾರಲ್ಲಾ, ಅವರು ಕಾಂಗ್ರೆಸ್ ಆಗಿರಬಹುದು, ಜನತಾ ಆಗಿರಬಹುದು, ಬಿ.ಜೆ.ಪಿ. ಆಗಿರಬಹುದು, ಸಿ ಪಿ ಐ ಆಗಿರಬಹುದು ಸಿ ಪಿ ಎಂ ಆಗಿರಬಹುದು, ಇನ್ನು ಯಾವ್ಯಾವುದೋ ಆ ದಳ ಈ ದಳ ಅಂತ ಸೇರಿಕೊಂಡಿರುವವರು ಆಗಿರಬಹುದು, ಇದು ಎಲ್ಲರಿಗೂ ಕೂಡ ಅನ್ವಯಿಸುತ್ತದೆ, ಈ ರಾಜಕೀಯ ನಾಯಕರ ಗಳು ಏನು ಇದ್ದಾರೆ ಅವರು ಹಾಲೂ ಕೊಡುವುದಿಲ್ಲ. ವಿಷವೂ ಕೊಡುವುದಿಲ್ಲ, ಕೈ ಕೊಡುತ್ತಾರೆ. ಯಾರೊಬ್ಬರು ತೆಗೆದುಕೊಂಡರೂ ಹಾಗೇನೇ.

ಇಷ್ಟೆಲ್ಲಾ ಮಾತನಾಡಿದ್ದುದು ಏನೆಂದರೆ. ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇ ವೆಂದು. ನಾನು ಕೇಳುತ್ತೇನೆ, ಇವತ್ತು ಯಾರು ನಾಯಕರು ಡೆಲ್ಲಿಗೆ ಟ್ರೈನ್‌ನಲ್ಲಿ ಹೋಗುತ್ತಾರೆ? ಯಾರೂ ಟ್ರೈನಲ್ಲಿ ಹೋಗುವುದಿಲ್ಲ. ಎಲ್ಲರೂ ಪ್ಲೇನ್‌ನಲ್ಲಿ ಹೋಗುತ್ತಾರೆ; ಏಕೆ ಹೋಗುತ್ತಾರೆಂದರೆ ಅವರಿಗೆ ಕೆಲಸಗಳು ಆಗಬೇಕು ಅದಕ್ಕೆ ಹೋಗಂತ್ತಾರೆ. ಅವರು ಯಾವ ಪಾರ್ಟಿಯವರೆ ಆಗಿರಲೀ ಹೋಗುತ್ತಾರೆ. ಮಾನ್ಯ ದೇವೇಗೌಡರು ಮತ್ತು ಬೊಮ್ಮಾಯಿಯವರು ಎಷ್ಟು ಸಲ ಡೆಲ್ಲಿಗೆ ಪ್ಲೇನ್ ನಲ್ಲಿ ಹೋಗಿದ್ದರು? ಅದೇ ರೀತಿಯಲ್ಲಿ ನಾವು ಹೋಗುತ್ತೇವೆ, ನೀವು ಹೋಗುತ್ತೀರಿ. ಮಾನ್ಯ ಬಂಗಾರಪ್ಪನವರು ಮೂರ್ತಿಯವರ ಬಗ್ಗೆ ಏನೇನೋ ಹೇಳಿದರು. ಇದು ಪ್ರಶ್ನೆಯಲ್ಲ, ಅವರಿಗೂ ಗೊತ್ತಿದೆ, ದೇವರಾಜ ಅರಸ್ ಅವರು ಮತ್ತು ಮೂರ್ತಿಯವರು ಎಷ್ಟುರವಟ್ಟಿಗೆ ಸ್ನೇಹಿತರಾಗಿದ್ದರು ಎಂದು. I wrill tell you some more thing also. When late Sri Devaraj Urs and Sri Murthy were frinds. I was the Information Minister then and Sri Urs introduced me to Sri K K. Murthy ಇದರ ಮೇಲೆ ಅವರ ಪರಿಚಯ ನನಗಾಯಿತು, Prior to this I never knew him. I came in contact

with Sri Murthy only when Sri Deveraj Urs introduced him. At that time while introduing Sri Murthy Sri Urs said he is a very good frind of him and he helped us in difficult days and all that. ಈ ಸಮಯದಲ್ಲಿ ಮಾನ್ಯ ಕೆಂಪರಾಜ ಅರಸ್ ಅವರು ಬಂದರು, ಅವರಿಗೆ Film Development ಚೇರ್ಮನ್‌ಷಿಪ್ ಕೊಡಬೇಕೆಂದಾಯಿತು. ಅದಾದಮೇಲೆ ಮಾನ್ಯ ಸುಬ್ಬಯ್ಯ ಶೆಟ್ಟಿಯವರು ಬಂದರು, When Sri Kemperaj Urs came to Bangalore from Madras he wanted to be the Chairman of Karnataka Film Development Corporation as he was in the film field for quite some time, At that time I was the Information Minister and I claimed the Chairmanship of that Corpotation. Mr. Urs did not give me that post. But after sometime I was made the Chairman of the Film Development Corporation. ಇವರನ್ನು ಎಂ.ಡಿ. ಮಾಡಬೇಕು ಎಂದು ಮಾಡಿದರು. Sri Devaraj Urs wanted to give the Chairmanship to Sri Kemperaj Urs. When I was asked to relieve of that post I refused to do so and in the capacity of a Minister I wrote the reasons for not giving up the post of Chairman and recorded reasons on the file. I have mentioned in the file that I decline to agree with the proposals, and sent the file to the Home Secretary. I remember Sri Hanuman was incharge of Home Department. ಆಮೇಲೆ ಮಾನ್ಯ ದೇವರಾಜ ಅರಸ್ ಅವರು ನನ್ನನ್ನು ಕರೆಯಿಸಿದರು, I said I have given my opinion. If the Chief Minister desires to change ii he could overrule my orders but I cannot sign because Sri Kemparaj Urs is the brother of the Chief Minister. then what happened you know my portfolio was skipped off and Sri Subbaiah Shetty was made Information Minister. Even then Sri Subbaiah Shetty also did not agree with that proposal. Then steps were taken to remove Sri K.K. Murthy from the Managaing Director's post. Then arose the differences between Sri Murthy and Sri Devaraj Urs. Though they were friends they had to part with because of the action of Sri Devaraj Urs. I also remember Sri Murthy helped the party when I was heading the Youth Congress in the State. ಪಾರ್ಟಿ ಸ್ಪ್ಲಿಟ್ ಆದಮೇಲೆ ಅವರು ದೇವರಾಜ ಅರಸ್ ಜೊತೆ ಇರಲಿಲ್ಲ. ನಂತರ ಗುಂಡೂರಾಯರವರು ಬಂದರು ಇವರ ಜೊತೆಗೆ ಸೇರಿಕೊಂಡರು. ಕೆಲವರು ಏನು ಮಾಡುತ್ತಾರೆ ಎಂದರೆ ಗುಂಡೂರಾಯರಿಗೂ ಬಂಗಾರಪ್ಪನವರಿಗೂ ಆಗೋದಿಲ್ಲವೆಂದರೆ, ಗುಂಡೂರಾಯರಿಗೆ ಏನು ಹೇಳಬೇಕು ಬಂಗಾರಪ್ಪನವರಿಗೆ ಏನು ಹೇಳಬೇಕು ಎಂದು ಬುದ್ಧಿವಂತಿಕೆ ಉಪಯೋಗ ಮಾಡುತ್ತಾರೆ. ಅವರ ಹತ್ತಿರ ಹೋಗಿ ಇವರನ್ನು ಬೈಯುವುದು. ಇವರ ಹತ್ತಿರ ಬಂದು ಅವರನ್ನು ಬೈಯುವುದು, ಇದು ನಡೆಯುತ್ತಾ ಇರುತ್ತದೆ. ಇವರು ನಮ್ಮ ಪಾರ್ಟಿಗೆ ಬಂದರು, ಬಿ.ಡಿ.ಎ. ಚೇರ್ಮನ್ ಆದರು, ಇವರ ಮೇಲೆ ಆಪಾದನೆಗಳನ್ನು ಮಾಡಬೇಕಾದರೆ ಆಪಾದನೆಗಳು ಸಾಬೀತಾಗುವಂತೆ ಇರಬೇಕು. ಹಿಂದಿನ ಬಿ.ಡಿ.ಎ ಚೇರ್ಮನ್ ಅವರಮೇಲೆ ಬೇಕಾದಷ್ಟು ಆಪಾದನೆಗಳು ಬಂದಿದ್ದವು, ಎನಕ್ವಯರಿ ನಡೆಯುತ್ತಿದೆ, ಸಿಒಡಿಗೂ ಕೆಲವು ವಿಷಯಗಳನ್ನು ರೆಫರ್ ಮಾಡಲಾಗಿದೆ, I only appeal to them to bring specific issues before this House. If the hon. Members were to bring specific instances certainly we look into them and take action. Let him send them in writing to the Government. In fact the COD has probed the affairs of the BDA and its previous Chairman. Several charges were framed

against the Chairman and other Officers and they have been charg-sheeted and now the matter is before the Court for hearing. This is the postion. So, let me make my position clear I am not interested to protect anybody here Tomorrow if the hon. Member Sri Bangarappa comes to know of certain charges let him write to me listing those charges, we will certainly get them enquired and take apropriate action. We don't mind to initiate action let him be the Chairman of the BDA or any other person. if they are guilty certainly we will initate action against such persons. But my point is all those allegations must be in writing with sufficient proof so that it would make easy the enquiry At the same time I am of the view that it is not fair on the part of the public leaders to make blank charges without proof on certain persons wholding important posts. Let the public leaders write to me if they have any information aboutthe misappropriation or misdeeds of important functionaries in the State. If they do so it is as much as helping me to initiate action against them and to give clean administration to the people. I am not accusing anyboby in this. It is only the principle that is to be followed by our public leaders. Let us make charges with some responsibility. Let us not hurle unfounded charges. ನನ್ನಲ್ಲಿ ಯಾವ ಮುಚ್ಚುಮರೆ ಯಿಲ್ಲ. ಮಾನ್ಯ ಸದಸ್ಯರಾದ ಚಂದ್ರೇಗೌಡರು ಏಳೂವರೆ ತಿಂಗಳು ಕಾದರು. ಏನಾಯಿತು, ಇಂದಿರಾ ಗಾಂಧಿಯವರನ್ನು ಕಂಡಿರಾ, ರಾಜೀವ್ ಗಾಂಧಿಯವರನ್ನು ಕಂಡಿರಾ ಎಂದು ಕೇಳುತ್ತಲೇ ಇದ್ದರು. ನಾನು ಹೇಳುತ್ತಿದ್ದೆ, ಸ್ವಲ್ಪ ಸಮಾಧಾನವಾಗಿರಿ, ನಿಮ್ಮ ಕೆಲಸ ಮಾಡೋಣ ಎಂದು ಹೇಳುತ್ತಿದ್ದೆ. ಅವರಿಗೆ ಬಹಳ ಆತುರ. ಆಮೇಲೆ ನಾನೂ ಡೆಲ್ಲಿಗೆ ಹೋಗಬೇಕಾದರೆ ನಾನೂ ನಿಮ್ಮ ಜೊತೆಯಲ್ಲಿ ಬರುತ್ತೇನೆಂದರು, ಬನ್ನಿ ಹೋಗೋಣ ಎಂದೆ, ನನ್ನ ಜೊತೆಯಲ್ಲಿಯೇ ಅವರು ಡೆಲ್ಲಿಗೆ ಬಂದರು, ಪ್ರಧಾನಮಂತ್ರಿಗಳನ್ನು ಮೀಟ್ ಮಾಡಿದರು. ಅವರು I will talk to the Chief Minister ಎಂದರು. ಮತ್ತೆ ನನ್ನನ್ನು ಕೇಳಿದರು. ಏಳೂವರೆ ತಿಂಗಳು ಕಾದರು. ಇವರನ್ನು ಯಾರು ಕರೆದಿದ್ದರು ಯಾರೂ ನಮ್ಮ ಪಾರ್ಟಿಗೆ ಬನ್ನಿ ಎಂದು ಕರೆಯುಲಿಲ್ಲ. ಅವರೇ ನಮ್ಮ ಪಾರ್ಟಿಗೆ ಬರುತ್ತೇನೆಂದು ಅರ್ಜಿಯನ್ನು ಕೊಟ್ಟುಕೊಂಡಿದ್ದರು. ಸ್ವಲ್ಪ ದಿವಸ ದೇವರಾಜ ಅರಸ್ ಅವರ ಜೊತೆಯಲ್ಲಿದ್ದರು ಮತ್ತೆ ಬಿಟ್ಟರೆ ನಮ್ಮಲ್ಲಿ ಬರುತ್ತೇವೆಂದು ಹೇಳುತ್ತಿದ್ದರು. ಪದೇ ಪದೇ ನನ್ನನ್ನು ಏನಾಯಿತುಏನಾಯಿತು ಎಂದು ಕೇಳುತ್ತಲೇ ಇದ್ದರು. ಆದರೂ ಅವರಿಗೆ ಸಂಶಯ ಇದ್ದೇ ಇತ್ತು. ಈ ಸಂಶಯ ಏಕೆ? I will tell you Everyone in the party should be loyal to its Leadership. Now Smt. Indira Gandhi is not only our Prime Minister she is also the Leader of our Party. So, my party Leaders feel that I should be the Chief Minister. Accordingly I am in that post so long as our party is in power. Tomorrow if our Leaders feels that I should vacate the office of the Chief Minister I cannot remain there. I have to obey the orders of our Leader. I cannot be there. I cannot act contry to the wishes of our Leaders. ಏಳೂವರೆ ತಿಂಗಳು ಕಾದು, ನಂತರ ನಾನು ಡೆಲ್ಲಿಗೆ ಹೋದಾಗ ಇವರ ವಿಚಾರವನ್ನು ಪ್ರಧಾನಿಯವರ ಹತ್ತಿರ ಪ್ರಸ್ತಾಪ ಮಾಡಿದಾಗ ಅವರು ಹೇಳಿದರು Sri Chandregowda may be admitted to the Congress Party. ನಾನು ಇದನ್ನು ಸಭೆಯಲ್ಲಿ ಅನೌನ್ಸ್ ಮಾಡಬೇಕು ಎಂದು ಇದ್ದೆ. ಡೆಲ್ಲಿಯಲ್ಲಿ ಏರ್‌ಪೋರ್ಟ್‌ಗೆ ಪ್ರೆಸ್‌ನವರು ಓಡೋಡಿ ಬಂದರು. ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದರಾ, ಏನು ವಿಷಯ ಎಂದು ಕೇಳಿದರು,

they came and asked me some questions When they asked whether I met the Prime Minister I said I met her and discussed some political and other matters. ಬೆಂಗಳೂರಿಗೆ ಬರುತ್ತೇನೆ, ಇವರು ಆಗಲೇ ಜ್ಯೋತಿಯನ್ನು ದೀವಟಿಗೆಯನ್ನು ಹಿಡಿದುಕೊಂಡು ಹೊರಟು ಬಿಟ್ಟಿದ್ದಾರೆ. In fact when I met the press people I have decided to tell them that Sri Chandregowda has been admitted toour party. But I defered it. ಕುಟುಂಬದ ರಾಜಕೀಯ, ಸರ್ವಾಧಿಕಾರ ಬಹಳ ಇದೆ ಎಂದು ಹೇಳುತ್ತಾ ಹೊರಟಿದ್ದರು ಇದು ಇವರಿಗೆ ಮೊದಲೇ ಗೊತ್ತಿರಲಿಲ್ಲವೇ? ಇವರು ಏಳೂವರೆ ತಿಂಗಳು ಕಾಯುತ್ತಾ ಇರಬೇಕಾದರೆ ಇದು ಇವರಿಗೆ ಗೊತ್ತಿರಲಿಲ್ಲವೇ ಎಂದು ನಾನು ಇಲ್ಲಿ ಕೇಳುವುದು.

9-00 A. M.

These things will undermine the whole society, the whole nation. Yes if he does not like the functioning of the Government or of a party he must come out. He should not stay there. ಅವರು ಆತ್ಮಕ್ಕೆ ಏತಕ್ಕೆ ವಂಚನೆ ಮಾಡಿಕೊಳ್ಳಬೇಕು ?

You must tell the leader I do not agree with certain things I don't accept. There is nothing wrong. ನಾವು ಪಾರ್ಟಿ ಕಟ್ಟುತ್ತೇವೆ ಅಂತ ಅವರು ಹೇಳಿದರೆ ಕಟ್ಟಿ ಅಂತ ನಾವು ಹೇಳುತ್ತೇವೆ. ಹೊಸ ಅಧ್ಯಾಯ ಪ್ರಾರಂಭ ಮಾಡುತ್ತೇವೆ ಅಂದರೆ ಮಾಡಿ ಅಂತ ಹೇಳುತ್ತೇವೆ. ಹೊಸ ರೆವಲ್ಯೂಷನ್ ತರುತ್ತೇವೆ ಎಂದರೆ ತನ್ನಿ ಎಂದು ನಾವು ಹೇಳುತ್ತೇವೆ Everything is not in the hands of an individual Why did Sri Chandregowda resign the Parlimentary Seat in Chickmagalur? Why did he accept the advice of his leader? If he did not like that he should have the courage to say that I have been elected by the people of that constituency and I have to serve them for a period of 5 years. He should have said like that. But he resigned Why did he do so? He has resigned because he was assured of a berth in the Cabinet by late Sri Devaraj Urs. Even in our party Sri Dharmasingh resigned his seat on my advice to accomodate our senior party leader Sri Stephen. I also told him that I would accomodate him in my Cabinet. Accordingly Sri Dharmsingh resigned the Parliamentary Seat from Gulbarga and in that place Sri Stephen was got elected. After the election Sri Dharmsing was made a Minister for Municipal Administration, and everything was over. There is no room for any sort of criticism aganist anybody. At the same time I do accept criticism but not unfounded or baseless allegation. ಇದು ನಮ್ಮ ಮತ್ತು ಅವರ ಸಂತೋಷಕ್ಕೆ ಹೇಳಿಕೊಳ್ಳುವುದಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಡಿ. ಬಿ. ಚಂದ್ರೇಗೌಡರು ಮತ್ತೊಂದು ಸದನದ ಸದಸ್ಯರಾಗಿದ್ದಾರೆ. ಅವರ ವಿಚಾರವನ್ನು ಇಲ್ಲಿ ಹೇಳುವುದು ಅಷ್ಟು ಸರಿಯಲ್ಲ. ಅವರ ವಿಷಯ ಏನಿದೆ ಎಂಬುದನ್ನು ನಾವು ಹೇಳುವುದಕ್ಕಾಗುವುದಿಲ್ಲ, Hon'ble Chief Minister is referring to the resignation tendered by Sri D. B. Chandregowda to his Parlimentary Seat. Since he is not a member of this House it is better we avoid mentioning his name. He is not here to defend himself.

SRI R. GUNDU RAO.—I understood the point made by Hon'ble Member Sri Bangarappa I am not casting aspersions on anybody. I am not making any charge against Sri Chandre Gowda. I am not accusing him. I know he is a senior member in the Legislative Council. All these things came because. ಇದೆಲ್ಲಾ ಶ್ರೀ ಕೆ. ಕೆ. ಮೂರ್ತಿಯವರ ಕಾಂಟೆಕ್ಸ್ಟ್‌ಗೆ ಬಂತು. ನಾವು ನೀವು ಈ ಪಾರ್ಟಿಯಲ್ಲಿ ಇರಬೇಕಾದರೆ ಶ್ರೀ ಕೆ. ಕೆ. ಮೂರ್ತಿಯವರು ನಮ್ಮ ಜೊತೆಯಲ್ಲಿದ್ದರು. ನಮ್ಮ ಜೊತೆಯಲ್ಲಿ ಕಡಿಮೆ ಇದ್ದಿರಬಹುದು. ನಿಮ್ಮ ಜೊತೆಯಲ್ಲಿ ಜಾಸ್ತಿ ಇದ್ದಿರಬಹುದು. ಕೆಲವು ಸಂದರ್ಭಗಳಲ್ಲಿ ನಾವು ಅವರ ಜೊತೆಯಲ್ಲೇ ಹೋಗುತ್ತಾ ಇದ್ದೆವು.

That doesnot mean that he is not responsible for the offences committed, that he should be left scotfree. I am also not for it. But while making charges one should be a little cautious in making charges against a person. The charges must be specific. If you fell that certain charges would prove beyond doubt certainly. we will examine them. The law will take its own course ೨ ಕೋಟಿ, ೩ ಕೋಟಿ ಅಂತ ಹೇಳಿ–ಹೇಳಿ ಇವತ್ತಿನ ದಿವಸ ನಮ್ಮ ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಈ ರೂಪಾಯಿಯ ಮೌಲ್ಯ ಕಡಿಮೆಯಾಗುತ್ತಾ ಇದೆ. ನಾನಂತೂ ಈ ಎರಡೂವರೆ ವರ್ಷಗಳಲ್ಲಿ ಕೋಟಿಗಳ ಲೆಕ್ಕ ಹಾಕಿದರೆ ನನ್ನ ನೂರು ವಂಶದವರೆಗೆ ನನ್ನ ಮಕ್ಕಳು ಅವರ ಮಕ್ಕಳು, ಅವರ ಮಕ್ಕಳು ಅವರೆಲ್ಲಾ ವಿಮಾನದಲ್ಲೇ ತಿರುಗಾಡಬೇಕು ಅಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿರಬೇಕಾಗಿತ್ತು. We have not seen crores. ನಾವೆಲ್ಲಾ ಈ ಪಾರ್ಟಿ ಕಟ್ಟುವುದಕ್ಕೆ ಎಷ್ಟೆಷ್ಟು ಕಷ್ಟ ಪಟ್ಟಿದ್ದೇವೆ ಎನ್ನುವುದು ಅದೆಲ್ಲಾ ನಮಗೇ ಗೊತ್ತು.

SRI P. RAMDEV.—Are you not collecting funds for the coming elections ?

SRI R. GUNDU RAO.—Have you not collected during 1977 Parliamentary Elections. The funds collected by the Janatha Party was three times bigger than my party. ಈಗ ಅದೆಲ್ಲಾ ಬೇಡ. ನಾನು ಹೇಳುವುದೇನೆಂದರೆ, ಶ್ರೀಮಾನ್ ಬಂಗಾರಪ್ಪನವರು ಶ್ರೀಮಾನ್ ಗುಂಡೂರಾವ್‌ರವರು ಹೆಲಿಕ್ಯಾಪ್ಟರ್‌ನಲ್ಲೇ ಹೋಗುತ್ತಾರೆ ಎಂದು ಭಾಷಣ ಮಾಡಿದರು. ಮಾನ್ಯ ಮೊರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಯವರಾಗಿದ್ದಾಗ ದಾವಣಗೆರೆಯಲ್ಲಿ ಯಾರದೋ ಮಗಳ ಮದುವೆಗೆ ಬಂದರು.

I am just quoting. When S i Moraji Desai was the Prime Minister, When Sri Charan Singh, was the Prime Minister they did travel in a special aircraft. Can we question as to why they travelled in a special aircraft. We cannot question that. Here it is not the person. or anybody. It is the office, they hold, We have got to maintain the dignity of the office the dignity of the office has got to be Maintained. Just now Sri Kakkilaya went to the airport to receive Sri Jothi Basu, Chief Minister of West Bengal. Can we aske why he has gone there. He has gone there because the Chief Minister of other another State is coming. Naturally it is our duty to provide all the protocol facilities. Tomorrow if the Prime minister or President visits our State it is our duty to provide

escort and other facilities. All these things are essential to maintain the decorum and dignity of the office they hold. The question of individual does not comes in here. ನಾನಾಗಿದ್ದರೆ ಈ ಹೆಲಿಕ್ಯಾಪ್ಟರನ್ನು ತೆಗೆದುಕೊಳ್ಳುತ್ತಾ ಇರಲಿಲ್ಲ. ಮಾನ್ಯ ದೇವರಾಜ ಅರಸರು ಇದನ್ನು ತೆಗೆದುಕೊಂಡದ್ದು ತಪ್ಪು ಎಂದು ನಾನು ವಾದ ಮಾಡುವುದಿಲ್ಲ ಹೆಲಿಕ್ಯಾಪ್ಟರ್ ಇರಬೇಕು. I have not bought the helicopter. It is Sri Urs who purchased it for official use. But his period was very short. I cannot help it. Now I am in office. I am making use of it especially to reach a place on time, to meet the people of a particular place. It is not meant for making private trips. ಮಾನ್ಯ ದೇವರಾಜ ಅರಸ್‌ರವರು ಬಹಳ ಯೋಚನೆ ಮಾಡಿ ಇದನ್ನು ತೆಗೆದುಕೊಂಡರು ಹಾಗೂ ಇದನ್ನು ಸ್ವಲ್ಪ ಕಾಲ ಉಪಯೋಗಿಸಿದರು. ಅವರು ಇದನ್ನು ಉಪಯೋಗಿಸಿದಂತಹ ಕಾಲ ಕಡಿಮೆ ಇತ್ತು. It is not meant for my personal use. I am not using for my personal works. it is being used to visit a place to meet the people and also to come to the capital within the available time at our disposal. Just day before yesterday the Vice-President of India came to Bangalore to unveil the portrait of Dr. Ambedkar in our Assembly Chamber. In fact the Vice-President travelled in a special aircraft. It is because which he holds a high office. Here it is not the individual Here it is the office which is supreme. We have got to maintain the dignity of the office. It is our duty to maintain the dignity of the office. Therefore, I appeal through you Sir, to our friends not to undermined authority, not to undermine the persons holding high offices. Whether they belong to Janatha Party or the Congress Party or BJP. Even while the Janatha Party was in power so many Minister and other dignitaries have travelled in special aircrafts. ಮಾನ್ಯ ಬಂಗಾರಪ್ಪನವರು ಇನ್‌ಡಿವಿಜ್ಯುಯಲ್ ಆಗಿ ಶ್ರೀ ಕೆ. ಕೆ. ಮೂರ್ತಿಯವರ ಮೇಲೆ ಹೇಳಿದ್ದಾರೆ ಅದನ್ನು ಹೇಳುವ ಬದಲು ಅವರು ಅವರ ಮೇಲೆ ಏನೇನು ಚಾರ್ಜಸ್ ಮಾಡಿದ್ದಾರೆ ಅದನ್ನು ಬರೆದು ಕೊಡಲಿ ನಾವು ಅದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇವೆ, ಅವರು ಅದನ್ನು ಆತ್ಮ ಮುಟ್ಟಿಕೊಂಡು ಹೇಳಲಿ. I leave to your judgment. We are all together, It is not that Sri Bangarappa does not know Sri K. K. Murthy.

ಶ್ರೀ ಎಸ್. ಬಂಗಾರಪ್ಪ.—ನಾನು ನೀವು ಹೆಲಿಕ್ಯಾಪ್ಟರ್‌ನಲ್ಲಿ ಹೋಗುವುದು ಬೇಡ ಎಂದು ಹೇಳಲಿಲ್ಲ. ಅಪರೂಪಕ್ಕೆ ನೀವು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ. ನೀವು ರೋಡ್‌ನಲ್ಲಿ ಹೋದರೆ ಅನೇಕ ಹಳ್ಳಿಗಳು ಸಿಕ್ಕುತ್ತವೆ. ಹಳ್ಳಿ ಜನರನ್ನು ಮಾತನಾಡಿಸಿ ಅವರ ಸ್ಥಿತಿಯನ್ನು ಅರಿತುಕೊಳ್ಳಬಹುದು. ಯಾವಾಗಲೂ ಹೆಲಿಕ್ಯಾಪ್ಟರ್‌ನಲ್ಲಿ ಹೋಗುವುದರಿಂದ ಹಳ್ಳಿಯ ಜನರನ್ನು ಯಾವಾಗ ಮಾತನಾಡಿಸುತ್ತೀರಿ ಎನ್ನತಕ್ಕ ವಿಷಯಕ್ಕೆ ನಾನು ಕೇಳಿದ್ದು ಅಷ್ಟೆ. ಆ ಒಂದು ಇನ್‌ಟೆನ್‌ಷನ್‌ನಲ್ಲಿ ಕೇಳಿದೆ.

ಶ್ರೀ ಆರ್. ಗುಂಡೂರಾವ್.—ನಾನು ಯಾವಾಗಲೂ ಹೆಲಿಕ್ಯಾಪ್ಟರ್‌ನಲ್ಲೇ ಹೋಗಬೇಕು. ಎಂದು ಒಂದು ಮಾತನ್ನೂ ಆಡಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ ನೀವು ತುಮಕೂರಿಗೆ ಮದುವೆಗೆ ಹೋಗಿದ್ದರ ಬಗ್ಗೆ ಅವರು ಹೇಳಿದ್ದಾರೆ.

ಶ್ರೀ ಆರ್. ಗುಂಡೂರಾವ್.--ಅವತ್ತು ತುಮಕೂರಿನಿಂದ ವಾಪಸ್ಸು ಅಸೆಂಬ್ಲಿಗೆ ಬರಬೇಕಾಗಿತ್ತು ಅವತ್ತು ಅರ್ಜೆಂಟ್ ಕಳುಹಿಸಿತ್ತು. It is not wrong. Sri K. K. Murthy was a very good friend of him. We were together. ಶ್ರೀ ಮೂರ್ತಿಯವರ ವಿಚಾರ ದಲ್ಲಿ ಅವರು ಚಾರ್ಜ್ ಮಾಡಬಾರದು ಎಂದು ಹೇಳುವುದಿಲ್ಲ.

SRI S. BANGARAPPA.—It is not so. Sri Murthy is a good friend of you.

SRI R. GUNDU RAO.—Yes, He was your friend for some time. You know him.

SRI S. BANGARAPPA.—Yes I know him. ಅದರ ಬಗ್ಗೆ ಅನುಮಾನವಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ I leave it to the best judgement of my opposition friends. Let them test their hearts and decide. I am not interested in it. But, the general public ಆ ತರಹ ಮಾಡುವುದು ನಮ್ಮ ಪೊಲಿಟಿಕಲ್ ಲೈಫಿನಲ್ಲಿ ಸರಿಯಾದಂತಹ ಮಾರ್ಗವಲ್ಲವೆಂದು ನಾನು ಹೇಳುತ್ತೇನೆ. ಈಗ ನಮ್ಮ ಕರ್ನಾಟಕದಲ್ಲಿ ನಾವು ವಿಶ್ವಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ಹೊರಟಿದ್ದೇವೆ. ಕರ್ನಾಟಕ ರಾಜ್ಯ ದಲ್ಲಿ ಕನ್ನಡ ಭಾಷೆಯ ಬಗ್ಗೆ ಕನ್ನಡದ ಅಭಿವೃದ್ಧಿಯ ಬಗ್ಗೆ ನಮ್ಮ ಸರ್ಕಾರ ಕೈಗೊಂಡಷ್ಟು ಬೇರೆ ಯಾವ ಸರ್ಕಾರ ಕೈಗೊಂಡಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ ಮತ್ತೆ ಎಲ್ಲಾ ಹಿರಿಯ ಕನ್ನಡ ಕಲಾವಿದರಿಗೆ ನಿವೃತ್ತಿ ವೇತನವನ್ನು ಕೊಡಬೇಕೆಂದು ನಮ್ಮ ಸರ್ಕಾರ ಮನಸ್ಸು ಮಾಡಿ ಸುಮಾರು ಎರಡು ಕಂತುಗಳ ರೂಪದಲ್ಲಿ ಸುಮಾರು ೫೦೦ ಅರ್ಜಿಗಳನ್ನು ಸ್ಕ್ರೂಟನಿ ಮಾಡಿ ಆಗಸ್ಟ್ ೧೫ ನೇ ತಾರೀಖು ಒಂದು ಸ್ವಲ್ಪ ಜನರಿಗೆ ಮತ್ತು ನವಂಬರ್ ೧ನೇ ತಾರೀಖು ಅರ್ಧ ಜನರಿಗೆ ಕೊಡು ವಂತೆ ಸರ್ಕಾರ ನಿರ್ಧಾರ ಮಾಡಿದೆ. ಮತ್ತು ನಾನು ೧೯೮೧ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಬಂದ ಮೇಲೆ ಕಲಾವಿದರಿಗೆ ಪ್ರೋತ್ಸಾಹ ಕೊಡ ಬೇಕೆಂದು ಹೇಳಿ ಗುಬ್ಬಿ ವೀರಣ್ಣ ನವರ ಧರ್ಮಪತ್ನಿಯಾದ ಶ್ರೀಮತಿ ಬಿ. ಜಯಮ್ಮನವರನ್ನು ಸದಸ್ಯನಿಯನ್ನಾಗಿ ಮಾಡಿದೆವು, we thought that we should give some representation. We have given such recognition for such people. ಆ ಮೇಲೆ ಫಿಲಂ ಡವಲಪ್‌ಮೆಂಟ್ ಕಾರ್ಪೋ ರೇಷನ್ ಉದ್ಯಮವನ್ನು ಅಭಿವೃದ್ಧಿ ಮಾಡಬೇಕೆಂದು ಅನೇಕ ಜನರಿಂದ ಮನವಿಗಳು ಬಂದವು, ಆದ್ದ ರಿಂದ ಈ ಫಿಲಂ ಡವಲಪ್‌ಮೆಂಟ್ ಕಾರ್ಪೋರೇಷನ್ ಅಭಿವೃದ್ಧಿ ಮಾಡುವುದಕ್ಕಾಗಿ ಶ್ರೀಮತಿ ಬಿ. ಸರೋಜದೇವಿಯವರನ್ನು ಇದರ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. We appointed Smt. B. Saroja Devi, a well known artist in Kannada and Tamil film field, It is a sort of recognition. For the first time in the history of Karnataka, all film exhibitors drama exhibitors, Writers, musicians were given a State Dinner at the residence of the Chief Minister, including Dr. Rajkumar. It is a sort of recognition and not that I am feeling anything special in it. ಮತ್ತೆ ಹ್ಯಾಂಡಿ ಕ್ರಾಫ್ ಡವಲಪ್‌ಮೆಂಟ್ ಕಾರ್ಪೋರೇಷನ್ ಬಗ್ಗೆ ಹೇಳುವುದಾದರೆ Already, we have appointed Smt. Bharati Vishnuvardhan. She is doing a very good work. ಅವ ರಿಗೆ ಪ್ರೋತ್ಸಾಹವನ್ನು ಕೊಟ್ಟರೆ ಏತಕ್ಕೆ ಪ್ರೋತ್ಸಾಹ ಕೊಟ್ಟಿದ್ದೀರಿ ಎಂದು ಕೇಳುತ್ತೀರಿ ಅವರಿಗೆ ಪ್ರೋತ್ಸಾಹವನ್ನು ಕೊಡದಿದ್ದರೆ ಏತಕ್ಕೆ ಕೊಡಲಿಲ್ಲವೆಂದು ಪ್ರಶ್ನೆ ಮಾಡುತ್ತೀರಿ. The South-India film Federation passed a resolution appreciating the decision. There are so many people connected with the film industry, but they has not given representations hitherto. But, we are proud that the Government of Karnataka is considering and recognising the services of Film Chambers. Even the All-India Film Association

has passed a resolution appreciating the decision. Let us look in a sincere way. ಆದ್ದರಿಂದ ನಾವು ಈ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶ್ವಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ಹೊರಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದುವರೆವಿಗೂ ಅನೇಕ ಜನ ಈ ಫಿಲಂ ಡವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಒಳ್ಳೆಯ ಹೆಸರು ಪಡೆದುಕೊಂಡಿರುವವರು ಇದ್ದಾರೆ. ಈಗ ಉದಾಹರಣೆಗೆ ನಮ್ಮ ಕನ್ನಡ ಚಲನಚಿತ್ರ ನಟ ಡಾಕ್ಟರ್ ರಾಜ್‌ಕುಮಾರ್ ರವರು ಕರ್ನಾಟಕ ರಾಜ್ಯದ ಜನತೆಯ ಮೆಚ್ಚುಗೆಯನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ರಾಷ್ಟ್ರಮಟ್ಟದ ಪ್ರಶಸ್ತಿಯಾದ ಪದ್ಮವಿಭೂಷಣ ಅಥವಾ ಪದ್ಮಶ್ರೀ ಪ್ರಶಸ್ತಿಯನ್ನು ಕೊಡುವಂತೆ ನಮ್ಮ ಕರ್ನಾಟಕ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕೆ ತಾವು ಏನಾದರೂ ಪ್ರಯತ್ನ ಮಾಡುತ್ತೀರಾ ?

SRI R. GUNDU RAO.—I have no objection to recommend his name. Definitely, we recognise Dr. Rajkumar. He is a great artiste, I have said this at several places. As an artiste I like him so much. He has made a dent in the Karnataka Film field. I have alread written a letter to the Government of India that Dr. Rajkumar should be considered for Padmashri Award. The suggestion of the Hon. Member Sri S. Bangarappa is well taken note of. Again I will write to the Government of IndiaWhatever I could do at my level, I will do it,

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ ನಿಡಗೇರಿ ಕೃಷ್ಣ ಶರ್ಮರು ಒಬ್ಬ ದೊಡ್ಡ ಸಾಹಿತಿಗಳು ಅವರಿಗೆ ತಾವು ಸ್ವಲ್ಪ ದೊಡ್ಡ ಮನಸ್ಸು ಮಾಡಿ ಸಹಾಯ ಮಾಡಿದರೆ ಒಳ್ಳೆಯದು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ ಅವರಿಗೂ ಸಹ ಸಹಾಯ ಮಾಡೋಣ. I will definitely consider in whatever manner you suggest. You please write to me in this behalf and within a day or two, I will sanction it. ಅನೇಕ ವರ್ಷಗಳಿಂದಲೂ ನಮ್ಮ ಕರ್ನಾಟಕ ರಾಜ್ಯದ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡಬೇಕೆಂದು ಹೇಳುತ್ತಿದ್ದೇವೆ. ಆದರೆ ಮಾಡಲಿಲ್ಲ. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಅವರು ತಮಿಳುನಾಡಿನವಿಶ್ವ ಸಮ್ಮೇಳನವನ್ನು ಮಾಡಿ ನಮ್ಮನ್ನು ಆ ಸಮ್ಮೇಳನಕ್ಕೆಕರೆದಿದ್ದರು, ಆಗ ನಾವು ಆಸಮ್ಮೇಳನಕ್ಕೆ ಹೋಗಿ ಬಂದ ಮೇಲೆ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡ ಬೇಕು ಎಂದು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಭಾಷೆಯ ವಿಷಯ ಎಲ್ಲ ಕನ್ನಡಿಗರಿಗೂ ಸಂಬಂಧಪಟ್ಟಿದ್ದು. ನಾನು ೧೯೫೬ನೇ ಇಸವಿಯಲ್ಲಿ ಮಂಗಳೂರಿಗೆ ಹೋದಾಗ ನಮಗೆ ತುಳು ಭಾಷೆ ಸ್ವಲ್ಪ ಮಟ್ಟಿಗೆ ಬರುತ್ತಿತ್ತು, ಆಗ ನಾನು ಕನ್ನಡದಲ್ಲಿ ಟ್ಯಾಕ್ಸಿಯವನನ್ನು ಕರೆದಾಗ ಆತನಿಗೆ ಅರ್ಥವಾಗಲಿಲ್ಲ, ನಂತರ ತುಳು ಭಾಷೆಯಲ್ಲಿ ಮಾತನಾಡಿದಾಗ ಅವನು ಟ್ಯಾಕ್ಸಿಯನ್ನು ತಂದನು. ಆ ರೀತಿ ನಾವು ಆ ಪ್ರಾಂತ್ಯದ ಭಾಷೆಗಳಿಗೆ ಹೊಂದಿಕೊಂಡು ಹೋದರೆ ಮಾತ್ರ ನಮ್ಮ ಕೆಲಸಗಳು ಸಾಗುತ್ತವೆ ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು ಈ ವರ್ಷ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಮಾಡುತ್ತಿದ್ದೇವೆ. ಇದಕ್ಕೆ ಕೆಲವು ಜನ ಸಾಹಿತಿಗಳನ್ನು ಸಹ ನೇಮಕ ಮಾಡಿದ್ದೇವೆ. ಆದರೆ ಕೆಲವು ದಿವಸಗಳ ಹಿಂದೆ ಈ ವಿಶ್ವ ಕನ್ನಡ ಸಮ್ಮೇಳನಕ್ಕೆ ಸಂಬಂಧಪಟ್ಟಂತಹ ಸಾಹಿತಿಗಳು ರಾಜೀನಾಮೆಯನ್ನು ಕೊಟ್ಟಿದ್ದರು, ಅದು ಭಾಷಾ ಸೂತ್ರಕ್ಕೆ ಸಂಬಂಧಪಟ್ಟ ಹಾಗೆ ಅವರು ರಾಜೀನಾಮೆಯನ್ನು ಕೊಟ್ಟಿದ್ದರು, ಮತ್ತೇ ಈಗ ಅವರೇ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮತ್ತು ನಮ್ಮ ೨೨೪ ಜನ ಶಾಸಕರು ಸಹ ಈ ಒಂದು ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಬೇಕು ಎಂದು ಹೇಳಿ ನಾವು ಈ ವರ್ಷ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸುತ್ತಿದ್ದೇವೆ. ಆದ್ದರಿಂದ ಈ ಸಮ್ಮೇಳನವನ್ನು ನಿಮ್ಮೆಲ್ಲರ ಸಹಕಾರದಿಂದ ಅದ್ದೂರಿಯಾಗಿ, ಯಶಸ್ವಿಯಾಗಿ ಮಾಡಬೇಕಾಗಿದೆ. It is the programme of Kannada

language. It is the programme of Karnataka people. It is not my individual pride.

ಕೆಂಗಲ್ ಹನುಮಂತಯ್ಯನವರು ಚೀಫ್‌ಮಿನಿಸ್ಟರ್ ಆಗಿದ್ದಾಗ ನಾನು ರಾಜಕೀಯದಲ್ಲೇ ಇರಲಿಲ್ಲ. ಆದರೆ, ಈ ವರ್ಷ ೨೫ನೇ ವರ್ಷದ ಸಿಲ್ವರ್ ಜೂಬಿಲಿ ನಡೆದಿದೆ ಬ್ಯಾಂಕ್, ಸೊಸೈಟಿಗಳ ಸಿಲ್ವರ್ ಜುಬಿಲಿ ನಡೆದಿದೆ ಮಾನ್ಯ ಸದಸ್ಯರೊಬ್ಬರು ತಮ್ಮ ಸಂಘದ ಗೋಲ್ಡನ್ ಜ್ಯೂಬಿಲಿಗೆ ನನ್ನನ್ನು ಕರೆದರು ಇದರಲ್ಲಿ ಹಿಂದೆ ಇದ್ದಂತಹವರದ್ದೇನೂ ತಪ್ಪಿಲ್ಲ. ಶ್ರವಣಬೆಳಗೊಳದಲ್ಲಿ ಗೋಮಟೇಶ್ವರನ ಸಾವಿರ ವರ್ಷದ ದಿನದ ಆಚರಣೆ ನನ್ನ ಕಾಲದಲ್ಲಿ ಆಯಿತು. ಅದಕ್ಕೆ ನಾನೇನು ಮಾಡಲಿ ? ನಾನು ಚೀಫ್ ಮಿನಿಸ್ಟರ್ ಆಗಿದ್ದಾಗಲೇ ಅದು ಬಂತು. ಹಾಗೆಯೇ ಇದೀಗ ವಿಶ್ವಕನ್ನಡ ಸಮ್ಮೇಳನ ಮಾಡುತ್ತಿದ್ದೇವೆ. ನಾವು ಇದನ್ನು ಮಾಡೋಣ, ನಿಮ್ಮೆಲ್ಲರ ಸಹಕಾರ ಇದಕ್ಕೆ ಬೇಕು. ಎಲ್ಲರೂ ಸೇರಿ ಈ ಕೆಲಸವನ್ನು ಮಾಡೋಣ. ಕನ್ನಡಕ್ಕೆ ಯಾವುದೇ ಪಾರ್ಟಿ, ಜಾತಿ ಇಲ್ಲ. ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಭಾಷೆಯ ಜನ May be his mother tongue is Tamil or Telugu. But they are all people of Karnataka. They are all Kannada people. Let us involve everyone. Because Sri Veerappa Moily speaks Tulu. is he not a Kannadiga ? Because Sri Armugham speaks Tamil, is he not a Kannadiga ? So let us all work with confidence. Let us have a committee. Everyone will be there in the Committee. ಈ ತರಹ ಮಾಡಿ, ಇಡೀ ವಿಶ್ವದಲ್ಲೇ ಪ್ರಪ್ರಥಮವಾಗಿ ನಡೆಯುವ ಕನ್ನಡ ಸಮ್ಮೇಳನ, ಅದರ ಪ್ರಾರಂಭವನ್ನು ಚೆನ್ನಾಗಿ ಮಾಡೋಣ. ಇದು ಮಾನ್ಯ ಶ್ರೀ ರಾಮ್‌ದೇವ್ ಅವರಿಗೆ ಪ್ರಿಯವಾದಂತಹ ವಿಷಯ. ಅವರು ಏಷಿಯನ್ ಗೇಮ್ಸ್‌ಗೆ ಹೋಗುತ್ತಾರೆಂದು ತಿಳಿದು, ಡೇಟ್ ರಿವ್ಯೂ ಮಾಡುತ್ತಿದ್ದೇವೆ ಏಕೆಂದರೆ ಏಶಿಯನ್ ಗೇಮ್ಸ್ ನಡೆಯುವಾಗ ಒಂದು ತಿಂಗಳು ಕಾಲ ಡೆಲ್ಲಿಯಲ್ಲಿ ಇರಬೇಕಾಗುತ್ತದೆ. I know because. I am also one of the members there... ಆದ್ದರಿಂದ ನಾವು ಯಾವುದೇ ಅನ್ಯ ಭಾವನೆ ಇಟ್ಟುಕೊಳ್ಳದೇ ಕನ್ನಡ ಸಮ್ಮೇಳನವನ್ನು ಮಾಡಬೇಕಾಗುತ್ತದೆ

SRI K BHASKAR NAIDU.—Hon. Member Sri Ramdev, don't object. I don't know why he has preferred a Swimming Pool Association. Why he did not object ?

SRI R. GUNDU RAO.—Let us not worry about that... ಈ ದೃಷ್ಟಿಯಿಂದ ಅಧ್ಯಕ್ಷರೇ...

ಶ್ರೀ ಪಿ. ರಾಮ್‌ದೇವ್.—ಜನವರಿಯಲ್ಲಿ ವಿಶ್ವಕನ್ನಡ ಸಮ್ಮೇಳನ ಮಾಡುವ ಯೋಜನೆ ಇಟ್ಟುಕೊಂಡಿದ್ದೀರಿ. ಅಂದರೆ ಜನವರಿಗೆ ಮುಂಚೆ ತಾವು ಹೋಗುವ ಹಾಗೆ ಇಲ್ಲವೆಂದು ಅರ್ಥವೆ ?

ಶ್ರೀ ಆರ್. ಗುಂಡೂರಾವ್.—ಅಕಸ್ಮಾತ್ ಹೋದರೆ ?

ಶ್ರೀ ಪಿ. ರಾಮ್‌ದೇವ್.—ಎಲ್ಲಾ ಶಾಸಕರೂ ಭಾಗವಹಿಸಬೇಕು ಎಂದರೆ ಜನವರಿಗೆ ಮುಂಚೆ ಚುನಾವಣೆ ಬರುವಹಾಗೆಯೇ ಇಲ್ಲ ಅಲ್ಲವೆ ?

SRI SHER KHAN.—Sir, the Hon. Minister is standing for such a long time. In the interest of all and in the interest of his health it is better...

SRI K BHASKAR NAIDU.—The Chief Minister of Tamilnadu, Sri M. G. Ramachandran. held the record of speaking for six hours. Now. our hon. Chief Minister is doing it. Let him continue, please...

ಶ್ರೀ ಜೆ. ಹೆಚ್. ಪಟೇಲ್.—ಜನವರಿಗೆ ಮುಂಚೆ ಚುನಾವಣೆ ಬರುತ್ತದೆ ಎಂಬ ಅಭಿಪ್ರಾಯ ತಮ್ಮದಲ್ಲ ತಾನೆ ?

SRI R. GUNDU RAO.—I concede the request of the Opposition. ಇದರ ಮೇಲೆ ಪುನಃ ನವೆಂಬರ್ ಅಂತ ಹೇಳುವುದಿಲ್ಲತ್ತಾನೆ. ಹೇಳಿದರೆ...?

ಶ್ರೀ ಜೆ. ಹೆಚ್. ಪಟೇಲ್.—ಕೆಲವು ವಿಷಯಗಳಲ್ಲಿ ನೀವು ಹೇಳಿದ ಹಾಗೆ ಆಗುತ್ತದೆ.

ಶ್ರೀ ಆರ್. ಗುಂಡೂರಾವ್.—ನಿಮ್ಮ ಅಭಿಪ್ರಾಯಕ್ಕೆ ನಾನು ಮನ್ನಣೆ ಕೊಡುತ್ತೇನೆ, ಇದು ಯಾವಾಗ ನಡೆಯಬೇಕೋ ಅವಾಗ ನಡೆಯುತ್ತದೆ. ಕನ್ನಡದ ಬಗ್ಗೆ ಚರ್ಚೆ ಮಾಡುವುದಕ್ಕೆ ಈಗ ಟೈಮ್ ಇಲ್ಲ. ಆದ್ದರಿಂದ, ಸರ್ಕಾರ ಕನ್ನಡ ಭಾಷೆ ಬಗ್ಗೆ ತೆಗೆದುಕೊಳ್ಳತಕ್ಕಂಥ unanimous resolution ಗೆ ಎಲ್ಲರ ಸಹಕಾರ ಚೆನ್ನಾಗಿ ದೊರಕಿದೆ. ಆ ಕಡೆ ಈ ಕಡೆ ಸದಸ್ಯರ ಬೆಂಬಲ ಸಿಕ್ಕಿದೆ. ಶಾಸಕರೆಲ್ಲರೂ ಒಪ್ಪಿಕೊಂಡಿದ್ದಾರೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕಾದರೆ ಏನು ಮಾಡಬೇಕು ? Let us have a broad based policy. Let us have constructive suggestions for its implementation.

ಇನ್ನು, ಅನೇಕ ವಿಷಯಗಳ ಬಗ್ಗೆ ವೈಯಕ್ತಿಕವಾಗಿ ಕೆಲವು ಸದಸ್ಯರು ಮಾತನಾಡಿದ್ದಾರೆ. ಶ್ರೀಮಾನ್ ರಾಮೇಗೌಡರು ಕಾಯುತ್ತಿದ್ದಾರೆ. ಇಲ್ಲದಿದ್ದರೆ ಅವರು ಈಗಾಗಲೇ ಹೊರಟುಹೋಗಿ ಬಿಡುತ್ತಿದ್ದರು. ಅವರಿಗೆ ನನ್ನ ಮೇಲೆ ಏನೋ ವಿಶ್ವಾಸ. ಜೊತೆಯಲ್ಲಿದ್ದವನು, ಶಿಷ್ಯನಾಗಿದ್ದವನು, ಕೇಳಿದ್ದನ್ನು ಕೊಟ್ಟುಬಿಡುತ್ತಾನೆ ಎಂಬ ನಂಬಿಕೆ. ಅವರಿಗೆ ದೊಡ್ಡಬಳ್ಳಾಪುರದಲ್ಲಿ Fire Brigade Station. ಬೇಕು ಎಂದು ಕೇಳಿದ್ದರು. ಅದನ್ನು ಕೊಡುತ್ತೇನೆ ಆಮೇಲೆ, ಪೇದೆಗಳ ಸಂಖ್ಯೆ ಜಾಸ್ತಿಮಾಡಬೇಕು, ಹೊಸಬರನ್ನು ಹಾಕಬೇಕು ಎಂದು ಹೇಳಿದ್ದರು. ನೋಡಿದ್ದ ಮುಖಗಳನ್ನೇ ನೋಡಬೇಕು, ಬೇರೆ ಮುಖಗಳನ್ನು ಹಾಕಿ ಎಂದು ಹೇಳಿದ್ದರು. ಆಯ್ತು, ಬೇರೆ ಮುಖಗಳನ್ನು ಹಾಕೋಣ. ಯಾವ ಮುಖವಾದರೂ ಅಷ್ಟೆ. ಹ್ಯಾಟ್ಟು, ಯೂನಿಫಾರಂ, ಹಾಕಿಕೊಂಡರೆ ಎಲ್ಲಾ ಒಂದೇ ಮುಖದ ಹಾಗೆ ಕಾಣುತ್ತದೆ. ಶ್ರೀಮಾನ್ ರಾಮೇಗೌಡರು. ಹೇಳಿದರು ಮೊನ್ನೆತ್ತಾನೆ Fire Brigade Engine ಬರಬೇಕಾದರೆ ಐದು ಕಡೆ ನಿಂತು ಹೋಯಿತು. ಅಂತ ಅವರ ಊರಾದ ದೊಡ್ಡ ಬಳ್ಳಾಪುರದಲ್ಲಿ ಒಂದು Fire Brigade Station ಹಾಕೋಣ. ಅವರು ಅಲ್ಲಿ ನೀರು ಸಿಗುವ ಒಳ್ಳೆಯ ಜಾಗವನ್ನು ತಿಳಿಸಲಿ. ಅವರನ್ನು ಕೇಳಿಯೆ ಅಧಿಕಾರಿಗಳು ಅದನ್ನು ಹಾಕುತ್ತಾರೆ. ಆ ಮೇಲೆ ನಿಮ್ಮ ಮನೆ ಹತ್ತಿರ, ಫಾರ್ಮ್ ಹತ್ತಿರ ಮಾಡಿಕೊಂಡುಬಿಟ್ಟೀರಾ.

(ಸಭೆಯಲ್ಲಿ ನಗು)

ಶ್ರೀ ಜಿ. ರಾಮೇಗೌಡ.—ಪೋಲೀಸ್ ಕಸ್ಟಡಿಯಲ್ಲಿ ಸತ್ತು ಹೋದವನ ಬಗ್ಗೆ ಹೇಳಿದ್ದೆ. ಸಹಾಯ ಧನ ಕೊಡಿಸಿ.

ಶ್ರೀ ಆರ್. ಗುಂಡೂರಾವ್.—ಆಯಿತು. ಎರಡು ಸಾವಿರ ರೂಪಾಯಿ ಕೊಡುತ್ತೇನೆ. ಆದ ರಿಂದ ಅಧ್ಯಕ್ಷರೇ, ಗೌಡರ ಬಗ್ಗೆ ಅದೇ ರೀತಿಯ ಪ್ರೀತಿ ವಿಶ್ವಾಸಗಳನ್ನು ಇಟ್ಟುಕೊಂಡಿದ್ದೇನೆ. ಸತ್ತವರು ಬಹಳ ಬಡವರು ಎಂದು ಹೇಳಿದ್ದಾರೆ. ನಾಳೆ ರಜ, ನಾಡದ್ದು ಎರಡು ಸಾವಿರ ರೂಪಾಯಿಗಳನ್ನು ಕೊಡಿಸಿಬಿಡುತ್ತೇನೆ. ಇನ್ನಾದರೂ ಅವರು ಅಲ್ಲಿಯೇ ಇರುತ್ತಾರೋ, ಈ ಕಡೆಗೆ ಬರುತ್ತಾರೋ ? (ನಗು) ಇನ್ನು ಅನೇಕ ಮಾನ್ಯ ಸದಸ್ಯರು ಇಲಾಖೆಗೆ ಸಂಬಂಧಪಟ್ಟಹಾಗೆ ಮಾತನಾಡಿದ್ದಾರೆ. ಕೆಲವು ಸದಸ್ಯರಿಗೆ ಇನ್ನೂ ಏನಾದರೂ ಸಮಸ್ಯೆಗಳು ಇದ್ದರೆ, ಅಥವಾ ಯಾವುದಾದರೂ ಕೆಲಸ ಕಾರ್ಯಗಳು ಅವರವರ ಕ್ಷೇತ್ರಗಳಲ್ಲಿ ಆಗಬೇಕಾಗಿದ್ದರೆ ಅವರು ನನ್ನನ್ನು ಭೇಟಿಯಾಗಿ ವೈಯಕ್ತಿಕವಾಗಿ ಅಥವಾ ಬರೆದು ತಿಳಿಸಿದರೆ ಖಂಡಿತ ಮಾಡಿಸಿಕೊಡುತ್ತೇನೆ ಎನ್ನುವ ಭರವಸೆಯನ್ನು ನೀಡುತ್ತೇನೆ. ಕೆಲವು ಸದಸ್ಯರು. Minor Irrigation ಬಗ್ಗೆ ಮಾತನಾಡಿದ್ದಾರೆ. ಇದು ಬಹಳ ಕಡಿಮೆಯಾಯಿತು ಎಂದು ಶ್ರೀಮಾನ್ ಬೊಮ್ಮಾಯಿಯವರು ಹೇಳಿದರು Minor Irrigations ಏತಕ್ಕೋಸ್ಕರ ಕಡಿಮೆ ಆಯಿತು ಎಂದರೆ ವರ್ಲ್ಡ್ ಬ್ಯಾಂಕ್ ಸಹಾಯದಿಂದ ನಾವು ಅನೇಕ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳ ಬೇಕೆಂದಿರುವುದರಿಂದ. ಆದರೆ ಈಗ nearly 94 minor irrigation works at a cost of Rs. 64 crores are being taken up under the world bank minor irrigation tanks project. ಇದನ್ನು ವರ್ಲ್ಡ್ ಬ್ಯಾಂಕ್ ಸಹಾಯದಿಂದ ಮತ್ತು ನಮ್ಮ ರಾಜ್ಯಸರ್ಕಾರದ ಸಹಾಯದಿಂದ ಎಲ್ಲಾ ಒಟ್ಟಿಗೆ ಸುಮಾರು

94 Minor Irrigations ನನ್ನ ಸಂವಹಾರು ೬೪ ಕೋಟಿ ರೂಪಾಯಿ ವೆಚ್ಚದಲ್ಲಿ ತೆಗೆದುಕೊಳ್ಳು ವುದಕ್ಕೆ ಈಗಾಗಲೇ ಏರ್ಪಾಡು ಮಾಡಿದ್ದೇವೆ.

೯-೩೦ ಪಿ.ಎಂ.

ನಮಗೆ ಒಂದು ಸಾರಿ ಆ ಸ್ಕೀಂ ಅಪ್ರೂವ್ ಆಗಿ ಬಂದಮೇಲೆ, ಇವತ್ತು ಏನು ಮೈನರ್ ಇರಿಗೇಷನ್ ಕೆಲಸಕಾರ್ಯಗಳು ಆಗಿಲ್ಲ ಎಂದು ಹೇಳುತ್ತಾರೆ, ಆ ಕೆಲಸಕಾರ್ಯಗಳನ್ನು ನಾವು ಮಾಡಲಿಕ್ಕೆ ಅನುಕೂಲ ವಾಗುತ್ತದೆ ಮತ್ತು ಪ್ರತ್ಯೇಕವಾಗಿ ಅದರ ಪಾಡಿಗೆ ಅದು ನಡೆಯುತ್ತಾ ಇರುತ್ತದೆ. ಬಹಳ ಅವಶ್ಯಕ ವಾಗಿ ಎಲ್ಲಾದರೂ ಕೆಲವು ಕ್ಷೇತ್ರಗಳಲ್ಲಿ ಬೇಕು ಎಂದು ಕೇಳಿದರೆ ಅದನ್ನು ಖಂಡಿತವಾಗಿ ಪರಿಶೀಲನೆಮಾಡಿ ಮಾಡಿಕೊಡುವುದರಲ್ಲಿ ನನ್ನ ವಿರೋಧವಿಲ್ಲ. ಒಂದು ಸಾವಿರ ಎಕರೆ, ೫೦೦ ಎಕರೆ, ೩೦೦ ಎಕರೆ, ೭೦ ಎಕರೆ, ೫೦ ಎಕರೆಗೆ ಮೈನರ್ ಇರಿಗೇಷನ್ ಆಗುತ್ತದೆ ಎಂದು ಹೇಳುವುದಾದರೆ ಬೇಕಾದರೆ ಸ್ವಲ್ಪ ಹಣ ಜಾಸ್ತಿ ಕೊಡೋಣ. ಮೈನರ್ ಇರಿಗೇಷನ್ ಮಂತ್ರಿಗಳು ಸ್ವಲ್ಪ ಹಣ ಜಾಸ್ತಿ ಕೊಡಬೇಕು ಎಂದು ಹೇಳುತ್ತಾ ಇದ್ದಾರೆ. ಒಂದೆರಡು ಕೋಟಿ ಮೈನರ್ ಇರಿಗೇಷನ್‌ಗೆ ಕೊಡೋಣ, ಮುಂದೆ ಕೆಲಸದ ಒತ್ತಡ ಬಂದ ಹಾಗೆ ಅದನ್ನೂ ಪರಿಶೀಲನೆ ಮಾಡೋಣ, ಬಹುಶಃ ಇಷ್ಟು ಹೇಳಿ... .....

ಶ್ರೀ ಪ್ರಭಾಕರ್ ತೇಲ್ಕರ್ —ಮೀಡಿಯಂ ಇರಿಗೇಷನ್ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ವೀರಪ್ಪ ಕಳ್ಳಿಗುಡ್ಡ.— ಬಾಗಲಕೋಟೆ ಬಾಳೆ ಕುಂದಗಗಿ ತಜ್ಞರ ಸಮಿತಿ ಇದೆ, ಅದರ ಬಗ್ಗೆ ಹೇಳಿಬಿಡಿ ಸಾಕು.

ಶ್ರೀ ಗುಂಡೂರಾವ್.—ಬಾಗಲಕೋಟೆ ಬಗ್ಗೆ ಆಗಲೇ ಹೇಳಿದ್ದೇನೆ. ಕಾಳಿ ಬಗ್ಗೆ, ಅದರ ಬಗ್ಗೆ ಎರಡು ಮೂರು ಸಾರಿ ಹೇಳಿದ್ದೇನೆ ಇದು ಬಹುಶಃ ಈ ಸದನದ, ಈ ಮಂತ್ರಿಮಂಡಲದ ಕೊನೇ ಬಡ್ಜೆಟ್ ಅಧಿವೇಶನ. ಏಕೆಂದರೆ, ಇನ್ನೊಂದು ಅಧಿವೇಶನ ನಾವು ಸೇರಬಹುದು. ಆದರೆ ಬಡ್ಜೆಟ್ ಅಧಿವೇಶನ ಸೇರುವಂಥಾದ್ದು ಹೊಸ ಚುನಾವಣೆ ಕಳೆದ ಮೇಲೆ. ಆ ದೃಷ್ಟಿಯಿಂದ ಈ ಮಂತ್ರಿಮಂಡಲ ಬಂದು ಹೊಸ ಬಜೆಟ್ ಅಧಿವೇಶನದ ಹೊತ್ತಿಗೆ ಮೂರು ವರ್ಷ ಆಗುತ್ತದೆ. ಇಲ್ಲಿಯವರೆಗೆ ನಮ್ಮ ಸರ್ಕಾರಕ್ಕೆ ಎಲ್ಲಾ ಸಹಕಾರ ನೀಡಿದ್ದಾರೆ, ಮತ್ತು ವಿರೋಧಪಕ್ಷದವರು ಎಷ್ಟೇ ಸಮಸ್ಯೆ ಬಂದರೂ ಸಹ, ಅನೇಕ ಕ್ಲಿಷ್ಟ ಸಮಸ್ಯೆಗಳು ಬಂದಾಗ ತಮ್ಮ ಸ್ನೇಹದ ಹಸ್ತ ನೀಡಿದ್ದಾರೆ, ರೈತರ ಸಮಸ್ಯೆ ಬಂದಾಗ, ಕಾರ್ಮಿಕರ ಸಮಸ್ಯೆ ಬಂದಾಗ, ಭಾಷಾ ಸಮಸ್ಯೆ ಬಂದಾಗ, ಆಸ್ಪತ್ರೆಗಳ ಸಮಸ್ಯೆ ಬಂದಾಗ, ಯಾವುದೇ ಸಮಸ್ಯೆಗಳು ಬಂದಾಗ ಎಲ್ಲಾ ವಿಚಾರಗಳಲ್ಲೂ ಸಹ ವಿಧಾನಸಭೆಯೊಳಗಡೆ ಎಷ್ಟೇ ಚರ್ಚೆಮಾಡಿದರೂ ಸಹ, ಕೆಲವು ಸಮಯದಲ್ಲಿ ಕಠಿಣವಾಗಿ ವರ್ತಿಸಿದರೂ ಸಹ, ಕೆಲವು ಸಂದರ್ಭದಲ್ಲಿ ಆರೀತಿ ವರ್ತಿಸಬೇಕಾಗು ತ್ತದೆ; ಅಷ್ಟೇ ಪ್ರೀತಿಯಿಂದ, ಅಷ್ಟೇ ವಿಶ್ವಾಸದಿಂದ, ಅಷ್ಟೇ ಸ್ನೇಹದಿಂದ ನಮ್ಮ ಸರ್ಕಾರಕ್ಕೆ ಪೂರ್ತಿ ಯಾದ ನೆರವನ್ನು ವಿರೋಧಪಕ್ಷ ನೀಡಿದೆ. ಅದು ಮಾನ್ಯತೆ ಪಡೆದಂಥ ವಿರೋಧಪಕ್ಷ ಆಗಿರಲಿ. ಕೆಲವು ಸಮಯ ಮಾನ್ಯತೆ ಪಡೆಯದೇ ಇದ್ದಂಥ ವಿರೋಧಪಕ್ಷ ಇರಲಿ, ಮಾನ್ಯತೆ ಪಡೆದಿರುವ ವಿರೋಧಪಕ್ಷ ಆಗಿರಲಿ ಅದರಲ್ಲಿ ವ್ಯತ್ಯಾಸವಿಲ್ಲದೆ ಎಲ್ಲಾ ಸನ್ಮಾನ್ಯ ಸದಸ್ಯರುಗಳು ನಮ್ಮ ರಾಜ್ಯದ ಪ್ರಗತಿಗೆ, ರಾಜ್ಯಕ್ಕೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಅವರು ತಿಳಿದಂತೆ, ಅವರವರ ಶೈಲಿಯಲ್ಲಿ, ಅವರವರ ಅಭಿಪ್ರಾಯ ವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಅದೇ ಪ್ರಕಾರ ನಮ್ಮ ಸರ್ಕಾರ ಬಂದ ಮೇಲೆ ತಾವು ಈ ಒಂದು ಅತ್ಯುನ್ನತ ಸ್ಥಾನವನ್ನು ವಹಿಸಿಕೊಂಡು, ತಾವೂ ಸಹ ನಮ್ಮ ಸರ್ಕಾರಕ್ಕೆ ಸಹಕಾರ ನೀಡಿದ್ದೀರಿ. ಈ ಒಂದು ಬೇಡಿಕೆ ಇದ್ದ ದೆಸೆಯಿಂದ ನಾನು ಹೇಳುತ್ತಿದ್ದೇನೆ, ಇನ್ನು ಎರಡು ಮೂರು ದಿವಸ ನಾನು ಇರುವುದಿಲ್ಲ, ಡೆಲ್ಲಿಗೆ ಹೋಗಬೇಕಾಗುತ್ತದೆ. ಏಕೆಂದರೆ ಹೊಸ ರಾಷ್ಟ್ರಪತಿಗಳು ಪ್ರಮಾಣವಚನ ಸ್ವೀಕಾರ ಮಾಡುವಾಗ ಎಲ್ಲಾ ಮುಖ್ಯ ಮಂತ್ರಿಗಳು ಅಲ್ಲಿ ಇರಬೇಕು ಎನ್ನುವಂಥ ಅಭಿಪ್ರಾಯದ ಮೇಲೆ ನಾನೂ ಸಹ ಹೋಗುತ್ತಾ ಇದ್ದೇನೆ. ನಾವೆಲ್ಲರೂ ಕಳೆದ ೫ ವರ್ಷಗಳಿಂದ ಉತ್ತಮವಾಗಿ ಕಾಲ ಕಳೆದಿದ್ದೇವೆ. ಅದನ್ನು ಮುಂದಿನ ವಿಧಾನಸಭೆ ಕರೆದಾಗ ಮಾತನಾಡೋಣ. ಈ ಬಡ್ಜೆಟ್ ಅಧಿವೇಶನ ದಲ್ಲಿ ಈ ಬೇಡಿಕೆಗಳಿಗೆ ತಾವು ಸರ್ವಾನುಮತದ ಬೆಂಬಲವನ್ನು ನೀಡಬೇಕು. ಅನೇಕ ಸಂದರ್ಭಗಳಲ್ಲಿ, ಮಾತುಕತೆಗಳಲ್ಲಿ ಏನಾದರೂ ಮನಸ್ಸಿನಲ್ಲಿ ತಪ್ಪು ಅಭಿಪ್ರಾಯಗಳಿದ್ದರೆ. ಮಾನ್ಯ ರಾಮದೇವ್ ಅವರು ಆಗಲೇ ಅರ್ಜಿ ಕಳಿಸಿದರು, ಯಾರಿಗೋ ಒಬ್ಬರಿಗೆ ಸಹಾಯ ಮಾಡಬೇಕು ಎಂದು, ಅದನ್ನು ನಾಳೆ ಮಾಡಿಸಿಕೊಡುತ್ತೇನೆ. ಈ ದೃಷ್ಟಿಯಿಂದ ಎಲ್ಲಾ ಪಕ್ಷದ ಸದಸ್ಯರೂ ಸಹ ಪೂರ್ತಿಯಾಗಿ ಸಹಕಾರ ನೀಡಿದ್ದಾರೆ. ನಾನು ಯೋಚನೆ ಮಾಡಿ. ಪ್ಲಾನ್ ಮಾಡಿ, ಇನ್ನೊಂದು ರೀತಿಯಲ್ಲಿ ಮುಖ್ಯ ಮಂತ್ರಿ

ಯಾದಂಥವನಲ್ಲ. ಆಕಸ್ಮಿಕವಾದಂಥ ರಾಜಕೀಯ ಬದಲಾವಣೆಯಿಂದ ಮತ್ತು ಜನತೆಯ ಅಭಿಪ್ರಾಯದಿಂದ ಮತ್ತು ನಾನು ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ಇಟ್ಟಿರುವಂಥ ನಂಬಿಕೆಯಿಂದ, ಅದೇ ಪ್ರಕಾರ ಶಾಸಕರು ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ಇಟ್ಟಿರುವಂಥ ನಂಬಿಕೆಯಿಂದ ಅವರ ಆದೇಶದ ಮೇಲೆ ನನ್ನನ್ನು ಮುಖ್ಯ ಮಂತ್ರಿಯಾಗಿ ಆರಿಸಿದ್ದಾರೆ. ನಾನು ಮುಖ್ಯ ಮಂತ್ರಿಯಾದಾಗ ೩ ತಿಂಗಳು ನಡೆಸೋಲ್ಲ, ೬ ತಿಂಗಳು ನಡೆಸೋಲ್ಲ ಎಂದು ಸಣ್ಣ ಸಣ್ಣದಾಗಿ ಮಾತನಾಡುತ್ತಿದ್ದರು. ಆದರೆ ನಾನು ಅದಕ್ಕೆ ಕಿವಿ ಕೊಡಲಿಲ್ಲ. ಜನತೆ ಕೊಟ್ಟಿದ್ದಾರೆ, ನಾಯಕರು ಕೊಟ್ಟಿದ್ದಾರೆ, ದೇವರು ಕೊಡಬೇಕು. ಬಸವಣ್ಣನವರು ಅಪ್ಪುದು ತಪ್ಪುದು ಬಪ್ಪುದು ತಪ್ಪುದು ಎಂದು ಹೇಳಿದಹಾಗೆ ನಮಗೆ ಬರತಕ್ಕದ್ದನ್ನು ತಪ್ಪಿಸಲಿಕ್ಕೆ ಯಾರ ಕೈಲೂ ಸಾಧ್ಯವಿಲ್ಲ; ಅದೇರೀತಿ ಬರದೇ ಇರತಕ್ಕದ್ದನ್ನು ಕೊಡಿಸಲಿಕ್ಕೆ ಯಾರ ಕೈಲೂ ಸಾಧ್ಯವಿಲ್ಲ. ಇದು ಕೇವಲ ನಮ್ಮ ಭ್ರಮೆ, ನಮ್ಮ ಪ್ರಯತ್ನ ಎಷ್ಟೇ ಇರಬಹುದು, ನಮ್ಮ ಸರ್ವ ಪ್ರಯತ್ನಗಳು ಇರಬಹುದು. ಮಾನ್ಯ ಬಸವಲಿಂಗಪ್ಪನವರು ಇಲ್ಲಿ ಇದ್ದಾರೋ ಹೋದರೋ ಗೊತ್ತಿಲ್ಲ. ಒಂದುವೇಳೆ ಮಾನ್ಯ ಬಸವಲಿಂಗಪ್ಪನವರು ಆವತ್ತು ಡೆಲ್ಲಿಯಿಂದ ಬಂದಂಥವರು ಶ್ರೀಮಾನ್ ದೇವರಾಜ ಅರಸ್ ಅವರ ಮನೆಗೆ ಹೋಗದೆ ಮಾನ್ಯ ಆಮ್ರ್ಗಂರವರ ಜೊತೆಯಲ್ಲಿ ನನ್ನ ಮನೆಗೆ ಬಂದಿದ್ದರೆ ಅವರೇ ಇವತ್ತು ಮುಖ್ಯ ಮಂತ್ರಿಗಳಾಗಿ ಇರುತ್ತಾ ಇದ್ದರು; ಅದರಲ್ಲಿ ಅನುಮಾನವೇ ಇರುತ್ತಾ ಇರಲಿಲ್ಲ. ಆ ಚಿತ್ರ ಸ್ಪಷ್ಟವಾಗಿತ್ತು. ಮಾನ್ಯ ಆಮ್ರ್ಗಂ ರವರ ಜೊತೆಯಲ್ಲಿ ಶ್ರೀಮಾನ್ ದೇವರಾಜ ಅರಸ್‌ರ ಮನೆಗೆ ಹೋದರು, ಇವರು ಬಂದರು. ಆಮೇಲೆ ಶ್ರೀಮಾನ್ ಬಂಗಾರಪ್ಪನವರು ಮುಖ್ಯ ಮಂತ್ರಿ ಆಗುತ್ತಾರೆ ಎಂದು ಕೆಲವರ ಅಭಿಪ್ರಾಯವಿತ್ತು. ಅದು ಸ್ವಾಭಾವಿಕ. ಒಂದು ಪಕ್ಷದಲ್ಲಿ ಇದ್ದಮೇಲೆ ಎಲ್ಲರೂ ಪ್ರಯತ್ನ ಮಾಡಬೇಕು, ಅದು ಸ್ವಾಭಾವಿಕ. ಆ ಪ್ರಕಾರ ಅವರು ಆಗುತ್ತಾರೆ ಎನ್ನುವುದು ಕೆಲವರ ಅಭಿಪ್ರಾಯವಿತ್ತು. ಅವರು ಕೆಲವು ಕಾಲ ನಮ್ಮ ಮಂತ್ರಿಮಂಡಲದ ಜೊತೆಯಲ್ಲಿದ್ದರು, ನಂತರ ಕೆಲವು ಕಾಲ ಅಂದರೆ ಕಳೆದ ೬ ನೇ ತಾರೀಖಿನವರೆಗೆ ನಮ್ಮ ಜೊತೆಯಲ್ಲಿದ್ದು, ಈಗ ವಿರೋಧಪಕ್ಷಕ್ಕೆ ಹೋಗಿದ್ದಾರೆ. ಆ ಕಡೆ ಕೆಲವರು ಹೋಗುತ್ತಾರೆ, ಈ ಕಡೆ ಕೆಲವರು ಬರುತ್ತಾರೆ. ಮಾನ್ಯ ಪ್ರಭಾಕರ್‌ರವರು ಆ ಕಡೆ ಇದ್ದರು, ಈ ಕಡೆ ಬಂದಿದ್ದಾರೆ, ನಮಗೆ ಇದು ಮುಖ್ಯವಲ್ಲ. ಇದರಲ್ಲಿ ಬದಲಾವಣೆಯಾಗುವಂಥಾದ್ದು ಹೋಗುವಂಥಾದ್ದು ನಡೆಯುತ್ತದೆ. ನಮಗೆ ಈ ಒಂದು ಸಂದರ್ಭವನ್ನು, ಅವಕಾಶವನ್ನು ಕಲ್ಪಿಸಿಕೊಟ್ಟಿರುವಂಥ ದೇವರು, ಈ ಅಸೆಂಬ್ಲಿಯಲ್ಲಿ ೫ ವರ್ಷ ಕಾಲ ಅವಕಾಶವನ್ನು ಕೊಟ್ಟಿದ್ದಾನೆ. ನಾವೆಲ್ಲರೂ ಸೇರಿ ಜನತೆಗೆ ಏನು ಸಾಧನೆ ಮಾಡಿದ್ದೇವೆ, ನಮ್ಮ ಕರ್ತವ್ಯವನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದೇವೆ, ಸ್ನೇಹದ ಹಸ್ತಲಾಘವವನ್ನು ಯಾವರೀತಿ ನೀಡಬೇಕು, ನಾವೆಲ್ಲರೂ ಯಾವರೀತಿ ವರ್ತನೆ ಮಾಡಬೇಕು ಎನ್ನುವುದನ್ನು ನೋಡಬೇಕಾಗಿದೆ, ಅದು ನಡೆದಿದೆ. ನನಗಂತೂ ಒಂದೇ ಒಂದು ದಿನ ಈ ಅಸೆಂಬ್ಲಿ ಕಷ್ಟವಾಗಿಲ್ಲ; ಒಂದೇ ಒಂದು ದಿನ ನಾನು ಇದನ್ನು ಕಷ್ಟ ಎಂದು ತಿಳಿದುಕೊಂಡಿಲ್ಲ. ಅನೇಕ ಸಾರಿ ಕೋಪದಲ್ಲಿ ಮಾತನಾಡಿದರೂ ಸಹ ಅಷ್ಟೇ ಸ್ನೇಹದಿಂದ, ಅಷ್ಟೇ ಪ್ರೀತಿಯಿಂದ, ಅಷ್ಟೇ ವಿಶ್ವಾಸದಿಂದ ಮಾತನಾಡಿದ್ದೇನೆ. ಮತ್ತೆ ರಾಜಕೀಯವಾಗಿ ಅವರು ಕೆಲವು ನಾಟಕವನ್ನು ಆಡಬೇಕಾಗುತ್ತದೆ, ಕೆಲವು ಪಾತ್ರಗಳನ್ನು ನಾಟಕದಲ್ಲಿ ನಾವೂ ಆಡಬೇಕಾಗಿದೆ, ನಾವೆಲ್ಲರೂ ಆಡುತ್ತಾ ಇದ್ದೇವೆ, ಹೋಗುತ್ತಾ ಇದ್ದೇವೆ. ಈ ಕ್ಯಾಂಪಿನಲ್ಲಿ ಈ ಪಾರ್ಟ್, ನೆಕ್ಸ್ಟ್ ಕ್ಯಾಂಪಿನಲ್ಲಿ ಇನ್ನೊಂದು ಪಾರ್ಟ್, ಆ ಸನ್ನಿವೇಶಕ್ಕೆ ತಕ್ಕಂತೆ ನಾವು ಪಾರ್ಟ್ ಹಾಕಬೇಕಾಗುತ್ತದೆ. ಯಾವಾಗಲೂ ಒಂದೇ ತರಹ ಪಾರ್ಟ್ ಹಾಕಲಿಕ್ಕೂ ಬರುವುದಿಲ್ಲ. ಏಕೆಂದರೆ, ಹಂಟರ್ಸ್, ಬೇಡರು ಜಾಸ್ತಿ ಇರುವಂಥ ಊರಿನಲ್ಲಿ ಬೇಟೆಗಾರರಿಗೆ ಮಹತ್ವ ಇರುತ್ತದೆ, ಪಕ್ಷಿಗಳು ಜಾಸ್ತಿ ಇರುವಂಥ ಊರಿನಲ್ಲಿ ಸಾಧುಗಳಿಗೆ ಅವಕಾಶ ಜಾಸ್ತಿ ಇರುತ್ತದೆ. ಹೀಗೆ ನಾನಾ ತರಹ ಇರುತ್ತದೆ. ಆದರೂ ನಮ್ಮೆಲ್ಲರ ಗುರಿ ಏನೆಂದರೆ, ಕರ್ನಾಟಕವನ್ನು ರಾಷ್ಟ್ರದಲ್ಲಿಯೇ ಉತ್ತಮವಾದಂಥ ರಾಜ್ಯವನ್ನಾಗಿ, ಶಿಸ್ತಿನಿಂದ ಕೂಡಿದಂಥ ರಾಜ್ಯವನ್ನಾಗಿ ಮಾಡುವಂಥ ಗುರಿ ನಮ್ಮೆಲ್ಲರದು ಆಗಿದೆ. ಆದುದರಿಂದ ಈ ೩ ವರ್ಷಗಳ ಕಾಲ ಅಂದರೆ, ೧೯೮೦ ರ ಬಡ್ಜೆಟ್, ೧೯೮೧ ರ ಬಡ್ಜೆಟ್ ಮತ್ತು ೧೯೮೨ ರ ಬಡ್ಜೆಟ್, ಈ ಮೂರು ಅಧಿವೇಶನಗಳಲ್ಲೂ ಎಲ್ಲಾ ಸದಸ್ಯರು ನೀಡಿದಂಥ ಸಹಕಾರಕ್ಕೆ, ಮತ್ತೆ ತಾವು ನೀಡಿದಂಥ ಸಹಕಾರಕ್ಕೆ ತಮಗೂ ಮತ್ತು ಈ ಸದನದ ಎಲ್ಲಾ ಸದಸ್ಯರಿಗೂ ವೈಯಕ್ತಿಕವಾಗಿಯೂ, ಪಕ್ಷದಪರವಾಗಿಯೂ, ಸರ್ಕಾರದ ಪರವಾಗಿಯೂ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಬಹುಶಃ ನಮ್ಮ ಈ ಬಡ್ಜೆಟ್ ಅಧಿವೇಶನ ಇನ್ನು ೩-೪ ದಿವಸಗಳಲ್ಲಿ ಮುಗಿಯುವುದಿದೆ; ಇದೇ ಪ್ರೀತಿ, ವಿಶ್ವಾಸದಿಂದ ಮುಗಿಯಲಿ, ಇದೇರೀತಿ ಸ್ಪೋರ್ಟ್ಸ್‌ಮನ್‌ಶಿಪ್ ಸ್ಪಿರಿಟ್‌ನಲ್ಲಿ ನಾವು ಕೆಲಸ ಮಾಡೋಣ. ಮುಂದೆ ಚುನಾವಣೆಯಲ್ಲಿ ಜನ ಯಾರನ್ನು ತರುತ್ತಾರೋ ದೇವರಿಗೇ ಗೊತ್ತು. ಯಾವ ಪಕ್ಷಕ್ಕೆ ಬಹುಮತ ಬರುತ್ತದೆ, ಯಾರು ನಾಯಕರಾಗು

ತ್ತಾರೆ, ಅವರು ಮುಖ್ಯ ಮಂತ್ರಿಗಳಾಗುತ್ತಾರೆ. ನಮ್ಮ ಪಕ್ಷ ಬಂದು, ನಾವು ಮೆಜಾರಿಟಿ ಬಂದು, ಕೇಂದ್ರದವರು ನಾನೇ ಮುಖ್ಯ ಮಂತ್ರಿ ಆಗಬೇಕು ಅಂದರೆ ನಾನು ಮುಖ್ಯ ಮಂತ್ರಿಯಾಗಿರುತ್ತೇನೆ, ಇಲ್ಲಾ ಇನ್ನೊಬ್ಬರು ಮುಖ್ಯ ಮಂತ್ರಿ ಆಗಬೇಕು ಅಂದರೆ ಅವರು ಮುಖ್ಯ ಮಂತ್ರಿ ಆಗುತ್ತಾರೆ. ನಮ್ಮ ಪಕ್ಷ ಬಂದರೆ ಆ ಪ್ರಶ್ನೆ. ನಮ್ಮ ಪಕ್ಷ ಬರದೇಹೋದರೆ ಆ ಕಡೆ ವಿರೋಧಪಕ್ಷದ ನಾಯಕರು ಎಂದು ತೀರ್ಮಾನ ಮಾಡಿದರೆ ಅಲ್ಲಿ ಆಗುತ್ತೇವೆ, ನಮ್ಮನ್ನು ಜನ ಆರಿಸದೇ ಹೋದರೆ ಮನೆಯಲ್ಲಿರುತ್ತೇವೆ. ಈ ಮೂರಕ್ಕೂ ನಾವು ರೆಡಿಯಾಗಿರಬೇಕು, ಚೀಫ್ ಮಿನಿಸ್ಟರ್ ಆಗುವುದಕ್ಕೂ ತಯಾರಾಗಿರಬೇಕು, ಮಿನಿಸ್ಟರ್ ಆಗುವುದಕ್ಕೂ ತಯಾರಾಗಿರಬೇಕು, ಎಂ.ಎಲ್.ಎ ಆಗುವುದಕ್ಕೂ ತಯಾರಾಗಬೇಕು, ಮನೆಯಲ್ಲಿ ಕೂರುವುದಕ್ಕೂ ತಯಾರು ಆಗಬೇಕು, ಇದು ಎಲ್ಲಕ್ಕೂ ನಾವು ಸಿದ್ಧವಾಗಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಈಗ ಬಂದರು ಅವರು ಬಹಳ ಹೊತ್ತು ಇರಲಿಲ್ಲ. ಅವರು ನಗಾಡುವುದೇ ಕಡಿಮೆ, ಒಂದೊಂದು ಸಾರಿ ನಗಾಡಿದಾಗ ಬಹಳ ಚೆನ್ನಾಗಿ ನಗಾಡುತ್ತಾರೆ. ಆದುದರಿಂದ ಮತ್ತೊಮ್ಮೆ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ, ಈ ಬೇಡಿಕೆಗಳನ್ನು ಸರ್ವಾನುಮತದಿಂದ ಒಪ್ಪಬೇಕು ಎಂದು ತಮ್ಮ ಮೂಲಕ ಎಲ್ಲಾ ಸದಸ್ಯರನ್ನೂ ಪ್ರತ್ಯೇಕವಾಗಿ ವಿರೋಧಪಕ್ಷದ ಸದಸ್ಯರನ್ನು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ವಿವರಣೆ ಕೇಳುವುದು ಒಂದೇ ಒಂದು, ಉಳಿದ ವಿಷಯಗಳನ್ನು ಹೇಳಿದ್ದೀರಿ. ನನ್ನ ಪರವಾಗಿ ಕೊಡತಕ್ಕ ವಿವರಣೆ ಒಂದು; ಅದರ ಬಗ್ಗೆ ತಾವು ಹೇಳಿದ್ದೀರಿ. ನಾನು ತಮ್ಮ ಮಂತ್ರಿ ಮಂಡಲದಲ್ಲಿ ೧೯೮೦ ರಲ್ಲಿ ಇದ್ದೆ. ಯಾವುದೇ ಕಾರ್ಯಕ್ರಮವನ್ನು ಸರ್ಕಾರ ಹಾಕಿದರೂ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಎಂಬ ದೃಷ್ಟಿಯಿಂದ ನಾನು ಭಾಗಿಯಾಗಿದ್ದೆ ಎಂಬ ಮಾತನ್ನು ಹೇಳಿದ್ದೀರಿ. ಅದು ನಿಮ್ಮ ವೈಯುಕ್ತಿಕ ಅಭಿಪ್ರಾಯ. ಕಾನೂನು ಪ್ರಕಾರ ನೋಡುವುದಾದರೂ ನಾನು ಯಾವ ರೀತಿ ಯಲ್ಲೂ ತಮ್ಮ ಕಾರ್ಯಕ್ರಮದಿಂದ ಬೇರ್ಪಟ್ಟ ವ್ಯಕ್ತಿ ಆಗಿದ್ದೆ ಎಂಬ ಅಭಿಪ್ರಾಯದಲ್ಲಿ ನಾನು ನಿಮಗೆ ತಿಳಿಸುವುದಕ್ಕೆ ಹೋಗಲಿಲ್ಲ; ಮತ್ತು ನೀವು ಅರ್ಥಮಾಡಿಕೊಳ್ಳತಕ್ಕ ಪರಿಸ್ಥಿತಿಯಲ್ಲೂ ಇರಲಿಲ್ಲವೆಂದು ಗೊತ್ತಿತ್ತು. ಅದಕ್ಕೆ ಆಗಾಗ್ಗೆ ಶ್ರೀಮತಿ ಇಂದಿರಾಗಾಂಧಿಯವರಿಗೆ ಪತ್ರಗಳನ್ನು ಬರೆದಿದ್ದೇನೆ. ಸರ್ಕಾರ ಹೇಗೆ ನಡೆಯುತ್ತಿದೆ, ಯಾವ ರೀತಿ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಯತ್ನ ಮಾಡುತ್ತಿದೆ ಎಂಬ ಬಗ್ಗೆ ಪತ್ರ ಬರೆದಿದ್ದೇನೆ. ನೀವು ಹೇಳಿದಿರಿ, ನವಲಗುಂದ-ನರಗುಂದದ ವಿಚಾರದಲ್ಲಿ ಒಪ್ಪಿಗೆ ಯಾಗದಿದ್ದರೆ ರಾಜೀನಾಮೆ ಕೊಡಬೇಕಾಗಿತ್ತು; ಏತಕ್ಕಾಗಿ ಇದ್ದಿರಿ ಎಂದು ಕೇಳಿದಿರಿ. ಪ್ರಧಾನ ಮಂತ್ರಿಗಳು ಪಕ್ಷದ ಅಧ್ಯಕ್ಷಿಣಿಯಾಗಿರುವುದರಿಂದ ನಾನು ಅವರ ಒಪ್ಪಿಗೆಗಾಗಿ ಪತ್ರ ಬರೆದೆ; ಅವರ ಒಪ್ಪಿಗೆ ನನಗೆ ಬೇಕಾಗಿತ್ತು. ನಾನು ರಾಜೀನಾಮೆ ಕೊಡಬೇಕಾಗಿದೆ, ಅದಕ್ಕೋಸ್ಕರ ತಮ್ಮ ಒಪ್ಪಿಗೆ ಕೊಡಿ ಎಂದು ೮-೧೦ ಪತ್ರ ಗಳನ್ನು ಬರೆದಿದ್ದೇನೆ. ಅದರ ನಕಲುಗಳು ನನ್ನ ಕಡೆ ಇವೆ. ಆದರೆ ಅವರು ಅದಕ್ಕೆ ಉತ್ತರ ಕೊಡಲಿಲ್ಲ. ನಾನು ರಾಜೀನಾಮೆ ಕೊಡುವ ಬಗ್ಗೆ ಒತ್ತಾಯಪೂರ್ವಕವಾಗಿ ಪತ್ರಗಳನ್ನು ಬರೆದೆ ಮತ್ತು ಖಾಸಗಿಯಾಗಿ ಕೂಡ ಭೇಟಿಯಾಗಿ ಕೇಳಿದೆ. ಆದುದರಿಂದ ನಾನು ಕೂಡಲೇ ರಾಜೀನಾಮೆ ಕೊಡುವುದಕ್ಕಾಗಲಿಲ್ಲ. ಇದಕ್ಕೇನು ಮುಖ್ಯ ಮಂತ್ರಿಗಳು ಉತ್ತರ ಕೊಡುವುದು ಬೇಕಿಲ್ಲ. ಇದು ನನ್ನ ವಿವರಣೆ. ನಿಮಗೆ ಆ ವಿಷಯ ಗೊತ್ತಿಲ್ಲ ನನ್ನ ಮತ್ತು ಇಂದಿರಾಗಾಂಧಿಯವರ ನಡುವೆ ಈ ಪತ್ರ ವ್ಯವಹಾರ ನಡೆದಿರುವುದು. ಕೂರ್ಗ್ ಫ್ಲೈವುಡ್ ವಿಷಯದಲ್ಲಿ ೩ ಸಾವಿರ ಎಕರೆ ಪ್ರದೇಶವನ್ನು ಕೊಡುವ ಬಗ್ಗೆ ಹೇಳಿದ್ದೀರಿ. ತಾವು ಮುನಿಸಿಪಲ್ ಪ್ರೆಸಿಡಿಂಗ್ ಆಗಿದ್ದಾಗ ಕುಶಾಲನಗರದಲ್ಲಿ ಕಾಡು ಕಡಿಯುತಕ್ಕ ವಿಷಯದಲ್ಲಿ ನಾನು ಬಹಳ ವಿರೋಧಿಯಾಗಿದ್ದೆ. ಆ ಬಗ್ಗೆ ನಾನು ವಿರೋಧಿಯಾಗಿದ್ದರಿಂದ, ನಾನು ವಿರೋಧಿಯಾಗಿದ್ದೆ ಎಂಬ ಮಾತನ್ನು ಹೇಳುತ್ತಾ ಬಿ.ಡಿ. ಜತ್ತಿ ಅವರ, ನಿಜಲಿಂಗಪ್ಪನವರ ಕಾಲದಿಂದ ಹಿಡಿದು ದೇವರಾಜ ಅರಸು ರವರ ಕಾಲದವರೆಗೆ ಹೇಳಿದ್ದೀರಿ. ಅವರು ಹೇಳಿರುವ ವಿಷಯ ಹಾಗಿದ್ದರೆ ಅವರ ಅಭಿಪ್ರಾಯ ಬೇರೆ. ನಾವು ಬೇರೆ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಆದರೆ ತಾವು ಕಾಡನ್ನು ಕಡಿಯತಕ್ಕ ವಿಷಯದಲ್ಲಿ ವಿರೋಧಿಯಾಗಿದ್ದವರು; ಅದಕ್ಕಾಗಿ ಸತ್ಯಾಗ್ರಹ ಮಾಡಿದ ಮಾತನ್ನು ಹೇಳಿದ್ದೀರಿ. ಇಂಥವರಾದ ನೀವು ಕೆ.ಪಿ.ಸಿ.ಸಿ. ಜನರಲ್ ಸೆಕ್ರೆಟರಿಯವರಿಗೆ ಕೊಡಬೇಕಾದರೆ ಯೋಚನೆ ಮಾಡಿ ಕೊಡಬೇಕಾಗುತ್ತದೆ. ಸ್ನೇಹಿತರಿಗೆ ಕೊಡುವುದಕ್ಕೆ, ಬೇರೆಯವರಿಗೆ ಕೊಡುವುದಕ್ಕೆ ವ್ಯತ್ಯಾಸ ಇದೆ. ಕೊಡಗಿನ ಕಾಡನ್ನು ಕಡಿಯುವುದಕ್ಕೆ ವಿರೋಧ ಮಾಡಿದಂಥವರ ಮಂತ್ರಿ ಮಂಡಲದಲ್ಲಿ ಏತಕ್ಕೆ ಈ ರೀತಿ ಆರ್ಡರ್ ಆಯಿತೆಂಬುದು ಗೊತ್ತಿಲ್ಲ. ಇದಕ್ಕೆ ವಿವರಣೆ ಕೊಟ್ಟರೆ ಒಳ್ಳೆಯದು. ತಾವು ಕೊಟ್ಟಿರತಕ್ಕ ವಿವರಣೆ ಒಪ್ಪಿಗೆಯಾದರೆ ತಿಳಿಸಬೇಕು.

ಅಧ್ಯಕ್ಷರು.—ಅವರು ಹೇಳಿದರು ರಾಮೇಗೌಡರು ಅರಣ್ಯ ಮಂತ್ರಿಗಳಾಗಿದ್ದಾಗ ಶಿಫಾರಸ್ಸು ಮಾಡಿದ್ದೆ ಎಂದು; ಮತ್ತು ಸರ್ಕಾರ ಆ ಪ್ರಕಾರ ಕೊಟ್ಟಿದೆ ಎಂದು ಹೇಳಿದ್ದಾರೆ. ಮತ್ತೆ ಅದಕ್ಕೆ ಏನು ವಿವರಣೆ ಕೊಡಬೇಕು?

ಶ್ರೀ ಎಸ್. ಬಂಗಾರಪ್ಪ.—ರಾಮೇಗೌಡರು ಕೊಟ್ಟಾಗ ಕಾಡು ಕಡಿಯುವುದಕ್ಕೇ ವಿರೋಧವಾಗಿದ್ದವರು ಹೇಗೆ ಕೊಟ್ಟರು? ಅವರು ಹೇಗೆ ಕೊಟ್ಟರು ಎಂಬುದನ್ನು ಹೇಳಿದರೆ ಒಳ್ಳೆಯದು.

ಒಬ್ಬರು ಮಾನ್ಯ ಸದಸ್ಯರು.—ಬಂಗಾರಪ್ಪನವರು ಕಾಂಗ್ರೆಸ್ಸಿನಲ್ಲಿದ್ದಾಗ ಇಂದಿರಾಗಾಂಧಿಯವರನ್ನು ಹೊಗಳುತ್ತಿದ್ದರು.

ಶ್ರೀ ಆರ್. ಗುಂಡೂರಾವ್.—ಬಿದ್ದುಹೋಗುವ ಮರಗಳನ್ನು ಕಡಿಯುವ ಸಲುವಾಗಿ ಕಾಡನ್ನು ಯಾರಿಗಾದರೂ ಒಬ್ಬರಿಗೆ ಕೊಡಬೇಕಾಗಿತ್ತು. ಆಗ ಮುಂದೆ ಬಂದವರೇ ಅವರು. ಅವರು ಆಗ ಕೆ.ಪಿ.ಸಿ.ಸಿ. ಯ ಜನರಲ್ ಸೆಕ್ರೆಟರಿಯಾಗಿರಲಿಲ್ಲ; ಸ್ನೇಹಿತರಾಗಿದ್ದರು. ಅದಕ್ಕೋಸ್ಕರ, ನಾನು ಸಾರಿಗೆ ಮಂತ್ರಿಯಾಗಿದ್ದಾಗ ರಾಮೇಗೌಡರಿಗೆ ಶಿಫಾರಸ್ಸು ಮಾಡಿದ್ದೆ. ಅವರು ಎಲ್ಲ ರೀತಿಯ ಅರ್ಹತೆಯನ್ನು ಪಡೆದಿದ್ದರು. ಒಂದು ವೇಳೆ ಅವರೇನಾದರೂ ಅನರ್ಹರಾಗಿದ್ದರೆ ಅಥವಾ ಕಾನೂನಿಗೆ ಏನಾದರೂ ವಿರೋಧವಾಗಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಆದ್ದರಿಂದ, ಇದರಲ್ಲಿ ಯಾವ ಹಸ್ತಕ್ಷೇಪವೂ ಇಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಮರ ಕಡಿದವರು ಮರ ಬೆಳೆಸುತ್ತಾರೆಂದು ಕಾಣುತ್ತದೆ.

MR. SPEAKER.—Now I put the Demands to the vote of the House. The question is:—

"That the respective sums not exceeding the amounts mentioned in the list of Demands inclusive of the sums granted on account be granted to Government to defray the charges which will come in course of payment during the financial year ending 31st March, 1983 in respect of Demand Nos. 12, 24, 34, 37, 38, 39, 40, 33 and 47.'

The motion was adopted and the sums were granted.

As ordered by the Chair, the Motion of Demands for grants adopted by the House are reproduced below:

DEMAND No. 12

"That a sum not exceeding Rs. 3,97,26,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Literary, Cultural Affairs and Development of Kannada".

DEMAND No. 24

"That a sum not exceeding Rs. 54,61,55,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Police and Fire Services"

DEMAND No. 34

That a sum not exceeding Rs. 70,62,60,000 on Revenue Account and Rs, 179,94,92,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Irrigation, Navigation, Drainage and Flood Control Projects."

DEMAND No. 37

"That a sum not exceeding Rs. 1,71 00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Election."

DEMAND No. 38

"That a sum not exceeding Rs. 68,05,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Governor, Ministers and Public Service Commission."

DEMAND No. 39

"That a sum not exceeding Rs. 5,83 81,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Secretariat."

DEMAND No. 40

"That a sum not exceeding Rs. 8,81,70,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "District Administration."

DEMAND No. 33

"That a sum not exceeding Rs. 13.53,00,000 on Revenue Account and Rs. 14,12,00,000 on capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1983 in respect of "Minor Irrigation."

DEMAND No. 47

"That a sum not exceeding Rs. 7,78 38,000 on Revenue Account and Rs. 1 9.59,99 000 an Capital Account inclusive of the sum granted 'on account' be granted to the Government to defray the charges which will come in course of payment during the fiinancial year ending 31st day of March 1983 in respect of "Power Projects."

MR. SPEAKER.—Now the House stands adjourned to meet at 9-00 A.M. on 24th.

The House adjourned at Fortyfive minutes past Nine of the Clock to meet again at Nine of the Clock on Saturday the 24th July, 1982.